ಸೋಮವಾರ, ಆಗಸ್ಟ್ 1, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 212 | ಪುಟ 16
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
'ಕೆವಿಪಿವೈ' ರದ್ದಾದ ನಂತರ ಇನ್‌ಸ್ಪೈರ್ ಕಾರ್ಯಕ್ರಮ ಮುನ್ನೆಲೆಗೆ ಬಂದಿದೆ. ಇದು ಭಾರತದ ಸಂಶೋಧನಾ ಅಸ್ಮಿತೆಗೆ ಪೂರಕವಾಗಿ ರೂಪಿಸಲ್ಪಟ್ಟಿದೆ.

ಶಿರಸಿ ರೈತನ ಕೊಂಡಾಡಿದ ಮೋದಿ 10
ಫಾಝಿಲ್ ಕುಟುಂಬ ಸದಸ್ಯರಿಂದಲೂ ಅಸಮಾಧಾನ
ಜಾರ್ಖಂಡ್‌ನ ಮೂವರು ಶಾಸಕರ ಬಂಧನ 10
ಕಾಂಗ್ರೆಸ್ ನಿಯೋಗಕ್ಕೆ ಪ್ರವೀಣ್ ಕುಟುಂಬ ತರಾಟೆ 5

ಇಬ್ಬರು ಯುವಕರ ವಿಚಾರಣೆ ನಡೆಸಿದ ರಾಷ್ಟ್ರೀಯ ತನಿಖಾ ಸಂಸ್ಥೆ: ನೋಟಿಸ್ ಜಾರಿ

ಐಎಸ್ ನಂಟು: ರಾಜ್ಯದಲ್ಲೂ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು/ತುಮಕೂರು/ಭಟ್ಕಳ: ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರಗಾಮಿ ಸಂಘಟನೆ ಜತೆ ನಂಟು ಹೊಂದಿರುವ ಆರೋಪದ ಮೇಲೆ ರಾಜ್ಯದಲ್ಲೂ ಭಾನುವಾರ ಶೋಧ ನಡೆಸಿರುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ), ತುಮಕೂರು ಮತ್ತು ಭಟ್ಕಳದಲ್ಲಿ ಇಬ್ಬರು ಯುವಕರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದೆ.

ತುಮಕೂರಿನ ಖಾಸಗಿ ವೈದ್ಯಕೀಯ ಕಾಲೇಜು ಒಂದರಲ್ಲಿ ಯುನಾನಿ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ಮಖ್ರಾನ್ ಸಾಜಿದ್ ಇಸ್ಮಾಯಿಲ್ ಮತ್ತು ಭಟ್ಕಳದಲ್ಲಿ ಬಟ್ಟೆ ಅಂಗಡಿಯೊಂದರಲ್ಲಿ ಕೆಲಸ ಮಾಡುವ ಅಬ್ದುಲ್ ಮುಕ್ತದೀರ್ ಎಂಬ ಯುವಕರನ್ನು ಎನ್‌ಐಎ ಅಧಿಕಾರಿಗಳು ವಶಕ್ಕೆ ಪಡೆದಿದ್ದರು. ಕೆಲಕಾಲ ವಿಚಾರಣೆ ನಡೆಸಿದ ಬಳಿಕ, ಹೆಚ್ಚಿನ ವಿಚಾರಣೆಗಾಗಿ ದೆಹಲಿ ಎನ್‌ಐಎ ಕಚೇರಿಗೆ ಹಾಜರಾಗುವಂತೆ ನೋಟಿಸ್ ನೀಡಿ ಇಬ್ಬರನ್ನೂ ಬಿಡುಗಡೆ ಮಾಡಲಾಗಿದೆ ಎಂದು ತನಿಖಾ ಸಂಸ್ಥೆಯ ಮೂಲಗಳು ತಿಳಿಸಿವೆ.

ಐಎಸ್ ಉಗ್ರಗಾಮಿ ಸಂಘಟನೆಗೆ ಯುವಕರನ್ನು ಸೆಳೆಯುವ ಪ್ರಯತ್ನದಲ್ಲಿ ತೊಡಗಿರುವವರ ವಿರುದ್ಧ ಎನ್‌ಐಎ ದೆಹಲಿ ಘಟಕ ದಾಖಲಿಸಿರುವ ಪ್ರಕರಣದ ತನಿಖೆಯ ಭಾಗವಾಗಿ ಭಾನುವಾರ ಹಲವು ರಾಜ್ಯಗಳಲ್ಲಿ ಶೋಧ ನಡೆಸಲಾಗಿದೆ. ತುಮಕೂರಿನ ಸದಾಶಿವನಗರದಲ್ಲಿ ಮಖ್ರಾನ್ ನೆಲೆಸಿದ್ದ ಮನೆ ಹಾಗೂ ಭಟ್ಕಳದ ಚಿನ್ನದ ಪಳ್ಳಿ (ಮಸೀದಿ) ಸಮೀಪದಲ್ಲಿ ಮುಕ್ತದೀರ್ ಕುಟುಂಬ ವಾಸವಿದ್ದ ಮನೆಗಳ ಮೇಲೆ ಭಾನುವಾರ ಬೆಳಿಗ್ಗೆಯೇ ದಾಳಿಮಾಡಿದ ಎನ್‌ಐಎ ಅಧಿಕಾರಿಗಳು, ಹಲವು ಗಂಟೆಗಳ ಕಾಲ ಶೋಧ ನಡೆಸಿದರು.

'ಐಎಸ್ ಸಂಘಟನೆಯು ಅರೇಬಿಕ್ ಭಾಷೆಯಲ್ಲಿ ರವಾನಿಸುತ್ತಿದ್ದ ಪ್ರಚೋದನಕಾರಿ ಸಂದೇಶಗಳಲ್ಲಿ ಆರೋಪಿಗಳು ಮರಾಠಿ ಸೇರಿದಂತೆ ಭಾರತೀಯ ಭಾಷೆಗಳಿಗೆ ಅನುವಾದಿಸಿ, ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುತ್ತಿದ್ದರು. ಯುವಕರನ್ನು ಐಎಸ್‌ನತ್ತ ಸೆಳೆಯುವ ಭಾಗವಾಗಿ ಇಬ್ಬರೂ ಕೆಲಸ ಮಾಡುತ್ತಿರುವ ಶಂಕೆಯ ಮೇಲೆ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಆರೋಪಿಗಳು ವಾಸವಿದ್ದ ಮನೆಯಲ್ಲಿ ಕಾಗದ ಪತ್ರಗಳು, ಪುಸ್ತಕಗಳು, ಕಂಪ್ಯೂಟರ್, ಲ್ಯಾಪ್‌ಟಾಪ್, ಆರೋಪಿಗಳ ಮೊಬೈಲ್‌ಗಳನ್ನು ತನಿಖಾ ತಂಡಗಳು ಪರಿಶೀಲನೆ ನಡೆಸಿವೆ. ಕೆಲವು ದಾಖಲೆಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಮಹಾರಾಷ್ಟ್ರ ಗಡಿಯಲ್ಲಿ ಇಬ್ಬರು ವಶಕ್ಕೆ

ಬೆಳಗಾವಿ: ರಾಜ್ಯದ ಗಡಿಗೆ ಹೊಂದಿಕೊಂಡಿರುವ ಮಹಾರಾಷ್ಟ್ರದ ಹುಪರಿಯಲ್ಲಿ ಇಬ್ಬರು ಯುವಕರನ್ನು ಎನ್‌ಐಎ ವಶಕ್ಕೆ ಪಡೆದಿದೆ.

ಐಎಸ್ ಜಾಲದ ಜತೆ ನಂಟು ಹೊಂದಿರುವ ಆರೋಪದ ಮೇಲೆ ಹಫೀಜ್ ಇರ್ಷಾದ್ ಶೌಕತ್ ಶೇಖ್ ಹಾಗೂ ಅಲ್ತಾಫ್ ಶೌಕತ್ ಶೇಖ್ ಎಂಬುವವರು ವಾಸವಾಗಿರುವ ಕೊಲ್ಹಾಪುರ ಜಿಲ್ಲೆಯ ಶಿರೋಳ ತಾಲ್ಲೂಕಿನ ಹುಪರಿ ಗ್ರಾಮದಲ್ಲಿ ಇವರು ವಾಸವಿದ್ದ ಮನೆಯ ಮೇಲೆ ಭಾನುವಾರ ದಾಳಿ ಮಾಡಿದ ತನಿಖಾ ತಂಡ, ಬಳಿಕ ವಿಚಾರಣೆಗಾಗಿ ವಶಕ್ಕೆ ಪಡೆದಿದೆ ಎಂಬ ಮಾಹಿತಿ ಲಭಿಸಿದೆ.

ಹುಪರಿ ಸಮೀಪದ ರೆಂಧಾಳದಲ್ಲಿ ಇವರಿಬ್ಬರೂ ನಡೆಸುತ್ತಿದ್ದ ಲಬ್ಬೈಕ್ ಇಮ್ದಾದ್ ಫೌಂಡೇಷನ್ ಕಚೇರಿ ಮೇಲೆ ಜನರು ಕಲ್ಲು ತೂರಾಟ ನಡೆಸಿ, ಪರಿಕರಗಳನ್ನು ಧ್ವಂಸಗೊಳಿಸಿದ್ದಾರೆ.

ಆರು ರಾಜ್ಯಗಳ 13 ಸ್ಥಳಗಳಲ್ಲಿ ಶೋಧ

ನವದೆಹಲಿ (ಪಿಟಿಐ): ಐಎಸ್ ಉಗ್ರ ಸಂಘಟನೆಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಭಾನುವಾರ ಕರ್ನಾಟಕ ಸೇರಿದಂತೆ ಆರು ರಾಜ್ಯಗಳಲ್ಲಿ ಶೋಧ ನಡೆಸಿದೆ.

ಮಧ್ಯಪ್ರದೇಶ, ಬಿಹಾರ, ಉತ್ತರ ಪ್ರದೇಶ, ಮಹಾರಾಷ್ಟ್ರ, ಕರ್ನಾಟಕ, ಗುಜರಾತ್ ರಾಜ್ಯಗಳಲ್ಲಿ ಶಂಕಿತರ 13 ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ ಎಂದು ಎನ್‌ಐಎ ಹೇಳಿಕೆಯಲ್ಲಿ ತಿಳಿಸಿದೆ. ಬಿಹಾರದ ಅರಾರಿಯಾ, ಉತ್ತರ ಪ್ರದೇಶದ ದೇವಬಂದ್, ಮಧ್ಯಪ್ರದೇಶದ ಭೋಪಾಲ್, ರೈಸನ್ ಜಿಲ್ಲೆ ಮತ್ತು ಮಹಾರಾಷ್ಟ್ರದ ನಾಂದೇಡ್ ಮತ್ತು ಕೊಲ್ಹಾಪುರ ಜಿಲ್ಲೆಗಳಲ್ಲಿ ಶೋಧ ನಡೆಸಿ, ದಾಖಲೆಗಳನ್ನು ವಶಪಡಿಸಿಕೊಂಡಿದೆ. 'ಗುಜರಾತ್‌ನ ಭರೂಚ್, ಸೂರತ್, ನವಸಾರಿ ಮತ್ತು ಅಹಮದಾಬಾದ್ ಜಿಲ್ಲೆಗಳಲ್ಲಿ ಶೋಧ ನಡೆಸಿ, ಮೂವರ ವಿಚಾರಣೆ ನಡೆಸಲಾಗಿದೆ.

ಇನ್ನೊಂದು ಸುದ್ದಿ 10

ಚಿನ್ನದ ಸರದಾರ 19ರ ಪೋರ
ಬಿಂದ್ಯಾರಾಣಿ ಬೆಳ್ಳಿ ಬೆಡಗು

ಬರ್ಮಿಂಗ್‌ಹ್ಯಾಮ್: ಭಾರತದ ವೇಟ್‌ಲಿಫ್ಟರ್‌ಗಳು 44ನೇ ಕಾಮನ್‌ವೆಲ್ತ್ ಕ್ರೀಡಾಕೂಟದ ಪದಕ ಬೇಟೆ ಮುಂದುವರಿಸಿದರು. ಪುರುಷರ ವಿಭಾಗದಲ್ಲಿ ಮಿಜೋರಾಮ್‌ನ ಜೆರೆಮಿ ಲಾಲ್‌ರಿನುಂಗಾ ಶನಿವಾರ ಚಿನ್ನದ ಪದಕ ಜಯಿಸಿದರು.
ಮಹಿಳೆಯರ ವಿಭಾಗದಲ್ಲಿ ಮಣಿಪುರದ ಬಿಂದ್ಯಾರಾಣಿ ದೇವಿ ಸೊರೊಕಲಬಮ್ ಬೆಳ್ಳಿ ಗೆದ್ದರು.

ಬೆಳ್ಳಿ
ಬಿಂದ್ಯಾರಾಣಿ ದೇವಿ
ವಿಭಾಗ ಮಹಿಳೆಯರ 55 ಕೆ.ಜಿ
ಎತ್ತಿದ ಭಾರ 202 ಕೆ.ಜಿ
(ಸ್ನ್ಯಾಚ್ 86 ಕೆ.ಜಿ+116 ಕೆ.ಜಿ ಕ್ಲೀನ್–ಜರ್ಕ್)
ವಯಸ್ಸು 23

ಚಿನ್ನ
ಜೆರೆಮಿ ಲಾಲ್‌ರಿನುಂಗಾ
ವಿಭಾಗ ಪುರುಷರ 67 ಕೆ.ಜಿ
ಎತ್ತಿದ ಭಾರ 300 ಕೆ.ಜಿ
(ಸ್ನ್ಯಾಚ್ 140ಕೆ.ಜಿ+ ಕ್ಲೀನ್–ಜರ್ಕ್160 ಕೆ.ಜಿ) ನೂತನ ಕೂಟ ದಾಖಲೆ
ವಯಸ್ಸು 19

ವಿವರ ಪುಟ–12

ಪ್ರಜಾವಾಣಿ ಗ್ರಾಫಿಕ್ಸ್

ಶಿವಸೇನಾ ವಕ್ತಾರ ರಾವುತ್ ಇ.ಡಿ ವಶಕ್ಕೆ

ಮುಂಬೈ (ಪಿಟಿಐ): ಶಿವಸೇನಾದ ವಕ್ತಾರ ಮತ್ತು ಸಂಸದ ಸಂಜಯ ರಾವುತ್ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ.) ಅಧಿಕಾರಿಗಳು ಭಾನುವಾರ ತಮ್ಮ ಕಚೇರಿಗೆ ಕರೆದೊಯ್ದಿದ್ದಾರೆ. ಅದಕ್ಕೂ ಮೊದಲು, ರಾವುತ್ ಅವರ ಭಾಂಡುಪ್‌ನಲ್ಲಿರುವ ನಿವಾಸದಲ್ಲಿ ಸುಮಾರು ಒಂಬತ್ತು ತಾಸು ಶೋಧ ನಡೆಸಲಾಗಿದೆ. ರಾವುತ್ ಅವರನ್ನು ಮನೆಯಲ್ಲಿಯೂ ತನಿಖೆಗೆ ಒಳಪಡಿಸಲಾಗಿತ್ತು.

'ನಕಲಿ ಸಾಕ್ಷ್ಯಗಳ ಆಧಾರ'ದಲ್ಲಿ ತಮ್ಮ ವಿರುದ್ಧ ಹುಸಿ ಪ್ರಕರಣ ದಾಖಲಿಸಲಾಗಿದೆ. ಅದಕ್ಕೆ ತಲೆಬಾಗುವ ಮತ್ತು ಪಕ್ಷವನ್ನು ತೊರೆಯುವ ಪ್ರಶ್ನೆಯೇ ಇಲ್ಲ ಎಂದು ಇ.ಡಿ. ಅಧಿಕಾರಿಗಳು ಕಚೇರಿಗೆ ಕರೆದೊಯ್ಯುವ ಮುನ್ನ ರಾವುತ್ ಹೇಳಿದ್ದರು. 'ಅವರು ನನ್ನನ್ನು ಬಂಧಿಸುತ್ತಾರೆ, ನನ್ನನ್ನು ಜೈಲಿಗೆ ಕಳುಹಿಸುತ್ತಾರೆ' ಎಂದು ಇ.ಡಿ. ಕಚೇರಿಯಲ್ಲಿ ಹೇಳಿದರು.

ಇ.ಡಿ. ಅಧಿಕಾರಿಗಳು ಭಾರಿ ಸಂಖ್ಯೆಯ ಪೊಲೀಸರೊಂದಿಗೆ ಬೆಳಿಗ್ಗೆ ಏಳು ಗಂಟೆಗೆ ರಾವುತ್ ಮನೆಗೆ ಬಂದಿದ್ದರು. ತನಿಖೆಗೆ ಹಾಜರಾಗುವಂತೆ ರಾವುತ್ ಅವರಿಗೆ ಎರಡು ನೋಟಿಸ್ ನೀಡಲಾಗಿತ್ತು. ಎರಡು ಬಾರಿಯೂ ವಿವಿಧ ಕಾರಣಗಳಿಂದಾಗಿ ರಾವುತ್ ಅವರು ತನಿಖೆಗೆ ಹಾಜರಾಗಿರಲಿಲ್ಲ.

ಇನ್ನಷ್ಟು ಸುದ್ದಿಗಳು 10

ಕೇರಳ: ಮಂಕಿಪಾಕ್ಸ್ ಶಂಕಿತ ರೋಗಿ ಸಾವು

ತಿರುವನಂತಪುರ: ಕೇರಳದ ತ್ರಿಶ್ಶೂರ್ ಜಿಲ್ಲೆಯ ಚಾವಕ್ಕಾಡ್‌ನ 22 ವರ್ಷದ ಯುವಕ ಶನಿವಾರ ಮೃತಪಟ್ಟಿದ್ದು, ಮಂಕಿಪಾಕ್ಸ್‌ನಿಂದಾಗಿ ಸಾವನ್ನಪ್ಪಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ಯುಎಇಯಲ್ಲಿ ಯುವಕನಿಗೆ ಸೋಂಕು ತಗುಲಿತ್ತು. ಈ ವಿಷಯವನ್ನು ಮುಚ್ಚಿಟ್ಟು ಆತ ಊರಿಗೆ ಮರಳಿದ್ದ ಎಂದು ಕೇರಳದ ಆರೋಗ್ಯ ಸಚಿವೆ ವೀಣಾ ಜಾರ್ಜ್ ಭಾನುವಾರ ತಿಳಿಸಿದ್ದಾರೆ.

ಜುಲೈ 21ರಂದು ಊರಿಗೆ ತಲುಪಿದ್ದ ಯುವಕನನ್ನು ಜುಲೈ 27ರಂದು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮಾದರಿಯನ್ನು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿಗೆ ಕಳುಹಿಸಲಾಗಿದೆ. ಪರೀಕ್ಷೆಯ ವರದಿಯು ಇನ್ನೂ ಬಂದಿಲ್ಲ.

ಅನುಭವ ಮಂಟಪ

ಪಶ್ಚಿಮ ಘಟ್ಟಗಳ ಭಾಗಗಳನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸುವುದಕ್ಕೆ ಸಂಬಂಧಿಸಿ ಕರಡು ಅಧಿಸೂಚನೆಯನ್ನು ಕೇಂದ್ರ ಸರ್ಕಾರ ಹೊರಡಿಸಿದೆ. ಅದರ ಪರ ಮತ್ತು ವಿರುದ್ಧ ಚರ್ಚೆ ತೀವ್ರಗೊಂಡಿದೆ. ಈ ಕುರಿತ **ಅನುಭವ ಮಂಟಪ** ಚರ್ಚೆಯು ಇಂದಿನಿಂದ ಆರಂಭ. 9

ಪಿಎಸ್‌ಐ ನೇಮಕಾತಿ ಅಕ್ರಮ • ಹಣದ ವಹಿವಾಟು ಪತ್ತೆ ಮಾಡಿದ ಸಿಐಡಿ

₹ 4.35 ಕೋಟಿ ನೀಡಿದ್ದ 27 ಅಭ್ಯರ್ಥಿಗಳು

• ಸಂತೋಷ ಜಿಗಳಿಕೊಪ್ಪ

ಪ್ರಜಾವಾಣಿ ವಿಶೇಷ

ಬೆಂಗಳೂರು: 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಹುದ್ದೆಗೆ ಅಕ್ರಮವಾಗಿ ನೇಮಕಗೊಳ್ಳಲು 27 ಅಭ್ಯರ್ಥಿಗಳು, ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ, ಡಿವೈಎಸ್ಪಿ ಹಾಗೂ ಇತರರಿಗೆ ₹ 4.35 ಕೋಟಿ ನೀಡಿದ್ದರು' ಎಂಬುದನ್ನು ಪತ್ತೆ ಮಾಡಿರುವ ಸಿಐಡಿ ಅಧಿಕಾರಿಗಳು, ಪ್ರಕರಣದ ದೋಷಾರೋಪ ಪಟ್ಟಿಯಲ್ಲಿ ಹಣದ ವಹಿವಾಟು ಉಲ್ಲೇಖಿಸಿದ್ದಾರೆ.

ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ 30 ಆರೋಪಿಗಳ ವಿರುದ್ಧ ಒಂದನೇ ಎಸಿಎಂಎಂ ನ್ಯಾಯಾಲಯಕ್ಕೆ ಈಗಾಗಲೇ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ. 545 ಪಿಎಸ್‌ಐ ಹುದ್ದೆಗಳ ಭರ್ತಿಗೆ ನಡೆದ ನೇಮಕಾತಿ ಅಕ್ರಮವನ್ನು ಸಿಐಡಿ ಅಧಿಕಾರಿಗಳು ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾರೆ.

'ಡಿವೈಎಸ್ಪಿ ಶಾಂತ ಕುಮಾರ್ ಹಾಗೂ ಸಿಬ್ಬಂದಿ ನೇಮಕಾತಿ ಅಧಿಸೂಚನೆ ಹೊರಡಿಸುವುದಕ್ಕೂ ಮುನ್ನವೇ ಪೊಲೀಸ್ ನೇಮಕಾತಿ ವಿಭಾಗದ ಮುಖ್ಯಸ್ಥರಾದ ಎಡಿಜಿಪಿ ಅಮ್ರಿತ್ ಪೌಲ್ (56) ಅಕ್ರಮ ಎಸಗಲು ವ್ಯವಸ್ಥಿತ ಸಂಚು ರೂಪಿಸಿದ್ದರು. ಒಂದು ಹುದ್ದೆಗೆ ಎಷ್ಟು ಹಣ ಪಡೆಯಬೇಕು? ಅಭ್ಯರ್ಥಿಗಳನ್ನು ಹೇಗೆ ಹಾಗೂ ಯಾರ ಮೂಲಕ ಸಂಪರ್ಕಿಸಬೇಕು? ರಾಜಕಾರಣಿಗಳು ಸೂಚಿಸುವ ಅಭ್ಯರ್ಥಿಗಳನ್ನು ಹೇಗೆ ನಿರ್ವಹಣೆ ಮಾಡಬೇಕು? ಒಎಂಆರ್ ಪ್ರತಿ ಹೇಗೆ ತಿದ್ದುಪಡಿ ಮಾಡಬೇಕು? ಎಂಬುದರ ಬಗ್ಗೆ ಚರ್ಚಿಸಿದ್ದರು' ಎಂಬ ಮಾಹಿತಿ ಆರೋಪ ಪಟ್ಟಿಯಲ್ಲಿದೆ.

11ನೇ ಪುಟ ನೋಡಿ

ಸುದರ್ಶನ್ ಜ್ಯುವೆಲರ್ಸ್
ಚಿನ್ನ • ಬೆಳ್ಳಿ • ಚಿನ್ನದ ಆಭರಣಗಳು
ವರಮಹಾಲಕ್ಷ್ಮೀ ಹಬ್ಬದ ಕೊಡುಗೆ ವೆಸ್ಟೇಜ್ 4% ಮಾತ್ರ
₹4950/-gm
ಬೆಳ್ಳಿ ₹ 54,000/-
ಚಿಕ್ಕಪೇಟೆ: 41300355
Gangothri *CA

ಫಾಝಿಲ್ ಹತ್ಯೆ: ಕಾರು ನೀಡಿದ್ದ ವ್ಯಕ್ತಿ ಸೆರೆ, ಹಂತಕರ ಸುಳಿವು

ಪ್ರಜಾವಾಣಿ ವಾರ್ತೆ

ಮಂಗಳೂರು: ಸಮೀಪದ ಸುರತ್ಕಲ್‌ನಲ್ಲಿ ನಡೆದಿದ್ದ ಕಾಟಿಪಳ್ಳ ಮಂಗಳಪೇಟೆಯ ಮಹಮ್ಮದ್ ಫಾಝಿಲ್ (23) ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಒಬ್ಬ ಆರೋಪಿಯನ್ನು ನಗರದ ಪೊಲೀಸರು ಬಂಧಿಸಿದ್ದಾರೆ. ಆತ ನೀಡಿದ ಮಾಹಿತಿಯ ಆಧಾರದಲ್ಲಿ ಹಂತಕರ ಬಗ್ಗೆಯೂ ಖಚಿತ ಸುಳಿವು ದೊರೆತಿದ್ದು, ಅವರ ಬಂಧನಕ್ಕೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ಕೃತ್ಯಕ್ಕೆ ಬಳಸಲಾಗಿದ್ದ ಬಿಳಿ ಬಣ್ಣದ ಹುಂಡೈ ಇಯಾನ್ ಕಾರಿನ ಮಾಲೀಕ ಅಜಿತ್ ಕ್ರಾಸ್ತ ಬಂಧಿತ.

'ಕಾರು ಹಾದು ಹೋಗಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿತ್ತು. ಈ ಕಾರಿನ ಮಾಲೀಕನನ್ನು ವಶಕ್ಕೆ ಪಡೆದಿದ್ದೇವೆ. ಕಾರನ್ನು ಒಯ್ದವರು ಯಾರು ಎಂಬುದೂ ಸೇರಿದಂತೆ ಕೆಲವು ವಿಚಾರಗಳನ್ನು ಆರೋಪಿ ತಿಳಿಸಿದ್ದಾನೆ. ಆತ ನೀಡಿದ ಮಾಹಿತಿ ಆಧರಿಸಿ ಇನ್ನು ಕೆಲವು ಆರೋಪಿಗಳನ್ನು ಬಂಧಿಸಲು ಕ್ರಮ ಕೈಗೊಂಡಿದ್ದೇವೆ. ಈ ಹಂತದಲ್ಲಿ ಹೆಚ್ಚಿನ ಮಾಹಿತಿ ಬಹಿರಂಗಪಡಿಸಲಾಗದು' ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ.

5ನೇ ಪುಟ ನೋಡಿ

ನಿರ್ಬಂಧ ವಿಸ್ತರಣೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಸಂಜೆ 6ರಿಂದ ಬೆಳಿಗ್ಗೆ 6 ಗಂಟೆಯವರೆಗೆ ವ್ಯಾಪಾರ ವಹಿವಾಟು ಮತ್ತು ವಾಹನ ಸಂಚಾರಕ್ಕೆ ವಿಧಿಸಿದ್ದ ನಿರ್ಬಂಧವನ್ನು ಮತ್ತೆ ಎರಡು ದಿನ ವಿಸ್ತರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಕೆ.ವಿ. ತಿಳಿಸಿದ್ದಾರೆ.

'ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಸಿಆರ್‌ಪಿಸಿ ಸೆಕ್ಷನ್ 144ರ ಅಡಿ ವಿಧಿಸಿದ್ದ ನಿಷೇಧಾಜ್ಞೆಯನ್ನು ಆ.5ರ ಬೆಳಿಗ್ಗೆ 6 ಗಂಟೆಯವರೆಗೆ ವಿಸ್ತರಿಸಿ ನಗರ ಪೊಲೀಸ್ ಕಮಿಷನರ್ ಆದೇಶ ಹೊರಡಿಸಿದ್ದಾರೆ.

ಒಳ ಪುಟಗಳು

ಎಂಎಸ್‌ಪಿ ಜಾರಿಗೆ ಆಗ್ರಹಿಸಿ ರೈತರ ಪ್ರತಿಭಟನೆ 10
ಶಾಲೆ ಜಲಾವೃತ: ವಿದ್ಯಾರ್ಥಿಗಳ ಪರದಾಟ 5

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸಂಸತ್ ಅಧಿವೇಶನ: ಬೆಲೆ ಏರಿಕೆಯ ಚರ್ಚೆ ಕಾವೇರುವ ಸಾಧ್ಯತೆ

ನವದೆಹಲಿ: ಸಂಸತ್ತಿನ ಮಳೆಗಾಲದ ಅಧಿವೇಶನದ ದ್ವಿತೀಯಾರ್ಧವು ಸೋಮವಾರದಿಂದ ಆರಂಭವಾಗಲಿದ್ದು, ಮೊದಲ ದಿನ ಲೋಕಸಭೆ ಹಾಗೂ ಎರಡನೇ ದಿನ (ಮಂಗಳವಾರ) ರಾಜ್ಯಸಭೆಯಲ್ಲಿ ಬೆಲೆ ಏರಿಕೆ ಕುರಿತ ಚರ್ಚೆ ಕಾವೇರುವ ಸಾಧ್ಯತೆ ಇದೆ.

ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧಿರ್ ರಂಜನ್ ಚೌಧರಿ ಅವರ 'ರಾಷ್ಟ್ರಪತ್ನಿ' ಹೇಳಿಕೆಯು ಸಾಕಷ್ಟು ವಿವಾದಕ್ಕೆ ಕಾರಣವಾಗಿತ್ತು. ಈ ವಿವಾದವನ್ನು ಮತ್ತೆ ಮುನ್ನೆಲೆಗೆ ತಂದು ಕಾಂಗ್ರೆಸ್ ಮೇಲೆ ಮುಗಿಬೀಳಲು ಆಡಳಿತಾರೂಢ ಬಿಜೆಪಿ ಸಜ್ಜಾಗಿದೆ.

ಅಧಿರ್ ಕ್ಷಮೆಯಾಚಿಸಿದ್ದಾರೆ. ಆದರೆ ಬಿಜೆಪಿಯು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಅವರೇ ಕ್ಷಮೆ ಕೋರಬೇಕೆಂದು ಪಟ್ಟುಹಿಡಿಯಬಹುದು. ಗುರುವಾರದ ಕಲಾಪ ಕೊನೆಗೊಂಡ ನಂತರವೂ ಸ್ಮೃತಿ, ಬಿಜೆಪಿಯ ಇತರ ಸಂಸದರು ಸೋನಿಯಾ ಅವರನ್ನು ಲೇವಡಿ ಮಾಡಿದ್ದಾಗಿ ಆರೋಪಿಸಿರುವ ಕಾಂಗ್ರೆಸ್ ಸಂಸದರು, ಇದನ್ನೇ ದಾಳವಾಗಿಟ್ಟುಕೊಂಡು ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸುವ ನಿರೀಕ್ಷೆ ಇದೆ.

CHOUGALA EDUCATION SOCIETY'S
VIDYANIKETAN NEET ACADEMY
Near Amruth Theatre, Vidyanagar, HUBBALLI.

CHOUGALA EDUCATION SOCIETY (R) HUBLI Temple of Knowledge
'ವಿದ್ಯಾ ವಿನಯೇನ ಶೋಭತೆ'

Chougala Education Society's Vidyaniketan PU Science College has acquired admirable name and fame since 13 years for Superb Training and Coaching Science Students for the Annual Board Examinations and Competitive Examinations like CET, NEET, JEE (Mains) & JEE (Advanced)

Join VIDYANIKETAN to cherish your dream

ADMISSION OPEN FOR LONG TERM

NEET 2023

EXCLUSIVE FACULTY FOR NEET LONG TERM

HIGHLIGHTS

BATCHES Starts from AUGUST

- Highly experienced and dedicated team.
- Separate Hostel for Boys & Girls.
- Daily study hours in the presence of teachers.
- Faculty will guide the students from 8 am to 8 pm.
- Daily Practice Papers (DPP) will be given.
- Test to test targets, progress monitoring, personalized analysis.
- Cumulative testing, weekly tests & mock tests.
- Doubts solving sessions.
- Individual attention, regular feedback and counselling.
- Extensive chapter-wise study material.

CONTACT
6361726672 8050229238

'ನನ್ನ ಭಾರತ' ಅಭಿಯಾನ ಇಂದು ಆರಂಭ

ಬೆಂಗಳೂರು: ದಿಶಾ ಭಾರತ ವತಿಯಿಂದ ಆಗಸ್ಟ್ 1ರಿಂದ 15ರವರೆಗೆ 'ನನ್ನ ಭಾರತ' ಅಭಿಯಾನ ಹಮ್ಮಿಕೊಳ್ಳಲಾಗಿದೆ.

ಯುವಜನತೆ ಹಾಗೂ ಶಾಲಾ–ಕಾಲೇಜು ವಿದ್ಯಾರ್ಥಿಗಳಲ್ಲಿ ದೇಶಭಕ್ತಿ, ಸ್ವರಾಜ್ಯ ಸಂಗ್ರಾಮದ ಅರಿವು ಮೂಡಿಸುವುದು ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

IN THE HIGH COURT OF KARNATAKA AT BENGALURU

[SUBSTITUTED SERVICE OF NOTICE TO THE RESPONDENT NO. 2 BY WAY OF PAPER PUBLICATION VIDE COURT ORDER DATED: 21/07/2022]

CMP No. 462/2021

[VIDEO CONFERENCING/PHYSICAL HEARING]

PETITIONER/S: MRS. R CHANCHAL AND ANOTHER

-V/s-

RESPONDENT/S: THE COFFEE BOARD EMPLOYEES CO., OPERATIVE HOUSING SOCIETY LTD AND OTHERS

TO, **RESPONDENT NO. 2: M/S. LALAN HOLDINGS**, (PROMOTERS AND DEVELOPERS) A REGISTERED PARTNERSHIP FIRM, HAVING ITS OFFICE AT # 112, 1st FLOOR, EMBASSY CENTRE, CRESCENT ROAD, BANGALORE - 560 001. REPRESENTED BY ITS PARTNER ... **RESPONDENT/S**

Whereas the above named Petitioner has filed a CMP on this Court Under Section 11(6) of Arbitration and Conciliation Act, 1996 as in the copy annexed hereunto.

Notice is hereby given to you to appear in this Court in person or through an Advocate duly instructed or through some one authorized by law to act for you, in this matter on **02/09/2022** AT 10:30 A.M in case you intend to contest the Petition. If you fail to appear, the petition will be dealt with, heard and decided in your absence.

Given under my hand and the seal of the Court, on 28-07-2022.

By order of the Court, Assistant Registrar, High Court of Karnataka, Bangalore.

ಹೆಚ್ಚುತ್ತಿರುವ ಶ್ವಾಸಕೋಶ ಕ್ಯಾನ್ಸರ್

ಪ್ರಜಾವಾಣಿ ವಾರ್ತೆ

ಇಂದು ವಿಶ್ವ ಶ್ವಾಸಕೋಶದ ಕ್ಯಾನ್ಸರ್ ದಿನ

ಬೆಂಗಳೂರು: ಅತಿ ಹೆಚ್ಚು ಸಾವಿಗೆ ಕಾರಣವಾಗುವ ಮೊದಲ ಐದು ಕ್ಯಾನ್ಸರ್‌ಗಳಲ್ಲಿ ಶ್ವಾಸಕೋಶದ ಕ್ಯಾನ್ಸರ್ ಸಹ ಸ್ಥಾನ ಪಡೆದಿದೆ. 20ನೇ ಶತಮಾನದಲ್ಲಿ ಅತಿ ವಿರಳವಾಗಿದ್ದ ಈ ಕಾಯಿಲೆ ಅತಿ ವೇಗವಾಗಿ ಬೆಳೆಯುತ್ತಿರುವ ಆರೋಗ್ಯ ಸಮಸ್ಯೆಯಾಗಿ ಮಾರ್ಪಟ್ಟಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಈ ಕಾಯಿಲೆಗೆ ಅನೇಕ ಕಾರಣಗಳಿದ್ದರೂ, ಧೂಮಪಾನ ಮಾಡುವವರಲ್ಲಿ ಈ ರೋಗ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಪ್ರಮುಖ ನಗರಗಳಲ್ಲಿ ಕಂಡು ಬರುತ್ತಿರುವ ವಾಯುಮಾಲಿನ್ಯದಿಂದಲೂ ಶ್ವಾಸಕೋಶ ಕ್ಯಾನ್ಸರ್ ಉಲ್ಬಣಗೊಳ್ಳುವ ಸಾಧ್ಯತೆಯಿದೆ ಎಂದು ವೈದ್ಯರು ಆತಂಕ ವ್ಯಕ್ತಪಡಿಸಿದ್ದಾರೆ.

ಬಹುತೇಕ ಸಂದರ್ಭಗಳಲ್ಲಿ ಹಲವರು ಆರಂಭಿಕ ಹಂತಗಳಲ್ಲಿ ಈ ಕ್ಯಾನ್ಸರ್ ಅನ್ನು ಕ್ಷಯವೆಂದು ತಪ್ಪಾಗಿ ಅರ್ಥ ಮಾಡಿಕೊಳ್ಳುತ್ತಾರೆ. ಈ ಎರಡು ಕಾಯಿಲೆಗಳ ಲಕ್ಷಣಗಳೂ ಬಹುತೇಕ ಒಂದೇ ರೀತಿ ಇರುವುದು ಇದಕ್ಕೆ ಕಾರಣ. ಎರಡೂ ಪ್ರಕರಣಗಳಲ್ಲಿ, ರೋಗಿಯು ಕೆಮ್ಮು ಹಾಗೂ ರಕ್ತ ಸಹಿತವಾದ ಕೆಮ್ಮನ್ನು ಹೊಂದಿರುತ್ತಾರೆ ಎಂದು ತಜ್ಞ ವೈದ್ಯರು ತಿಳಿಸಿದ್ದಾರೆ.

ಈ ಕಾಯಿಲೆಗೆ ಯಾವುದೇ ವಯೋಮಿತಿಯಿಲ್ಲ. ಈ ರೋಗವು ಪುಟ್ಟ ಮಗುವಿನಿಂದ ಹಿಡಿದು ಹಿರಿಯರಲ್ಲೂ ಕಾಣಿಸಿಕೊಳ್ಳುತ್ತದೆ. ಇತ್ತೀಚಿನ ದಿನಗಳಲ್ಲಿ 40 ರಿಂದ 60ರ ಪ್ರಾಯದ ವ್ಯಕ್ತಿಗಳಲ್ಲಿ ಅತಿ ಹೆಚ್ಚು ಶ್ವಾಸಕೋಶ ಕ್ಯಾನ್ಸರ್ ಪತ್ತೆಯಾಗಿದೆ. ಇದರ ಹೊರತಾಗಿ 19 ರಿಂದ 40ರ ಹರೆಯದವರಲ್ಲಿ ಈ ರೋಗ ಲಕ್ಷಣಗಳು ವಿಪರೀತವಾಗಿ ಕಂಡು ಬರುತ್ತಿದೆ ಎಂದು ವಿವರಿಸಿದ್ದಾರೆ.

ನಿಯಂತ್ರಣ ಹೇಗೆ?: ತಂಬಾಕು ಸೇವನೆ ಮತ್ತು ಧೂಮಪಾನ ತ್ಯಜಿಸಬೇಕು. ಮದ್ಯಪಾನ, ವಾಯು ಮಾಲಿನ್ಯದ ವಾತಾವರಣದಿಂದ ದೂರವಿದ್ದಷ್ಟು ಶ್ವಾಸಕೋಶ ಕ್ಯಾನ್ಸರ್ ತಡೆಗಟ್ಟಬಹುದು ಎಂದು ತಜ್ಞರು ವಿವರಿಸಿದ್ದಾರೆ.

'ಮಹಿಳೆಯರಲ್ಲೂ ಕಾಯಿಲೆ ಹೆಚ್ಚುತ್ತಿದೆ'

'ಶೇ 65ರಷ್ಟು ಪುರುಷರಲ್ಲಿ ಮತ್ತು ಶೇ 35ರಷ್ಟು ಮಹಿಳೆಯರಲ್ಲಿ ಶ್ವಾಸಕೋಶ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಮಹಿಳೆಯರಲ್ಲೂ ಈ ಕಾಯಿಲೆ ಹೆಚ್ಚು ಕಾಣಿಸಿಕೊಳ್ಳುತ್ತಿದೆ. ಧೂಮಪಾನ ಮಾಡುತ್ತಿರುವವರು ಈ ಕಾಯಿಲೆಗೆ ತುತ್ತಾಗುತ್ತಿದ್ದಾರೆ' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ಸಿ. ರಾಮಚಂದ್ರ ವಿವರಿಸಿದ್ದಾರೆ.

ಡಾ.ಸಿ. ರಾಮಚಂದ್ರ

'ತಂಬಾಕು ಜಗಿಯುವವರು, ಸೇವಿಸುವವರು, ಕೈಗಾರಿಕೆ ಮಾಲಿನ್ಯಕ್ಕೆ ಒಳಗಾಗುವವರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಈ ಕಾಯಿಲೆಗೆ ಒಳಗಾಗುತ್ತಿದ್ದಾರೆ. ಆದರೆ, ಶೇ 80ರಷ್ಟು ಮಂದಿ ಮೂರು ಮತ್ತು ನಾಲ್ಕನೇ ಹಂತದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನಾಲ್ಕನೇ ಹಂತದಲ್ಲಿ ಪ್ರತಿರೋಧಕ ಶಕ್ತಿ ಕಡಿಮೆ ಇರುತ್ತದೆ. ಹೀಗಾಗಿ, ರೋಗಲಕ್ಷಣಗಳು ಕಾಣಿಸಿಕೊಂಡ ತಕ್ಷಣವೇ ತಪಾಸಣೆಗೆ ಒಳಗಾಗುವುದು ಉತ್ತಮ' ಎಂದು ಸಲಹೆ ನೀಡಿದ್ದಾರೆ.

ಕ್ಯಾನ್ಸರ್ ಲಕ್ಷಣಗಳು

- ದೀರ್ಘಕಾಲದ ಕೆಮ್ಮು
- ಕೆಮ್ಮಿನಲ್ಲಿ ರಕ್ತ ಅಥವಾ ಕಫ
- ಉಸಿರಾಟ ತೊಂದರೆ, ನಗುವಾಗ ಅಥವಾ ಕೆಮ್ಮುವಾಗ ಎದೆ ನೋವು
- ಧ್ವನಿಯಲ್ಲಿ ಒರಟುತನ ಹೆಚ್ಚುವುದು
- ಬಳಲಿಕೆ ಮತ್ತು ನಿಶ್ಯಕ್ತಿ
- ಹಸಿವು ಮತ್ತು ತೂಕ ನಷ್ಟ

ತಜ್ಞರ ವಿಶ್ಲೇಷಣೆ

- ಶೇ 80 ರಷ್ಟು ರೋಗಿಗಳು 3 ಮತ್ತು 4ನೇ ಹಂತದಲ್ಲಿ ಚಿಕಿತ್ಸೆ ಪಡೆಯುತ್ತಾರೆ.
- ಶೇ 95 ರಷ್ಟು ಪ್ರಕರಣಗಳು ಶಸ್ತ್ರಚಿಕಿತ್ಸೆ ಮಾಡುವ ಹಂತದಲ್ಲಿ ಇರುವುದಿಲ್ಲ
- ಶೇ 70ರಷ್ಟು ಮಂದಿ ಧೂಮಪಾನದಿಂದ ಶ್ವಾಸಕೋಶ ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ.
- ಜಗಿಯುವ ತಂಬಾಕಿನಿಂದ ಶ್ವಾಸಕೋಶ ಕ್ಯಾನ್ಸರ್ ಪ್ರಕರಣಗಳು ಹೆಚ್ಚಳ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ವಿಶೇಷ ಭೂಸ್ವಾಧೀನಾಧಿಕಾರಿಯವರ ಕಛೇರಿ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಒರಾಯನ್ ಮಾಲ್ ಮುಂಭಾಗ, ಸಂಪರ್ಕ ಸೌಧ, ಸರ್ವೆ ನಂ.8 (ಬಿ.ಇ.ಪಿ ಆವರಣ), ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಹಂತ, ಬೆಂಗಳೂರು–560010. ದೂರವಾಣಿ ನಂ: 080–22024000
ಇ–ಮೇಲ್: cekrdcl@gmail.com, laqkrdcl@gmail.com

ಸಂಖ್ಯೆ: ಕರಅನಿನಿ/ಭೂಸ್ವಾ/ಬಿಎಸ್‌ಆರ್–2/ಪ್ಯಾಕೇಜ್–2ಸಿ/2022–23 ದಿನಾಂಕ: 28.07.2022

ಹೆಚ್ಚುವರಿ ಅಧಿಸೂಚನೆ (ಭಾಗ–01)

(ಕರ್ನಾಟಕ ಹೆದ್ದಾರಿ ಕಾಯ್ದೆ 1964 ಕಲಂ 15 ರಡಿ)

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಲೋಇ75ಇಎಪಿ2019 ದಿನಾಂಕ:06.07.20222 ರಂತೆ ಪ್ರಸ್ತುತ ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ ಇವರ ವ್ಯಾಪ್ತಿಯಲ್ಲಿನ ಯಲಹಂಕ, ನೆಲಮಂಗಲ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕುಗಳ ಮೂಲಕ ಹಾದು ಹೋಗುತ್ತಿರುವ ರಾಜ್ಯ ಹೆದ್ದಾರಿ 74 ಹಾಗೂ ಜಿಲ್ಲಾ ಮುಖ್ಯ ರಸ್ತೆ/ಇತರೆ ಜಿಲ್ಲಾ ಮುಖ್ಯ ರಸ್ತೆ ಎಂಬ ವರ್ಗೀಕರಣದಲ್ಲಿರುವ ರಸ್ತೆಯನ್ನು ಸರಪಳಿ (ಚೈನೇಜ್) ಕಿ.ಮೀ. 0.00 ರಿಂದ ಕಿ.ಮೀ. 39.240 ವರೆಗಿನ ನೆಲಮಂಗಲ ಪಟ್ಟಣ (ಎನ್‌ಹೆಚ್–04) ರಿಂದ ಮಧುರೆ, ರಾಜಾನುಕುಂಟೆ, ತಿಮ್ಮಸಂದ್ರ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ–07 ದೇವನಹಳ್ಳಿ ರಸ್ತೆಯನ್ನು ಸಂಪರ್ಕಿಸುವ ರಸ್ತೆಯ ಭಾಗವಾಗಿರುವ ಬೆಂಗಳೂರು ಸುತ್ತಮುತ್ತಲಿನ ರಸ್ತೆ ಸಂಖ್ಯೆ–02ರ ಪ್ಯಾಕೇಜ್–2ಸಿನಲ್ಲಿ ಒಳಗೊಂಡಿರುವ ಹ್ಯಾಡಾಳು ಮತ್ತು ಗೊಲ್ಲಹಳ್ಳಿ ಗ್ರಾಮಗಳ ಹತ್ತಿರವಿರುವ ರೈಲ್ವೆ ಲೆವೆಲ್ ಕ್ರಾಸಿಂಗ್ ಮೇಲೆ, ರೈಲ್ವೆ ಇಲಾಖೆ ಅನುಮೋದಿತ GAD ನಕ್ಷೆ ಆಧರಿಸಿ, Railway Over Bridge (ROB) ನಿರ್ಮಾಣಕ್ಕಾಗಿ ಅವಶ್ಯಕವಾಗಿರುವ ಜಮೀನುಗಳನ್ನು ಭೂಸ್ವಾಧೀನಪಡಿಸಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರು ಕರ್ನಾಟಕ ಹೆದ್ದಾರಿ ಕಾಯ್ದೆ ಕಲಂ 15ರ ಮೇರೆಗೆ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಗೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಸದರಿ ರಸ್ತೆಯ ಭಾಗದ ಅಭಿವೃದ್ಧಿಗೆ ಅವಶ್ಯಕವಾಗಿದೆ ಎಂದು ಈ ಮೂಲಕ ಘೋಷಿಸಲಾಗಿದೆ. ಕರ್ನಾಟಕ ಹೆದ್ದಾರಿ ಕಾಯ್ದೆ 1964ರ ಕಲಂ 14ರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿ, ಸಿಬ್ಬಂದಿ ಅಥವಾ ಮುಖ್ಯ ಅಭಿಯಂತರರು ಹಾಗೂ ಹೆದ್ದಾರಿ ಪ್ರಾಧಿಕಾರ ಪರವಾಗಿ ಪ್ರತಿನಿಧಿಸುವವರನ್ನು ತಡೆಯುವುದಾಗಲಿ ಅಥವಾ ಅಡ್ಡಿಪಡಿಸುವುದಾಗಲಿ ಮಾಡಕೂಡದೆಂದು ಈ ಜಮೀನುಗಳಲ್ಲಿ ಆಸಕ್ತಿ ಹೊಂದಿರುವ ಎಲ್ಲಾ ವ್ಯಕ್ತಿಗಳಿಗೆ ಈ ಮೂಲಕ ಸೂಚಿಸಲಾಗಿದೆ.

ಈ ಅಧಿಸೂಚನೆ ಪ್ರಕಟಣೆಯ ದಿನಾಂಕ:16.07.2022ರ ನಂತರ ಮುಖ್ಯ ಅಭಿಯಂತರರು ಹಾಗೂ ಹೆದ್ದಾರಿ ಪ್ರಾಧಿಕಾರ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ಅನುಮತಿಯಿಲ್ಲದೆ ಸದರಿ ಜಮೀನುಗಳನ್ನು ವಿಲೇ ಮಾಡುವ ಒಪ್ಪಂದದ ಕ್ರಯ, ಕರಾರು, ಭೋಗ್ಯ, ಲೀಜ್ ಅದಲು ಬದಲು ವಗೈರೆ ಮಾಡುವಂತಿಲ್ಲ. ಸದರಿ ಜಮೀನುಗಳಲ್ಲಿ ಈ ಅಧಿಸೂಚನೆ ಪ್ರಕಟಣೆ ನಂತರ ಕಟ್ಟಡಗಳ ನಿರ್ಮಾಣ, ಭೂಪರಿವರ್ತನೆ ಹಾಗೂ ಮತ್ತಿತರ ಅಭಿವೃದ್ಧಿ ಕೆಲಸಗಳನ್ನು ಮಾಡುವಂತಿಲ್ಲ. ಒಂದು ವೇಳೆ ಈ ರೀತಿ ಮಾಡಿದ್ದರೂ ಸಹಾ ಪರಿಹಾರ ಹಣ ನಿಗದಿ ಮಾಡುವಾಗ ಅಂತಹ ವ್ಯವಹಾರದ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಸದರಿ ಅಧಿಸೂಚನೆಯ ಪ್ರತಿಯನ್ನು ಸಾರ್ವಜನಿಕರ ಪರಿಶೀಲನೆಗೆ ಮುಖ್ಯ ಅಭಿಯಂತರರು ಹಾಗೂ ಹೆದ್ದಾರಿ ಪ್ರಾಧಿಕಾರ ಮತ್ತು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಕಾರ್ಯಪಾಲಕ ಅಭಿಯಂತರರು/ವಿಭಾಗೀಯ ಅಭಿಯಂತರರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಇವರ ಕಛೇರಿಯಲ್ಲಿ ಇಡಲಾಗಿದೆ ಹಾಗೂ ಸಂಬಂಧಿಸಿದ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಉಪವಿಭಾಗಾಧಿಕಾರಿಗಳು, ತಹಶೀಲ್ದಾರ್, ಉಪನೋಂದಾಣಾಧಿಕಾರಿಗಳು ಇವರ ಕಛೇರಿಯಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಚುರಪಡಿಸಲಾಗಿದೆ.

ಬಾಧಿತ ಖಾತೆದಾರರು ತಮ್ಮ ಅಹವಾಲುಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರಿಗೆ ಈ ಪ್ರಕಟಣೆಯ ದಿನಾಂಕದಿಂದ **15 ದಿನಗಳೊಳಗೆ** ಸಲ್ಲಿಸಲು ಸೂಚಿಸಿದೆ.

ಷೆಡ್ಯೂಲ್

ಹೋಬಳಿ : ಕಸಬಾ । ತಾಲ್ಲೂಕು : ನೆಲಮಂಗಲ । ಜಿಲ್ಲೆ : ಬೆಂಗಳೂರು ಗ್ರಾಮಾಂತರ

ಕ್ರ. ಸಂ.	ಖಾತೆದಾರರ ಹೆಸರು / ಅನುಭವದಾರರ ಹೆಸರು	ಸರ್ವೆ ಸಂಖ್ಯೆ	ಖುಷ್ಕಿ /ತರಿ ಬಾಗಾಯ್ತು	ಭೂಸ್ವಾಧೀನವಾಗಲಿರುವ ವಿಸ್ತೀರ್ಣ (ಎ.ಗು.ಆ)
1	2	3	4	5
	ಗ್ರಾಮದ ಹೆಸರು : ಹ್ಯಾಡಾಳು			
1	ಕೆರೆ ಅಂಗಳ	28	ಖುಷ್ಕಿ	0.04.08
2	ಡಿ.ಚಿಕ್ಕಣ್ಣಮೂರ್ತಿ ಬಿನ್ ದೊಡ್ಡಅರಸಪ್ಪ	29	–	0.01.00
3	ಹೆಚ್.ಬಿ. ಅಶ್ವಿನಿ ಕೋಂ ಚನ್ನಪ್ಪ.ಎನ್	30/1	ಖುಷ್ಕಿ	0.03.04
4	ಕೃಷ್ಣಮೂರ್ತಿ ಬಿನ್ ಲೇಟ್ ಮಹಾದೇವಶಾಸ್ತ್ರಿ	68/8	ಖುಷ್ಕಿ	0.01.08
5	ಕೃಷ್ಣಮೂರ್ತಿ ಬಿನ್ ಲೇಟ್ ಮಹಾದೇವಶಾಸ್ತ್ರಿ	68/12	ಖುಷ್ಕಿ	0.00.04
			ಒಟ್ಟು	**0.10.08**
	ಗ್ರಾಮದ ಹೆಸರು : ಗೊಲ್ಲಹಳ್ಳಿ			
1	ಬಿ.ತಿಮ್ಮೇಗೌಡ ಬಿ.ಹನುಮಂತರಾಯಪ್ಪ ಬಿ.ವೆಂಕಟೇಶ್ ಶಿವಕುಮಾರ್ ಟಿ.ಎಸ್. ಬಿನ್ ಲೇ.ಸಿದ್ದಪ್ಪ ಅಡವೀಶ್ ಟಿ.ಎಸ್.ಬಿನ್ ಲೇ.ಸಿದ್ದಪ್ಪ ಕೃಷ್ಣಮೂರ್ತಿ ಟಿ.ಎಸ್.ಬಿನ್ ಲೇ.ಸಿದ್ದಪ್ಪ ಸಿದ್ದಗಂಗಮ್ಮ ಕೋಂ ಲೇ.ಸಿದ್ದಪ್ಪ ಬೈಲಮೂರ್ತಿ ಬಿನ್ ಲೇ ಸಿದ್ದಗಂಗಪ್ಪ ಅಡವೀಶ್ ಬಿನ್ ಲೇ ಸಿದ್ದಗಂಗಪ್ಪ ರಮೇಶ್ ಬಿನ್ ಲೇ ಸಿದ್ದಗಂಗಪ್ಪ	88/1	ಖುಷ್ಕಿ	0.12.04
2	ಸಿದ್ದಗಂಗಮ್ಮ.ಎಂ ಕೋಂ ಎಂ.ವಿ.ಬಸವರಾಜು	87/3	ಖುಷ್ಕಿ	0.01.08
3	ಸಂಪಗಮ್ಮ ಬಿನ್ ಬೈರಣ್ಣ ಉರುಫ್ ಮೋಟಯ್ಯ ಬಿ.ಸಿದ್ದಗಂಗಯ್ಯ ಬಿನ್ ಬೈರಣ್ಣ ಉರುಫ್ ಮೋಟಯ್ಯ ಬಿ.ಬೈರಯ್ಯ ಬಿನ್ ಬೈರಣ್ಣ ಉರುಫ್ ಮೋಟಯ್ಯ	90/4	ಖುಷ್ಕಿ	0.04.08
4	ಬಿ.ರಾಮಸ್ವಾಮಿ ಬಿನ್ ಬೆಳರಂಗಪ್ಪ	95/1	ಎನ್.ಎ.ಕೆ	0.02.00
5	ಬಿ.ಹೆಚ್.ಬೈರೇಗೌಡ ಓಂಪಿ	108/1	ಎನ್.ಎ.ಕೆ	0.07.00
6	ಬಿ.ಹೆಚ್.ಬೈರೇಗೌಡ ಬಿನ್ ಹನುಮಂತೇಗೌಡ ಲಕ್ಷ್ಮಮ್ಮ ಕೋಂ ಲೇ. ಬಿ.ಅಪ್ಪಣ್ಣಪ್ಪ	108/2	ಖುಷ್ಕಿ	0.06.12
7	ಗೋವಿಂದರಾಜು ಉರುಫ್ ಗೋವಿಂದಪ್ಪ ಬಿನ್ ಲೇಟ್ ಪಾಪಯ್ಯ	104/4	ಎನ್.ಎ.ಕೆ	0.03.00
8	ಶಿವಶಂಕರ ಬಿನ್ ಚನ್ನಬಸವಯ್ಯ	83/2	ಖುಷ್ಕಿ	0.00.04
9	ಬಿ.ಧನರಾಜು ಬಿ.ದೇವರಾಜು	84	ಖುಷ್ಕಿ	0.00.04
10	ಬಿ.ಧನರಾಜು ಬಿ.ದೇವರಾಜು	91	ಖುಷ್ಕಿ	0.01.00
			ಒಟ್ಟು	**0.38.08**

DIPR/CP/1578/BCPL/2022-23

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಹಿ/– ರಾಮಚಂದ್ರಪ್ಪ ಕೆ.ಎನ್.
ಸರ್ಕಾರದ ಅಧೀನ ಕಾರ್ಯದರ್ಶಿ
ಬಾಹ್ಯ ಅನುದಾನಿತ ಯೋಜನೆಗಳು (ಇಎಪಿ)
ಲೋಕೋಪಯೋಗಿ ಇಲಾಖೆ

'ಬಿಜೆಪಿ ಜಿಲ್ಲಾ ಕಚೇರಿಗಳಲ್ಲಿ ಧ್ವಜ ಮಾರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಗಸ್ಟ್ 13 ರಿಂದ 15ರವರೆಗೂ ದೇಶದ ಪ್ರತಿ ಮನೆಯ ಮೇಲೂ ರಾಷ್ಟ್ರಧ್ವಜ ಹಾರಿಸುವ ಅಭಿಯಾನಕ್ಕೆ ಪೂರಕವಾಗಿ ರಾಜ್ಯದಲ್ಲಿ ಬಿಜೆಪಿಯ 39 ಜಿಲ್ಲಾ ಘಟಕಗಳ ಕಚೇರಿಗಳಲ್ಲೂ ತ್ರಿವರ್ಣ ಧ್ವಜ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದು ವಿಧಾನಪರಿಷತ್ ಸದಸ್ಯ, ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ತಿಳಿಸಿದರು.

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ರಾಷ್ಟ್ರಧ್ವಜ ಮಾರಾಟ ಮಳಿಗೆಯನ್ನು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಜತೆಗೂಡಿ ಭಾನುವಾರ ಉದ್ಘಾಟಿಸಿದ ಬಳಿಕ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿಯವರ ಆಶಯವನ್ನು ಸಾಕಾರಗೊಳಿಸುವುದಕ್ಕಾಗಿ ಪಕ್ಷದ ಕಾರ್ಯಕರ್ತರು ಶ್ರಮಿಸುತ್ತಿದ್ದಾರೆ. ಜನರಿಗೆ ರಾಷ್ಟ್ರ ಧ್ವಜ ತಲುಪಿಸುವುದಕ್ಕಾಗಿ ಪಕ್ಷದಿಂದ ಮಾರಾಟ ಮಳಿಗೆಗಳನ್ನು ತೆರೆಯಲಾಗುತ್ತಿದೆ' ಎಂದರು.

ಆ. 9 ರಿಂದ 15ರವರೆಗೆ ಬೂತ್, ಹೋಬಳಿ, ತಾಲ್ಲೂಕು ಕೇಂದ್ರಗಳಲ್ಲಿ ದೇಶಭಕ್ತಿಯ ಪಥಸಂಚಲನ, ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನ, ಸ್ವಾತಂತ್ರ್ಯ ಹೋರಾಟಗಾರರ ಪುತ್ಥಳಿ, ವೃತ್ತದ ಅಲಂಕಾರ ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದು ತಿಳಿಸಿದರು.

ಸೋಮಶೇಖರ್ ಮಾತನಾಡಿ, 'ಪ್ರಧಾನಿಯವರ ಸೂಚನೆಯಂತೆ ಈ ಕಾರ್ಯಕ್ರಮವನ್ನು ಸಂಪೂರ್ಣ ಯಶಸ್ವಿಗೊಳಿಸಲಾಗುವುದು. ಪಕ್ಷದ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಇದಕ್ಕಾಗಿ ಸಿದ್ಧತೆ ನಡೆಸಿದ್ದಾರೆ' ಎಂದರು.

ನಗರದಲ್ಲಿ ಇಂದು

ಮನೆ–ಮನಗಳಲ್ಲಿ ಶಿವಪೂಜೆ ಶಿವಾನುಭವ, ಸಿದ್ಧಾಂತ ಶಿಖಾಮಣಿ–ವಚನ ಪ್ರವಚನ ಕಾರ್ಯಕ್ರಮ: ಬೆಳಿಗ್ಗೆ: ಹೇಮಲತಾ ಮತ್ತು ಚಿದಾನಂದ, ನಂ.777 ಬಸವೇಶ್ವರ ನಿಲಯ, ರೈಲ್ವೆ ಸ್ಟೇಷನ್ ರಸ್ತೆ, ಯಲಹಂಕ ಓಲ್ಡ್‌ಟೌನ್.

ವಚನ ಶ್ರಾವಣ: ಉಪನ್ಯಾಸ: ಎಸ್. ಪಿನಾಕಪಾಣಿ, ಗಾಯನ: ತನ್ಮಯಿ.ಡಿ., ಅಧ್ಯಕ್ಷತೆ: ಆರ್.ಎಸ್. ವಿಜಯಕುಮಾರಿ, ಆಯೋಜನೆ: ವಚನ ಜ್ಯೋತಿಬಳಗ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಾಚೋಹಳ್ಳಿ, ಮಾಗಡಿ ಮುಖ್ಯರಸ್ತೆ. ಬೆಳಿಗ್ಗೆ 10

'ರಾಷ್ಟ್ರೀಯ ಪೇಂಟಿಂಗ್ ಸಮೂಹ ಪ್ರದರ್ಶನ': ಉದ್ಘಾಟನೆ: ಕೆ.ಎಸ್. ಅಪ್ಪಾಜಯ್ಯ, ಆಯೋಜನೆ: ಕಲಾಸೃಷ್ಟಿ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಸಂಜೆ 4

'ಚಿಟ್ಟೆ' ಏಕವ್ಯಕ್ತಿ ನಾಟಕ ಪ್ರದರ್ಶನ, ಪುಸ್ತಕ ಬಿಡುಗಡೆ: ಉದ್ಘಾಟನೆ: ವೀಣಾಶರ್ಮಾ, ಬಿಡುಗಡೆ: ಎಂ.ಆರ್. ಚಂದ್ರಶೇಖರ್, ಆಯೋಜನೆ: ಶಾರದಾ ಪ್ರತಿಷ್ಠಾನ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 4.30

'ಗುರು ನಾರಾಯಣ ವೈಭವ' ನಾಟಕ ಪ್ರದರ್ಶನ: ರಚನೆ, ನಿರ್ದೇಶನ: ಮಹಾಬಲೇಶ್ವರ, ಆಯೋಜನೆ: ಕಲಾಸಾಗರ, ಸ್ಥಳ: ನಯನ ರಂಗಮಂದಿರ, ರವೀಂದ್ರ ಕಲಾಕ್ಷೇತ್ರ, ಸಂಜೆ 7

ಸೀತಾ, ಲಕ್ಷ್ಮಣ, ಭರತ, ಶತೃಘ್ನ, ಹನುಮಂತ ಸಮೇತ ಪಟ್ಟಾಭಿರಾಮಚಂದ್ರ ಸ್ವಾಮಿಯ ಮಂಡಲ ಪೂಜೆಯ ಮುಕ್ತಾಯ ಸಮಾರಂಭ: ಅತಿಥಿಗಳು: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಆಯೋಜನೆ: ಓಣಿ ಆಂಜನೇಯಸ್ವಾಮಿ ದೇವಾಲಯ ಟ್ರಸ್ಟ್, ಅರಮನೆ ರಸ್ತೆ, ಗಾಂಧಿನಗರ ಬೆಳಿಗ್ಗೆ 7 ರಿಂದ ಮಧ್ಯಾಹ್ನ 12ರ ವರೆಗೆ

ಫೈಯಜಾಬಾದ್ ಬಡಾವಣೆಯಲ್ಲಿ ಮನೆಯೊಳಗೆ ನುಗ್ಗಿದ ನೀರನ್ನು ಹೊರಹಾಕುತ್ತಿರುವ ಬಾಲಕ ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಭಾರಿ ಮಳೆಯಿಂದಾಗಿ ಕುಮಾರಸ್ವಾಮಿ ಲೇಔಟ್‌ನಲ್ಲಿ ಮನೆಯೊಂದಕ್ಕೆ ನೀರು ನುಗ್ಗಿತ್ತು

ಶನಿವಾರ ರಾತ್ರಿ ಸುರಿದ ಧಾರಾಕಾರ ಮಳೆಯಿಂದ ಮೆಜೆಸ್ಟಿಕ್ ಬಳಿ ಸಂಗ್ರಹಗೊಂಡಿದ್ದ ನೀರು

ಭಾರತೀಯ ವೇಟ್ ಲಿಫ್ಟರ್ಸ್ ಕಾಮನ್ ವೆಲ್ತ್ ಗೇಮ್ಸ್ ನಲ್ಲಿ ಮಿಂಚಿದ್ದಾರೆ.

ರಾಜಧಾನಿಯಲ್ಲಿ ನಿರಂತರ ಎರಡು ತಾಸು ಸುರಿದ ವರ್ಷಧಾರೆ • ಮನೆಗಳಿಗೆ ನುಗ್ಗಿದ ಕಾಲುವೆಯ ನೀರು

ಭಾರಿ ಮಳೆ: ತಗ್ಗು ಪ್ರದೇಶದ ಜನ ಹೈರಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯಲ್ಲಿ ಶನಿವಾರ ರಾತ್ರಿ ಎರಡು ಗಂಟೆಗಳ ಕಾಲ ಅಬ್ಬರಿಸಿದ ಮಳೆಯಿಂದ ಹಲವು ಬಡಾವಣೆಯ ತಗ್ಗುಪ್ರದೇಶದ ನಿವಾಸಿಗಳು ಜಾಗರಣೆ ಮಾಡಬೇಕಾದ ಸ್ಥಿತಿ ನಿರ್ಮಾಣ ಆಗಿತ್ತು. ಭಾನುವಾರ ಮಧ್ಯಾಹ್ನದ ಬಳಿಕವೂ ನಗರದ ವಿವಿಧೆಡೆ ಜೋರು ಮಳೆ ಸುರಿದಿದೆ.

ಶನಿವಾರ ರಾತ್ರಿ ಸುರಿದ ಮಳೆಯಿಂದ ಮಹಾಲಕ್ಷ್ಮಿಲೇಔಟ್, ಕುಮಾರಸ್ವಾಮಿ ಬಡಾವಣೆ ಹಾಗೂ ಯಲಚೇನ ಹಳ್ಳಿಯ ಫೈಯಜಾಬಾದ್ ಬಡಾವಣೆಯ ಹಲವು ಮನೆಗಳಿಗೆ ಮಳೆಯ ನೀರು ನುಗ್ಗಿ ಸಮಸ್ಯೆ ಉಂಟಾಯಿತು. ಭಾರಿ ಮಳೆಯಿಂದ ಸ್ಥಳೀಯ ನಿವಾಸಿಗಳು ಹೈರಾಣಾದರು.

ಫೈಯಜಾಬಾದ್ ಬಡಾವಣೆಯ ಹತ್ತಕ್ಕೂ ಹೆಚ್ಚು ಮನೆಗಳಿಗೆ ಕಾಲುವೆಯ ನೀರು ನುಗ್ಗಿ ಮನೆಯಲ್ಲಿದ್ದ ಅಡುಗೆ ಸಾಮಗ್ರಿಗಳು, ಗೃಹೋಪಯೋಗಿ ವಸ್ತುಗಳು ನೀರಿನಲ್ಲಿ ತೊಯ್ದವು.

ನಾಗರಬಾವಿಯಲ್ಲಿ ನಿಂತ ಮಳೆ ನೀರಿನಲ್ಲಿ ಭಾನುವಾರ ವಾಹನಗಳು ಸಾಗಿದವು – ಪ್ರಜಾವಾಣಿ ಚಿತ್ರ/ ಎಂ.ಎಸ್‌.ಮಂಜುನಾಥ್

ಇದರಿಂದ ಅಪಾರ ನಷ್ಟವುಂಟಾಗಿದೆ ಎಂದು ನಿವಾಸಿಗಳು ನೋವು ತೋಡಿಕೊಂಡರು.

ಚರಂಡಿಯಲ್ಲಿನ ಹೂಳು ತೆರವು ಮಾಡದಿರುವ ಕಾರಣಕ್ಕೆ ಎರಡು ತಾಸು ಸುರಿದ ಮಳೆಗೇ ಮನೆಯ ಒಳಕ್ಕೆ ನೀರು ನುಗ್ಗಿತು. ಇನ್ನು ನಿರಂತರ ಮಳೆಯಾದರೆ ನಮ್ಮ ಗತಿಯೇನು ಎಂದು ಅಳಲು ತೋಡಿಕೊಂಡರು.

ಇನ್ನೂ ಎರಡು ದಿನ ಮಳೆ

ಬೆಂಗಳೂರಿನಲ್ಲಿ ಇನ್ನೂ ಎರಡು ದಿನಗಳ ಕಾಲ ಉತ್ತಮ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಎಲ್ಲಿ ಎಷ್ಟು ಮಳೆ (ಸೆಂ.ಮೀಗಳಲ್ಲಿ)

ಬೆಂಗಳೂರು ನಗರ	ಎಚ್‌ಎಎಲ್ ವಿಮಾನ ನಿಲ್ದಾಣ
4.82	2.26

ಭಾನುವಾರ ಬೆಳಿಗ್ಗೆ ಬಿಸಿಲು ಕಂಡಾಗ ನೀರಿನಲ್ಲಿ ತೊಯ್ದಿದ್ದ ಬಟ್ಟೆ, ಹಾಸಿಗೆ, ಹೊದಿಕೆಗಳನ್ನು ಜನರು ಒಣಗಿಸುತ್ತಿದ್ದ ದೃಶ್ಯವು ಕಂಡುಬಂತು.

ಟ್ರಿನಿಟಿ ವೃತ್ತ, ಎಂ.ಜಿ. ರಸ್ತೆ, ಮೆಜೆಸ್ಟಿಕ್, ಗಾಂಧಿನಗರ, ಜಯನಗರ, ಬಸವೇಶ್ವರ ವೃತ್ತ, ಶಿವಾನಂದ ಸರ್ಕಲ್, ವಸಂತ ನಗರ, ಜಾಲಹಳ್ಳಿ, ಕೆ.ಪಿ. ಅಗ್ರಹಾರ, ಪೀಣ್ಯ, ಪೀಣ್ಯ ಕೈಗಾರಿಕೆ ವಲಯ, ರಾಜರಾಜೇಶ್ವರಿ ನಗರ, ಜ್ಞಾನ ಭಾರತಿ, ಶೇಷಾದ್ರಿಪುರ, ಮಲ್ಲೇಶ್ವರ, ಕೆಂಗೇರಿ, ಜೆ.ಪಿ.ನಗರ, ಜಯನಗರ, ಗೊರಗುಂಟೆಪಾಳ್ಯ, ಯಶವಂತಪುರ ಸುತ್ತಮುತ್ತ ಧಾರಾಕಾರ ಮಳೆ ಸುರಿದಿದೆ. ಕೆಳಸೇತುವೆ ಸೇರಿದಂತೆ ಹಲವು ರಸ್ತೆಗಳು ಹೊಳೆಯಂತಾಗಿದ್ದವು.

ಯಶವಂತಪುರ ವೃತ್ತದ ಬಳಿ ಭಾರಿ ಗಾತ್ರದ ಮರ ರಸ್ತೆಗೆ ಉರುಳಿತ್ತು. ವಾಹನಗಳ ಓಡಾಟ ಕಡಿಮೆಯಿದ್ದ ಕಾರಣಕ್ಕೆ ಅನಾಹುತ ತಪ್ಪಿತು.

ಯಲಚೇನಹಳ್ಳಿ ವಾರ್ಡ್‌ನ ಕನಕನಗರದಲ್ಲಿ ಹೊಸ ಮನೆಗೆ ಮಳೆಯ ನೀರು ನುಗ್ಗಿ ಅನಾಹುತ ಸೃಷ್ಟಿಸಿತು. 300 ಮಂದಿಗೆ ಅಡುಗೆ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ರಾತ್ರಿ ಬಂದವರು ಊಟವನ್ನೂ ಮಾಡಲಿಲ್ಲ. ಟೇಬಲ್ ಹಾಗೂ ಕುರ್ಚಿಗಳು ಮಳೆಯ ನೀರಿನಲ್ಲಿ ತೇಲುತ್ತಿದ್ದವು ಎಂದು ಸ್ಥಳೀಯರು ಹೇಳಿದರು.

ಶಾಲಾ ಪ್ರವೇಶಕ್ಕೆ 6 ವರ್ಷ: ಆದೇಶ ವಾಪಸಿಗೆ ಸಿ.ಎಂಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದನೇ ತರಗತಿಗೆ ದಾಖಲಾಗುವ ವಿದ್ಯಾರ್ಥಿಯ ವಯೋಮಿತಿ ಆಯಾ ಶೈಕ್ಷಣಿಕ ವರ್ಷದ ಜೂನ್ 1ನೇ ತಾರೀಖಿಗೆ ಕಡ್ಡಾಯವಾಗಿ 6 ವರ್ಷ ಪೂರ್ಣಗೊಂಡಿರಬೇಕೆಂದು ರಾಜ್ಯ ಸರ್ಕಾರ ಇತ್ತೀಚೆಗೆ ಹೊರಡಿಸಿರುವ ಆದೇಶ 2009ರ ಆರ್‌ಟಿಇ ಕಾಯ್ದೆಯ ಉಲ್ಲಂಘನೆಯಾಗುತ್ತದೆ. ಹೀಗಾಗಿ, ಈ ಆದೇಶವನ್ನು ವಾಪಸು ಪಡೆಯಬೇಕು' ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಸಂಘ (ರುಪ್ಸ) ಪತ್ರ ಬರೆದಿದೆ.

'ಆರ್‌ಟಿಇ ಕಾಯ್ದೆ ಅನ್ವಯ 6 ರಿಂದ 14 ವರ್ಷದ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವ ಜವಾಬ್ದಾರಿ ಸರ್ಕಾರದ್ದು. 6 ವರ್ಷವೆಂದರೆ 5 ರಿಂದ 6 ವಯಸ್ಸಿನ ಮಕ್ಕಳು ಎಂದರ್ಥ. ಆದರೆ, 6 ವರ್ಷದ ನಂತರ ಅಂದರೆ 7ನೇ ವಯಸ್ಸಿಗೆ ಕಾಲಿಟ್ಟವರು ಎಂದಾಗುತ್ತದೆ. ಹೀಗಾದರೆ ಕಾಯ್ದೆಯನ್ನೇ ಉಲ್ಲಂಘಿಸಿದಂತೆ. ಅಲ್ಲದೆ, ಈ ಆದೇಶದಿಂದ ಪ್ರಸಕ್ತ ವರ್ಷ ಒಂದನೇ ತರಗತಿ, ಎಲ್‌ಕೆಜಿ, ಯುಕೆಜಿಯಲ್ಲಿರುವ ಸುಮಾರು 25 ಲಕ್ಷ ವಿದ್ಯಾರ್ಥಿಗಳ ಪೋಷಕರಿಗೆ ಹಾಗೂ ಶಾಲಾ ಆಡಳಿತ ಮಂಡಳಿಗಳಿಗೆ ಆತಂಕ ಉಂಟಾಗಿದೆ' ಎಂದು ಸಂಘದ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಈವರೆಗೆ ಎಲ್‌ಕೆಜಿಗೆ 3 ವರ್ಷ 5 ತಿಂಗಳು, 1ನೇ ತರಗತಿಗೆ 5 ವರ್ಷ 5 ತಿಂಗಳಿಂದ 7 ವರ್ಷದ ವಯೋಮಿತಿ ನಿಗದಿಪಡಿಸಲಾಗಿತ್ತು. ಇದನ್ನು ಪಾಲಿಸಿ ಎಲ್ಲ ಶಾಲೆಗಳು ವಿದ್ಯಾರ್ಥಿಗಳ ದಾಖಲಾತಿ ಪೂರ್ಣಗೊಳಿಸಿವೆ. ಹೊಸ ಸುತ್ತೋಲೆಯಲ್ಲಿ, ಈಗ ದಾಖಲಾಗಿರುವ ಮಕ್ಕಳನ್ನು ಅದೇ ತರಗತಿಯಲ್ಲಿ ಮುಂದುವರಿಸಬೇಕೆ ಅಥವಾ ಹಿಂದಿನ ತರಗತಿಗೆ ಹಿಂಬಡ್ತಿ ಮಾಡಬೇಕೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಒಂದನೇ ತರಗತಿಗೆ ದಾಖಲಾತಿಗೆ 6 ವರ್ಷ ತುಂಬಿರಬೇಕೆಂದಿದೆ, ಆದರೆ, ಎಷ್ಟು ವರ್ಷದವರೆಗೆ ಒಂದನೇ ತರಗತಿಗೆ ದಾಖಲಾತಿ ಮಾಡಬಹುದೆಂಬ ವಿವರ ಇಲ್ಲ' ಎಂದೂ ಅವರು ಹೇಳಿದ್ದಾರೆ.

ಬಿಬಿಎಂಪಿ: ಮತದಾರರ ಪಟ್ಟಿ ಪರಿಷ್ಕರಣೆಗೆ ವೇಳಾಪಟ್ಟಿ ನಿಗದಿ– ಇಂದಿನಿಂದ ಆರಂಭ

ಅಕ್ಟೋಬರ್–ನವೆಂಬರ್‌ನಲ್ಲಿ ಚುನಾವಣೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ನಿರ್ದೇಶನದಂತೆ ರಾಜ್ಯ ಚುನಾವಣಾ ಆಯೋಗ ಬಿಬಿಎಂಪಿ ಚುನಾವಣೆ ಪ್ರಕ್ರಿಯೆಯನ್ನು ಆರಂಭಿಸಿದೆ. ರಾಜ್ಯ ಸರ್ಕಾರ ವಾರ್ಡ್ ಮೀಸಲಾತಿಯನ್ನು ಈ ವಾರದಲ್ಲಿ ಅಂತಿಮಗೊಳಿಸಿದರೆ ಅಕ್ಟೋಬರ್–ನವೆಂಬರ್‌ನಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದೆ.

ಮತದಾರರ ಪಟ್ಟಿ ಅಂತಿಮವಾಗದ ಹೊರತು ಚುನಾವಣೆ ಅಧಿಸೂಚನೆ ಹೊರಡಿಸಲು ಸಾಧ್ಯವಿಲ್ಲ. ಹೀಗಾಗಿ ಚುನಾವಣೆ ಆಯೋಗ ಸಮಯ ವ್ಯರ್ಥ ಮಾಡದೆ ಚುನಾವಣೆ ಪ್ರಕ್ರಿಯೆಯನ್ನು ಈಗಾಗಲೇ ಆರಂಭಿಸಿದೆ. ವಾರ್ಡ್‌ವಾರು ಮತದಾರರ ಪಟ್ಟಿ ಅಂತಿಮಗೊಂಡ ನಂತರ, ಚುನಾವಣೆ ಅಧಿಸೂಚನೆ ಹೊರಬೀಳಲಿದೆ.

ಮುಖ್ಯಾಂಶಗಳು

- ಆಗಸ್ಟ್ 28ರಂದು ಕರಡು ಪಟ್ಟಿ
- ಭಾವಚಿತ್ರವಿರುವ ಮತದಾರರ ಪಟ್ಟಿ ಸೆ.22ರಂದು ಅಂತಿಮ

ಪುನರ್‌ವಿಂಗಡಣೆಗೊಂಡ ವಾರ್ಡ್ ಮಟ್ಟದ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಸೋಮವಾರದಿಂದ ಆರಂಭವಾಗಲಿದೆ. ಮನೆಮನೆಗಳಿಗೆ ಭೇಟಿ ನೀಡುವ ಬಿಬಿಎಂಪಿ ಚುನಾವಣೆ ಸಿಬ್ಬಂದಿ ಮಾಹಿತಿ ಪಡೆಯಲಿದ್ದಾರೆ. ಮತದಾರರ ಭಾವಚಿತ್ರ ಇರುವ ಮತದಾರರ ಪಟ್ಟಿಯನ್ನು ಪ್ರಕಟಿಸಲು ರಾಜ್ಯ ಚುನಾವಣಾ ಆಯೋಗ ಸೂಚಿಸಿದೆ. ಸೆಪ್ಟೆಂಬರ್ 22ರಂದು ವಾರ್ಡ್‌ವಾರು ಮತದಾರರ ಪಟ್ಟಿಯನ್ನು ಅಂತಿಮವಾಗಿ ಪ್ರಕಟಿಸಬೇಕು ಎಂದು ವೇಳಾಪಟ್ಟಿ ಬಿಡುಗಡೆ ಮಾಡಲಾಗಿದೆ.

ಒಂದೂವರೆ ತಿಂಗಳ ಪ್ರಕ್ರಿಯೆ

'ಸುಪ್ರೀಂ ಕೋರ್ಟ್ ನಿರ್ದೇಶನದಂತೆ ನಾವು ಬಿಬಿಎಂಪಿ ಚುನಾವಣೆ ಪ್ರಕ್ರಿಯೆಯನ್ನು ಆರಂಭಿಸಿದ್ದೇವೆ. ವಾರ್ಡ್ ಮೀಸಲಾತಿ ನಂತರ ಮತದಾರರ ಪಟ್ಟಿ ಪರಿಷ್ಕರಣೆ ಆರಂಭಿಸಿದರೆ ವಿಳಂಬವಾಗುತ್ತದೆ ಎಂದು ಈಗಾಗಲೇ ಆ ಕಾರ್ಯವನ್ನು ಆರಂಭಿಸಿದ್ದೇವೆ. ಸೆ.22ರಂದು ಅಂತಿಮವಾಗಿ ಮತದಾರರ ಪಟ್ಟಿ ಪ್ರಕಟವಾಗಲಿದೆ. ಅದಾದ ಮೇಲೆ ಚುನಾವಣೆ ಅಧಿಸೂಚನೆ ಹೊರಡಿಸಲಾಗುತ್ತದೆ. ನಂತರದ ಒಂದೂವರೆ ತಿಂಗಳಲ್ಲಿ ಚುನಾವಣೆ ಪ್ರಕ್ರಿಯೆಗಳೆಲ್ಲ ಮುಗಿಯಲಿವೆ' ಎಂದು ರಾಜ್ಯ ಚುನಾವಣಾ ಆಯೋಗದ ಆಯುಕ್ತ ಬಸವರಾಜ್ ತಿಳಿಸಿದರು.



ಬೆಂಗಳೂರು ನಗರ ಜಿಲ್ಲಾಧಿಕಾರಿ, ಬಿಬಿಎಂಪಿ ಆಡಳಿತ ವಿಶೇಷ ಆಯುಕ್ತ, ದಕ್ಷಿಣ ಹಾಗೂ ಮಹದೇವಪುರ ವಲಯದ ಜಂಟಿ ಆಯುಕ್ತರನ್ನು ಜಿಲ್ಲಾ ಚುನಾವಣಾಧಿಕಾರಿಯಾಗಿದ್ದಾರೆ. ಇವರೆಲ್ಲರ ನೇತೃತ್ವದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ನಡೆಯಲಿದೆ.

ಮತದಾರರ ಪಟ್ಟಿ ಪರಿಷ್ಕರಣೆ ಸಂದರ್ಭದಲ್ಲಿ ಮತದಾರರು ಆಧಾರ್ ಸಂಖ್ಯೆ ಲಿಂಕ್ ಮಾಡಿಕೊಳ್ಳುವ ಆಯ್ಕೆಯೂ ಇರುತ್ತದೆ. ಅರ್ಜಿ ಅಥವಾ ಚುನಾವಣಾ ಆಯೋಗದ ಆ್ಯಪ್ ಮೂಲಕ ಲಿಂಕ್ ಮಾಡಿಕೊಳ್ಳಬಹುದು.

ವೇಳಾಪಟ್ಟಿ: ಆ.1ರಿಂದ 5ವರೆಗೆ ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹ. ಆ.6ರಿಂದ 11ರವರೆಗೆ ಕಾಣೆಯಾಗಿರುವ, ಮರುಕಳಿಸಿರುವ ಹೆಸರುಗಳ ಪರಿಶೀಲನೆ. ಆ.12ರಿಂದ 14ರವರೆಗೆ ವಾರ್ಡ್‌ವಾರು ಮತದಾರರ ಪಟ್ಟಿಯ 1ನೇ ಚೆಕ್‌ಲಿಸ್ಟ್ ಸಿದ್ಧ. ನಂತರ ಎರಡು ದಿನ 1ನೇ ಪಟ್ಟಿಯ ಪರಿಶೀಲನೆ, ಮುದ್ರಣ ಪ್ರಕ್ರಿಯೆ. ಆ.25ರಂದು ವಾರ್ಡ್‌ವಾರು ಮತದಾರರ ಕರಡು ಪಟ್ಟಿ ಪ್ರಕಟ. ಸೆ.2ರವರೆಗೆ ಆಕ್ಷೇಪಣೆಗೆ ಅವಕಾಶ. ಸೆ.3ರಿಂದ 7ರವರೆಗೆ ಆಕ್ಷೇಪಣೆಗಳ ಪರಿಶೀಲನೆ. ಸೆ.8ರಿಂದ 11ರವರೆಗೆ ವಾರ್ಡ್‌ವಾರು ಮತದಾರರ ಪಟ್ಟಿ ಅಂತಿಮ ಚೆಕ್‌ಲಿಸ್ಟ್ ತಯಾರು. ಸೆ.12 ರಿಂದ 15ರವರೆಗೆ ಅಂತಿಮ ಚೆಕ್‌ಲಿಸ್ಟ್ ಪರಿಶೀಲನೆ. ಸೆ.16ರಂದು ಮುದ್ರಣ ಆರಂಭ. ಸೆ.22ರಂದು ವಾರ್ಡ್‌ವಾರು ಮತದಾರರ ಪಟ್ಟಿ ಅಂತಿಮ ಪ್ರಕಟಣೆ.

ಕಾಂಗ್ರೆಸ್ ರಾಜಕೀಯ ವ್ಯವಹಾರಗಳ ಸಮಿತಿ ಸಭೆ ನಾಳೆ

ಹುಬ್ಬಳ್ಳಿ: 'ರಾಜಸ್ಥಾನದ ಉದಯಪುರದಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ನಿರ್ಣಯಿಸಿದಂತೆ, ರಾಜ್ಯದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ರಾಜಕೀಯ ವ್ಯವಹಾರಗಳ ಸಮಿತಿ ಸಭೆ ಹುಬ್ಬಳ್ಳಿ ಖಾಸಗಿ ಹೋಟೆಲ್‌ನಲ್ಲಿ ಆ. 2ರಂದು ರಾತ್ರಿ 8ಕ್ಕೆ ನಡೆಯಲಿದೆ' ಎಂದು ಕೆಪಿಸಿಸಿ ರಾಜ್ಯ ಘಟಕದ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ನೇತೃತ್ವದಲ್ಲಿ ನಡೆಯಲಿರುವ ಸಭೆಯಲ್ಲಿ ಪಕ್ಷದ ಮುಖಂಡ ರಾಹುಲ್ ಗಾಂಧಿ ಪಾಲ್ಗೊಳ್ಳಲಿದ್ದಾರೆ. ರಾಜ್ಯದಲ್ಲಿನ ರಾಜಕೀಯ ವಿದ್ಯಮಾನ, ಶೇ 40ರಷ್ಟು ಕಮಿಷನ್ ವ್ಯವಹಾರ, ಉದ್ಯೋಗ ಸಮಸ್ಯೆ, ಹದಗೆಟ್ಟ ಕಾನೂನು ಸುವ್ಯವಸ್ಥೆ ಹೀಗೆ ಹತ್ತು ಹಲವು ವಿಷಯಗಳ ಬಗ್ಗೆ ಚರ್ಚಿಸಲಾಗುವುದು' ಎಂದರು.

ದಿ ಮೊಹುವ ಷೋ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೊಹುವ ಚಿನ್ನಪ್ಪ (ಎಡದಿಂದ ಎರಡನೆಯವರು) ಬರೆದ 'ನೌಟಂಕಿ ಸಾಲಾ' ಪುಸ್ತಕವನ್ನು ನಟ ಹಾಗೂ ಟಿಎಂಸಿ ಸಂಸದ ಶತ್ರುಘ್ನ ಸಿನ್ಹಾ ಬಿಡುಗಡೆಗೊಳಿಸಿದರು. ಭಾರತಿ ಪ್ರಧಾನ್ ಮತ್ತು ಅನುರಾಗ್ ಚವ್ಹಾಣ್ ಇದ್ದರು –ಪ್ರಜಾವಾಣಿ ಚಿತ್ರ

ಜಂಟಿ ಸಮರಾಭ್ಯಾಸ ಇಂದಿನಿಂದ

ನವದೆಹಲಿ (ಪಿಟಿಐ): ಭಾರತ ಮತ್ತು ಒಮಾನ್ ಸೇನೆಯ ಎರಡು ವಾರಗಳ ಜಂಟಿ ಸಮಾರಾಭ್ಯಾಸ ರಾಜಸ್ಥಾನದಲ್ಲಿ ಸೋಮವಾರದಿಂದ ಆಗಸ್ಟ್ 13ರ ವರೆಗೆ ನಡೆಯಲಿದೆ.

'ಭಯೋತ್ಪಾದನೆಯ ವಿರುದ್ಧದ ಕಾರ್ಯಾಚರಣೆಗಳಿಗೆ ಈ ಜಂಟಿ ಸಮರಾಭ್ಯಾಸವು ಸಹಾಯಕವಾಗಲಿದೆ. ಜತೆಗೆ, ಪ್ರಾದೇಶಿಕ ಭದ್ರತೆ ಮತ್ತು ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಗಳಿಗೂ ಸಹಾಯಕವಾಗಲಿದೆ' ಎಂದು ಭಾರತದ ರಕ್ಷಣಾ ಸಚಿವಾಲಯ ಹೇಳಿದೆ.

ಕೊಳೆಗೇರಿ ಮಂಡಳಿ ವತಿಯಿಂದ ನೀಡಲಾದ 20 ಹೊಸ ಮನೆಗಳನ್ನು ವಸತಿ ಸಚಿವ ವಿ. ಸೋಮಣ್ಣ ಅವರು ಫಲಾನುಭವಿಗಳಿಗೆ ಹಸ್ತಾಂತರಿಸಿದರು. ಬಿಜೆಪಿ ಮುಖಂಡರಾದ ಶ್ರೀಧರ್, ಮಂಡಲ ಅಧ್ಯಕ್ಷ ವಿಶ್ವನಾಥ ಗೌಡರು ಇದ್ದರು

ಕರ್ನಾಟಕ ಕಾನೂನು ವಿಶ್ವವಿದ್ಯಾಲಯ ಕುಲಪತಿ ನೇಮಕಾತಿ

ಯುಜಿಸಿ, ಎನ್‌ಇಪಿ ನಿಯಮಾವಳಿಗೆ ಕೊಕ್

• ಇ.ಎಸ್. ಸುಧೀಂದ್ರ ಪ್ರಸಾದ್

ಧಾರವಾಡ: 'ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ನೂತನ ಕುಲಪತಿ ಆಯ್ಕೆಗೆ ಸಂಬಂಧಿಸಿದಂತೆ ಹೊರಡಿಸಿರುವ ಅಧಿಸೂಚನೆಯಲ್ಲಿ ಯುಜಿಸಿ ನಿಯಮಾವಳಿಗಳನ್ನೇ ಗಾಳಿಗೆ ತೂರಲಾಗಿದೆ' ಎಂಬ ಆರೋಪ ಪ್ರಾಧ್ಯಾಪಕರ ವಲಯದಿಂದ ವ್ಯಕ್ತವಾಗಿದೆ.

ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಪ್ರೊ.ಈಶ್ವರ ಭಟ್ ಅವರು ಜೂನ್ 12ರಂದು ನಿವೃತ್ತರಾದರು. ಹೀಗಾಗಿ ಕುಲಪತಿ ಹುದ್ದೆಗೆ ಜೂನ್ 29ರಂದು ಕಾನೂನು ಇಲಾಖೆ ಕಾರ್ಯದರ್ಶಿ ನೇಮಕಾತಿ ಅಧಿಸೂಚನೆ ಪ್ರಕಟಿಸಿದ್ದಾರೆ. 2018ರ ವಿಶ್ವ ವಿದ್ಯಾಲಯ ಧನಸಹಾಯ ಆಯೋಗದ(ಯುಜಿಸಿ) ಕಾಯ್ದೆಯಂತೆ, ಕುಲಪತಿಯಾಗುವವರಿಗೆ ಕೇವಲ ಬೋಧನಾ ಅನುಭವ ಮಾತ್ರವಲ್ಲ, ಆಡಳಿತಾತ್ಮಕ ಅನುಭವ ಇರಬೇಕಾದದ್ದು ಕಡ್ಡಾಯ ಎನ್ನಲಾಗಿದೆ. ಆದರೆ ನೇಮಕಾತಿ ಅಧಿಸೂಚನೆಯಲ್ಲಿ ಈ ಅಂಶವನ್ನೇ ಬಿಟ್ಟಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ನ್ಯಾಯಾಲಯದ ಮೊರೆ ಹೋಗಲು ಸಿದ್ಧತೆ

ಈ ಪ್ರಕರಣಕ್ಕೆ ಇಂಬು ನೀಡುವಂತೆ, ಯುಜಿಸಿ 2018ರ ನಿಯಮಾವಳಿ ಅನುಸರಿಸದ್ದನ್ನು ಗಂಭೀರವಾಗಿ ಪರಿಗಣಿಸಿದ ಸುಪ್ರೀಂ ಕೋರ್ಟ್ ಗಂಭೀರಧನ್ ಕೆ. ಗಡಾವಿ ಮತ್ತು ಗುಜರಾತ್ ರಾಜ್ಯ ಸರ್ಕಾರ ಹಾಗೂ ಇತರರು ಪ್ರಕರಣದಲ್ಲಿ ಕುಲಪತಿ ನೇಮಕಾತಿಯನ್ನೇ ರದ್ದುಗೊಳಿಸಿದೆ. ಜತೆಗೆ ಕುಲಪತಿಯಾಗಿ ಎರಡು ವರ್ಷಗಳ ಕಾಲ ಪಡೆದ ವೇತನವನ್ನು ಮರಳಿ ಪಡೆಯುವಂತೆಯೂ ಗುಜರಾತ್ ಸರ್ಕಾರಕ್ಕೆ ಸೂಚಿಸಿತ್ತು.

ಇದೇ ಆಧಾರದಲ್ಲಿ, ಕರ್ನಾಟಕ ವಿವಿ ಕುಲಪತಿ ನೇಮಕಾತಿ ಅಧಿಸೂಚನೆ ರದ್ದುಗೊಳಿಸುವಂತೆ ಕೋರಲು ಹಲವರು ನ್ಯಾಯಾಲಯದ ಮೊರೆ ಹೋಗಲು ಸಿದ್ಧತೆ ನಡೆಸಿದ್ದಾರೆ.

ಪ್ರಜಾವಾಣಿ ವಿಶೇಷ

ಅಧಿಸೂಚನೆಯು ಕಾನೂನು ವಿಶ್ವವಿದ್ಯಾಲಯದ 2009 ಹಾಗೂ 2016ರ ತಿದ್ದುಪಡಿ ಕಾಯ್ದೆಯಂತೆ ಹಾಗೂ ಯುಜಿಸಿ 2010ರ ನೇಮಕಾತಿ ನಿಯಮಾವಳಿಯನ್ನು ಒಳಗೊಂಡಿದೆ. ಇದರ ಅನ್ವಯ ಕಾನೂನು ವಿ ಶ್ವ ವಿ ದ್ಯಾ ಲ ಯ ವ್ಯಾಪ್ತಿಯಲ್ಲಿ ಕನಿಷ್ಠ 10 ವರ್ಷ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿರಬೇಕು. ಆಡಳಿತಾತ್ಮಕ ಅನುಭವ ಹೊಂದಿರಬೇಕು ಎಂದಷ್ಟೇ ಇದೆ. ಆದರೆ 2018ರಲ್ಲಿ ಯುಜಿಸಿ ತಿದ್ದುಪಡಿ ತಂದಿದ್ದು, ಶೈಕ್ಷಣಿಕ ನಾಯಕತ್ವ ನಿರ್ವಹಿಸಿದ ದಾಖಲೆಗಳನ್ನು ಅಗತ್ಯವಾಗಿ ಸಲ್ಲಿಸಬೇಕು ಎಂಬ ಅಂಶವನ್ನು ಸೇರಿಸಿದೆ. ಇದೇ ಅಂಶ ನೂತನ ಶಿಕ್ಷಣ ನೀತಿಯಲ್ಲೂ ಇದೆ.

ಇದರ ಅನ್ವಯ ಪ್ರಾಧ್ಯಾಪಕರಾಗಿರುವುದರ ಜತೆಗೆ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯ ಡೀನ್, ಕುಲಸಚಿವ, ಮೌಲ್ಯಮಾಪನ ಕುಲಸಚಿವ, ಅಕಾಡೆಮಿಕ್ ಕೌನ್ಸಿಲ್ ಸದಸ್ಯ, ಸಿಂಡಿಕೇಟ್ ಸದಸ್ಯ, ವಿವಿಧ ಅಕಾಡೆಮಿ ಕೌನ್ಸಿಲ್ ಸದಸ್ಯರಾದವರು ಅರ್ಹರು ಎಂದಿದೆ. ಆದರೆ ಕಾನೂನು ವಿವಿ ಕುಲಪತಿ ನೇಮಕಾತಿಗೆ ಹೊರಡಿಸಿರುವ ಅಧಿಸೂಚನೆ ಮತ್ತು ನೀಡಿರುವ ಜಾಹೀರಾತಿನಲ್ಲಿ ಈ ಅಂಶ ಇಲ್ಲದಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ಜತೆಗೆ,ಯಾರಿಗೋ ಲಾಭ ಮಾಡಿಕೊಡುವ ಉದ್ದೇಶದಿಂದ ಹಳೇ ನಿಯಮಾವಳಿಯನ್ನೇ ಉಳಿಸಿಕೊಳ್ಳಲಾಗಿದೆ ಎಂದು ಹೆಸರು ಹೇಳಲಿಚ್ಛಿಸದ ಪ್ರಾಧ್ಯಾಪಕರೊಬ್ಬರು ಆರೋಪಿಸಿದರು.

ಈಗಾಗಲೇ ನೇಮಕಾತಿಗೆ ಸಂಬಂಧಿಸಿದಂತೆ ರಚಿಸಲಾದ ಶೋಧನಾ ಸಮಿತಿಯಲ್ಲಿ, ನಿಯಮ ಮೀರಿ ವಿಶ್ವ ವಿದ್ಯಾಲಯದ ಅಧೀನ ಕಾಲೇಜಿನ ಪ್ರಾಧ್ಯಾಪಕರನ್ನು ಸರ್ಕಾರ ನೇಮಿಸಿರುವ ಕುರಿತು ಆಕ್ಷೇಪಗಳು ವ್ಯಕ್ತವಾಗಿದ್ದವು. ಈ ಕುರಿತು 2022ರ ಜುಲೈ 6 ರಂದು 'ಪ್ರಜಾವಾಣಿ' ವಿಶೇಷ ವರದಿ ಪ್ರಕಟಿಸಿತ್ತು.

'ನೇಮಕಾತಿಗೆ ಸಂಬಂಧಿಸಿದಂತೆ ಆಕ್ಷೇಪ ಸಲ್ಲಿಸಲು ಸಾಮಾನ್ಯವಾಗಿ ನೀಡಬೇಕಾದ 30 ದಿನಗಳ ಕಾಲಾವಕಾಶ ಬದಲು 15 ದಿನ ಮಾತ್ರ ನೀಡಲಾಗಿದೆ. ಇಷ್ಟು ತರಾತುರಿಯಲ್ಲಿ ನೇಮಕಾತಿ ನಡೆಸುತ್ತಿರುವುದರ ಉದ್ದೇಶವಾದರೂ ಏನು' ಎಂದು ಪ್ರಾಧ್ಯಾಪಕರು ಪ್ರಶ್ನಿಸಿದ್ದಾರೆ.

'ಭಿಕ್ಷಾಟನೆ ನಿರ್ಮೂಲನೆಗೆ ಪಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಭಿಕ್ಷಾಟನೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಪ್ರಯತ್ನಿಸಲಾಗುವುದು' ಎಂದು ಕೇಂದ್ರ ಪರಿಹಾರ ಸಮಿತಿಯ ಅಧ್ಯಕ್ಷ ಬಸವರಾಜ್ ನಾಯಕ ತಿಳಿಸಿದರು.

ಭಿಕ್ಷಾಟನೆ ತಡೆಗಟ್ಟುವ ಉದ್ದೇಶದಿಂದ ಸ್ಥಾಪಿತವಾದ ಕೇಂದ್ರ ಪರಿಹಾರ ಸಮಿತಿಯ ನೂತನ ಅಧ್ಯಕ್ಷರಾಗಿ ಶುಕ್ರವಾರ ಅಧಿಕಾರ ಸ್ವೀಕರಿಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ವಿವಿಧ ಕಾರಣಗಳಿಂದ ಭಿಕ್ಷಾಟನೆಯನ್ನೇ ತಮ್ಮ ಬದುಕಿಗೆ ಆಧಾರವಾಗಿರಿಸಿಕೊಂಡಿರುವವರಿಗೆ ಅಗತ್ಯ ವಸತಿ, ಊಟ, ಉಡುಪು ವೈದ್ಯಕೀಯ ಸೌಲಭ್ಯ ಕಲ್ಪಿಸಲಾಗುವುದು. ಜತೆಗೆ, ಸ್ವಾವಲಂಬಿಗಳಾಗಿ ಬದುಕಲು ಔದ್ಯೋಗಿಕ ತರಬೇತಿ ನೀಡಿ ಸಮಾಜದ ಮುಖ್ಯವಾಹಿನಿಗೆ ತರಲಾಗುವುದು' ಎಂದು ತಿಳಿಸಿದರು.

ಕೇಂದ್ರ ಪರಿಹಾರ ಸಮಿತಿಯ ಅಧ್ಯಕ್ಷರಾಗಿ ಶುಕ್ರವಾರ ಅಧಿಕಾರ ಸ್ವೀಕರಿಸುವ ಮುನ್ನ ಬಸವರಾಜ್ ನಾಯಕ ಅವರು ಪೂಜೆ ಸಲ್ಲಿಸಿದರು

'ರಾಜ್ಯದಲ್ಲಿ ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ಮೈಸೂರು, ದಕ್ಷಿಣ ಕನ್ನಡ, ಬೆಳಗಾವಿ, ಕಲಬುರಗಿ, ಬಳ್ಳಾರಿ, ದಾವಣಗೆರೆ, ವಿಜಯಪುರ, ಶಿವಮೊಗ್ಗ, ತುಮಕೂರು, ಕೋಲಾರ, ಚಿತ್ರದುರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಒಟ್ಟು 14 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ರಾಜ್ಯದೆಲ್ಲೆಡೆ ಪ್ರಸ್ತುತ ಒಟ್ಟು 2,969 ಜನರಿಗೆ ಪುನರ್ವಸತಿ ಕಲ್ಪಿಸಲಾಗಿದೆ. ಇವರಲ್ಲಿ 2,575 ಪುರುಷರು ಹಾಗೂ 394 ಮಹಿಳೆಯರು ಇದ್ದಾರೆ' ಎಂದು ವಿವರಿಸಿದರು.

'ಹೊಸದಾಗಿ ಹಾಸನ, ಕೊಪ್ಪಳ, ಹಾವೇರಿ, ಯಾದಗಿರಿ, ಮಂಗಳೂರು, ಬೀದರ್, ಬಾಗಲಕೋಟೆ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು' ಎಂದು ತಿಳಿಸಿದರು.

'ಪುನರ್ವಸತಿ ಕೇಂದ್ರಕ್ಕೆ 18 ವರ್ಷ ಪೂರೈಸಿದ ಮಹಿಳೆಯರು ಹಾಗೂ 16 ವರ್ಷ ಪೂರೈಸಿದ ಪುರುಷರನ್ನು ಕರೆತರಲಾಗುವುದು' ಎಂದು ಅವರು ಮಾಹಿತಿ ನೀಡಿದರು.

'ಐಸಿಯುನಲ್ಲಿ ಕೌಶಲಪೂರ್ಣ ಚಿಕಿತ್ಸೆ'

ಬೆಂಗಳೂರು: ಮಣಿಪಾಲ್ ಆಸ್ಪತ್ರೆಯಲ್ಲಿ ಉನ್ನತಮಟ್ಟದ ಡಿಜಿಟಲೀಕೃತ ತೀವ್ರ ನಿಗಾ ಘಟಕದಲ್ಲಿ(ಐಸಿಯು) ಕೌಶಲ ಪೂರ್ಣ ಅನುಭವಿ ವೈದ್ಯರ ಮೂಲಕ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆಸ್ಪತ್ರೆಯ ಡಾ.ಸುನೀಲ್ ಕಾರಂತ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಮಣಿಪಾಲ್ ಆಸ್ಪತ್ರೆಯಲ್ಲಿರುವ ಐಸಿಯು ಘಟಕವು ದೇಶದಲ್ಲಿ ಅತ್ಯಂತ ಹೆಚ್ಚಿನ ಕಾರ್ಯ ಚಟುವಟಿಕೆ ಮಾಡುವ ಘಟಕಗಳಲ್ಲಿ ಒಂದಾಗಿದೆ. ಆಸ್ಪತ್ರೆ ತಜ್ಞವೈದ್ಯರು 5 ಸಾವಿರ ಗಂಭೀರ ಅಸ್ವಸ್ಥ ರೋಗಿಗಳಿಗೆ ಇದುವರೆಗೆ ಯಶಸ್ವಿಯಾಗಿ ಚಿಕಿತ್ಸೆ ನೀಡಿದ್ದಾರೆ' ಎಂದು ಹೇಳಿದರು.

'25 ವರ್ಷಗಳಿಂದ ಆಸ್ಪತ್ರೆಯ ಐಸಿಯು ಘಟಕದ ತಜ್ಞವೈದ್ಯರ ಕಾಳಜಿಯೊಂದಿಗೆ 35 ಸಾವಿರಕ್ಕೂ ಹೆಚ್ಚು ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ. ಮೂತ್ರಪಿಂಡ, ಹೃದಯ ಮತ್ತು ಪಿತ್ತಜನಕಾಂಗ ಕಸಿಗೆ ಒಳಗಾಗುವ ರೋಗಿಗಳಿಗೆ ವಿಭಿನ್ನ ರೀತಿಯ ತೀವ್ರ ನಿಗಾ ಘಟಕಗಳನ್ನು ಒಳಗೊಂಡಿದೆ. ನರ ಸಂಬಂಧಿ ರೋಗ, ಗರ್ಭಾವಸ್ಥೆಯ ಸಂಕೀರ್ಣ ತೊಂದರೆಗಳಿಗೂ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

'ಗಂಭೀರ ಸ್ಥಿತಿಯಲ್ಲಿರುವ ರೋಗಿಗಳ ಆರೈಕೆ ಮಾಡುವುದನ್ನು ಗುರುತಿಸಿ ನೀಡಲಾಗುವ ರಾಷ್ಟ್ರಮಟ್ಟದ ವೈದ್ಯಕೀಯ ತರಬೇತಿ ಕಾರ್ಯಕ್ರಮಕ್ಕೆ ಮಣಿಪಾಲ್ ಆಸ್ಪತ್ರೆ ತೀವ್ರ ನಿಗಾ ಘಟಕ (ಐಸಿಯು) ಆಯ್ಕೆಯಾಗಿದೆ' ಎಂದು ಹೆಮ್ಮೆ ವ್ಯಕ್ತಪಡಿಸಿದರು.

ಡಾ.ರಾಜೇಶ್ ಮೋಹನ್ ಶೆಟ್ಟಿ, ಡಾ.ಜಸ್ಟಿನ್ ಎ. ಗೋಪಾಲ್‌ದಾಸ್, ಡಾ.ಅಜಿತ್ ಕುಮಾರ್ ಎ.ಕೆ. ಇದ್ದರು.

ಆದಾಯ ತೆರಿಗೆ: 53.98 ಲಕ್ಷ ವಿವರ ಸಲ್ಲಿಕೆ

ನವದೆಹಲಿ (ಪಿಟಿಐ): ವೇತನದಾರರು ತಮ್ಮ 2021-22ನೇ ಸಾಲಿನ ಆದಾಯ ತೆರಿಗೆ ವಿವರ ಸಲ್ಲಿಸಲು ಕಡೆಯ ದಿನವಾಗಿದ್ದ ಜುಲೈ 31ರಂದು ಅಂದಾಜು 53.98 ಲಕ್ಷ ಆದಾಯ ತೆರಿಗೆ ವಿವರಗಳು ಸಲ್ಲಿಕೆಯಾಗಿವೆ.

ಜುಲೈ 30ರವರೆಗೆ 5.10 ಕೋಟಿಗಿಂತ ಹೆಚ್ಚಿನ ಆದಾಯ ತೆರಿಗೆ ವಿವರಗಳು ಸಲ್ಲಿಕೆಯಾಗಿವೆ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ.

ಭಾನುವಾರ ರಾತ್ರಿ 8 ಗಂಟೆಯವರೆಗೆ 53.98 ಲಕ್ಷ ವಿವರಗಳು ಸಲ್ಲಿಕೆಯಾಗಿವೆ. ಕಡೆಯ ಒಂದು ತಾಸಿನ ಅವಧಿಯಲ್ಲಿ 4.95 ಲಕ್ಷ ವಿವರಗಳು ಸಲ್ಲಿಕೆಯಾಗಿವೆ ಎಂದು ಇಲಾಖೆಯು ಟ್ವೀಟ್ ಮಾಡಿದೆ.

ಹಿಂದಿನ ವರ್ಷದಲ್ಲಿ (2020-21) ಆದಾಯ ತೆರಿಗೆ ವಿವರ ಸಲ್ಲಿಸಲು ಡಿಸೆಂಬರ್ 31ರವರೆಗೆ ಅವಕಾಶ ಕಲ್ಪಿಸಲಾಗಿತ್ತು. ಆಗ ಅಂದಾಜು 5.89 ಕೋಟಿ ವಿವರಗಳು ಸಲ್ಲಿಕೆಯಾಗಿದ್ದವು.

ವಿಳಂಬ ಶುಲ್ಕವನ್ನು ತಪ್ಪಿಸಲು ಗಡುವಿನ ಒಳಗೆ ವಿವರ ಸಲ್ಲಿಸಬೇಕು ಎಂದು ಇಲಾಖೆಯು ಮತ್ತೆ ಮತ್ತೆ ಹೇಳುತ್ತ ಬಂದಿದೆ. ತೆರಿಗೆ ನಿಯಮಗಳ ಅನ್ವಯ, ₹ 5 ಲಕ್ಷಕ್ಕಿಂತ ಹೆಚ್ಚಿನ ವಾರ್ಷಿಕ ಆದಾಯ ಹೊಂದಿರುವವರು ಆಗಸ್ಟ್ 1ರಿಂದ ಡಿಸೆಂಬರ್ 31ರೊಳಗೆ ವಿವರ ಸಲ್ಲಿಸಿದರೆ ₹ 5,000 ವಿಳಂಬ ಶುಲ್ಕ ಪಾವತಿಸಬೇಕು.

₹ 5 ಲಕ್ಷಕ್ಕಿಂತ ಕಡಿಮೆ ವಾರ್ಷಿಕ ಆದಾಯ ಹೊಂದಿರುವವರು ಗಡುವಿನ ನಂತರ ವಿವರ ಸಲ್ಲಿಸಿದರೆ ₹ 1,000 ವಿಳಂಬ ಶುಲ್ಕ ಪಾವತಿ ಮಾಡಬೇಕು.

2020–21 ಸಾಲಿನ 24 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆಗೆ ಮತ್ತೆ ಹಾಜರು

ಸಿಇಟಿ ಗೊಂದಲ: ದಂಗಾದ ಕೆಇಎ!

• ರಾಜೇಶ್ ರೈ ಚಟ್ಲ

ಸಾಂದರ್ಭಿಕ ಚಿತ್ರ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೋವಿಡ್ ಕಾರಣಕ್ಕೆ 2020- 21 ನೇ ಸಾಲಿನಲ್ಲಿ ಪರೀಕ್ಷೆ ಇಲ್ಲದೆ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳನ್ನು ತೇರ್ಗಡೆ ಮಾಡಲಾಗಿತ್ತು. ಅಂಥ ವಿದ್ಯಾರ್ಥಿಗಳಲ್ಲಿ ಶೇ 90ಕ್ಕೂ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ 24 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಬಾರಿಯೂ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆದಿರುವುದು ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು (ಕೆಇಎ) ದಂಗು ಬಡಿಸಿದೆ!

ಅಷ್ಟೇ ಅಲ್ಲ, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವ ಕೆಇಎ, ಇಷ್ಟು ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳ ಪೈಕಿ ಯಾರಾದರೂ ಕಳೆದ ವರ್ಷ (2020-21ರಲ್ಲಿ) ಸಿಇಟಿ ಬರೆದು ಸೀಟು ಹಂಚಿಕೆಯಾಗಿ ಕೋರ್ಸ್ ಆಯ್ಕೆ ಮಾಡಿಕೊಂಡು ಕಲಿಯುತ್ತಿದ್ದಾರೆಯೇ? ಎಷ್ಟು ಮಂದಿ ಸೀಟು ತೆಗೆದುಕೊಂಡೂ ಕೋರ್ಸ್‌ಗೆ ಸೇರಿಲ್ಲ? ಸೀಟು ಸಿಕ್ಕವರು ಅದನ್ನು ರದ್ದುಪಡಿಸದೆ, ಈಗ ಮತ್ತೆ ಸಿಇಟಿ ಬರೆದಿದ್ದಾರೆ ಎಂದು ಪರಿಶೀಲಿಸಲು ಮುಂದಾಗಿದೆ.

ಈ ಬಗ್ಗೆ 'ಪ್ರಜಾವಾಣಿ' ಜೊತೆ ಮಾತನಾಡಿದ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ, 'ಸಿಇಟಿ ಬರೆದು ಕೋರ್ಸ್ ಆಯ್ಕೆ ಮಾಡಿಕೊಂಡವರು ಅಥವಾ ಹಂಚಿಕೆಯಾದ ಸೀಟನ್ನು ನಿಗದಿಪಡಿಸಿದ ದಿನದ ಒಳಗೆ ರದ್ದುಪಡಿಸದವರು ಮತ್ತೊಮ್ಮೆ ಸಿಇಟಿ ಮೂಲಕ ಸೀಟು ಪಡೆಯಲು ಅರ್ಹರಲ್ಲ' ಎಂದು ಸ್ಪಷ್ಟಪಡಿಸಿದರು.

'ಇಷ್ಟೊಂದು ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳು ಹಿಂದೆಂದೂ ಎರಡನೇ ಬಾರಿ ಸಿಇಟಿ ಬರೆದ ನಿದರ್ಶನ ಇಲ್ಲ. ಈ ಬಾರಿಯೂ ಸಿಇಟಿ ಬರೆದವರಲ್ಲಿ ಬಹುತೇಕ ವಿದ್ಯಾರ್ಥಿಗಳು ಕಳೆದ ವರ್ಷ ದ್ವಿತೀಯ ಪಿಯುಸಿಯಲ್ಲಿ ಶೇ 90ಕ್ಕೂ ಹೆಚ್ಚು ಅಂಕ ಪಡೆದವರು. ದೊಡ್ಡ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸಿಇಟಿ ಬರೆದಿರುವುದರ ಹಿಂದೆ ಯಾವುದೋ ಉದ್ದೇಶ ಇದ್ದಂತೆ ಕಾಣಿಸುತ್ತಿದೆ. ಹೀಗಾಗಿ, ಈ ಬಾರಿ ಸೀಟು ಹಂಚಿಕೆ ಪ್ರಕ್ರಿಯೆಗೂ ಮೊದಲೇ ಮತ್ತೆ ಸಿಇಟಿ ಬರೆದ ಈ ವಿದ್ಯಾರ್ಥಿಗಳನ್ನು ಪರಿಶೀಲನೆಗೆ ಒಳಪಡಿಸಲು ತೀರ್ಮಾನಿಸಲಾಗಿದೆ' ಎಂದರು.

'ಈ ಹಿಂದೆ ಎಂದೂ 2ನೇ ಬಾರಿ ಸಿಇಟಿ ಬರೆದವರ ಸಂಖ್ಯೆ 2ಸಾವಿರ ದಾಟಿಲ್ಲ. ಪಶು ವೈದ್ಯಕೀಯ, ಬಿಎಸ್ಸಿ, ಕೃಷಿ, ನ್ಯಾಚುರೋಪಥಿ, ಯೋಗ ವಿಜ್ಞಾನ, ಬಿ. ಫಾರ್ಮಾ ಸೀಟು ಬೇಕೆಂದು ಮತ್ತೊಮ್ಮೆ ಸಿಇಟಿ ಬರೆಯುವವರು ಇದ್ದಾರೆ. ಆದರೆ, ಎಂಜಿನಿಯರಿಂಗ್‌ನಲ್ಲಿ ಇಂಥದ್ದೇ ಕೋರ್ಸ್ ಬೇಕು, ಇಂಥದ್ದೇ ಕಾಲೇಜು ಬೇಕು ಎಂದು ಮತ್ತೆ ಸಿಇಟಿ ಬರೆಯುವವರ ಸಂಖ್ಯೆ ವಿರಳ. ಈ ಹಿಂದಿನ ವರ್ಷಗಳಲ್ಲಿ 400-500 ವಿದ್ಯಾರ್ಥಿಗಳು ಮಾತ್ರ ಮತ್ತೆ ಸಿಇಟಿ ಬರೆದಿದ್ದಾರೆ. ಈ ಸಂಖ್ಯೆ 2,000 ದಾಟಿದ್ದೇ ಇಲ್ಲ. ಆದರೆ, ಈ ಬಾರಿ 24 ಸಾವಿರ ವಿದ್ಯಾರ್ಥಿಗಳು ಮತ್ತೆ ಸಿಇಟಿ ಬರೆದಿದ್ದಾರೆಂದರೆ ಹಲವು ಅನುಮಾನಗಳು ಮೂಡುತ್ತವೆ. ಮೊದಲ ಸುತ್ತಿನ ಸೀಟು ಹಂಚಿಕೆಗೂ ಮೊದಲು. ಈ ವಿದ್ಯಾರ್ಥಿಗಳನ್ನು ಪರಿಶೀಲನೆಗೆ ಒಳಪಡಿಸುವ ಅನಗತ್ಯ ಹೊರೆ ಬಿದ್ದಿದೆ' ಎಂದೂ ಹೇಳಿದರು.

'ಆಯಾ ವರ್ಷ ಸಿಇಟಿ ಪರೀಕ್ಷೆ ಬರೆಯುವವರಿಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗುತ್ತದೆ. ಹೀಗಾಗಿ, 2020-21ನೇ ಸಾಲಿನಲ್ಲಿ ಪಿಯುಸಿ ತೇರ್ಗಡೆಯಾಗಿ ಈ ಬಾರಿ ಸಿಇಟಿ ಬರೆಯುವ ಬಗ್ಗೆ ಈ ವರ್ಷದ ಸಿಇಟಿ ಮಾರ್ಗಸೂಚಿಯಲ್ಲಿ ಯಾವುದೇ ಉಲ್ಲೇಖ ಇಲ್ಲ. ಅಲ್ಲದೆ, ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಸಿಇಟಿ ಬರೆಯುತ್ತಾರೆಂಬ ನಿರೀಕ್ಷೆಯೂ ನಮಗೆ ಇರಲಿಲ್ಲ' ಎಂದರು.

'2020-21ನೇ ಸಾಲಿನಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಅಂಕ ಪರಿಗಣಿಸದ ಕಾರಣ ಅನ್ಯಾಯವಾಗಿದೆ ಎಂಬ ವಿದ್ಯಾರ್ಥಿಗಳ ವಾದದಲ್ಲಿಯೂ ಹುರುಳಿಲ್ಲ. ಯಾಕೆಂದರೆ, ಅಂಥ ವಿದ್ಯಾರ್ಥಿಗಳು ಸಿಇಟಿಯಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದರೆ ರ್‍ಯಾಂಕ್ ಪಟ್ಟಿಯಲ್ಲಿ ಉತ್ತಮ ರ್‍ಯಾಂಕ್ ಗಳಿಸುವ ಅವಕಾಶ ಇತ್ತು. ಕೋವಿಡ್ ವರ್ಷದಲ್ಲಿ ದ್ವಿತೀಯ ಪಿಯುಸಿ ತೇರ್ಗಡೆಯಾದ ವಿದ್ಯಾರ್ಥಿಗಳು ಸಿಇಟಿ ಬರೆಯುವ ಮೊದಲು ನಮ್ಮನ್ನು ಸಂಪರ್ಕಿಸುತ್ತಿದ್ದರೆ ಈ ಬಗ್ಗೆ ಸ್ಪಷ್ಟೀಕರಣ ನೀಡುತ್ತಿದ್ದೆವು' ಎಂದೂ ಅವರು ವಿವರಿಸಿದರು.

'ಕೆಇಎಯಿಂದ ಭವಿಷ್ಯ ಹಾಳಾಯಿತು'

'2020–21 ನೇ ಸಾಲಿನಲ್ಲಿ ಪಿಯುಸಿ ತೇರ್ಗಡೆಯಾದ ನನ್ನ ಅಂಕವನ್ನು ಸಿಇಟಿಗೆ ಪರಿಗಣಿಸದೇ ಇರುವುದರಿಂದ ನನಗೆ ಅನ್ಯಾಯವಾಗಿದೆ. ಕಳೆದ ವರ್ಷ ನನಗೆ ಬೇಕಾದ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ಸೀಟು ಸಿಗದ ಕಾರಣ ಈ ಬಾರಿ ಮತ್ತೆ ಸಿಇಟಿ ಬರೆದಿದ್ದೆ. ಈ ಬಾರಿ ಸಿಇಟಿಯಲ್ಲಿ ಹೆಚ್ಚು ಅಂಕ ಬಂದಿದೆ. ಆದರೆ, ಪಿಯುಸಿ ಅಂಕ ಪರಿಗಣಿಸದ ಕಾರಣ ಒಳ್ಳೆಯ ಕಾಲೇಜು ಸಿಗುವಷ್ಟು ರ್‍ಯಾಂಕ್ ಬಂದಿಲ್ಲ. ಕೋವಿಡ್ ವರ್ಷ ತೇರ್ಗಡೆ ಆದವರ ದ್ವಿತೀಯ ಪಿಯುಸಿ ಅಂಕ ಪರಿಗಣಿಸುವುದಿಲ್ಲವೆಂದು ಮೊದಲೇ ತಿಳಿಸಿದ್ದಿದ್ದರೆ, ನಾನು ಕಳೆದ ವರ್ಷವೇ ಯಾವುದಾದರೂ ಕಾಲೇಜು ಆಯ್ಕೆ ಮಾಡಿಕೊಳ್ಳುತ್ತಿದ್ದೆ. ಕೆಇಎಯಿಂದಾಗಿ ನನ್ನ ಭವಿಷ್ಯ ಹಾಳಾಗಿದೆ. ನನ್ನಂತೆ ಸಾವಿರಾರು ವಿದ್ಯಾರ್ಥಿಗಳ ಕನಸು ನುಚ್ಚುನೂರಾಗಿದೆ' ಎಂದು ಕುಂದಾಪುರದ ಶ್ರೇಯಾ ಬೇಸರ ವ್ಯಕ್ತಪಡಿಸಿದರು.

'ಸಿಇಟಿ ಅಂಕ ಮಾತ್ರ ಪರಿಗಣಿಸಲಾಗಿದೆ'

'2020–21 ನೇ ಸಾಲಿನಲ್ಲಿ ಪರೀಕ್ಷೆ ನಡೆಸದೆ (ಕೋವಿಡ್ ಕಾರಣ) ದ್ವಿತೀಯ ಪಿಯುಸಿ ಫಲಿತಾಂಶ ನೀಡಲಾಗಿತ್ತು. ಹೀಗಾಗಿ, ಆ ಸಾಲಿನಲ್ಲಿ ಪಿಯುಸಿ ತೇರ್ಗಡೆಯಾಗಿ ಈ ಬಾರಿ ಸಿಇಟಿ ತೆಗೆದುಕೊಂಡ ವಿದ್ಯಾರ್ಥಿಗಳ ಸಿಇಟಿ ಅಂಕವನ್ನು ಮಾತ್ರ ರ್‍ಯಾಂಕ್‌ಗೆ ಪರಿಗಣಿಸಲಾಗಿದೆ. ಅಂಥವರ ಪಿಯುಸಿ ಅಂಕ ಪರಿಗಣಿಸಿಲ್ಲ. 180 ಅಂಕಗಳಿಗೆ ಸಿಇಟಿ ನಡೆದಿದ್ದು, ರ್‍ಯಾಂಕ್ ಪಟ್ಟಿ ಸಿದ್ಧಪಡಿಸುವ ಸಂದರ್ಭದಲ್ಲಿ ಸಿಇಟಿಯಲ್ಲಿ ಪಡೆದ ಅಂಕವನ್ನು 100 ಅಂಕಗಳಿಗೆ ಪರಿವರ್ತಿಸಿ ಪರಿಗಣಿಸಲಾಗಿದೆ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ತಿಳಿಸಿದರು.

ಕೆಎಸ್‌ಆರ್‌ಟಿಸಿ ಹೊರಗುತ್ತಿಗೆ: 350 ಚಾಲಕರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ₹ 10 ಕೋಟಿ ವೆಚ್ಚ ಭರಿಸಿ 350 ಚಾಲಕರನ್ನು ಹೊರಗುತ್ತಿಗೆ ಆಧಾರದಲ್ಲಿ, ಏಜೆನ್ಸಿ ಮೂಲಕ ನೇಮಿಸಿಕೊಳ್ಳಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ಮುಂದಾಗಿದೆ.

'ಸಿಬ್ಬಂದಿಯ ತೀವ್ರ ಕೊರತೆ ಇರುವ ಡಿಪೋಗಳಿಗೆ ಹೊರಗುತ್ತಿಗೆ ಮೂಲಕ ಮೊದಲ ಬಾರಿಗೆ ಸಿಬ್ಬಂದಿ ನೇಮಿಸಿಕೊಳ್ಳಲು ಉದ್ದೇಶಿಸಲಾಗಿದೆ. ಟೆಂಡರ್ ಪಡೆದ ಏಜೆನ್ಸಿ ಮಂಗಳೂರಿಗೆ 150, ಪುತ್ತೂರು 100, ರಾಮನಗರ ಮತ್ತು ಚಾಮರಾಜನಗರ ವಿಭಾಗಕ್ಕೆ ತಲಾ 50 ಸಿಬ್ಬಂದಿಯನ್ನು ಪೂರೈಸಲಿದ್ದಾರೆ' ಎಂದು ನಿಗಮದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಆರ್ಥಿಕ ಪರಿಸ್ಥಿತಿಯ ಕಾರಣಕ್ಕೆ ಹೊಸತಾಗಿ ಚಾಲಕರ ನೇಮಕಾತಿಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿಲ್ಲ. ಮಂಗಳೂರು, ಪುತ್ತೂರು ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಲು ಸಿಬ್ಬಂದಿ ಹಿಂದೇಟು ಹಾಕುತ್ತಿದ್ದಾರೆ. ಪ್ರಯಾಣಿಕರ ಬೇಡಿಕೆಯ ಪ್ರಕಾರ ಕನಿಷ್ಠ 1,000 ಹೆಚ್ಚುವರಿ ಚಾಲಕರ ಅಗತ್ಯವಿದೆ' ಎಂದೂ ಅವರು ತಿಳಿಸಿದರು.

'ತಿಂಗಳಲ್ಲಿ ಕನಿಷ್ಠ 25 ದಿನ ಕರ್ತವ್ಯ ನಿರ್ವಹಿಸಿದ ಚಾಲಕರಿಗೆ ಕ್ರೋಡೀಕೃತ ಸಂಭಾವನೆಯಾಗಿ ₹ 23 ಸಾವಿರ ನೀಡಲಾಗುವುದು. ಚಾಲಕರನ್ನು 25 ದಿನ ಬಳಸಿಕೊಳ್ಳದೇ ಇದ್ದರೆ ಗಂಟೆಗೆ ₹100 ಮತ್ತು ಇತರ ಭತ್ಯೆಗಳನ್ನು ಪಾವತಿಸಲಾಗುವುದು. ಆದರೆ, ಕಾಯಂ ಚಾಲಕರಿಗೆ ನೀಡಲಾಗುವ ಎಲ್ಲ ಭತ್ಯೆಗಳನ್ನು ಹೊರಗುತ್ತಿಗೆ ಚಾಲಕರಿಗೆ ನೀಡುವುದಿಲ್ಲ' ಎಂದೂ ಅವರು ವಿವರಿಸಿದರು.

'ಕೆಎಸ್‌ಆರ್‌ಸಿಟಿಯ ಈ ನಡೆ ಖಾಸಗೀಕರಣಗೊಳಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆ. ಇದರಿಂದ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ದೊಡ್ಡ ಹೊಡೆತ ಬೀಳಲಿದೆ. ಕೇವಲ ₹ 25 ಸಾವಿರದಲ್ಲಿ ಚಾಲಕ ವೃತ್ತಿಯನ್ನು ನಿರೀಕ್ಷಿಸುವುದು ಎಷ್ಟು ಸರಿ? ಕೆಎಸ್‌ಆರ್‌ಟಿಸಿ ಸಿಬ್ಬಂದಿಯ ರೀತಿಯಲ್ಲಿ ಹೊರಗುತ್ತಿಗೆ ಸಿಬ್ಬಂದಿಗೆ ಬದ್ಧತೆಯೂ ಇರದು' ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ಮತ್ತು ಕಾರ್ಮಿಕರ ಒಕ್ಕೂಟದ ಎಚ್.ವಿ. ಅನಂತ ಸುಬ್ಬರಾವ್ ಅಭಿಪ್ರಾಯಪಟ್ಟರು.

ಕರ್ನಾಟಕ ಸರ್ಕಾರ
ಪುರಸಭೆ ಕಾರ್ಯಾಲಯ ಚಿಟಗುಪ್ಪ

ಸಂ: ಟಿಎಂಸಿ/ಕಾಮಗಾರಿ/ಸಿಆರ್– /2022–23 ದಿನಾಂಕ: 29.07.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

1) ಕಾಮಗಾರಿ / ಸರಕು / ಸೇವೆಯ ವಿವರ : {DMA/2022-23/OW/WORK_INDENT134851}, {DMA/2022-23/OW/WORK_INDENT134852},{DMA/2022-23/OW/WORK_INDENT134853}, 2) ಕಾಮಗಾರಿ / ಸರಕು / ಸೇವೆಯ ಅಂದಾಜು ಮೊತ್ತ : e-portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ : e-portal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : e-portal ನಲ್ಲಿ ನಮೂದಿಸಿದಂತೆ, 5) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ & ಭರ್ತಿ ಮಾಡಿ ಸಲ್ಲಿಸಲು : 18.08.2022 4:30PM, 6) ಟೆಂಡರ ತೆರೆಯುವ ದಿನಾಂಕ : 17.08.2022 5:00PM, 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ : ಮುಖ್ಯಾಧಿಕಾರಿಗಳು, ಪುರಸಭೆ ಚಿಟಗುಪ್ಪ 08483–277536 Email : itstaff_ulb_chittguppa@yahoo.com, 8) ಅಂತರಜಾಲ ತಾಣದ ವಿಳಾಸ: www.eproc.karnataka.gov.in

ಸಹಿ/– ಮುಖ್ಯಾಧಿಕಾರಿ, ಪುರಸಭೆ ಚಿಟಗುಪ್ಪಾ

ವಾ.ಸಾ.ಸಂ.ಇ/ಬೀದರ/166/ಎಂಸಿ&ಎ/2022–23

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

PUBLIC NOTICE

Notice is hereby given to the general public that my clients have entered into an agreement of sale to purchase all that immovable property described in the Schedule hereunder from its present owner Mrs. Padma. R., wife of Mr. N. Venkateshwara Raju, residing at No.798, "PRATEEKSHA", 4th Floor, 4th Cross, 4th Main, behind BWSSB, BEML Layout, Thubarahalli, Bangalore-560 066, who is representing that she is the sole and absolute owner of the Schedule property, having purchased the same from its previous owner Mr. P. N. Devarajulu, son of Mr. P. N. Naranaiah Setty, under a Sale deed dated 03.11.2003, registered as No.3780/2003-04, in Book I, Stored in CD No.50, in the office of the sub registrar, Shivajinagar, Bangalore and other than herself no other person/s have any right, title, interest or charge over the Schedule property. Any person/s having any claims, right, title, interest by way of inheritance, sale, mortgage, transfer, lease, tenancy, lien, charge, maintenance, easement, gift, exchange, possession or encumbrances, objection or otherwise in whatsoever manner may intimate/lodge his/her/their/objection/s with relevant documentary proof to the undersigned at the address given below within FIFTEEN DAYS from the date of publication of this notice, failing which any claims from any party/s shall be waived of for all legal purposes and will be presumed that no other person/s has got any claim, right, title, interest or charge over the Schedule property and my client will proceed to complete the Sale transaction.

SCHEDULE

All that piece and parcel of immovable property bearing Site No.398, present BBMP Katha No.398, PID No.72-38-398, in the Layout known as "AMARJYOTHI HBCS LAYOUT", (formed in survey Nos.57 to 82 of Domlour Village by the Amarjyothi House Building Co-Operative Society Ltd.,) approve by Bangalore Development Authority, situated at Amarjyothi HBCS Layout, Domlur, in the Corporation Ward No.72, New Ward No.112, Bangalore and bounded on the:
East by : Site bearing No.399;
West by : Site bearing No.397;
North by : Road; and
South by : Site bearing No.409;
measuring East to West 30 feet; North to South 40 feet; in all measuring a total extent of 1200 square feet.

A. NAGARAJA, Advocate,
No. 6, KHB Buildings, II Block,
13th Cross, Indiranagar
II Stage, Bangalore - 560 038.
Ph:9448067511.
Bangalore
Dated 30.07.2022.

EDUCATIONAL

Admission

DIRECT FINAL: LLB (Become Lawyer),B.Tech/MBA/BCA/BBA/B.Sc/B.Com/D.Pharm/B.Pharm/BAMS/BYNS/Nursing/PU/SSLC. Last few seats. Asha Academy, Bangalore. Ph:9448460103/7093438248.

EDUCATION CORNER

2nd PU Failed?

Don't be left behind!

A golden opportunity to study degree under Bangalore University this academic year and save one precious year of your life.

BBA B.Com BCA BA

Limited seats. For admissions call:
2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:

7846000222

COMPUTERS

Hardware

USED COMPUTERS FOR SALE
1. Dual Core/ 2GB Ram/ 250GB HDD/ 15"LCD Rs.6,000/-
For Qty of 10 No's. Rs.5,000/- per system
For Qty of 10 No's. without Monitor Rs.3,000/- per system
LAPTOPS
1. Dual Core/2GB Ram/ 160GB HDD /Adaptor Rs.8,000/-
Courier Charges: Rs.1,000/- per system.
COMPUTER HOUSE
L-81, SECTOR 11, 8th CROSS, 9th B MAIN, LIC COLONY, JEEVANBHIMA NAGAR, BANGALORE - 560075.
09886038331 / 080- 42076287

BUSINESS

Business Offers

Finance

NRI'S INVESTMENT
And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

HEARTY CONGRATULATIONS


RAHUL BHARADWAJ

Dear Rahul Bharadwaj, Warmest Congratulations on your achievement.
Has scored 99% in ICSE 10th Board Exams
We all wish you even more success in future.
From: Parents, Friends and Cambridge Public School.

DH DECCAN HERALD
ಪ್ರಜಾವಾಣಿ

Classifieds
EDUCATION SPECIAL

SPECIAL RATES FOR
- Admission Notice,
- Education Success
- Congratulation Ads

For More Details Contact:
Jerry Louis : 9731810277
Ravichandra : 9901641752
Vishal GM : 9845114560
Tanveer : 9886213331
Email : dhclassifieds@deccanherald.co.in

ಕುಂದು ಕೊರತೆ

ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.

'ಮಾಚೋಹಳ್ಳಿ: ರಸ್ತೆ ದುರಸ್ತಿಗೊಳಿಸಿ'

ಮಾಚೋಹಳಿಯಿಂದ ಕಾಚೋಹಳ್ಳಿಗೆ ಸಂಪರ್ಕ ಕಲ್ಪಿಸುವ 3 ಕಿ.ಮೀ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಮಳೆ ಬಂದರೆ ರಸ್ತೆಯೆಲ್ಲ ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಅಲ್ಲದೇ ರಸ್ತೆಯುದ್ದಕ್ಕೂ ಬಿದ್ದಿರುವ ದೊಡ್ಡ ಗುಂಡಿಗಳು ಅಪಾಯಕ್ಕೆ ಆಹ್ವಾನ ನೀಡುತ್ತಿವೆ. ಶಾಲಾ ಮಕ್ಕಳು, ವಯೋವೃದ್ಧರು ಈ ರಸ್ತೆಗಳಲ್ಲಿ ಸಂಚರಿಸಲು ಹರಸಾಹಸಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಬೇಸಿಗೆ ಕಾಲದಲ್ಲಿ ದಿನನಿತ್ಯ ದೂಳಿನ ಮಜ್ಜನವಾಗುತ್ತದೆ. ಇದೇ ರಸ್ತೆ ಇಲ್ಲಿನ ಕೈಗಾರಿಕಾ ಪ್ರದೇಶಕ್ಕೆ ಸಂಪರ್ಕ ಕಲ್ಪಿಸುತ್ತದೆ. ಕೂಡಲೇ ರಸ್ತೆ ದುರಸ್ತಿಗೊಳಿಸಿಬೇಕು.

ಲಿಂಗೇಗೌಡ. ಎಸ್.ಬಿ., ಸ್ಥಳೀಯ ನಿವಾಸಿ

ಮಾಚೋಹಳ್ಳಿಯಿಂದ ಕಾಚೋಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಕೆಸರು ಗದ್ದೆಯಂತಾಗಿರುವುದು

'ಬಸ್ ತಂಗುದಾಣ ನಿರ್ಮಿಸಿ'

ಬಸವನಪುರ ವಾರ್ಡ್ ನಂಬರ್ 53ಕ್ಕೆ ಸೇರಿದ ಸೀಗೇಹಳ್ಳಿ ಗ್ರಾಮಕ್ಕೆ ಬಸ್ ಸೌಲಭ್ಯ ಕಲ್ಪಿಸಿ, ಬಸ ತಂಗುದಾಣ ನಿರ್ಮಿಸಬೇಕು. ಗ್ರಾಮಸ್ಥರು ಮತ್ತು ವಿದ್ಯಾರ್ಥಿಗಳು ಪ್ರತಿನಿತ್ಯ ನಾಲ್ಕು ಕಿ.ಮೀ ನಡೆದುಕೊಂಡು ಹೋಗಬೇಕು. ಸರಿಯಾದ ಪಾದಚಾರಿ ಮಾರ್ಗವೂ ಇಲ್ಲದಿರುವುದರಿಂದ ಜೀವ ಕೈಯಲ್ಲಿ ಹಿಡಿದುಕೊಂಡು ಓಡಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಗ್ರಾಮ ಹಳೇ ಮದ್ರಾಸ್ ರಾಷ್ಟ್ರೀಯ ಹೆದ್ದಾರಿ 75 ರಿಂದ ಕೇವಲ 2 ಕಿ.ಮೀ. ದೂರದಲ್ಲಿದೆ.

ಕಿರಣ್ ಕುಮಾರ್ ಜೆ., ಬಸವನಪುರ ವಾರ್ಡ್ ನಿವಾಸಿ

'ರಸ್ತೆ ಗುಂಡಿ ಮುಚ್ಚಿ'

ಹೆಬ್ಬಾಳದ ಚೋಳನಗರದಲ್ಲಿರುವ ರಾಜೀವ್ ಗಾಂಧಿ ರಸ್ತೆಯಲ್ಲಿ ಗುಂಡಿ ಬಿದ್ದಿದೆ. ಈ ಮಾರ್ಗದಲ್ಲಿ ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಬೇಸಿಗೆಯಲ್ಲಿ ವಾಹನ ಸಂಚಾರದಿಂದ ಎಲ್ಲೆಡೆ ದೂಳಿನ ಮಜ್ಜನವಾದರೆ, ಮಳೆಗಾಲದಲ್ಲಿ ಗುಂಡಿಯಲ್ಲಿ ನೀರು ನಿಂತು ರಸ್ತೆ ಯಾವುದು, ಗುಂಡಿ ಯಾವುದು ಎಂಬುದು ಗೊತ್ತಾಗುವುದಿಲ್ಲ. ಕೂಡಲೇ ಗುಂಡಿಗಳನ್ನು ಮುಚ್ಚಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

–ಜಿ.ಎಸ್. ಮಂಜುನಾಥ್, ಚೋಳನಗರ, ಹೆಬ್ಬಾಳ

ಹೆಬ್ಬಾಳದ ಚೋಳನಗರದ ರಾಜೀವ್ ಗಾಂಧಿ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

ಬ್ಯೂಗಲ್ ರಾಕ್ ಪಾರ್ಕ್ ರಸ್ತೆಯಲ್ಲಿ ತರಕಾರಿ ಅಂಗಡಿಗಳು ಹಚ್ಚಿರುವುದರಿಂದ ಸಂಚಾರ ದಟ್ಟಣೆ

'ತರಕಾರಿ ಅಂಗಡಿಗಳನ್ನು ಸ್ಥಳಾಂತರಿಸಿ'

ಬಸವನಗುಡಿಯ ಬ್ಯೂಗಲ್ ರಾಕ್ ಮತ್ತು ಪಶ್ಚಿಮ ಆಂಜನೇಯ ದೇವಸ್ಥಾನದ ರಸ್ತೆಗಳಲ್ಲಿ ತರಕಾರಿ ಅಂಗಡಿಗಳನ್ನು ಇಡಲಾಗುತ್ತಿದ್ದು, ಇದರಿಂದ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಸುಮಾರು 40 ಜನ ತರಕಾರಿ ಮಾರಾಟಗಾರರು ರಸ್ತೆಯ ಪಕ್ಕದಲ್ಲಿ ಅಂಗಡಿಗಳನ್ನು ಹಚ್ಚಿಕೊಂಡು ವ್ಯಾಪಾರ ವಹಿವಾಟು ಮಾಡುತ್ತಿದ್ದಾರೆ. ಈ ರಸ್ತೆಯಿಂದ ಅವರನ್ನು ಬೇರೆ ಕಡೆ ಸ್ಥಳಾಂತರಿಸಬೇಕು ಎಂದು ಬಿಬಿಎಂಪಿಗೆ ಮನವಿ ಸಲ್ಲಿಸಿದರೂ ಏನೂ ಪ್ರಯೋಜನವಾಗಿಲ್ಲ.

ವಿ. ಪ್ರಕಾಶ್, ಪಶ್ಚಿಮ ಆಂಜನೇಯ ದೇವಸ್ಥಾನದ ಬೀದಿ ನಿವಾಸಿ

ಇ–ಶೌಚಾಲಯ ತೆರೆಯಲು ಆಗ್ರಹ'

ಜಯನಗರದ 5ನೇ ಬ್ಲಾಕ್ ಶಾಲಿನಿ ಮೈದಾನದ ಹತ್ತಿರ ಇರುವ ಇ–ಶೌಚಾಲಯ ಕೆಟ್ಟು ಹೋಗಿ ವರ್ಷಗಳೇ ಕಳೆದಿದೆ. ಇದರಿಂದ ಸಾರ್ವಜನಿಕರಿಗೆ ಸಮಸ್ಯೆಯಾಗಿದ್ದು, ಪುರುಷರು ಸಾರ್ವಜನಿಕ ಪ್ರದೇಶಗಳಲ್ಲಿ ಮೂತ್ರ ವಿಸರ್ಜನೆ ಮಾಡುತ್ತಿದ್ದು, ಮಹಿಳೆಯರು, ವಿದ್ಯಾರ್ಥಿಗಳು ಮೂಗು ಮುಚ್ಚಿಕೊಂಡು ಓಡಾಡುವಂತಹ ಪರಿಸ್ಥಿತಿ ಎದುರಾಗಿದೆ. ಇ–ಶೌಚಾಲಯ ತೆರೆಯಲು ಮನವಿ ಸಲ್ಲಿಸಲಾಗಿದೆ. ಈ ಕುರಿತು ಸ್ಥಳೀಯ ಜನಪ್ರತಿನಿಧಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ.

ಎಂ. ಚಂದ್ರಶೇಖರ್, ಸ್ಥಳೀಯ ನಿವಾಸಿ

ಜಯನಗರದ ಶಾಲಿನಿ ಮೈದಾನ ಹತ್ತಿರದಲ್ಲಿರುವ ಇ–ಶೌಚಾಲಯ ಮುಚ್ಚಿರುವುದು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ನ್ಯಾಯಾಲಯ ಆವರಣ, ಕೋಲಾರ–563101.
ಇ–ಮೇಲ್: ddwcdkolar@gmail.com ದೂರವಾಣಿ: 08152–222753
ಸಂ: ಜಿಮರಘಕೋ/ಐಸಿಪಿಎಸ್/ಆಡಳಿತ/ಟೆಂಡರ್/2022–23 ದಿ: 25.07.2022

ಇ–ಟೆಂಡರ್ ಪ್ರಕಟಣೆ

ಹೊರಗುತ್ತಿಗೆ ಆಧಾರದ ಮೇಲೆ ಮಾನವಸಂಪನ್ಮೂಲ ಸೇವೆಯನ್ನು ಇ–ಟೆಂಡರ್ ಮೂಲಕ ಪಡೆಯುವ ಬಗ್ಗೆ ಟೆಂಡರ್ ಅಧಿಸೂಚನೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯಡಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೋಲಾರ ಹಾಗೂ ಅಧೀನ ಸಂಸ್ಥೆಗಳಾದ ಸರ್ಕಾರಿ ಬಾಲಕರ ಬಾಲಮಂದಿರ, ಸರ್ಕಾರಿ ಬಾಲಕಿಯರ ಬಾಲಮಂದಿರ, ಸರ್ಕಾರಿ ವೀಕ್ಷಣಾಲಯ, ಮಕ್ಕಳ ಕಲ್ಯಾಣ ಸಮಿತಿ, ಬಾಲನ್ಯಾಯ ಮಂಡಳಿ, ಪ್ಲೇಸ್ ಆಫ್ ಸೇಫ್ಟಿ, ಸರ್ಕಾರಿ ವಿಶೇಷ ದತ್ತು ಸಂಸ್ಥೆಗಳಿಗೆ ಹೊರ ಸಂಪನ್ಮೂಲ ಏಜೆನ್ಸಿಯಿಂದ 2022–23ನೇ ಸಾಲಿಗೆ ಅನುಬಂಧ–1ರಲ್ಲಿ ಲಗತ್ತಿಸಿರುವ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ (ಕೆಟಿಪಿಪಿ)1999 ನಿಯಮಗಳು 2000ರ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾನವ ಸಂಪನ್ಮೂಲ ಸೇವೆ ಒದಗಿಸಲು ಅರ್ಹತೆಯುಳ್ಳ ಮತ್ತು ವಿವಿಧ ಕಾಯ್ದೆಗಳ ಕಾನೂನಿನ ಅಡಿಯಲ್ಲಿ ನೋಂದಣಿಯಾಗಿರುವ ವ್ಯಕ್ತಿಗಳು/ಸಂಸ್ಥೆಗಳಿಂದ ಇ–ಪೋರ್ಟಲ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. (1) ಟೆಂಡರ್ ಪ್ರಕಟಣೆ ದಿನಾಂಕ: **26.07.2022.** (2) ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: **16.08.2022ರ ಸಂಜೆ 5.00 ಗಂಟೆಯೊಳಗೆ.** (3) ತಾಂತ್ರಿಕ ಲಕೋಟೆ ತೆರೆಯುವ ವೇಳೆ ಮತ್ತು ದಿನಾಂಕ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ದಿನಾಂಕ: **18.08.2022ರ ಸಂಜೆ 5.10 ಗಂಟೆಗೆ.** (4) ಹಣಕಾಸಿನ ಲಕೋಟೆಯನ್ನು ತೆರೆಯುವ ವೇಳೆ ಮತ್ತು ದಿನಾಂಕ: **20.08.2022ರ ಮಧ್ಯಾಹ್ನ 12.00 ಗಂಟೆಗೆ.** (5) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇಎಂಡಿ ಮೊತ್ತ: **ರೂ.2,00,000/– (ಎರಡು ಲಕ್ಷ ರೂಪಾಯಿಗಳು ಮಾತ್ರ).** (6) ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೋಲಾರ ಹಾಗೂ **07** ಅಧೀನ ಸಂಸ್ಥೆಗಳ ಟೆಂಡರ್‌ನ ಅಂದಾಜು ಮೊತ್ತ ಒಟ್ಟು: **ರೂ.95,00,000/–** (ತೊಂಭತ್ತೈದು ಲಕ್ಷ ರೂಪಾಯಿಗಳು ಮಾತ್ರ). ವೆಬ್‌ಸೈಟ್ **www.eproc.karnataka.gov.in** ಹೆಚ್ಚಿನ ಮಾಹಿತಿಗಾಗಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೋಲಾರ ರವರನ್ನು ಸಂಪರ್ಕಿಸುವುದು.

ಸಹಿ/– ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ213/ಎಂ.ಸಿ.ಎ/2022–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ


ಬಸವೇಶ್ವರನಗರದ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

'ಬಸವೇಶ್ವರನಗರ: ರಸ್ತೆ ಗುಂಡಿ ಮುಚ್ಚಿ'

ಬಸವೇಶ್ವರನಗರದ 3ನೇ ವಿಭಾಗದ 3ನೇ ಹಂತದ 2ನೇ ಅಡ್ಡರಸ್ತೆ ಗುಂಡಿಗಳಿಂದ ಕೂಡಿದೆ. ಇದರಿಂದ ಪ್ರತಿದಿನ ಅಪಘಾತಗಳು ಸಂಭವಿಸುತ್ತಿವೆ. ಪ್ರತಿ ಬಾರಿ ತೇಪೆ ಹಾಕುವ ಕೆಲಸ ಮಾತ್ರ ಮಾಡಲಾಗುತ್ತಿದೆ. ಈ ಮಾರ್ಗದಲ್ಲಿ ಸಂಚರಿಸಿದರೆ ನರಕಯಾತನೆ ಅನುಭವಿಸಿದಂತಾಗುತ್ತದೆ. ಗುಂಡಿಗಳ ನಡುವೆ ರಸ್ತೆಯನ್ನು ಹುಡುಕಬೇಕಾಗಿದೆ. ಅಧಿಕಾರಿಗಳಿಗೆ ಸಮಸ್ಯೆಗಳ ಬಗ್ಗೆ ತಿಳಿಸಿದ್ದರೂ ನಿರ್ಲಕ್ಷ್ಯ ವಹಿಸಿದ್ದಾರೆ. ಈಗಲಾದರೂ ಇತ್ತ ಗಮನಹರಿಸಿ ವಾಹನ ಸವಾರರಿಗೆ ಆಗುತ್ತಿರುವ ಅನನುಕೂಲ ಸರಿಪಡಿಸಬೇಕು.

ಹನುಮಂತ ರಾಜು, ಸ್ಥಳೀಯ ನಿವಾಸಿ

'ವಾಲಿದ ಮರ ತೆರವುಗೊಳಿಸಿ'

ಜಯನಗರ 35ನೇ ಕ್ರಾಸ್‌ನ ಮನೆಯೊಂದರ ಮೇಲೆ ಬಿದ್ದಿರುವ ಮರ

ಶನಿವಾರ ರಾತ್ರಿ ಸುರಿದ ಮಳೆ ಮತ್ತು ಗಾಳಿ ರಭಸಕ್ಕೆ ಜಯನಗರದ 35ನೇ ಕ್ರಾಸ್ 14ಮುಖ್ಯ 4ನೇ ಬ್ಲಾಕ್‌ನ ಸುಧಾ ದತ್ತ ಅವರ ಮನೆ ಮೇಲೆ ಮರವೊಂದು ಬಿದ್ದಿದೆ. ಮನೆಗೆ ಮತ್ತು ಸುತ್ತಮುತ್ತಲಿನ ನಿವಾಸಿಗಳಿಗೆ ಹಾನಿಯಾಗುವ ಮುನ್ನ ಬಿಬಿಎಂಪಿ ಅಧಿಕಾರಿಗಳು ಮರ ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು.

ಸುಧಾ ದತ್ತ, ಸ್ಥಳೀಯ ನಿವಾಸಿ

'ವಾಲಿದ ವಿದ್ಯುತ್ ಕಂಬ ತೆರವುಗೊಳಿಸಿ'

ಜ್ಞಾನಭಾರತಿ 2ನೇ ಹಂತದ ಗಣೇಶ ದೇವಸ್ಥಾನದ ಹತ್ತಿರದ ಪಾರ್ಕ್ ಎದುಗಡೆ ಇರುವ ವಿದ್ಯುತ್ ಕಂಬ ವಾಲಿದೆ. ಪ್ರತಿನಿತ್ಯ ವಿದ್ಯಾರ್ಥಿಗಳು, ವೃದ್ಧರು ಪ್ರಯಾಣಿಕರು ಇಲ್ಲಿಂದಲೇ ಸಂಚರಿಸುತ್ತಿದ್ದು, ಅಪಾಯ ಸಂಭವಿಸುವ ಮುನ್ನ ವಾಲಿದ ಬೆಸ್ಕಾಂ ಅಧಿಕಾರಿಗಳು ವಿದ್ಯುತ್ ಕಂಬವನ್ನು ತೆರವುಗೊಳಿಸಿಬೇಕು.

ಯಶಸ್ವಿ.ಜೆ., ಜ್ಞಾನಭಾರತಿ ನಿವಾಸಿ

ಜ್ಞಾನಭಾರತಿ ಗಣೇಶ್ ದೇವಸ್ಥಾನದ ಪಾರ್ಕ್ ಎದುರುಗಡೆ ಇರುವ ವಾಲಿದ ವಿದ್ಯುತ್ ಕಂಬ

ರಾಮಮಂದಿರದ ಸುತ್ತಲಿನ ಕುಂಡ್‌ಗಳ ಪುನಶ್ಚೇತನಕ್ಕೆ ಕನ್ನಡಿಗ ಆನಂದ ಮಲ್ಲಿಗವಾಡ ಮಾರ್ಗದರ್ಶನ

ನಗರದ ಕೆರೆ ಅಭಿವೃದ್ಧಿ ಅಯೋಧ್ಯೆಗೂ ಮಾದರಿ

• ಆರ್. ಮಂಜುನಾಥ್

ಅಯೋಧ್ಯೆಯ ಸೂರ್ಯ ಕುಂಡ್ ಪುನಶ್ಚೇತನದ ಸಂದರ್ಭದಲ್ಲಿ ಸ್ಥಳೀಯ ಎಂಜಿನಿಯರ್‌ಗಳ ಜೊತೆ ಆನಂದ ಮಲ್ಲಿಗವಾಡ (ಕೊನೆಯವರು)

ಬೆಂಗಳೂರು: 'ಕೆರೆಗಳ ನಗರಿ' ಯಾಗಿದ್ದ ಬೆಂಗಳೂರು ನೂರಾರು ಕೆರೆಗಳನ್ನು ಕಳೆದುಕೊಂಡಿದ್ದರೂ ರಾಜಧಾನಿಯಲ್ಲಿ 'ಕೆರೆಗಳ ನೈಸರ್ಗಿಕ ಅಭಿವೃದ್ಧಿ' ಈಗ ಅನ್ಯರಾಜ್ಯಗಳಿಗೂ ಮಾದರಿಯಾಗಿದೆ. ಈ ಪ್ರಯೋಗ ದೂರದ ಅಯೋಧ್ಯೆ ನಗರವನ್ನು ಸೆಳೆದಿದೆ.

ಇದಕ್ಕೆಲ್ಲ ಕಾರಣ ಆನಂದ ಮಲ್ಲಿಗವಾಡ. ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ನಿಧಿಯಲ್ಲಿ ಬೆಂಗಳೂರಿನ ಆನೇಕಲ್ ತಾಲ್ಲೂಕಿನಲ್ಲಿ 20ಕ್ಕೂ ಹೆಚ್ಚು ಕೆರೆಗಳನ್ನು ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಿರುವ ಹೆಗ್ಗಳಿಕೆ ಇವರದ್ದು. ಅಯೋಧ್ಯೆಯ ಆರು ಕೆರೆ ಹಾಗೂ ರಾಮಮಂದಿರ ಸುತ್ತಮುತ್ತಲಿನ ಎಂಟು ಕುಂಡ್‌ಗಳ ಅಭಿವೃದ್ಧಿಗೆ ಇವರು ಮಾರ್ಗದರ್ಶಕರಾಗಿದ್ದಾರೆ.

ನೈಸರ್ಗಿಕವಾಗಿ ಕಲ್ಮಶವನ್ನು ಬೇರ್ಪಡಿಸುವ ಜತೆಗೆ, ಕಬ್ಬಿಣ ಮತ್ತು ಸಿಮೆಂಟ್ ಅನ್ನು ಹೆಚ್ಚು ಬಳಸದೆ ಬೆಂಗಳೂರಿನ ಕೆರೆಗಳನ್ನು ಮೂರ್ನಾಲ್ಕು ತಿಂಗಳಲ್ಲಿ ಈ ಮಾಹಿತಿ ತಿಳಿದ ಅಯೋಧ್ಯೆಯ ಯಶ್ ಪಕ್ಕಾ ಪೇಪರ್ ಕಂಪನಿ ಮುಖ್ಯಸ್ಥರು ತಮ್ಮ ಸಿಎಸ್‌ಆರ್ ನಿಧಿಯಲ್ಲಿ ಇದೇ ರೀತಿ ಕೆರೆಗಳನ್ನು ಅಭಿವೃದ್ಧಿ ಮಾಡಲು ಮುಂದಾದರು.

ಕಬ್ಬಿಣ ಮತ್ತು ಸಿಮೆಂಟ್ ಅನ್ನು ಹೆಚ್ಚು ಬಳಸದೆ ನೈಸರ್ಗಿಕವಾಗಿ ಕಲ್ಮಶವನ್ನು ಬೇರ್ಪಡಿಸಿ ಬೆಂಗಳೂರಿನಲ್ಲಿ ಕೆರೆಗಳನ್ನು ಮೂರ್ನಾಲ್ಕು ತಿಂಗಳಲ್ಲಿ ಆನಂದ ಅಭಿವೃದ್ಧಿಪಡಿಸಿದ್ದಾರೆ. ಈ ಮಾಹಿತಿ ತಿಳಿದ ಅಯೋಧ್ಯೆಯ ಯಶ್ ಪಕ್ಕಾ ಪೇಪರ್ ಕಂಪನಿ ಮುಖ್ಯಸ್ಥರು ತಮ್ಮ ಸಿಎಸ್‌ಆರ್ ನಿಧಿಯಲ್ಲಿ ಉತ್ತರ ಪ್ರದೇಶದ ಸಿರ್‌ಸಿಂಡಾ ಗ್ರಾಮದಲ್ಲಿ ಇದೇ ರೀತಿ ಕೆರೆಗಳನ್ನು ಅಭಿವೃದ್ಧಿ ಮಾಡಲು ಬಯಸಿದರು.

'ಕಂಪನಿ ಪ್ರತಿ ಕೆರೆಗೆ ₹20 ಲಕ್ಷ ಎಂದು ಅಂದಾಜು ಮಾಡಿತ್ತು. ನಾನು ಪ್ರತಿ ಕೆರೆಗೆ ₹10 ಲಕ್ಷದ ಯೋಜನೆ ನೀಡಿದೆ. ಕಂಪನಿ ಉಪಾಧ್ಯಕ್ಷ ವೇದ್ ಕೃಷ್ಣ, ಕೆರೆಗಳ ಅಭಿವೃದ್ಧಿಗೆ ಕೂಡಲೇ ಸಮ್ಮತಿಸಿದರು. ಸಿರ್‌ಸಿಂಡಾ ಗ್ರಾಮದಲ್ಲಿ ತಲಾ ಒಂದು ಎಕರೆಯಲ್ಲಿ ಆರು ಕೆರೆಗಳ ಅಭಿವೃದ್ಧಿ ಮೇ ಮೊದಲ ವಾರದಲ್ಲಿ ಆರಂಭಗೊಂಡು, ಜೂನ್ ಮೊದಲ ವಾರದಲ್ಲಿ ಮುಗಿದಿದೆ' ಎಂದು ಹೇಳಿದ ಆನಂದ, ಅಯೋಧ್ಯೆಯಲ್ಲಿನ ತಮ್ಮ ಕೆಲಸವನ್ನು ವಿವರಿಸಿದರು.

ಸಿರ್‌ಸಿಂಡಾ ಕೆರೆಗಳ ಅಭಿವೃದ್ಧಿ ಕಾಮಗಾರಿ ಅಯೋಧ್ಯೆ ವಿಕಾಸ ಪ್ರಾಧಿಕಾರದ ಗಮನ ಸೆಳೆಯಿತು. ಪ್ರಾಧಿಕಾರದ ಉಪಾಧ್ಯಕ್ಷ ವಿಶಾಲ್ ಸಿಂಗ್ ಅವರು ಆನಂದ್ ಅವರನ್ನು ಭೇಟಿಯಾದರು. ಬೆಂಗಳೂರಿಗೆ ಬಂದ ಸಿಂಗ್, ಇಲ್ಲಿ ಅಭಿವೃದ್ಧಿ ಮಾಡಿರುವ ಕೆರೆಗಳನ್ನು ಕಂಡರು. ಆನಂದ್ ಕಾರ್ಯದಿಂದ ಸಂತಸಗೊಂಡು ಅವರನ್ನು ಅಯೋಧ್ಯೆ ವಿಕಾಸ ಪ್ರಾಧಿಕಾರದ ಸಲಹೆಗಾರನ್ನಾಗಿ ಸೇರಿಸಿಕೊಂಡರು. ಆನಂದ ಅವರ ಸಲಹೆಯಂತೆ, ಅಯೋಧ್ಯೆಯಲ್ಲಿನ ಕೆರೆಗಳ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ.

'ಉತ್ತರ ಪ್ರದೇಶ ಸರ್ಕಾರ ರಾಜ್ಯಾದ್ಯಂತ ಕೆರೆಗಳನ್ನು ಅಭಿವೃದ್ಧಿಪಡಿಸಲು ಯೋಜನೆ ರೂಪಿಸುತ್ತಿದೆ. ಇದಕ್ಕೆ ನಮ್ಮ ಬೆಂಗಳೂರು ಮಾದರಿಯನ್ನೇ ಅಳವಡಿಸಿಕೊಳ್ಳಲು ಹಿರಿಯ ಅಧಿಕಾರಿಗಳು ಸೂಚಿಸಿದ್ದಾರೆ. ಅದಕ್ಕಾಗಿ ಸಲಹೆಗಾರನನ್ನಾಗಿ ನನ್ನನ್ನು ನೇಮಿಸಿಕೊಂಡಿದ್ದಾರೆ. ಮೇಘಾಲಯ, ಒಡಿಶಾ ಹಾಗೂ ಮಹಾರಾಷ್ಟ್ರಗಳಲ್ಲೂ ಇದೇ ಮಾದರಿಯಲ್ಲಿ ಕೆರೆ ಅಭಿವೃದ್ಧಿಗೆ ಸಲಹೆಗಳನ್ನು ನೀಡುತ್ತಿದ್ದೇನೆ' ಎಂದು ಆನಂದ್ ತಿಳಿಸಿದರು.

ಆಗಸ್ಟ್ 15ರೊಳಗೆ ಎಂಟು ಕುಂಡ್ ಸಿದ್ಧ: ಆನಂದ

'ರಾಮಮಂದಿರದ 5 ಕಿ.ಮೀ ವ್ಯಾಪ್ತಿಯಲ್ಲಿರುವ ವಿದ್ಯಾ ಕುಂಡ್, ಕುಬ್ಜಾ ಕುಂಡ್, ಸೀತಾ ಕುಂಡ್, ಬ್ರಹ್ಮ ಕುಂಡ್, ಅಗ್ನಿ ಕುಂಡ್, ಸೂರ್ಯ ಕುಂಡ್, ಮನುಮುನಿ ಕುಂಡ್ ದಶರಥ್ ಕುಂಡ್‌ಗಳನ್ನು ತಲಾ ₹1 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಅಯೋಧ್ಯೆ ವಿಕಾಸ್ ಪ್ರಾಧಿಕಾರ ವತಿಯಿಂದ ನಡೆಸಲಾಗುತ್ತಿದೆ. ಮೇ 2ನೇ ವಾರದಲ್ಲಿ ಕಾಮಗಾರಿ ಆರಂಭವಾಗಿದ್ದು, ಆಗಸ್ಟ್ 15ರೊಳಗೆ ಮುಗಿಯಲಿದೆ' ಎಂದು ಆನಂದ ತಿಳಿಸಿದರು.

46 ಕಿ.ಮೀ ನದಿ: 'ಅಯೋಧ್ಯೆಯಲ್ಲಿ ಸಾಕಷ್ಟು ಕೊಳಚೆಯನ್ನು ಶೇಖರಿಸಿಕೊಂಡಿದ್ದ 11 ಎಕರೆ ಪ್ರದೇಶದ ಲಾಲ್ ಡಿಗ್ಗಿ ಕೆರೆ ಕಾಮಗಾರಿಗೂ ತಾಂತ್ರಿಕ ಸಲಹೆ ನೀಡುತ್ತಿದ್ದೇನೆ. ಹರಿವನ್ನು ಕಳೆದುಕೊಳ್ಳುತ್ತಿದ್ದ 46 ಕಿ.ಮೀ ಉದ್ದದ ತಿಲೋದಕಿ ಗಂಗಾ ನದಿ ಪುನಶ್ಚೇತನ ಕಾಮಗಾರಿ ಎರಡು ಹಂತದಲ್ಲಿ ನಡೆಯುತ್ತಿದೆ. ಸುಮಾರು 7 ಕಿ.ಮೀ ಮುಗಿದಿದೆ. ಮೂರನೇ ಹಂತದ 23 ಕಿ.ಮೀ ಕಾಮಗಾರಿ ನಡೆಯುತ್ತಿದೆ. ಲಾಲ್ ಡಿಗ್ಗಿ ಕೆರೆಯ ಅಭಿವೃದ್ಧಿ ಇನ್ನು 15 ದಿನದಲ್ಲಿ ಮುಗಿಯಲಿದೆ' ಎಂದರು.

'ಅಯೋಧ್ಯೆಯಿಂದ 25 ಕಿ.ಮೀ ದೂರದಲ್ಲಿರುವ 165 ಎಕರೆ ಪ್ರದೇಶದ ಸಮದಾ ಕೆರೆಯನ್ನು ಅಂತರರಾಷ್ಟ್ರೀಯ ಪಕ್ಷಿಧಾಮವನ್ನಾಗಿ ರೂಪಿಸಲಾಗುತ್ತಿದೆ. ಇದಕ್ಕೆ ಪ್ರಾಧಿಕಾರ ₹8 ಕೋಟಿಯ ಯೋಜನೆ ರೂಪಿಸಿತ್ತು, ಅದನ್ನು ₹4.5 ಕೋಟಿಗೆ ಇಳಿಸಿ ಅಭಿವೃದ್ಧಿಪಡಿಸಲಾಗುತ್ತಿದೆ' ಎಂದು ಆನಂದ್ ವಿವರಿಸಿದರು.

ಅಯೋಧ್ಯೆಯಲ್ಲಿ ಪುನಶ್ಚೇತನಗೊಳ್ಳುತ್ತಿರುವ ತಿಲೋದಕಿ ಗಂಗಾ ನದಿ

ನಗರದಲ್ಲಿ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಉತ್ಥಾನ ಮತ್ತು ರಾಷ್ಟ್ರೋತ್ಥಾನ ಸಾಹಿತ್ಯ ಸಂಪಾದಕ ಎಸ್.ಆರ್. ರಾಮಸ್ವಾಮಿ ಅವರು ಲೇಖಕ ಶತಾವಧಾನಿ ಆರ್. ಗಣೇಶ್ ಅವರ 'ಮಣ್ಣಿನ ಕನಸು' ಕಾದಂಬರಿಯನ್ನು ಬಿಡುಗಡೆ ಮಾಡಿದರು. ತಾಳಮದ್ದಲೆ ಕಲಾವಿದ ದಿವಾಕರ ಹೆಗಡೆ, ನಿವೃತ್ತ ಪ್ರಾಧ್ಯಾಪಕ ಮಹೇಶ ಅಡಕೋಳಿ, ಸಾಹಿತಿ ಎಸ್.ಎಲ್. ಭೈರಪ್ಪ ಮತ್ತು ಅನುವಾದಕಿ ಶ್ರೀಲಲಿತಾ ರೂಪನಗುಡಿ ಇದ್ದರು – ಪ್ರಜಾವಾಣಿ ಚಿತ್ರ

ವಿಮರ್ಶಕರಿಂದ ಉತ್ತಮ ಕೃತಿ ಬರಲಿಲ್ಲ: ಎಸ್.ಎಲ್. ಭೈರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಲ ವಿಮರ್ಶಕರು ಉತ್ತಮವಾದ ಕೃತಿಗಳನ್ನು ರಚಿಸುವಲ್ಲಿ ವಿಫಲರಾಗಿದ್ದಾರೆ. ನಾನಂತೂ ಯಾವುದೇ ಪುಸ್ತಕದ ವಿಮರ್ಶೆ ಮಾಡಲೇ ಇಲ್ಲ' ಎಂದು ಸಾಹಿತಿ ಎಸ್.ಎಲ್. ಭೈರಪ್ಪ ಹೇಳಿದರು.

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಮತ್ತು ಹುಬ್ಬಳ್ಳಿಯ ಸಾಹಿತ್ಯ ಪ್ರಕಾಶನ ಜಂಟಿಯಾಗಿ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಶತಾವಧಾನಿ ಆರ್. ಗಣೇಶ್ ಅವರ 'ಮಣ್ಣಿನ ಕನಸು' ಕಾದಂಬರಿಯ ಮೂರನೇ ಆವೃತ್ತಿ ಬಿಡುಗಡೆ ಹಾಗೂ ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿದರು.

'ನವೋದಯ ಸಾಹಿತ್ಯದ ಕಾಲಘಟ್ಟದಲ್ಲಿ ವಿಮರ್ಶೆಗಳು ಇರಲಿಲ್ಲ. ನವ್ಯ ಕಾಲಘಟ್ಟದಲ್ಲಿ ಲೇಖಕರ ಪುಸ್ತಕ ಪ್ರಕಟವಾಗುವುದಕ್ಕಿಂತ ಮುಂದೆ ವಿಮರ್ಶೆ ಬರೆದು ಪ್ರಕಟಿಸುತ್ತಿದ್ದರು ಅಥವಾ ಸ್ನೇಹಿತರಿಂದ ಬರೆಸುತ್ತಿದ್ದರು' ಎಂದರು.

'ಮಣ್ಣಿನ ಕನಸು' ಕಾದಂಬರಿ ಸಂಸ್ಕೃತಕ್ಕೆ ಅನುವಾದವಾಗಬೇಕು. ನಂತರ ಎಲ್ಲ ಭಾಷೆಗಳಿಗೂ ಅನುವಾದರೆ ಅದರ ಮೂಲ ಆಶಯ ಎಲ್ಲೆಡೆ ತಲುಪುತ್ತದೆ. ಈ ಕಾದಂಬರಿ ಕನ್ನಡಕ್ಕೆ ಒಂದು ಹೊಸ ರೀತಿಯದ್ದು. ಗಣೇಶ್ ಅವರು ಹೊಸ ಪ್ರಯತ್ನ ಮಾಡಿದ್ದಾರೆ.

ಸಂಸ್ಕೃತದ ಮೂಲದಿಂದ ಹೊರ ಬಂದಿರುವ ಈ ಕಾದಂಬರಿಯನ್ನು ಮೊದಲನೇ ಓದಿನಲ್ಲಿ ಅರ್ಥೈಸಿಕೊಳ್ಳುವುದು ಕಷ್ಟ. ಎರಡನೇ ಬಾರಿ ಓದಬೇಕು' ಎಂದರು.

'ಜನರು ಈ ಕಾದಂಬರಿಯನ್ನು ಸ್ವೀಕರಿಸಿರುವುದು ಅತ್ಯಂತ ಸಂತಸದ ವಿಚಾರ. ಅದಕ್ಕೆ ಇದು ಮೂರನೇ ಆವೃತ್ತಿಯಲ್ಲಿ ಬಿಡುಗಡೆ ಆಗುತ್ತಿದೆ. ಇದು ಓದುಗರಲ್ಲಿರುವ ಒಳ್ಳೆಯ ಅಭಿರುಚಿಯನ್ನು ಸೂಚಿಸುತ್ತದೆ' ಎಂದರು.

'ಈ ಕಾದಂಬರಿ ಇಂಗ್ಲಿಷ್ ಸೇರಿದಂತೆ ಎಲ್ಲ ಭಾಷೆಗಳಿಗೆ ಅನುವಾದವಾಗಬೇಕು. ಇದು ಬುದ್ಧನ ಕಾಲಘಟ್ಟದಲ್ಲಿರುವುದರಿಂದ, ನಾಟಕಗಳ ಕಥೆಗಳನ್ನು ಇದು ಒಳಗೊಂಡಿದೆ. ಅನುವಾದಗಾರರ ಸ್ವಾಗತ' ಎಂದರು.

ಉತ್ಥಾನ ಮತ್ತು ರಾಷ್ಟ್ರೋತ್ಥಾನ ಸಾಹಿತ್ಯ ಸಂಪಾದಕ ಎಸ್.ಆರ್. ರಾಮಸ್ವಾಮಿ ಅವರು 'ಮಣ್ಣಿನ ಕನಸು' ಕಾದಂಬರಿಯ ಮೂರನೇ ಆವೃತ್ತಿ ಬಿಡುಗಡೆ ಮಾಡಿದರು. ಕಾದಂಬರಿ ಬಗ್ಗೆ ಮಹೇಶ ಅಡಕೋಳಿ, ಕೆ. ದಿವಾಕರ ಹೆಗಡೆ, ಶ್ರೀಲಲಿತಾ ರೂಪನಗುಡಿ ಮಾತನಾಡಿದರು. ಲೇಖಕ ಆರ್. ಗಣೇಶ್, ಇನ್ಫೋಸಿಸ್ ಪ್ರತಿಷ್ಠಾನದ ಸುಧಾಮೂರ್ತಿ, ಸಾಹಿತ್ಯ ಪ್ರಕಾಶನದ ಎಂ.ಎ. ಸುಬ್ರಹ್ಮಣ್ಯ ಇದ್ದರು.

ಸಿಇಟಿ: ಚೈತನ್ಯ ಸಂಸ್ಥೆಗೆ ಉತ್ತಮ ಫಲಿತಾಂಶ

ಆರ್ ಕೃಷ್ಣ ಎಸ್ ಆರ್

ಬಿ.ವಿಶಾಲ್ ಬಾಲಮುರಗನ್

ಸುಮೀತ್ ಪಾಟೀಲ



ಎ.ವಿ.ಮಾಧವ ಶ್ರೀರಾಮ್

ಮನಿಷ್ ಎಸ್.ಎ.

ಸಿದ್ಧಾರ್ಥ ಸಿಂಗ್

ಶುಭಾ ಕೌಶಿಕ್

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವೃತ್ತಿಪರ ಕೋರ್ಸ್‌ಗಳಿಗೆ ನಡೆಸಿದ ಪ್ರವೇಶ ಪರೀಕ್ಷೆಯಲ್ಲಿ 'ಶ್ರೀ ಚೈತನ್ಯ ಎಜ್ಯುಕೇಷನಲ್ ಇನ್‌ಸ್ಟಿಟ್ಯೂಟ್'ನ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಸಂಸ್ಥೆಯ ವಿದ್ಯಾರ್ಥಿಗಳು ವಿವಿಧ ಕೋರ್ಸ್‌ಗಳಲ್ಲಿ 2, 3,4,5,6 ಮತ್ತು 9ನೇ ರ‍್ಯಾಂಕ್‌ಗಳನ್ನು ಪಡೆದಿದ್ದಾರೆ. 100 ರ‍್ಯಾಂಕ್‌ಕ್ಕಿಂತ ಕಡಿಮೆ ಇರುವವರಲ್ಲಿ 51 ರ‍್ಯಾಂಕ್ ಗಳು ಸಂಸ್ಥೆಯ ವಿದ್ಯಾರ್ಥಿಗಳೇ ಪಡೆದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಶಿಕ್ಷಕರ ಮಾರ್ಗದರ್ಶನ ಮತ್ತು ಪರಿಶ್ರಮದಿಂದ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ತಮ್ಮ ವೃತ್ತಿಯಲ್ಲೂ ಇದೇ ರೀತಿಯ ಸಾಧನೆ ಮಾಡಲಿದ್ದಾರೆ ಎಂದು ಸಂಸ್ಥೆಯ ಸಂಸ್ಥಾಪಕ ಡಾ.ಬಿ.ಎಸ್. ರಾವ್ ಮತ್ತು ನಿರ್ದೇಶಕರಾದ ಸುಷ್ಮಾ ಬೋಪಣ್ಣ ತಿಳಿಸಿದ್ದಾರೆ.

ಎಂಜಿನಿಯರಿಂಗ್ ವಿಭಾಗದಲ್ಲಿ ಸಿದ್ಧಾರ್ಥ್ ಸಿಂಗ್ 2ನೇ ರ‍್ಯಾಂಕ್, ಎ.ವಿ. ಮಾಧವ್ ಶ್ರೀರಾಮ್ 3ನೇ ರ‍್ಯಾಂಕ್, ಸಾತ್ವಿಕ್ ವಿ. 9ನೇ ರ‍್ಯಾಂಕ್ ಪಡೆದುಕೊಂಡಿದ್ದಾರೆ.

ಬಿ.ಎಸ್ಸಿ. (ಕೃಷಿ) ವಿಭಾಗದಲ್ಲಿ ಸುಮೀತ್.ಎಸ್. ಪಾಟೀಲ್ 2ನೇ ರ‍್ಯಾಂಕ್ ಪಡೆದಿದ್ದಾರೆ. ಪಶು ವೈದ್ಯಕೀಯ ವಿಭಾಗದಲ್ಲಿ ಮನಿಷ್ ಎಸ್.ಎ. 2ನೇ ರ‍್ಯಾಂಕ್ ಮತ್ತು ಶುಭಾ ಕೌಶಿಕ್ 3ನೇ ರ‍್ಯಾಂಕ್ ಪಡೆದಿದ್ದಾರೆ. ನ್ಯಾಚುರೋಪತಿ, ಯೋಗ ವಿಜ್ಞಾನ (ಬಿಎನ್‌ವೈಎಸ್) ವಿಭಾಗದಲ್ಲಿ ಆರ್. ಕೃಷ್ಣ ಎಸ್. ಆರ್. 3ನೇ ರ‍್ಯಾಂಕ್, ಬಿ.ವಿಶಾಲ್ ಬಾಲಮುರಗನ್ 6ನೇ ರ‍್ಯಾಂಕ್, ಅನನ್ಯಾ ಐಶ್ವರ್ಯಾ ಪಟೇಲ್ 9ನೇ ರ‍್ಯಾಂಕ್ ಪಡೆದುಕೊಂಡಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ಡಾ.ಬಿ.ಎಸ್. ರಾವ್ ತಿಳಿಸಿದ್ದಾರೆ.

ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆ 1ನೇ ಬ್ಲಾಕ್

1017	43	12.00	9.00	108.00
1018	300	12.00	18.00	216.00
1019	591	18.00	12.00	216.00
1020	695	18.00	12.00	216.00
1021	826	18.00	12.00	216.00
1022	1172	12.00	18.00	216.00
1023	1201	12.00	18.00	216.00
1024	1202	12.00	18.00	216.00
1025	1304	12.00	18.00	216.00
1026	1311	12.00	18.00	216.00
1027	1311A	12.00	18.00	216.00
1028	1311B	12.00	18.00	216.00
1029	2113	12.00	18.00	216.00
1030	2114	12.00	18.00	216.00
1031	2115	12.00	18.00	216.00
1032	2190	12.00	18.00	216.00
1033	2225	18.00	12.00	216.00
1034	2228	18.00	12.00	216.00
1035	2237	18.00	12.00	216.00
1036	2267	12.00	18.00	216.00
1037	2271	12.00	18.00	216.00
1038	2321	12.00	18.00	216.00
1039	2327	12.00	18.00	216.00
1040	2328	12.00	18.00	216.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.45,600/-

1041	2329	12.00	18.00	216.00
1042	2346	12.00	18.00	216.00
1043	2349	12.00	18.00	216.00
1044	2350	12.00	18.00	216.00
1045	2351	12.00	18.00	216.00
1046	2353	12.00	18.00	216.00
1047	2354	12.00	18.00	216.00
1048	2355	12.00	18.00	216.00
1049	2356	12.00	18.00	216.00
1050	1344C	12.00	18.00	216.00
1051	2357/A	12.00	18.00	216.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.49,920/-

ಬನಶಂಕರಿ 6ನೇ ಹಂತ, 3ನೇ ಬ್ಲಾಕ್

1052	475	24.00	(15.80+12.50)/2	339.60
1053	447	18.00	12.00	216.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.49,400/- ಸಂಪರ್ಕಿಸಿ: 9880956688 / 9945208154

ಅಂಜನಾಪುರ ಟೌನ್‌ಷಿಪ್ 8ನೇ ಬ್ಲಾಕ್

1054	10	18.00	(12.00+21.00)/2	297.00
1055	25	18.00	(13.50+28.00)/2	373.50
1056	920	18.00	(13.00+15.00)/2	252.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.49,400/-

1057	940	(13.00+9.00) /2	18.00	198.00
1058	941	(24.00+8.50) /2	18.00	292.50
1059	1201/A	(12.00+21.00)/2	12.00	198.00
1060	1262/A	18.00	(15.00+21.00)/2	324.00
1061	1105	9.30	12.00	111.60
1062	1106	9.30	12.00	111.60
1063	1134	9.10	12.00	109.20
1064	1167/A	9.00	12.00	108.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.44,850/-

ಅಂಜನಾಪುರ ಟೌನ್‌ಷಿಪ್ 2ನೇ ಬ್ಲಾಕ್

1065	83	18.00	12.00	216.00
1066	85	18.00	12.00	216.00
1067	804/C	18.00	12.00	216.00
1068	1294	18.00	12.00	216.00
1069	1347	9.00	6.00	54.00
1070	1450	9.00	6.00	54.00
1071	1451	9.00	6.00	54.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.40,950/-

ಅಂಜನಾಪುರ ಟೌನ್‌ಷಿಪ್ 3ನೇ 'ಎ' ಬ್ಲಾಕ್

1072	256	22.00	15.00	330.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.40,950/-

ಅಂಜನಾಪುರ ಟೌನ್‌ಷಿಪ್ 5ನೇ ಬ್ಲಾಕ್

1073	40	12.00	16.00	192.00
1074	76	9.00	12.00	108.00
1075	191	6.50	6.00	39.00
1076	330	9.00	12.00	108.00
1077	381	12.00	9.00	108.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.44,850/-

ಅಂಜನಾಪುರ ಟೌನ್‌ಷಿಪ್ 7ನೇ ಬ್ಲಾಕ್

1078	451	24.00	15.00	360.00
1079	459	24.00	15.00	360.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.44,850/- ಸಂಪರ್ಕಿಸಿ: 9036848419/9980244677

ಅಂಜನಾಪುರ ಟೌನ್‌ಷಿಪ್ 1ನೇ ಬ್ಲಾಕ್

1080	824	12.00	18.00	216.00

ಅಂಜನಾಪುರ ಟೌನ್‌ಷಿಪ್ 3ನೇ 'ಎ' ಬ್ಲಾಕ್

1081	124/A	18.00	12.00	216.00

ಅಂಜನಾಪುರ ಟೌನ್‌ಷಿಪ್ 4ನೇ ಬ್ಲಾಕ್

1082	15	18.00	12.00	216.00
1083	71	12.00	18.00	216.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ. 46,800/- ಸಂಪರ್ಕಿಸಿ: 9036848419/9980244677

ಇ–ಹರಾಜನ್ನು ತೆರೆಯುವ ಹಾಗೂ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ ಮತ್ತು ಸಮಯ : 16.08.2022 ಬೆಳಿಗ್ಗೆ 11.00 ಗಂಟೆಗೆ

ಕ್ರಸಂ. 1084 ರಿಂದ 1159 ವರಗೆ ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ: 26.08.2022 ಸಂಜೆ 6.00 ಗಂಟೆಗೆ. ಇ–ಹರಾಜನ್ನು ಮುಕ್ತಾಯಗೊಳಿಸುವ ದಿನಾಂಕ ಮತ್ತು ಸಮಯ : 29.08.2022 ಸಂಜೆ 6.00 ಗಂಟೆಗೆ

ಅಂಜನಾಪುರ ಟೌನ್‌ಷಿಪ್ 5ನೇ ಬ್ಲಾಕ್

1084	109	12.00	9.00	108.00
1085	279	18.00	12.00	216.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.44,850/- ಸಂಪರ್ಕಿಸಿ: 9036848419/9980244677

ಬಿಎಸ್‌ಕೆ 6ನೇ ಹಂತ, 9ನೇ ಬ್ಲಾಕ್

1086	776	(15.00+13.00)/2	24.00	336.00
1087	781	(13.00+15.00)/2	24.00	336.00
1088	782	(22.50+14.00)/2	18.00	328.50
1089	789	(11.50+12.00)/2	18.00	211.50
1090	790	18.00	11.00	198.00
1091	805	18.00	(26.00+9.00)/2	315.00
1092	806	(6.60+11.00)/2	12.00	105.60
1093	818	(12.00+4.80)/2	12.00	100.80
1094	824	9.00	12.00	108.00
1095	825	(10.00+9.00)/2	12.00	114.00
1096	837	(11.00+14.50)/2	12.00	153.00
1097	923	9.00	(13.00+8.00)/2	94.50
1098	1107	9.00	(12.00+8.00)/2	90.00
1099	1157	9.00	(13.00+7.00)/2	90.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.38,870/- ಸಂಪರ್ಕಿಸಿ: 9900142667 / 9480427848

ಬನಶಂಕರಿ 6ನೇ ಹಂತ, 3ನೇ ಬ್ಲಾಕ್

1100	2119	18.00	(11.50+11.00) /2	202.50

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.49,400/- ಸಂಪರ್ಕಿಸಿ: 9945208154

ಬನಶಂಕರಿ 6ನೇ ಹಂತ, 4ನೇ ಬ್ಲಾಕ್

1101	1269	(9.00+8.00)/2	12.00	102.00
1102	1671	(12.50+18.00)/2	12.00	183.00
1103	1672	(6.00+12.50)/2	12.00	111.00
1104	1690	(12.50+7.00)/2	12.00	117.00
1105	1703	(20.00+13.00)/2	12.00	198.00
1106	1741	12.00	(9.00+12.50)/2	129.00
1107	1804	14.00	17.00	238.00
1108	1819	18.00	(10.00+15.00)/2	225.00
1109	1863	9.00	6.00	54.00
1110	1936	(9.00+8.20)/2	12.00	103.20
1111	1952	13.50	12.00	162.00
1112	1289	9.00	12.00	108.00
1113	1290	9.00	12.00	108.00
1114	1293	9.00	12.00	108.00
1115	1735	9.00	12.00	108.00
1116	1806	18.00	12.00	216.00
1117	2310	9.00	12.00	108.00
1118	2374	12.00	9.00	108.00
1119	2375	12.00	9.00	108.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.46,150/- ಸಂಪರ್ಕಿಸಿ: 9945208154

ಬನಶಂಕರಿ 6ನೇ ಹಂತ, 6ನೇ ಬ್ಲಾಕ್

1120	154	12.00	9.00	108.00
1121	155	12.00	9.00	108.00
1122	156	12.00	9.00	108.00
1123	158	12.00	9.00	108.00
1124	456	12.00	9.00	108.00
1125	1125	18.00	12.00	216.00
1126	1188	18.00	12.00	216.00
1127	1470	9.00	12.00	108.00
1128	1475	9.00	12.00	108.00
1129	1484	9.00	12.00	108.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.39,650/-

ಬನಶಂಕರಿ 6ನೇ ಹಂತ, 7ನೇ ಬ್ಲಾಕ್

1130	18	12.00	9.00	108.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.41,600/- ಸಂಪರ್ಕಿಸಿ: 9900142667/9480427848

ಅಂಜನಾಪುರ ಟೌನ್‌ಷಿಪ್ 3ನೇ 'ಎ' ಬ್ಲಾಕ್

1131	102	15.00	24.00	360.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.48,360/-

ಅಂಜನಾಪುರ ಟೌನ್‌ಷಿಪ್ 6ನೇ ಬ್ಲಾಕ್

1132	205	9.00	6.00	54.00
1133	340	12.00	9.00	108.00
1134	455	12.00	9.00	108.00
1135	505	9.00	6.00	54.00
1136	526	9.00	6.00	54.00
1137	532	9.00	6.00	54.00
1138	546	9.00	12.00	108.00
1139	590	6.00	9.00	54.00
1140	644/A	18.00	6.00	108.00
1141	644/B	18.00	6.00	108.00
1142	858	6.00	9.00	54.00
1143	906	6.00	9.00	54.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.39,650/-

ಅಂಜನಾಪುರ ಟೌನ್‌ಷಿಪ್ 8ನೇ ಬ್ಲಾಕ್

1144	731	18.00	12.00	216.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.44,850/-

1145	743	15.00	24.00	360.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.49,400/-

1146	1283	18.00	12.00	216.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.44,850/- ಸಂಪರ್ಕಿಸಿ: 9036848419/9980244677

ಭೂಪಸಂದ್ರ ಗ್ರಾಮ, ಆರ್‌ಎಂವಿ 2ನೇ ಹಂತ

1147	10	18.00	25.00	450.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.1,16,250/- ಸಂಪರ್ಕಿಸಿ: 9148170170/9353959701

(1ನೇ ಫೇಸ್) ಎನ್‌ಪಿಕೆಎಲ್ ಬ್ಲಾಕ್–2

1148	1771	(13.70+14.80)/2	18.00	256.50
1149	1781	(14.00+11.00)/2	18.00	225.00
1150	1782	(14.80+12.00)/2	18.00	241.20
1151	1788	(14.20+13.10)/2	18.00	245.70

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.35,100/-

(1ನೇ ಫೇಸ್) ಎನ್‌ಪಿಕೆಎಲ್ ಬ್ಲಾಕ್–3

1152	1079	(12.30+12.50)/2	18.00	223.20
1153	1080	(12.50+12.70)/2	18.00	226.80
1154	1809	(12.80+12.00)/2	18.00	223.20
1155	1099B	(12.80+13.00)/2	18.00	232.20
1156	1574	(13.00+6.80)/2	12.00	118.80
1157	1602	12.00	(15.70+9.50)/2	151.20
1158	1603	(15.80+9.50)/2	12.00	151.80

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.35,100/-

1159	1091	(20.80+21.70)/2	18.00	382.50

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.37,050/- ಸಂಪರ್ಕಿಸಿ: 9740175002 / 9686727999

ಇ–ಹರಾಜನ್ನು ತೆರೆಯುವ ಹಾಗೂ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ ಮತ್ತು ಸಮಯ : 17.08.2022 ಬೆಳಿಗ್ಗೆ 11.00 ಗಂಟೆಗೆ

ಕ್ರಸಂ. 1160 ರಿಂದ 1222 ವರಗೆ ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ: 02.08.2022 ಸಂಜೆ 6.00 ಗಂಟೆಗೆ. ಇ–ಹರಾಜನ್ನು ಮುಕ್ತಾಯಗೊಳಿಸುವ ದಿನಾಂಕ ಮತ್ತು ಸಮಯ : 30.08.2022 ಸಂಜೆ 6.00 ಗಂಟೆಗೆ

(3ನೇ ಫೇಸ್) ಎನ್‌ಪಿಕೆಎಲ್ ಬ್ಲಾಕ್–1

1160	1688	(18.50+19.10)/2	24.00	451.20
1161	1736	(19.00+19.50)/2	24.00	462.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ. 37,050/- ಸಂಪರ್ಕಿಸಿ: 9448116927 / 9686727999

(1ನೇ ಫೇಸ್) ಎನ್‌ಪಿಕೆಎಲ್ ಬ್ಲಾಕ್–4

1162	2660	18.00	(18.02+17.87)/2	323.01
1163	2498	18.00	(16.23+17.23)/2	301.14

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.35,100/- ಸಂಪರ್ಕಿಸಿ: 9448116927 / 9686727999

(1st Phase) NPKL Block-5

1164	3099	26.60	(11.30+20.30)/2	420.28
1165	3110	(25.20+26.20)/2	16.00	411.20
1166	3125	18.00	(19.80+25.70)/2	409.50

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.37,050/- ಸಂಪರ್ಕಿಸಿ: 9845961459 / 8861083656

(1ನೇ ಫೇಸ್) ಎನ್‌ಪಿಕೆಎಲ್ ಬ್ಲಾಕ್–6

1167	3732	12.00	18.00	216.00
1168	3719	12.00	18.00	216.00
1169	3718	12.00	18.00	216.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.35,100/-

1170	3996	9.00	6.00	54.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.32,370/- ಸಂಪರ್ಕಿಸಿ: 9243411114 / 9880552515

(1ನೇ ಫೇಸ್) ಎನ್‌ಪಿಕೆಎಲ್ ಬ್ಲಾಕ್–8

1171	1481	(11.70+12.50)/2	12.00	145.20
1172	1563	(9.80+11.10)/2	12.00	125.40
1173	1564	(11.10+12.80)/2	12.00	143.40

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.35,100/- ಸಂಪರ್ಕಿಸಿ: 9448139698 / 9611055415

(1ನೇ ಫೇಸ್) ಎನ್‌ಪಿಕೆಎಲ್ ಬ್ಲಾಕ್–9

1174	1684	12.00	9.00	108.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.32,370/-

1175	1510	(12.40+13.00)/2	18.00	228.60
1176	1534	(12.00+13.00)/2	18.00	225.00
1177	2308	(15.00+14.30)/2	18.00	263.70

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.35,100/-

1178	1903	16.90	24.00	405.60
1179	1898	(17.50+15.90)/2	24.00	400.80
1180	2035	24.00	15.00	360.00
1181	2065	24.00	15.00	360.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.37,050/- ಸಂಪರ್ಕಿಸಿ: 9740175002 / 9686727999

(3ನೇ ಫೇಸ್) ಎನ್‌ಪಿಕೆಎಲ್ ಬ್ಲಾಕ್–1

1182	1265	12.00	10.10	121.20
1183	1288	12.00	10.10	121.20
1184	1289	12.00	10.10	121.20
1185	1312	12.00	10.10	121.20
1186	1360	12.00	10.10	121.20
1187	1384	12.00	10.10	121.20
1188	1143	(10.90+10.20)/2	9.00	94.95
1189	1200	13.00	12.00	156.00
1190	1177	(13.00+12.80)/2	12.00	154.80
1191	1301	12.00	(13.50+14.00)/2	165.00
1192	1300	12.00	(13.90+14.20)/2	168.60
1193	1277	12.00	(14.20+14.00)/2	169.20
1194	1441	15.00	18.00	270.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.35,100/- ಸಂಪರ್ಕಿಸಿ: 9448139698 / 9611055415

(3ನೇ ಫೇಸ್) ಎನ್‌ಪಿಕೆಎಲ್ ಬ್ಲಾಕ್–2

1195	1859	(15.30+15.00)/2	12.00	181.80
1196	2627	(8.00+6.00)/2	12.00	84.00
1197	2575	(13.00+11.70)/2	12.00	148.20
1198	2574	(11.70+8.40)/2	12.00	120.60
1199	2527	(15.50+13.50)/2	12.00	174.00
1200	2526	(13.50+11.50)/2	12.00	150.00

(3ನೇ ಫೇಸ್) ಎನ್‌ಪಿಕೆಎಲ್ ಬ್ಲಾಕ್–2

1201	2482	(16.70+14.80)/2	12.00	189.00
1202	2067	(10.80+11.60)/2	12.00	134.40
1203	2066	(11.60+13.50)/2	12.00	150.60
1204	2988	(20.70+21.20)/2	12.00	251.40

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.35,100/-

1205	2881	(14.90+14.40)/2	12.00	175.80
1206	2880	(14.40+14.00)/2	12.00	170.40
1207	2824	(13.50+12.80)/2	12.00	157.80
1208	2825	(13.80+13.50)/2	12.00	163.80
1209	2769	(13.00+12.50)/2	12.00	153.00
1210	2768	(12.40+12.50)/2	12.00	149.40
1211	1885	(15.80+15.40)/2	12.00	187.20
1212	1886	(15.40+15.80)/2	12.00	187.20
1213	2039	12.00	8.70	104.40
1214	2024	12.00	8.70	104.40
1215	2023	12.00	(9.00+8.80)/2	106.80
1216	2182	(12.00+11.50)/2	12.00	141.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.32,370/- ಸಂಪರ್ಕಿಸಿ: 9448112927 / 9686727999

ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆ 6ನೇ ಬ್ಲಾಕ್

1217	3445/A	18.00	11.50	207.00
1218	2183	(4.80+3.50)/2	9.00	37.35

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.45,500/- ಸಂಪರ್ಕಿಸಿ: 9972027373

ಬನಶಂಕರಿ 2ನೇ ಹಂತ

1219	2735	18.00	(8.50+9.50)/2	162.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.1,86,000/- ಸಂಪರ್ಕಿಸಿ:9448618112

ಜೆ.ಪಿ.ನಗರ 9ನೇ ಫೇಸ್, 2ನೇ ಬ್ಲಾಕ್

1220	150	14.50	10.70	155.15
1221	163	14.50	10.10	146.45
1222	393	7.90	12.20	96.38

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ. 64,950/- ಸಂಪರ್ಕಿಸಿ: 9900250022/8660038735

ಇ–ಹರಾಜನ್ನು ತೆರೆಯುವ ಹಾಗೂ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ ಮತ್ತು ಸಮಯ : 18.08.2022 ಬೆಳಿಗ್ಗೆ 11.00 ಗಂಟೆಗೆ

ಕ್ರಸಂ. 1223 ರಿಂದ 1283 ವರಗೆ ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ: 30.08.2022 ಸಂಜೆ 6.00 ಗಂಟೆಗೆ. ಇ–ಹರಾಜನ್ನು ಮುಕ್ತಾಯಗೊಳಿಸುವ ದಿನಾಂಕ ಮತ್ತು ಸಮಯ : 01.09.2022 ಸಂಜೆ 6.00 ಗಂಟೆಗೆ

ಜೆ.ಪಿ.ನಗರ 9ನೇ ಹಂತ, 2ನೇ ಬ್ಲಾಕ್

1223	408	18.00	10.80	194.40

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ. 64,950/-

ಜೆ.ಪಿ.ನಗರ 9ನೇ ಫೇಸ್, 3ನೇ ಬ್ಲಾಕ್

1224	271	18.20	11.60	211.12
1225	360	6.00	18.00	108.00
1226	380	11.20	18.00	201.60
1227	537	5.80	12.20	70.76
1228	555	11.20	12.20	136.64
1229	575	10.30	12.20	125.66

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.49,950/-

1230	593	(5.50+6.50)/2	12.20	73.20
1231	282/A	12.20	9.12	111.26
1232	283/A	12.20	8.80	107.36
1233	304/A	12.20	9.12	111.26
1234	305/A	12.20	8.80	107.36
1235	316/A	12.20	8.80	107.36

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.64,950/-

ಜೆ.ಪಿ.ನಗರ 9ನೇ ಫೇಸ್, 4ನೇ 'ಎ' ಬ್ಲಾಕ್

1236	36	(12.00+6.50)/2	12.19	112.76
1237	21	12.19	(5.80+11.00)/2	102.39
1238	56	(12.19+13.30)/2	(9.30+3.50)/2	81.53
1239	27	(12.19+12.50)/2	(8.80+12.00)/2	128.33
1240	28	(12.19+13.00)/2	(7.30+3.00)/2	64.83
1241	61	(12.19+13.00)/2	(1.50+8.40)/2	62.32
1242	70	(12.19+14.00)/2	(11.10+5.10)/2	106.02

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.64,950/-

ಜೆ.ಪಿ.ನಗರ 8ನೇ ಫೇಸ್, 1ನೇ ಬ್ಲಾಕ್

1243	125/A	(8.00+9.50)/2	9.20	80.50

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.65,325/-

ಬಿ.ಟಿ.ಎಂ 4ನೇ ಹಂತ, 2ನೇ ಬ್ಲಾಕ್

1244	753	(12.50+11.40)/2	12.00	143.40
1245	762	(9.10+5.00)/2	12.00	84.60
1246	763	(7.00+4.00)/2	12.00	66.00
1247	824	(7.30+9.80)/2	15.00	128.25

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.92,850/-

ಮುಂದುವರೆದಂತೆ ಅಂಜನಾಪುರ 5ನೇ 'ಜ' ಬ್ಲಾಕ್‌ವರೆಗೆ

1248	120	(16.00+13.50)/2	18.00	265.50
1249	121	(10.50+13.50)/2	18.00	216.00
1250	134	(11.50+10.50)/2	18.00	198.00
1251	135	(10.50+7.50)/2	18.00	162.00
1252	189	(7.50+8.30)/2	12.00	94.80

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.44,850/-

ಮುಂದುವರೆದಂತೆ ಅಂಜನಾಪುರ 9ನೇ ಬ್ಲಾಕ್‌ವರೆಗೆ

1253	539	18.00	(11.00+14.30)/2	227.70
1254	814	18.00	(14.30+10.00)/2	218.70

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.46,800/-

ಬನಶಂಕರಿ 6ನೇ ಹಂತ, 6ನೇ ಬ್ಲಾಕ್

1255	103	24.00	(14.00+12.50)/2	318.00
1256	104	24.00	(10.00+11.50)/2	258.00
1257	111	24.00	15.00	360.00
1258	676	14.30	11.50	164.45

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.39,650/-

ಬನಶಂಕರಿ 6ನೇ ಹಂತ, 9ನೇ ಬ್ಲಾಕ್

1259	642	(12.00+12.50)/2	24.00	294.00
1260	671	(11.50+10.00)/2	18.00	193.50
1261	883	12.00	10.30	123.60
1262	1206	12.00	8.00	96.00
1263	562/C	23.80	13.25	315.35

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.38,870/-

ಬನಶಂಕರಿ 6ನೇ ಹಂತ, 10ನೇ ಬ್ಲಾಕ್

1264	830	11.00	(16.00+17.50)/2	184.25
1265	872	24.00	23.00	552.00
1266	920	16.00	(14.50+22.00)/2	292.00
1267	996	(12.00+14.80)/2	18.00	241.20
1268	1058	(14.50+11.00)/2	18.00	229.50
1269	1446	(17.50+11.00)/2	18.00	256.50

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.41,600/-

ಬನಶಂಕರಿ 6ನೇ ಹಂತ, 1ನೇ ಬ್ಲಾಕ್ ಬಡಾವಣೆ (ತೂರಹಳ್ಳಿ ಮತ್ತು ಹೆಮ್ಮಿಗೇಪುರ–2 ಗ್ರಾಮ)

1270	736	12.00	(5.00+4.60)/2	57.60

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.48,750/- ಸಂಪರ್ಕಿಸಿ: 9945208154

(3ನೇ ಫೇಸ್) ಎನ್‌ಪಿಕೆಎಲ್ ಬ್ಲಾಕ್–3

1271	1064B	9.00	6.00	54.00
1272	1064G	9.00	(5.90+5.80)/2	52.65
1273	1224	(13.20+11.20)/2	12.00	146.40
1274	1632	(9.90+7.50)/2	12.00	104.40
1275	1651	(12.00+9.60)/2	12.00	129.60
1276	1171	(14.20+16.70)/2	15.00	231.75
1277	1223	(9.70+7.70)/2	12.00	104.40
1278	1650	(14.20+16.50)/2	12.00	184.20

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.32,370/-

1279	1099M	(22.60+21.70)/2	18.00	398.70
1280	1099C	(13.20+13.00)/2	18.00	235.80
1281	3792	18.00	(13.00+11.00)/2	216.00

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ.35,100/-

1282	1156	24.00	(12.00+13.60)/2	307.20
1283	1147	24.00	(15.50+13.60)/2	345.60

ಆರಂಭಿಕ ಬಿಡ್ ದರ: ಚ.ಮೀಟರ್‌ಗೆ ರೂ. 37,050/- ಸಂಪರ್ಕಿಸಿ: 9448116927 / 9686727999

ಇ–ಹರಾಜಿನ ಸಾಮಾನ್ಯ ಷರತ್ತು ಮತ್ತು ನಿಯಮ–ನಿಬಂಧನೆಗಳು ಈ ಕೆಳಕಂಡಂತೆ ಇರುತ್ತವೆ.

1. ಹರಾಜಿನಲ್ಲಿ ಭಾಗವಹಿಸುವವರು ಭಾರತೀಯ ಪ್ರಜೆಯಾಗಿರಬೇಕು.
2. ಪ್ರತಿ ನಿವೇಶನಕ್ಕೆ ಇ.ಎಂ.ಡಿ ಮೊತ್ತ ರೂ. 4.00 ಲಕ್ಷಗಳನ್ನು (ರೂ.ನಾಲ್ಕು ಲಕ್ಷ ಮಾತ್ರ) ನಿಗದಿಗೊಳಿಸಿದ್ದು, ಸದರಿ ಮೊತ್ತವನ್ನು ಹಾಗೂ ಇ–ಹರಾಜಿನ ಶುಲ್ಕವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿರುವಂತೆ ಪಾವತಿ ಮಾಡಬೇಕು. **ಆದರೆ ಸದರಿ ಮೊತ್ತವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಖಾತೆಗೆ ಪಾವತಿಸಬಾರದು.**
3. ಯಶಸ್ವಿ ಬಿಡ್ಡುದಾರರಿಗೆ / ಅತಿ ಹೆಚ್ಚಿನ ಬಿಡ್ಡುದಾರರಿಗೆ ನಿವೇಶನದ ಒಟ್ಟು ಮೌಲ್ಯದ ಪೈಕಿ 25% ರಷ್ಟು ಮೌಲ್ಯದಲ್ಲಿ ಇ.ಎಂ.ಡಿ ಮೊತ್ತ ರೂ. 4.00 ಲಕ್ಷ ಕಡಿತಗೊಳಿಸಿ, ಬಾಕಿ ಮೌಲ್ಯವನ್ನು ಇ–ಹರಾಜು ಮುಕ್ತಾಯಗೊಂಡ ಅವಧಿಯ 72 ಘಂಟೆಯೊಳಗಾಗಿ (ಬ್ಯಾಂಕ್ ರಜೆಗಳನ್ನು ಹೊರತುಪಡಿಸಿ) ಕೆಳಕಂಡ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬ್ಯಾಂಕ್ ಖಾತೆಗೆ ಪಾವತಿ ಮಾಡಿ, ಚಲನ್ ಅನ್ನು ಆರ್ಥಿಕ ಶಾಖೆಯ ಲೆಕ್ಕಾಧಿಕಾರಿಯವರ ವಿಭಾಗಕ್ಕೆ ('ಡಿ' ಬ್ಲಾಕ್, 2ನೇ ಮಹಡಿ, ರೂಮ್.ನಂ.308) ನೀಡುವಂತೆ ಇ–ಮೇಲ್ ಮುಖಾಂತರ ಸೂಚನಾ ಪತ್ರವನ್ನು **(Advice Letter)** ಕಳುಹಿಸಲಾಗುವುದು.
ಒಂದು ವೇಳೆ ಸೂಚನಾ ಪತ್ರವು **(Advice Letter)** ತಲುಪದೇ ಇದ್ದಲ್ಲಿ, ಹರಾಜು ನಿವೇಶನದಾರರೇ ಶೇ.25ರಷ್ಟು ಮೌಲ್ಯವನ್ನು ಲೆಕ್ಕಾಚಾರ ಮಾಡಿ, ಮೇಲ್ಕಂಡಂತೆ ನಿಗದಿತ ಅವಧಿಯೊಳಗೆ ಪಾವತಿಸಬೇಕು ಅಥವಾ ಪ್ರಾಧಿಕಾರದ ಕೇಂದ್ರ ಕಛೇರಿಗೆ ಬಂದು ಸೂಚನಾ ಪತ್ರವನ್ನು ಪಡೆದು, ಮೇಲ್ಕಂಡಂತೆ ನಿಗದಿತ ಅವಧಿಯೊಳಗೆ ಪಾವತಿಸಬೇಕು.
ಬ್ಯಾಂಕ್‌ನ ಹೆಸರು:–ಕೆನರಾ ಬ್ಯಾಂಕ್, ಬಿಡಿಎ ಸಂಕೀರ್ಣ ಶಾಖೆ, ಕುಮಾರಕೃಪಾ ಪಶ್ಚಿಮ, ಬೆಂಗಳೂರು – 560020
ಉಳಿತಾಯ ಖಾತೆಯ ಹೆಸರು :– ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು
ಉಳಿತಾಯ ಖಾತೆ ಸಂಖ್ಯೆ :– 2828101053014 ಐ.ಎಫ್.ಎಸ್.ಸಿ ಕೋಡ್ :– CNRB0002828
ಪಾವತಿಯ ವಿಧಾನ :– ಆರ್.ಟಿ.ಜಿ.ಎಸ್ / ಎನ್.ಇ.ಎಫ್.ಟಿ
4. ಪ್ಯಾನ್ ಕಾರ್ಡ್‌ನ್ನು ಕಡ್ಡಾಯವಾಗಿ ಇ–ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು [ಗೆಜೆಟೆಡ್ ಅಧಿಕಾರಿ/ ನೋಟರಿಯಿಂದ / ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು].
5. ಯಶಸ್ವಿ ಬಿಡ್ಡುದಾರರು ಶೇ.25 ರಷ್ಟು ಬಿಡ್ ಹಣವನ್ನು ಪಾವತಿಸಿದ ಬಳಿಕ ಉಳಿದ ಶೇ.75ರಷ್ಟು ಹಣವನ್ನು ಬಿ.ಡಿ.ಎ ಯಿಂದ ಪತ್ರ ತಲುಪಿದ 45 ದಿನಗಳೊಳಗಾಗಿ ಪಾವತಿಸತಕ್ಕದು.
6. ಯಶಸ್ವಿಯಾಗದ ಬಿಡ್ಡುದಾರರಿಗೆ EMD ಹಣ 4 ಲಕ್ಷ ರೂ.ಗಳನ್ನು ಒಂದು ತಿಂಗಳ ಒಳಗಾಗಿ ಅವರ ಖಾತೆಗೆ ಹಿಂತಿರುಗಿಸಲಾಗುವುದು.
7. **ಇನ್ನಿತರೆ ಸಾಮಾನ್ಯ ಷರತ್ತು ಮತ್ತು ನಿಯಮ-ನಿಬಂಧನೆಗಳಿಗೆ ನಮ್ಮ ವೆಬ್‌ಸೈಟ್ : www.bdabangalore.org** ಗೆ ಭೇಟಿ ನೀಡಿ.

ಇನ್ನಿತರೆ ಸಾಮಾನ್ಯ ಷರತ್ತು ಮತ್ತು ನಿಯಮ-ನಿಬಂಧನೆಗಳಿಗೆ ನಮ್ಮ ವೆಬ್‌ಸೈಟ್ : www.bdabangalore.org / ಬಿಡ್ಡಿಂಗ್‌ಗಾಗಿ https://eproc.karnataka.gov.in

ಬಿಡಿಎ ನಿವೇಶನ ವಿವರಗಳಿಗೆ ಸಂಬಂಧಿಸಿದಂತೆ 080–23368435 / 23368036 ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನ ತಾಂತ್ರಿಕ ವಿಚಾರಣೆಗೆ ಸಂಬಂಧಿಸಿದಂತೆ 080–46010000 / 22631200 ಸಂಪರ್ಕಿಸಿ ನಂ. ಬೆಂಅಪ್ರಾ / ಅಸ / ಇ–ಹರಾಜು / ಟಿ–03 / 2022–23 ದಿನಾಂಕ : 14.07.2022 ಸಹಿ/– ಅಭಿಯಂತರ ಸದಸ್ಯರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560 020.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬ್ಯಾಂಕ್ ವ್ಯವಸ್ಥಾಪಕನಿಗೆ ₹62 ಲಕ್ಷ ವಂಚನೆ

ಹುಬ್ಬಳ್ಳಿ: ಇಲ್ಲಿನ ಸ್ಟೇಷನ್ ರಸ್ತೆಯ ಕೆನರಾ ಬ್ಯಾಂಕ್‌ನ ವ್ಯವಸ್ಥಾಪಕ ಶಂಕರ ಮಿಶ್ರಾ ಅವರಿಗೆ ಬ್ಯಾಂಕ್ ಗ್ರಾಹಕನೆಂದು ಕರೆ ಮಾಡಿ ಸಂದೇಶ ಕಳುಹಿಸಿದ ವ್ಯಕ್ತಿ, ಅವರಿಂದಲೇ ಉದ್ಯಮಿಯೊಬ್ಬರ ಖಾತೆಯಲ್ಲಿದ್ದ ₹62.30 ಲಕ್ಷ ವರ್ಗಾಯಿಸಿಕೊಂಡು ವಂಚಿಸಿದ್ದಾನೆ.

ಬ್ಯಾಂಕ್ ವ್ಯವಸ್ಥಾಪಕ ಶಂಕರ ಅವರಿಗೆ ವಂಚಕ, ಬ್ಯಾಂಕ್‌ನಲ್ಲಿ ಖಾತೆಯಿದ್ದ ಸುಭಾಸ್ ಜವಳಿ ಹೆಸರಲ್ಲಿ ಕರೆ ಮಾಡಿದ್ದಾನೆ. ವ್ಯವಹಾರದಲ್ಲಿ ಹಣದ ಅಗತ್ಯವಿದ್ದು, ತುರ್ತಾಗಿ ವರ್ಗಾಯಿಸಬೇಕು ಎಂದು ಹೇಳಿದ್ದ. ನಂತರ ನಕಲಿ ಜಿ-ಮೇಲ್ ಐಡಿಯಿಂದ ಹಣದ ಅಗತ್ಯವಿರುವ ಕುರಿತು ಸಂದೇಶ ಕಳುಹಿಸಿದ್ದ. ಅದನ್ನು ಪರಿಶೀಲಿಸಿದಾಗ ಅದರಲ್ಲಿರುವ ಸುಭಾಸ್ ಅವರ ಸಹಿಗೂ, ಬ್ಯಾಂಕ್‌ನಲ್ಲಿರುವ ಸಹಿಗೂ ಹೋಲಿಕೆಯಾಗಿತ್ತು. ಅದನ್ನು ನಂಬಿ ಅವರು ವಂಚಕ ಹೇಳಿದ್ದ ಖಾತೆಗೆ ಹಣ ವರ್ಗಾಯಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಹುಬ್ಬಳ್ಳಿ ಸೈಬರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಹಣ, ಚಿನ್ನಾಭರಣ ಸುಲಿಗೆ • ಆರೋಪಿಗಳ ಬಂಧನ

ಅರೆನಗ್ನ ದೃಶ್ಯ ಚಿತ್ರೀಕರಿಸಿ ಬೆದರಿಕೆ

ಪ್ರಜಾವಾಣಿ ವಾರ್ತೆ

ರವಿ

ಶ್ರೀನಿವಾಸ್

ಮಂಗಳಾ

ಶಿವಕುಮಾರ್

ಬೆಂಗಳೂರು: ಕೆಲಸ ಕೊಡಿಸುವ ನೆಪದಲ್ಲಿ ಯುವತಿಯರು ಹಾಗೂ ಗೃಹಿಣಿಯರನ್ನು ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಬಟ್ಟೆ ತೆಗೆಸಿ ಅರೆನಗ್ನ ದೃಶ್ಯ ಚಿತ್ರೀಕರಿಸಿ, ಸುಲಿಗೆ ಮಾಡುತ್ತಿದ್ದ ಮಹಿಳೆ ಸೇರಿ ನಾಲ್ವರು ಆರೋಪಿಗಳನ್ನು ಮಹಾಲಕ್ಷ್ಮಿಲೇಔಟ್ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ನಗರದ ಚಿಕ್ಕಗೊಲ್ಲರಹಟ್ಟಿಯ ನಿವಾಸಿಗಳಾದ ರವಿ, ಆತನ ಪತ್ನಿ ಮಂಗಳಾ, ಶ್ರೀನಿವಾಸ್ ಹಾಗೂ ಆತನ ಸಹೋದರ ಶಿವಕುಮಾರ ಬಂಧಿತರು. ರವಿ, ಮಂಗಳಾ ಉತ್ತರಹಳ್ಳಿಯ ಬಿಜಿಎಸ್ ಆಸ್ಪತ್ರೆಯಲ್ಲಿ ಸ್ವಚ್ಛತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರು. ಸಹೋದರರು ಗ್ಯಾಸ್ ಸಿಲಿಂಡರ್ ವಿತರಕರಾಗಿ ಕೆಲಸ ಮಾಡುತ್ತಿದ್ದರು.

'ಮೂರು ತಿಂಗಳಿಂದ ಈ ತಂಡವು

ಅಪರಾಧ ಸುದ್ದಿ

ನಗರದ ವಿವಿಧ ಬಡಾವಣೆಗಳಲ್ಲಿ ನಿರುದ್ಯೋಗಿ ಮಹಿಳೆಯರನ್ನು ಪತ್ತೆಹಚ್ಚಿ ಅವರ ಮನೆಗೆ ತೆರಳಿ ಕೆಲಸ ಕೊಡಿಸುವ ನಾಟಕವಾಡುತ್ತಿತ್ತು. ಕಂಪನಿಗೆ ಸಂಬಂಧಿಸಿದ ಮುಖ್ಯಸ್ಥರನ್ನು ಭೇಟಿ ಮಾಡಿಸುವ ನೆಪದಲ್ಲಿ ಮಹಿಳೆಯರು, ಯುವತಿಯರನ್ನು ನೆಲಮಂಗಲ, ಸೊಂಡೆಕೊಪ್ಪ, ತಾವರೆಕೆರೆಯ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಅಲ್ಲಿ ಅವರನ್ನು ಅರೆ ನಗ್ನಗೊಳಿಸಿ ವಿಡಿಯೊ ಚಿತ್ರೀಕರಿಸುತ್ತಿದ್ದರು. ಹಣ ನೀಡದಿದ್ದರೆ ಸಾಮಾಜಿಕ ಮಾಧ್ಯಮಕ್ಕೆ ವಿಡಿಯೊ ಹರಿಯಬಿಡುವ ಬೆದರಿಕೆ ಒಡ್ಡುತ್ತಿದ್ದರು' ಎಂದು ಮೂಲಗಳು ತಿಳಿಸಿವೆ.

'ಬಂಧಿತರಿಂದ ₹1.2 ಲಕ್ಷದ ಚಿನ್ನಾಭರಣ, ₹70 ಸಾವಿರ ನಗದು, ಎ.ಟಿ.ಎಂ ಕಾರ್ಡ್ 1, ಕಾರು, ಮೂರು ಮೊಬೈಲ್, ಚಾಕು, ಕಬ್ಬಿಣದ ಪೈಪ್, ಬ್ಯಾಟ್ ವಶಕ್ಕೆ ಪಡೆಯಲಾಗಿದೆ.'

'ಈ ತಂಡವು ಇದೇ ರೀತಿಯ ಹಲವು ಕೃತ್ಯಗಳಲ್ಲಿ ಭಾಗಿಯಾಗಿತ್ತು. ಆದರೆ, ಮರ್ಯಾದೆಗೆ ಅಂಜಿದ್ದ ಆ ಮಹಿಳೆಯರು ದೂರು ನೀಡಿರಲಿಲ್ಲ. ಆದರೆ, ಜುಲೈ 20ರಂದು ಮಹಿಳೆಯೊಬ್ಬರು ನೀಡಿದ್ದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಬಂಧಿಸಲಾಯಿತು. ಆ ಮಹಿಳೆಯನ್ನು ತಾವರಕೆರೆಯ ನಿರ್ಜನ ಪ್ರದೇಶಕ್ಕೆ ಕಾರಿನಲ್ಲಿ ಕರೆದೊಯ್ದಿದ್ದ ಆರೋಪಿಗಳು 15 ಗ್ರಾಂ ಚಿನ್ನದ ಸರ, ಎರಡು ಚಿನ್ನದ ಓಲೆ, ಎರಡು ಉಂಗುರ, ಫೋನ್ ಪೇ ಮೂಲಕ ₹ 84 ಸಾವಿರ ವರ್ಗಾವಣೆ ಮಾಡಿಕೊಂಡಿದ್ದರು. ಎಟಿಎಂ ಸಹ ಕಸಿದುಕೊಂಡು ಬೆದರಿಕೆ ಹಾಕಿ ಪಿನ್ ಸಂಖ್ಯೆ ಪಡೆದು ಕರ್ನಾಟಕ ಬ್ಯಾಂಕ್ ಖಾತೆಯಿಂದ ₹ 40 ಸಾವಿರ ಹಣ ಡ್ರಾ ಮಾಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನೀರಿನ ಕ್ಯಾನ್ ಮಾರಾಟದ ನೆಪದಲ್ಲಿ ಗಾಂಜಾ ಪೂರೈಕೆ

ಬೆಂಗಳೂರು: ನೀರಿನ ಕ್ಯಾನ್ ಮಾರಾಟದ ನೆಪದಲ್ಲಿ ಗಾಂಜಾ ವ್ಯಾಪಾರ ನಡೆಸುತ್ತಿದ್ದ ಆಂಧ್ರಪ್ರದೇಶದ ಚಿತ್ತೂರಿನ ಗ್ರಾಮದ ಆರ್. ಧನುಷ್ ಎಂಬ ಆರೋಪಿಯನ್ನು ಬ್ಯಾಡರಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಬಂಧಿತ ಲಗ್ಗೆರೆ ಸಮೀಪದ ಕಾವೇರಿ ನಗರದಲ್ಲಿ ವಾಸಿಸುತ್ತಿದ್ದ. ಆರೋಪಿಯಿಂದ 930 ಗ್ರಾಂ ಗಾಂಜಾ, ₹ 1,400 ನಗದು ವಶ ಪಡಿಸಿಕೊಳ್ಳಲಾಗಿದೆ. ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

₹1.30 ಲಕ್ಷ ಲಂಚ: ಬೆಸ್ಕಾಂ ಎಇ ಎಸಿಬಿ ಬಲೆಗೆ

ಬೆಂಗಳೂರು: ಮಾರಪ್ಪ ಗಾರ್ಡನ್ ಪ್ರದೇಶದಲ್ಲಿನ ಕಟ್ಟಡವೊಂದಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ₹ 1.30 ಲಕ್ಷ ಲಂಚ ಪಡೆದ ಆರೋಪದ ಮೇಲೆ ಬೆಸ್ಕಾಂ ಬೆನ್ಸನ್ ಟೌನ್ ಕಾರ್ಯಾಚರಣೆ ಮತ್ತು ನಿರ್ವಹಣೆ ವಿಭಾಗದ ಕಿರಿಯ ಎಂಜಿನಿಯರ್ ಹನುಮಂತಪ್ಪ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಭಾನುವಾರ ಬಂಧಿಸಿದೆ.

ಮಾರಪ್ಪ ಗಾರ್ಡನ್ ಪ್ರದೇಶದಲ್ಲಿ ವ್ಯಕ್ತಿಯೊಬ್ಬರು ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಕೋರಿ ಆರ್.ಟಿ. ನಗರದ ನಿವಾಸಿಯಾಗಿರುವ ವಿದ್ಯುತ್ ಗುತ್ತಿಗೆದಾರರೊಬ್ಬರು ಬೆನ್ಸನ್ ಟೌನ್‌ನಲ್ಲಿರುವ ಬೆಸ್ಕಾಂ ಕಚೇರಿಗೆ 2021ರ ಅಕ್ಟೋಬರ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ನಂತರ ಆರೋಪಿ ಅಧಿಕಾರಿಯನ್ನು ಭೇಟಿಮಾಡಿ ಅರ್ಜಿಯ ಕುರಿತು ವಿಚಾರಿಸಿದಾಗ, ₹3 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ಪುನಃ ಮತ್ತೆ ಮಾತುಕತೆ ನಡೆಸಿದ್ದು, ₹ 1.60 ಲಂಚ ಕೊಟ್ಟರೆ ವಿದ್ಯುತ್ ಸಂಪರ್ಕ ಕಲ್ಪಿಸುವುದಾಗಿ ಹನುಮಂತಪ್ಪ ತಿಳಿಸಿದ್ದರು. ಈ ಕುರಿತು ಗುತ್ತಿಗೆದಾರರು ಎಸಿಬಿ ಬೆಂಗಳೂರು ನಗರ ಘಟಕಕ್ಕೆ ದೂರು ನೀಡಿದ್ದರು.

ಗುತ್ತಿಗೆದಾರರಿಂದ ಭಾನುವಾರ ₹ 1.30 ಲಕ್ಷ ಲಂಚ ಪಡೆಯುತ್ತಿದ್ದಾಗ ದಾಳಿಮಾಡಿದ ಎಸಿಬಿ ಅಧಿಕಾರಿಗಳು, ಹನುಮಂತಪ್ಪ ಅವರನ್ನು ಬಂಧಿಸಿದರು. ಆರೋಪಿಯ ವಿಚಾರಣೆ ಮುಂದುವರಿದಿದೆ ಎಂದು ಎಸಿಬಿ ತಿಳಿಸಿದೆ.

ರೈಲಿನಲ್ಲಿ ₹80 ಲಕ್ಷದ ಗಾಂಜಾ ಸಾಗಣೆ

ಬೆಂಗಳೂರು: ರೈಲಿನಲ್ಲಿ ಭುವನೇಶ್ವರದಿಂದ ಬೆಂಗಳೂರಿಗೆ ಗಾಂಜಾ ಸಾಗಿಸುತ್ತಿದ್ದ ಒಡಿಶಾದ ತಾಪನ್ ಕುಮಾರ್ (29) ಎಂಬ ಆರೋಪಿ ಬಂಧಿಸಿ, ₹ 80 ಲಕ್ಷ ಮೌಲ್ಯದ ಗಾಂಜಾವನ್ನು ರೈಲ್ವೆ ಪೊಲೀಸರು ವಶಪಡಿಸಿಕೊಂಡಿದ್ದಾರೆ.

8 ಬ್ಯಾಗ್‌ಗಳಲ್ಲಿ 80.67 ಕೆ.ಜಿ ತೂಕದಷ್ಟು ಗಾಂಜಾವನ್ನು ಪೆಡ್ಲರ್‌ಗಳಿಗೆ ಪೂರೈಸಲು ಹೊರರಾಜ್ಯದಿಂದ ತರುತ್ತಿದ್ದ. ಬ್ಯಾಗ್‌ನಲ್ಲಿ ಗಾಂಜಾ ಗಿಡದ ಎಲೆಗಳು ಹಾಗೂ ಹೂವುಗಳು ಇದ್ದವು ಎಂದು ಮೂಲಗಳು ತಿಳಿಸಿವೆ.

ರೈಲು ನಿಲ್ದಾಣದಲ್ಲಿ ಅನುಮಾನಗೊಂಡು ಆರೋಪಿಯನ್ನು ವಶಕ್ಕೆ ಪಡೆದು ಬ್ಯಾಗ್ ತಪಾಸಣೆ ನಡೆಸಿದಾಗ ಗಾಂಜಾ ಸಾಗಣೆ ಮಾಡುತ್ತಿರುವುದು ಬೆಳಕಿಗೆ ಬಂದಿದೆ.

ಉಪನ್ಯಾಸ ಕಾರ್ಯಕ್ರಮದಲ್ಲಿ ಆರ್ಥಿಕ ತಜ್ಞ ಪ್ರೊ. ವೆಂಕಟೇಶ್ ಬಿ. ಆತ್ರೇಯ ಅಭಿಮತ

ಕಾರ್ಪೊರೇಟ್ ಹಿಂದುತ್ವದ ವಿರುದ್ಧವೂ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಂಸ್ಕೃತಿಕ ಹಿಂದುತ್ವದಷ್ಟೇ ಕಾರ್ಪೊರೇಟ್ ಹಿಂದುತ್ವವೂ ಅಪಾಯಕಾರಿ. ಜನರನ್ನು ಆರ್ಥಿಕವಾಗಿ ಕುಗ್ಗಿಸುವ ಕಾರ್ಪೊರೇಟ್ ಹಿಂದುತ್ವದ ವಿರುದ್ಧವೂ ಪ್ರಬಲ ಹೋರಾಟ ಅಗತ್ಯವಾಗಿದೆ ಎಂದು ಆರ್ಥಿಕ ತಜ್ಞ ಪ್ರೊ. ವೆಂಕಟೇಶ್ ಬಿ. ಆತ್ರೇಯ ಹೇಳಿದರು.

ಮಾ-ಲೆ ಪ್ರಕಾಶನ ಮತ್ತು ಸಮಕಾಲೀನ ಸಾಮಾಜಿಕ ಸಾಂಸ್ಕೃತಿಕ ವೇದಿಕೆ ಸಂಯುಕ್ತವಾಗಿ ನಗರದ ಬಿಎಂಶ್ರೀ ಪ್ರತಿಷ್ಠಾನದಲ್ಲಿ ಭಾನುವಾರ ಆಯೋಜಿಸಿದ್ದ ದೇವಿಪ್ರಸಾದ್ ಚಟ್ಟೋಪಾಧ್ಯಾಯ ಸ್ಮಾರಕ ಉಪನ್ಯಾಸದಲ್ಲಿ 'ಸ್ವಾತಂತ್ರ್ಯದ ಅಮೃತ ಮಹೋತ್ಸವ– ದೇಶದ ಇಂದಿನ ರಾಜಕೀಯ ಅರ್ಥ ವ್ಯವಸ್ಥೆ' ಕುರಿತು ಅವರು ಮಾತನಾಡಿದರು.

ಬೆಂಗಳೂರಿನ ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿ ಭಾನುವಾರ ನಡೆದ ದೇವಿಪ್ರಸಾದ್ ಚಟ್ಟೋಪಾಧ್ಯಾಯ ಸ್ಮಾರಕ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾ–ಲೆ ಪ್ರಕಾಶನದ ಡಾ.ಜಿ. ರಾಮಕೃಷ್ಣ, ಆರ್ಥಿಕ ತಜ್ಞ ಪ್ರೊ. ವೆಂಕಟೇಶ್ ಬಿ. ಆತ್ರೇಯ, ಕೆ.ಎಸ್. ಪಾರ್ಥಸಾರಥಿ ಮತ್ತು ಸಮಕಾಲೀನ ಸಾಮಾಜಿಕ ಸಾಂಸ್ಕೃತಿಕ ವೇದಿಕೆಯ ಡಾ.ಬಿ. ಆರ್. ಮಂಜುನಾಥ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

'ಜಾತಿ ಮತ್ತು ಧರ್ಮದ ಹೆಸರಿನಲ್ಲಿ ವಿಷ ಬೀಜ ಬಿತ್ತಿ ಸಮಾಜವನ್ನು ವಿಭಜಿಸುವ ಕೋಮುವಾದಿ ರಾಜಕಾರಣದ ಜತೆಯಲ್ಲೇ ಕಾರ್ಪೊರೇಟ್ ಕ್ಷೇತ್ರವನ್ನು ಬಲಗೊಳಿಸುವ ಹುನ್ನಾರವೂ ಸದ್ದಿಲ್ಲದೆ ನಡೆಯುತ್ತಿದೆ. ಈ ಎರಡೂ ಹಿಂದುತ್ವದ ಭಾಗವಾಗಿಯೇ ಇವೆ. ಎರಡರ ವಿರುದ್ಧವೂ ಏಕಕಾಲಕ್ಕೆ ಹೋರಾಟ ಮಾಡುವುದಕ್ಕೆ ಜನರು ಸಜ್ಜಾಗಬೇಕಿದೆ' ಎಂದರು.

ಜಾಗತೀಕರಣದ ಹೆಸರಿನಲ್ಲಿ ನಡೆಯುವ ರಫ್ತು ಮತ್ತು ಆಮದು ಚಟುವಟಿಕೆಗಳಿಂದ ಜನರಿಗೆ ಹೊರೆಯಾಗುತ್ತಿದೆ. ಗರಿಷ್ಠ ಪ್ರಮಾಣದ ಬಡ್ಡಿದರ, ತೆರಿಗೆ ಏರಿಕೆಯೂ ಸಾಮಾನ್ಯ ಜನರ ಬದುಕನ್ನು ಹೈರಾಣ ಮಾಡುತ್ತಿವೆ. ಕೋವಿಡ್ ಅವಧಿಯಲ್ಲಿ ಜನರಿಗೆ ಲಕ್ಷಾಂತರ ಕೋಟಿ ರೂಪಾಯಿ ನೆರವು ನೀಡುವುದಾಗಿ ಕೇಂದ್ರ ಸರ್ಕಾರ ಘೋಷಿಸಿತ್ತು. ಆದರೆ, ಅದರ ಪ್ರಮಾಣ ದೇಶದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇಕಡ 1 ರಷ್ಟೂ ಇರಲಿಲ್ಲ ಎಂದು ಹೇಳಿದರು.

ನೋಟುಗಳ ಅಮಾನ್ಯೀಕರಣ ದೇಶದಲ್ಲಿ ಭ್ರಷ್ಟಾಚಾರ ಮತ್ತು ಕಪ್ಪು ಹಣವನ್ನು ಸಂಪೂರ್ಣ ನಿರ್ಮೂಲನೆ ಮಾಡುತ್ತದೆ ಎಂಬ ಭರವಸೆ ನೀಡಲಾಗಿತ್ತು. ಆದರೆ, ಶೇ 6ರಷ್ಟು ಕಪ್ಪು ಹಣ ಮಾತ್ರ ಪತ್ತೆಯಾಗಿದೆ. ಭ್ರಷ್ಟಾಚಾರ ಕಡಿಮೆ ಆಗಿಲ್ಲ ಎಂದರು.

2011–12ಕ್ಕೆ ಹೋಲಿಸಿದರೆ ದೇಶದ ಗ್ರಾಮೀಣ ಪ್ರದೇಶದಲ್ಲಿ ಬಳಕೆ ವೆಚ್ಚದ ಪ್ರಮಾಣವು ಶೇ 9ಕ್ಕೆ ಕುಸಿದಿದೆ. ಇದು ಭಾರತದ ಗ್ರಾಮೀಣ ಪ್ರದೇಶದ ಜನರ ಖರೀದಿ ಶಕ್ತಿ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿರುವುದಕ್ಕೆ ಸಾಕ್ಷಿ ಎಂದು ಆತ್ರೇಯ ಹೇಳಿದರು.

ಮಾ-ಲೆ ಪ್ರಕಾಶನದ ಡಾ.ಜಿ. ರಾಮಕೃಷ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೆ.ಎಸ್. ಪಾರ್ಥ ಸಾರಥಿ ಅಧ್ಯಕ್ಷತೆ ವಹಿಸಿದ್ದರು. ಸಮಕಾಲೀನ ಸಾಮಾಜಿಕ ಸಾಂಸ್ಕೃತಿಕ ವೇದಿಕೆಯ ಡಾ.ಬಿ.ಆರ್. ಮಂಜುನಾಥ್ ಉಪಸ್ಥಿತರಿದ್ದರು.

ಸಂಕ್ಷಿಪ್ತ ಸುದ್ದಿ

ಸ್ವ–ಸಹಾಯ ಗುಂಪುಗಳಿಗೆ ಸಬಲೀಕರಣ ಭಾಗ್ಯ

ಬೆಂಗಳೂರು: ರಾಜ್ಯದ 2,500 ಸ್ವಸಹಾಯ ಗುಂಪುಗಳ ಸಬಲೀಕರಣಕ್ಕಾಗಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಮಿಷನ್– ಸಂಜೀವಿನಿ (ಕೆಎಸ್‌ಆರ್‌ಎಲ್‌ಪಿಎಸ್) ಮತ್ತು ಇ-ಕಾಮರ್ಸ್ ಸಂಸ್ಥೆ ಮೀಶೊ ಮಧ್ಯೆ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯ ಸರ್ಕಾರ ಸ್ತ್ರೀ ಸಾಮರ್ಥ್ಯ ಯೋಜನೆ ಪ್ರಾರಂಭಿಸಿದೆ. ಇದರಿಂದ ರಾಜ್ಯದ ಸ್ತ್ರೀಯರ ಸಾಮರ್ಥ್ಯ ಜಗತ್ತಿಗೆ ತಿಳಿಯಲಿದೆ. ಗ್ರಾಮೀಣ ಮಹಿಳೆಯರ ಸಬಲೀಕರಣದ ಸರ್ಕಾರದ ಈ ಪ್ರಯತ್ನದಲ್ಲಿ ಕೆನರಾ ಬ್ಯಾಂಕ್ ಸಹ ಕೈಜೋಡಿಸಿರುವುದು ಸ್ವಾಗತಾರ್ಹ. ಎಲಿವೇಟ್ ಯೋಜನೆಯಡಿಯಲ್ಲಿಯೂ ಸ್ವಸಹಾಯ ಸಂಘಗಳಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ನೆರವು ಒದಗಿಸಲಾಗುತ್ತಿದೆ ಎಂದರು.

ಸಚಿವರಾದ ಆರಗ ಜ್ಞಾನೇಂದ್ರ, ಸಿ.ಎನ್.ಅಶ್ವತ್ಥ್ ನಾರಾಯಣ, ಬಿ.ಎ.ಬಸವರಾಜ, ಬಿ.ಶ್ರೀರಾಮುಲು, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ರಾಷ್ಟ್ರೀಯ ಜೀವನೋಪಾಯ ಮಿಷನ್ ನಿರ್ದೇಶಕಿ ಮಂಜುಶ್ರೀ, ಮೀಶೊ ಸಂಸ್ಥಾಪಕ ವಿದಿತ್ ಆತ್ರೇಯ, ಸಿಎಫ್‌ಒ ಧೀರೇಶ್ ಬನ್ಸಾಲ್, ಕೆನರಾ ಬ್ಯಾಂಕ್‌ನ ಬೇಂದರ್ ಸಾಹು ಉಪಸ್ಥಿತರಿದ್ದರು.

'ಸಾಂವಿಧಾನಿಕ ಹಕ್ಕು, ಕರ್ತವ್ಯದ ಜಾಗೃತಿ ಅಗತ್ಯ'

ರಾಯಪುರ (ಪಿಟಿಐ): 'ಸಂವಿಧಾನದಲ್ಲಿ ನೀಡಿರುವ ಹಕ್ಕುಗಳ ಕುರಿತು ನಾಗರಿಕರು ಜಾಗೃತರಾದಾಗ ಮಾತ್ರ ಸಂವಿಧಾನತ್ಮಕ ಗಣರಾಜ್ಯದ ಅಭಿವೃದ್ಧಿ ಸಾಧ್ಯ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಭಾನುವಾರ ಅಭಿಪ್ರಾಯಪಟ್ಟರು.

'ಪ್ರತಿಯೊಬ್ಬ ನಾಗರಿಕನಿಗೂ ತನ್ನ ಕರ್ತವ್ಯ ಮತ್ತು ಹಕ್ಕುಗಳ ಕುರಿತು ಅರಿವು ಇರಬೇಕು. ಸರಳವಾಗಿ ಇವುಗಳನ್ನು ಜನರಿಗೆ ಮನನ ಮಾಡಿಕೊಡಬೇಕಾದ ಹೊಣೆಗಾರಿಕೆ ಕಾನೂನು ಪದವೀಧರರದ್ದಾಗಿದೆ. ಇಲ್ಲಿನ, ಹಿದಾಯತ್‌ಉಲ್ಲಾ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ (ಎನ್‌ಎನ್‌ಎಲ್‌ಯು) 5ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ಸಾಮಾಜಿಕ ಬದಲಾವಣೆ ತರಲು ಕಾನೂನು ಕೂಡಾ ಒಂದು ಅಸ್ತ್ರ. ಕಾನೂನು ಪದವೀಧರರನ್ನು ಸಾಮಾಜಿಕ ಕಾರ್ಯಕರ್ತರಾಗಿಯೂ ರೂಪಿಸುವಂತೆ ಕಾನೂನು ಶಿಕ್ಷಣ ಇರಬೇಕು' ಎಂದರು.

ಕೆ.ಜಿ.ಎಫ್ ಬಾಬು ಪತ್ನಿ ಇಂದು ಹಾಜರು

ಅಕ್ರಮ ಹಣ ವರ್ಗಾವಣೆ ಪ್ರಕರಣ • ಇ.ಡಿಯಿಂದ ಸಮನ್ಸ್

ನವದೆಹಲಿ: ಕೆ.ಜಿ.ಎಫ್ ಬಾಬು ಎಂದೇ ಖ್ಯಾತರಾಗಿರುವ ಕಾಂಗ್ರೆಸ್ ಮುಖಂಡ ಯೂಸುಫ್ ಷರೀಫ್ ಅವರ ಪತ್ನಿ ಶಾಜಿಯಾ ತರನ್ನುಮ್ ಅವರು ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋಮವಾರ ಜಾರಿ ನಿರ್ದೇಶನಾಲಯದ (ಇ.ಡಿ) ಮುಂದೆ ಹಾಜರಾಗಲಿದ್ದಾರೆ.

'ಷರೀಫ್ ಅವರ ಆದಾಯದ ಮೂಲ ತಿಳಿದುಕೊಳ್ಳಲು ಶಾಜಿಯಾ ಅವರಿಗೆ ಸಮನ್ಸ್ ನೀಡಲಾಗಿದೆ' ಎಂದು ಇ.ಡಿ ಅಧಿಕಾರಿಗಳು ತಿಳಿಸಿದರು. ಕಳೆದ ತಿಂಗಳು ಇ.ಡಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಯೂಸುಫ್ ಅವರನ್ನು ಎರಡು ದಿನಗಳ ಕಾಲ ವಿಚಾರಣೆ ಮಾಡಿತ್ತು. ಯೂಸುಫ್ ಅವರ ಅಳಿಯ ಸಲ್ಮಾನ್ ಖಾನ್ ಕೂಡ ಒಂದು ದಿನ ವಿಚಾರಣೆಗೆ ಹಾಜರಾಗಿದ್ದರು.

'ಯೂಸುಫ್ ತಮ್ಮ ಹಣಕಾಸಿನ ವಹಿವಾಟಿನ ಕುರಿತು ಕೆಲವು ಪುಟಗಳ ಕೈಬರಹದ ಹೇಳಿಕೆಗಳನ್ನು ಸಲ್ಲಿಸಿದ್ದಾರೆ. ಆದರೆ, ಅವರ ಹಣ ಕಾಸಿನವಹಿವಾಟಿಗೆ ಸಂಬಂಧಿಸಿದ ದಾಖಲೆಗಳನ್ನು ಶೀಘ್ರದಲ್ಲೇ ಸಲ್ಲಿಸುವಂತೆ ಇ.ಡಿ ಅಧಿಕಾರಿಗಳು ಕೇಳಿದ್ದಾರೆ. ಅಗತ್ಯವಿದ್ದರೆ ಮತ್ತೆ ಅವರಿಗೆ ಸಮನ್ಸ್ ನೀಡಲಾಗುವುದು' ಎಂದು ಮೂಲಗಳು ತಿಳಿಸಿವೆ.

ಸಚಿವ ಆರ್.ಅಶೋಕ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಿದರು. ಸಂಸದ ಡಿ.ವಿ. ಸದಾನಂದ ಗೌಡ, ಶಾಸಕ ಕೃಷ್ಣಬೈರೇಗೌಡ, ಬೆಂಗಳೂರುನಗರ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್, ಬೆಂಗಳೂರು ಅಂತರರಾಷ್ಟ್ರೀಯ ವಿಮಾನನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎ.ರವಿ, ವಿಧಾನಪರಿಷತ್ ಸದಸ್ಯರಾದ ಗೋಪಿನಾಥರೆಡ್ಡಿ, ಅ.ದೇವೇಗೌಡ, ಬೆಂಗಳೂರು ಉತ್ತರ ಎ.ಸಿ ಡಾ.ಎಂ.ಜಿ.ಶಿವಣ್ಣ, ತಹಶೀಲ್ದಾರ್ ಕೆ.ನರಸಿಂಹಮೂರ್ತಿ, ದೊಡ್ಡಬಸವರಾಜು ಇದ್ದರು

ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ

ಯಲಹಂಕ: ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸರ್ಕಾರಿ ಜಾಗಗಳಲ್ಲಿ ಅನಧಿಕೃತವಾಗಿ ಮನೆ ನಿರ್ಮಿಸಿಕೊಂಡು ಹಲವು ವರ್ಷಗಳಿಂದ ವಾಸಿಸುತ್ತಿರುವ ಬಡವರಿಗೆ ಎರಡು ತಿಂಗಳ ಒಳಗೆ 94'ಸಿಸಿ' ಅಡಿಯಲ್ಲಿ 15 ಸಾವಿರ ಜನರಿಗೆ ಶಾಶ್ವತ ಹಕ್ಕುಪತ್ರ ನೀಡಲು ಜಿಲ್ಲಾಧಿಕಾರಿಗಳಿಗೆ ತಕ್ಷಣ ಆದೇಶ ಮಾಡಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ವಿದ್ಯಾರಣ್ಯಪುರದಲ್ಲಿ ಆಯೋಜಿಸಿದ್ದ ಹಕ್ಕುಪತ್ರಗಳ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಳ್ಳಿಗಾಡುಗಳಲ್ಲಿ ಡೀಮ್ಡ್ ಅರಣ್ಯ ಪ್ರದೇಶದಲ್ಲಿ ಉಳುಮೆ ಮಾಡುತ್ತಿದ್ದ ರೈತರನ್ನು ಅರಣ್ಯ ಇಲಾಖೆಯವರು ಒಕ್ಕಲೆಬ್ಬಿಸುತ್ತಿದ್ದರು. ಈಗ ಸುಮಾರು 6 ಲಕ್ಷ ಹೆಕ್ಟೇರ್ ಜಮೀನನ್ನು ಕಂದಾಯ ಇಲಾಖೆಗೆ ವಾಪಸ್ ಪಡೆದು, ಇದನ್ನೇ ನಂಬಿಕೊಂಡು ಉಳುಮೆ ಮಾಡುತ್ತಿರುವ ಬಡ ರೈತರಿಗೆ 15 ಲಕ್ಷ ಎಕರೆ ಜಮೀನನ್ನು ನೀಡಲಾಗುತ್ತಿದೆ' ಎಂದರು.

ಶಾಸಕ ಕೃಷ್ಣಬೈರೇಗೌಡ ಮಾತನಾಡಿ, ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 4 ಸಾವಿರ ಜನರು ಸರ್ಕಾರಿ ಜಾಗಗಳಲ್ಲಿ ಅನಧಿಕೃತವಾಗಿ ಮನೆಗಳನ್ನು ನಿರ್ಮಿಸಿಕೊಂಡಿದ್ದರು. ಈ ಹಿಂದೆ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಕಾನೂನಿಗೆ ತಿದ್ದುಪಡಿ ತಂದು ತಮ್ಮ ಮನೆಗಳಿಗೆ 94ಸಿಸಿ ಅಡಿಯಲ್ಲಿ ಹಕ್ಕುಪತ್ರ ಪಡೆದುಕೊಳ್ಳಲು ಅರ್ಜಿ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗಿತ್ತು. ಅದರಂತೆ 1,035 ಬಡವರಿಗೆ ಹಕ್ಕುಪತ್ರ ವಿತರಿಸಲಾಗಿದೆ' ಎಂದರು.

ಚಿತ್ರಾವಳಿ

ಪೂರ್ಣಪ್ರಜ್ಞಾ ಕಾಲೇಜಿನಲ್ಲಿ ಆಯೋಜಿಸಿದ್ದ 'ಅಂತರ ಕಾಲೇಜು ವಾಲಿಬಾಲ್ ಟೂರ್ನಿ'ಯ ಬಾಲಕರ ವಿಭಾಗದಲ್ಲಿ ಸೌಂದರ್ಯ ಪದವಿ ಪೂರ್ವ ಕಾಲೇಜು ಮತ್ತು ಬಾಲಕಿಯರ ವಿಭಾಗದಲ್ಲಿ ಮೌಂಟ್ ಕಾರ್ಮೆಲ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಪ್ರಥಮ ಪ್ರಶಸ್ತಿ ಪಡೆದುಕೊಂಡವು. ಪೂರ್ಣಪ್ರಜ್ಞಾ ಕಾಲೇಜಿನ ಪ್ರಾಂಶುಪಾಲ ಗುರುರಾಜ್.ಎಸ್. ದಾವಣಗೆರೆ ಇದ್ದಾರೆ

ನಗರದ ಅಭಿನಯ ಚಿತ್ರಮಂದಿರದ ಬಿವಿಕೆ ಅಯ್ಯಂಗಾರ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಕೇಬಲ್‌ಗಳು ಬಿದ್ದಿರುವುದರಿಂದ ಸಾರ್ವಜನಿಕರು ಓಡಾಡಲು ಪ್ರಯಾಸ ಪಡುತ್ತಿರುವುದು – ಪ್ರಜಾವಾಣಿ ಚಿತ್ರ

ಕನಿಷ್ಠ ಬೆಂಬಲ ಬೆಲೆ ಕಾನೂನು ಜಾರಿ ವಿಳಂಬ ಖಂಡಿಸಿ, ಸಂಯುಕ್ತ ಹೋರಾಟ ಸಮಿತಿಯ ಕಾರ್ಯಕರ್ತರು ನಗರದಲ್ಲಿ ಭಾನುವಾರ 'ದ್ರೋಹ ದಿವಸ್' ಪ್ರತಿಭಟನೆ ನಡೆಸಿದರು

ಪರಿಶಿಷ್ಟ ಕುಟುಂಬಗಳಿಂದ ದಯಾಮರಣಕ್ಕೆ ಅರ್ಜಿ

ಕಳಸ: ಭೂವಿವಾದಕ್ಕೆ ಸಂಬಂಧಿಸಿದಂತೆ ತಾಲ್ಲೂಕಿನ ಕಲ್ಲುಕುಡಿಗೆ ಪ್ರದೇಶದ ಮೂರು ಪರಿಶಿಷ್ಟ ಕುಟುಂಬಗಳವರು ದಯಾ ಮರಣಕ್ಕೆ ಅರ್ಜಿ ಸಲ್ಲಿಸಿದ್ದಾರೆ.

ಕೆ.ಆರ್. ರಾಘವ, ಕೆ.ಆರ್. ವಿದ್ಯಾನಂದ, ಕೆ.ಆರ್. ಗಣೇಶ ಎಂಬುವರು ರಾಷ್ಟ್ರಪತಿ, ಪ್ರಧಾನಿ, ಮುಖ್ಯಮಂತ್ರಿಗೆ ದಯಾ ಮರಣ ಕೋರಿ ಪತ್ರ ಬರೆದಿದ್ದಾರೆ. 'ಐದು ದಶಕಗಳಿಂದ ನಾವು ಕಲ್ಲುಕುಡಿಗೆ ಪ್ರದೇಶದಲ್ಲಿ ಕೃಷಿ ಮಾಡುತ್ತಾ ನೆಲೆಸಿದ್ದೇವೆ. ಇಲ್ಲಿನ ಪ್ರಭಾವಿ ವ್ಯಕ್ತಿಗಳು ನಮ್ಮನ್ನು ಒಕ್ಕಲೆಬ್ಬಿಸುವ ಯತ್ನವನ್ನು ಮಾಡುತ್ತಿದ್ದಾರೆ. ಇದರಿಂದ ಜೀವನದಲ್ಲಿ ಜಿಗುಪ್ಸೆ ಆಗಿದ್ದು ದಯಾಮರಣಕ್ಕೆ ಅವಕಾಶ ಕೊಡಬೇಕು ಎಂದು ಮನವಿ ಮಾಡಿದ್ದಾರೆ.

'ಈ ಕುಟುಂಬಗಳು ಮಾಡಿರುವ ಎಲ್ಲ ಆರೋಪಗಳು ಸತ್ಯಕ್ಕೆ ದೂರ. ಕಲ್ಲುಕುಡಿಗೆ ರಸ್ತೆಯು ನಮ್ಮ ಹಿಡುವಳಿಯಲ್ಲಿ ಇದೆ. ಈ ಬಗ್ಗೆ ನಮಗೆ ಸುಪ್ರೀಂಕೋರ್ಟ್‌ನಿಂದ ಆದೇಶ ಆಗಿದೆ' ಎಂದು ಬಿಜೆಪಿ ಮುಖಂಡ ನಾಗೇಶ್ ಭಟ್ ಹೇಳಿದ್ದಾರೆ.

रजिस्ट्री सं. डी.एल. 33004/99 REGD. NO. D. L.-33004/99

भारत का राजपत्र
The Gazette of India

सी.जी.-डी.एल.-अ.- 23072022-237467
CG-DL-E-23072022-237467
असाधारण
EXTRAORDINARY
भाग II-खण्ड 3-उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

No. 3161] NEW DELHI, THURSDAY, JULY 21, 2022/ASHADHA 30, 1944

ಭಾರತ ಸರ್ಕಾರದ
ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಇಲಾಖೆ

ಸಂ.ಎಲ್ ಎಕ್ಯೂ/ಎನ್ ಹೆಚ್–367/ರಾಹೆ/ಸಿಆರ್– /2022–23 ದಿನಾಂಕ: 21–07–2022

ಅಧಿಸೂಚನೆ
ನವದೆಹಲಿ ದಿನಾಂಕ : 21 ಜುಲೈ 2022

ಎಸ್.ಓ ನಂ 3322(ಇ) ಕೇಂದ್ರ ಸರ್ಕಾರಕ್ಕೆ ಇದೀಗ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಷೆಡ್ಯೂಲನಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿ ಇರುವ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನಲ್ಲಿ ಹಾಯ್ದುಹೋಗುವ ರಾಷ್ಟ್ರೀಯ ಹೆದ್ದಾರಿ ನಂ–367 ರಲ್ಲಿ (ಬಾಣಾಪೂರ – ಗದ್ದನಕೇರಿ ಸೆಕ್ಷನ್) ಕಿ ಮೀ 52.00 ರಿಂದ ಕಿ ಮೀ 52.80 ರವರೆಗೆ ದ್ವಿಪಥ ರಸ್ತೆ ನಿರ್ಮಾಣಕ್ಕಾಗಿ ಸಂರಕ್ಷಣೆ, ಕಾರ್ಯನಿರ್ವಹಣೆ ಹಾಗೂ ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನ ಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆ ಎಂಬುದು ಕಂಡುಬಂದಿರುತ್ತದೆ. ಆದ ಕಾರಣ ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956(1956 ರ 48) ರ ಪ್ರಕಾರ ಕಲಂ 3(ಎ) (1) ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಅನುಸೂಚಿಯಲ್ಲಿ ವಿವರಿಸಿರುವ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಈ ಮೂಲಕ ಅಧಿಸೂಚನೆ ನೀಡಿದೆ.

ಸದರಿ ಜಮೀನುಗಳ ಬಗ್ಗೆ ಭೂಮಾಲಿಕರು ಅಥವಾ ಯಾವುದೇ ರೀತಿಯ ಹಿತಾಸಕ್ತಿ ಹಾಗೂ ಸಾರ್ವಜನಿಕ ಅವಗಾಹನೆಗಾಗಿ ಈ ಪ್ರಕಟಣೆ ಪ್ರಕಟಿಸಿದ ದಿನಾಂಕದಿಂದ 21 ದಿನಗಳೊಳಗಾಗಿ ಸದರಿ ಕಾಯ್ದೆಯ ಕಲಂ 3ಸಿ (1) ರ ಅನ್ವಯ ತಮ್ಮಗಳ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರಿ ಅಂದರೆ ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿ ಉಪ-ವಿಭಾಗಾಧಿಕಾರಿಗಳು ಗದಗ ಜಿಲ್ಲೆ ಗದಗ – 582101 ಇವರಿಗೆ ಲಿಖಿತ ರೂಪದಲ್ಲಿ ಸಕಾರಣಗಳೊಂದಿಗೆ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲೀ ಅಥವಾ ಅವರ ಪರ ವಕೀಲರನ್ನಾಗಲಿ ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ1956 (196 ರ 48) ರ ಪ್ರಕಾರ ನಿಯಮ 3ಸಿ(2) ರಂತೆ ಸಕ್ಷಮ ಪ್ರಾಧಿಕಾರ ಮಾಡಿದ ಆದೇಶವು ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳು ಮೇಲೆ ಕಾಣಿಸಿದ ಸಕ್ಷಮ ಪ್ರಾಧಿಕಾರದಲ್ಲಿ ಲಭ್ಯವಿರುತ್ತದೆ ಮತ್ತು ಈ ಜಮೀನುಗಳ ಬಗ್ಗೆ ಹಿತಾಸಕ್ತಿ ಉಳ್ಳವರು ಸಕ್ಷಮ ಪ್ರಾಧೀಕಾರಿಯವರ ಕಚೇರಿಯಲ್ಲಿ ಪರಿಶೀಲಿಸಬಹುದಾಗಿರುತ್ತದೆ.

ವಿ.ಸೂ : ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು ಯಾವುದೇ ಕ್ರಯವಿಕ್ರಯ, ಭೋಗ್ಯ ಇತರೆ ದಸ್ತಾವೇಜುಗಳನ್ನು ಮಾಡುವಂತಿಲ್ಲ ಹಾಗೂ ಯವುದೇ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಬಾರದೆಂದು ಈ ಮೂಲಕ ಸೂಚಿಸಿದೆ.

ಸಹಿ/– ಶ್ರೀಮತಿ ಅನ್ನಪೂರ್ಣ ನಾಗಪ್ಪ ಮುದಕಮ್ಮನವರ (ಕೆ.ಎ.ಎಸ್)
ಉಪ–ವಿಭಾಗಾಧಿಕಾರಿಗಳು, ಉಪ–ವಿಭಾಗ ಗದಗ

ಅನುಸೂಚಿ

ಕರ್ನಾಟಕ ರಾಜ್ಯದ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನಲ್ಲಿ ಹಾಯ್ದುಹೋಗಿರುವ ರಾಷ್ಟ್ರೀಯ ಹೆದ್ದಾರಿ ನಂ–367 ರಲ್ಲಿ (ಬಾಣಾಪೂರ – ಗದ್ದನಕೇರಿ ಸೆಕ್ಷನ್) ಕಿ ಮೀ 52.00 ರಿಂದ ಕಿ ಮೀ 52.80 ರವರೆಗೆ ಅವಶ್ಯಕವಾಗಿರುವ ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ – ಇಪಿಸಿ ಮೋಡ್.

ರಾಜ್ಯ : ಕರ್ನಾಟಕ ಜಿಲ್ಲೆ : ಕೊಪ್ಪಳ

ಕ್ರ.ಸಂ	ಸರ್ವೆ ನಂ	ಜಮೀನಿನ ವಿವರಣೆ	ಜಮೀನಿನ ತರಹೆ	ವಿಸ್ತೀರ್ಣ (ಚದರ ಮೀಟರಗಳಲ್ಲಿ)	ವಿಸ್ತೀರ್ಣ (ಹೆಕ್ಟೇರಗಳಲ್ಲಿ)
1	2	3	4	5	6
ತಾಲೂಕ : ಯಲಬುರ್ಗಾ					ಗ್ರಾಮ : ಕಾತ್ರಾಳ
1	75	ಖಾಸಗಿ	ಖುಷ್ಕಿ	3,616.8200	0.3616820
2	77	ಖಾಸಗಿ	ಖುಷ್ಕಿ	2,931.0200	0.2931020
		ಒಟ್ಟು		6,547.8400 ಚದರ ಮೀಟರಗಳು	0.6548 ಹೆಕ್ಟರಗಳು

ವಾ.ಸಾ.ಇ/ಗದಗ/218/2022–23/ದೇಶಪಾಂಡೆಪಬ್ಲಿಸಿಟಿ
[F. No. RW/NH/367/KNT/2022/3A2]
ರಾಜೇಶ ಗುಪ್ತ, ನಿರ್ದೇಶಕರು

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶ್ರೀ ಸಾಯಿ ಕಾಂಪ್ಲೆಕ್ಸ್, ಷಾದಿ ಮಹಲ್ ಮುಂಭಾಗ, ಡಿ.ವಿ.ಜಿ. ರಸ್ತೆ,
ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಕರ್ನಾಟಕ–561 207.
ದೂರವಾಣಿ: 08150–295055 ಇ–ಮೇಲ್: cdpooffice_bagepalli@yahoo.in
ಸಂಖ್ಯೆ: DWCD/CDPO/BGP/EGG TENDER/2022-23
ದಿನಾಂಕ: 15.07.2022

ಇ–ಟೆಂಡರ್ ಪ್ರಕಟಣೆ

ಟೆಂಡರ್ ವೇಳಾಪಟ್ಟಿ: (1) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://eproc.karnataka.gov.in** ನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭದ ದಿನಾಂಕ: **15.07.2022**. (2) ಪೂರ್ವ ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ: **10.08.2022 ಬೆಳಿಗ್ಗೆ 11.00** ಗಂಟೆಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶ್ರೀ ಸಾಯಿ ಕಾಂಪ್ಲೆಕ್ಸ್, ಷಾದಿ ಮಹಲ್ ಮುಂಭಾಗ, ಡಿ.ವಿ.ಜಿ. ರಸ್ತೆ, ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಕರ್ನಾಟಕ–561 207. (3) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **08.08.2022ರಿಂದ 5.00 PM ರವರೆಗೆ.** (4) ಇ–ಟೆಂಡರ್ ಅನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **16.08.2022ರಿಂದ 5.00 PM ರವರೆಗೆ.** (5) ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ: **18.08.2022, 5.00 PM ಅನಂತರ.** (6) ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **20.08.2022 11.00 AM ಅನಂತರ.** (7) ಟೆಂಡರ್‌ಗಳನ್ನು ತೆರೆಯುವ ಸ್ಥಳ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್. (8) ಸಂವಹನಕ್ಕಾಗಿ ವಿಳಾಸ: ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶ್ರೀ ಸಾಯಿ ಕಾಂಪ್ಲೆಕ್ಸ್, ಷಾದಿ ಮಹಲ್ ಮುಂಭಾಗ, ಡಿ.ವಿ.ಜಿ. ರಸ್ತೆ, ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಕರ್ನಾಟಕ–561 207. ದೂರವಾಣಿ: +91–08150 295055, ಇ–ಮೇಲ್: cdpooffice_bagepalli@yahoo.in

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಬಾಗೇಪಲ್ಲಿ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 186/ಎಂ.ಸಿ.ಎ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನವೀಕರಿಸಬಹುದಾದ
ಇಂಧನ ಅಭಿವೃದ್ಧಿ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ)
ನಂ–6/13/1, ಕೆ.ಆರ್.ಇ.ಡಿ.ಎಲ್. ಕಚೇರಿ ಕಟ್ಟಡ, 10ನೇ ಬ್ಲಾಕ್, 2ನೇ ಹಂತ, ನಾಗರಭಾವಿ,
ಬೆಂಗಳೂರು–72. ದೂ: 080–22282220 ಇ–ಮೇಲ್: kredlmd@gmail.com
ಸಂ: ಕೆಆರ್‌ಇಡಿಎಲ್/ಎಸ್‌ಜಿ/992/2022–23 ದಿನಾಂಕ: 29.07.2022

ಟೆಂಡರ್ ಆಹ್ವಾನ ಪ್ರಕಟಣೆ

ಬಿಡ್ಡಿಂಗ್ ಮಾದರಿ: ರಾಷ್ಟ್ರೀಯ ಸ್ಪರ್ಧಾತ್ಮಕ ಬಿಡ್ಡಿಂಗ್ (ಎನ್‌ಸಿಬಿ)
ಬಿಡ್ಡಿಂಗ್ ವಿಧಾನ: ತೆರೆದ ಟೆಂಡರ್, ಏಕ ಹಂತ, ದ್ವಿ ಲಕೋಟೆ

ಸ್ಪರ್ಧಾತ್ಮಕ ಬಿಡ್ಡಿಂಗ್

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಕರ್ನಾಟಕದ ಉದ್ಯಮವಾಗಿದ್ದು, **ಕರ್ನಾಟಕದ ತುಮಕೂರು ಜಿಲ್ಲೆಯ ಪಾವಗಡದಲ್ಲಿ 5 MW / 16 MWh ಬ್ಯಾಟರಿ ಇಂಧನ ಶೇಖರಣಾ ವ್ಯವಸ್ಥೆಯೊಂದಿಗೆ 5 MW (AC) ಸಾಮರ್ಥ್ಯದ ಸೌರ ಪಿವಿ ವಿದ್ಯುತ್ ಘಟಕ (7 MWp DC) ಯೋಜನೆಯನ್ನು ವಿನ್ಯಾಸ, ಇಂಜಿನಿಯರಿಂಗ್, ಸರಬರಾಜು, ನಿರ್ಮಾಣ, ಪರೀಕ್ಷೆ , ಕಾರ್ಯಾರಂಭ ಹಾಗೂ 10 ವರ್ಷಗಳು ಘಟಕದ ಕಾರ್ಯ ಮತ್ತು ಪಾಲನೆಗಾಗಿ ಇಂಜಿನಿಯರಿಂಗ್, ಸಂಗ್ರಹಣೆ, ನಿರ್ಮಾಣದ (ಇಪಿಸಿ) ಗುತ್ತಿಗೆದಾರರ ಆಯ್ಕೆಗೆ ಪ್ರಕಟಣೆ ಆಹ್ವಾನಿಸಿದೆ.** ಬಿಡ್ ದಸ್ತಾವೇಜುಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.eproc.karnataka.gov.in** ನಲ್ಲಿ ದಿನಾಂಕ: **04.08.2022** ರಂದು ಅಥವಾ ಆನಂತರ ಲಭ್ಯವಿದೆ. ಪ್ರಕಟಣೆಯ ವಿವರಗಳು ವೆಬ್‌ಸೈಟ್ **www.kredl.karnataka.gov.in** ನಲ್ಲೂ ಲಭ್ಯವಿದೆ.

ಸೂಚನೆ: ಕೆಆರ್‌ಇಡಿಎಲ್ ಬಿಡ್ಡಿಂಗ್ ಪ್ರಕ್ರಿಯೆಯನ್ನು ರದ್ದುಗೊಳಿಸುವ ಹಕ್ಕನ್ನು ಕಾಯ್ದಿರಿಸಿದೆ ಹಾಗೂ ಯಾವುದೇ ಕಾರಣಗಳನ್ನೂ ನೀಡದೆ ಅಂತಹ ಆಹ್ವಾನಗಳಿಗೆ ಹೊಣೆಗಾರಿಕೆ ಅಥವಾ ಬಾಧ್ಯತೆ ನೀಡದೆ ಹೊಸ ಬಿಡ್‌ಗಳನ್ನು ಆಹ್ವಾನಿಸಲಿದೆ.

ಸಹಿ/– ಸಹಾಯಕ ಪ್ರಧಾನ ವ್ಯವಸ್ಥಾಪಕರು –ಎಸ್‌ಜಿ,
ಕೆಆರ್‌ಇಡಿಎಲ್

ಬಿ.ಕೆ.ಹರಿಪ್ರಸಾದ್, ರಮಾನಾಥ ರೈ ನೇತೃತ್ವದ ನಿಯೋಗ ● ಫಾಝಿಲ್ ಕುಟುಂಬ ಸದಸ್ಯರಿಂದಲೂ ಅಸಮಾಧಾನ

ಕಾಂಗ್ರೆಸ್ ನಿಯೋಗಕ್ಕೆ ಪ್ರವೀಣ್ ಕುಟುಂಬ ತರಾಟೆ

ಪ್ರಜಾವಾಣಿ ವಾರ್ತೆ

ಸುಳ್ಯ: ಹತ್ಯೆಗೀಡಾದ ಪ್ರವೀಣ್ ನೆಟ್ಟಾರು ಮನೆಗೆ ಭಾನುವಾರ ಭೇಟಿ ನೀಡಿದ ವಿಧಾನಪರಿಷತ್ತಿನ ವಿರೋಧಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕಾಂಗ್ರೆಸ್ ಮುಖಂಡ ರಮಾನಾಥ ರೈ ನೇತೃತ್ವದ ನಿಯೋಗವನ್ನು ಕುಟುಂಬದವರು ತರಾಟೆಗೆ ತೆಗೆದುಕೊಂಡರು.

ಪ್ರವೀಣ್ ಅವರ ಚಿಕ್ಕಪ್ಪ ಜಯರಾಮ ಪೂಜಾರಿ ಅವರು, 'ನಿಮಗೆ ಬರಲು ಇಂದು ಸಮಯವಾಯಿತಾ. ಇಷ್ಟು ದಿನ ಬಾರದ ನೀವು ಇಂದು ಚೆಂದ ನೋಡಲು ಬಂದಿದ್ದೀರಾ' ಎಂದರು.

'ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ ಮುಖಂಡರಾದ ನೀವು, ಹಿಂದುತ್ವದ ವಿರುದ್ಧವಾಗಿ ಹೇಳಿಕೆ ನೀಡುತ್ತೀರಿ. ಹಿಂದುತ್ವವನ್ನು ನಿರ್ವಂಶ ಮಾಡುವ ಪಕ್ಷ ಕಾಂಗ್ರೆಸ್. ಹಿಂದುತ್ವಕ್ಕೆ ನಿಮ್ಮ ಪಕ್ಷ ಎಲ್ಲಿ ಬೆಂಬಲ ನೀಡುತ್ತಿದೆ' ಎಂದೂ ಆಕ್ರೋಶ ವ್ಯಕ್ತಪಡಿಸಿದರು.

ವಿಧಾನ ಪರಿಷತ್ ಸದಸ್ಯ ಮಂಜುನಾಥ್ ಭಂಡಾರಿ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹರೀಶ್ ಕುಮಾರ್ ಅವರೂ ನಿಯೋಗದಲ್ಲಿದ್ದರು.

ಇದೇ ಸಂದರ್ಭದಲ್ಲಿ 'ನನ್ನ ಬದುಕೇ ನಾಶವಾಯಿತು' ಎಂದು ಪ್ರವೀಣ್ ಅವರ ತಾಯಿ ರತ್ನಾವತಿ ಕಣ್ಣೀರಿಟ್ಟರು.

ಕುಟುಂಬ ಸದಸ್ಯರನ್ನು ಸಮಾಧಾನ ಪಡಿಸಲು ಯತ್ನಿಸಿದ ಹರಿಪ್ರಸಾದ್, 'ಮುಂದೆ ಈ ರೀತಿಯ ಹತ್ಯೆ ನಡೆಯಬಾರದು ಎಂಬ ಉದ್ದೇಶದಿಂದಲೇ ನಾವು ಇಲ್ಲಿಗೆ ಭೇಟಿ ನೀಡಿದ್ದೇವೆ. ಸಾಯುತ್ತಿರುವವರು ನಮ್ಮ ಮಕ್ಕಳೇ ತಾನೆ' ಎಂದು ಹೇಳಿದರು.

'ಈ ಹತ್ಯೆಗಳು ಇಲ್ಲಿಗೇ ನಿಲ್ಲಬೇಕು. ಇನ್ನು ಯಾರ ಹತ್ಯೆಯೂ ಆಗಬಾರದು' ಎಂದು ಪ್ರವೀಣ್ ಕುಟುಂಬದವರು ನೋವಿನಿಂದ ಹೇಳಿಕೊಂಡರು. ಕಾಂಗ್ರೆಸ್ ಮುಖಂಡರಾದ ಶಕುಂತಳಾ ಶೆಟ್ಟಿ ಹಾಗೂ ಐವನ್ ಡಿಸೋಜ ಅವರು ಶುಕ್ರವಾರವೇ ಪ್ರವೀಣ್ ಅವರ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿದ್ದರು.

ಅಲ್ಪಸಂಖ್ಯಾತರ ಸಮಸ್ಯೆಗೆ ಡಿಕೆಶಿ ಸ್ಪಂದಿಸುವುದಿಲ್ಲ ಏಕೆ?: ಇತ್ತೀಚೆಗೆ ಹತ್ಯೆಗೊಳಗಾದ ಮಹಮ್ಮದ್ ಫಾಝಿಲ್ ಅವರ ಕುಟುಂಬಕ್ಕೆ ಸಾಂತ್ವನ ಹೇಳಲು ಕಾಂಗ್ರೆಸ್ ಪಕ್ಷದ ನಿಯೋಗವು ಸುರತ್ಕಲ್‌ನ ಅವರ ಮನೆಗೆ ತೆರಳಿದಾಗಲೂ ಫಾಝಿಲ್ ಬಂಧುಗಳು ಅಸಮಾಧಾನ ವ್ಯಕ್ತಪಡಿಸಿದರು.

'ಅಲ್ಪಸಂಖ್ಯಾತರ ಸಮಸ್ಯೆಗಳಿಗೆ ಡಿ.ಕೆ.ಶಿವಕುಮಾರ್ ಏಕೆ ಸ್ಪಂದಿಸುವುದಿಲ್ಲ? ಅಲ್ಪಸಂಖ್ಯಾತರ ಕುರಿತು ತಮ್ಮ ನಿಲುವು ಏನು ಎಂಬ ಬಗ್ಗೆ ಅವರು ಸ್ಪಷ್ಟಪಡಿಸಬೇಕು' ಎಂದು ಫಾಝಿಲ್ ಅವರ ಸೋದರ ಸಂಬಂಧಿ ವಹೀದ್ ಅಹ್ಮದ್ ಮಾಗುಂಡಿ ಅವರು ಪ್ರಶ್ನಿಸಿದರು.

ಬಿ.ಕೆ. ಹರಿಪ್ರಸಾದ್, ರಮಾನಾಥ ರೈ, ಅವರಲ್ಲದೇ ಬಿ.ಎ ಮೊಹಿಯುದ್ದೀನ್ ಬಾವ, ಕೆ.ಅಭಯಚಂದ್ರ ಜೈನ್ ಅವರು ನಿಯೋಗದಲ್ಲಿದ್ದರು.

ಎನ್‌ಐಎ ವರದಿ ಆಧರಿಸಿ ಪಿಎಫ್‌ಐ ನಿಷೇಧ –ಕರಂದ್ಲಾಜೆ

ಸುಳ್ಯ: 'ಪ್ರವೀಣ್ ನೆಟ್ಟಾರು ಕೊಲೆ ಹಿಂದೆ ಪಿಎಫ್‌ಐ ಸಂಘಟನೆಯ ಕೈವಾಡ ಇದೆ. ಕೇರಳ ಮಾದರಿಯಲ್ಲಿ ಈ ಕೊಲೆ ನಡೆಸಲಾಗಿದೆ. ಎನ್‌ಐಎ ನೀಡುವ ವರದಿ ಆಧಾರದಲ್ಲಿ ಪಿಎಫ್‌ಐ ಸಂಘಟನೆ ನಿಷೇಧಕ್ಕೆ ಕೇಂದ್ರ ಬದ್ಧ' ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಪ್ರವೀಣ್ ಅವರ ಮನೆಗೆ ಭಾನುವಾರ ಭೇಟಿ ನೀಡಿದ್ದ ಅವರು ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. 'ಈ ಸಾವಿಗೆ ನ್ಯಾಯ ದೊರಕಿಸುತ್ತೇವೆ' ಎಂದು ಸಚಿವೆ ಭರವಸೆ ನೀಡಿದರು. ಒಂದು ತಿಂಗಳ ಸಂಬಳದ ಚೆಕ್ ಮತ್ತು ₹ 5 ಲಕ್ಷ ನಗದನ್ನು ಪ್ರವೀಣ್ ಕುಟುಂಬಸ್ಥರಿಗೆ ಪರಿಹಾರವಾಗಿ ನೀಡಿದರು.

ಬಳಿಕ ಮಾತನಾಡಿದ ಅವರು, 'ಪ್ರವೀಣ್ ಹತ್ಯೆ ತನಿಖೆಯನ್ನು ಎನ್‌ಐಎಗೆ ವಹಿಸಲಾಗಿದೆ. ನಿಜವಾದ ಆರೋಪಿಗಳು ಸಿಗುತ್ತಾರೆ. ಅವರಿಗೆ ಕಠಿಣ ಶಿಕ್ಷೆಯಾಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಕೋಮು ಸಾಮರಸ್ಯ ಸರ್ಕಾರದ ಜವಾಬ್ದಾರಿ'

ರಾಮನಗರ: 'ಹದಿನೈದು–ಇಪ್ಪತ್ತು ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮು ಸಾಮರಸ್ಯ ಹದಗೆಡುತ್ತಿದ್ದು, ಸರಿಪಡಿಸುವುದು ಸರ್ಕಾರದ ಕೆಲಸ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು. ಚನ್ನಪಟ್ಟಣ ತಾಲ್ಲೂಕಿನ ಗೌಡಗೆರೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಮಾಜದಲ್ಲಿ ಕೋಮುಭಾವನೆ ವಾತಾವರಣ ನಿರ್ಮಿಸಲಾಗುತ್ತಿದೆ. ಸರ್ಕಾರ ಹಾಗೂ ರಾಜಕೀಯ ಪಕ್ಷಗಳ ಬಗ್ಗೆ ಜನರಿಗೆ ಅಸಮಾಧಾನ ಇದೆ. ರಾಜಕೀಯ ಪಕ್ಷಗಳು ಈ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕು' ಎಂದರು.

'ಅಸಮರ್ಥತೆ ಒಪ್ಪಿಕೊಂಡ ಸರ್ಕಾರ'

'ಬಿಜೆಪಿಯೇ ಅಧಿಕಾರದಲ್ಲಿದ್ದರೂ ಪಕ್ಷದ ಕಾರ್ಯಕರ್ತರಿಗೆ ರಕ್ಷಣೆ ನೀಡಲೂ ಸರ್ಕಾರ ಅಸಮರ್ಥವಾಗಿದೆ. ಗೃಹ ಸಚಿವರ ಮನೆಯ ಬಳಿ ಅವರದೇ ಪಕ್ಷದ ಕಾರ್ಯಕರ್ತರು ಪ್ರತಿಭಟಿಸುವ ಸ್ಥಿತಿ ರಾಜ್ಯದಲ್ಲಿದೆ' ಎಂದು ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಟೀಕಿಸಿದರು.

'ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ತನಿಖೆಯನ್ನು ಎನ್‌ಐಎಗೆ ಒಪ್ಪಿಸುವ ಮೂಲಕ ಸರ್ಕಾರ ತನ್ನ ವೈಫಲ್ಯ ಒಪ್ಪಿಕೊಂಡಿದೆ. ಸರ್ಕಾರವನ್ನು ರಾಜ್ಯಪಾಲರು ವಜಾಗೊಳಿಸಬೇಕು' ಎಂದು ಒತ್ತಾಯಿಸಿದರು.

'23 ಕಡೆ ಸಿಸಿಟಿವಿ ಕ್ಯಾಮೆರಾ'

ಸುಬ್ರಹ್ಮಣ್ಯ: 'ಅಹಿತಕರ ಘಟನೆಗಳ ಹಿನ್ನೆಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಾಂತಿ ರಕ್ಷಣೆಗೆ ಸರ್ಕಾರ ವಿಶೇಷ ಗಮನ ಹರಿಸಿದೆ. ಕೇರಳ ಗಡಿ ಭಾಗದ 23 ಕಡೆ ಸಿಸಿಟಿವಿ ಕ್ಯಾಮೆರಾ ಅಳವಡಿಸಲು ಕ್ರಮಕೈಗೊಂಡಿದೆ' ಎಂದು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಎಸ್.ಅಂಗಾರ ಹೇಳಿದರು.

'ಪ್ರವೀಣ್ ನೆಟ್ಟಾರು ಹತ್ಯೆಗೆ ಸಂಬಂಧಿಸಿ ಈಗಾಗಲೇ ಕೆಲವರನ್ನು ಬಂಧಿಸಲಾಗಿದೆ. ತಪ್ಪಿತಸ್ಥರ ಮೇಲೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತದೆ. ಜನರು ಸರ್ಕಾರದ ಜತೆ ಸಹಕರಿಸಬೇಕು' ಎಂದರು. 'ಪ್ರವೀಣ್ ಹತ್ಯೆ ಉದ್ದೇಶಪೂರ್ವಕ ಕೃತ್ಯ. ಪಿಎಫ್‌ಐ, ಎಸ್‌ಡಿಪಿಐ ಪಿತೂರಿಯಿಂದ ನಡೆದಿದೆ. ಪೊಲೀಸ್ ಇಲಾಖೆ ನಿರ್ಲಕ್ಷ್ಯ ಕುರಿತೂ ತನಿಖೆ ನಡೆಯಲಿದೆ ಎಂದರು

ಫಾಝಿಲ್ ಹತ್ಯೆ: ಕಾರು ನೀಡಿದ್ದ ವ್ಯಕ್ತಿ ಸೆರೆ, ಹಂತಕರ ಸುಳಿವು

ಒಂದನೇ ಪುಟದಿಂದ

ಕಾರು ಪತ್ತೆ: ಕೃತ್ಯಕ್ಕೆ ಬಳಕೆಯಾಗಿದ್ದ ಹುಂಡೈ ಇಯಾನ್ ಕಾರು ಉಡುಪಿ ಜಿಲ್ಲೆಯ ಇನ್ನಾ ಗ್ರಾಮದ ಕಡೆಕುಂಜದಲ್ಲಿ ಭಾನುವಾರ ಪತ್ತೆಯಾಗಿದೆ. ಸಾರ್ವಜನಿಕರ ಮಾಹಿತಿ ಮೇರೆಗೆ ತನಿಖಾಧಿಕಾರಿ ಸ್ಥಳಕ್ಕೆ ತೆರಳಿ ಕಾರನ್ನು ವಶಕ್ಕೆ ಪಡೆದಿದ್ದಾರೆ. ಕಾರು ಆರೋಪಿಯ ಪತ್ನಿಯ ಹೆಸರಿನಲ್ಲಿ ನೋಂದಣಿಯಾಗಿದೆ' ಎಂದು ಅವರು ತಿಳಿಸಿದ್ದಾರೆ.

'ಪತ್ತೆಯಾದ ಕಾರಿನಲ್ಲಿ ಮೈಕ್ರೊ ಸಿಮ್ ದೊರಕಿದೆ. ರಕ್ತದ ಕಲೆಯೂ ಇತ್ತು. ಪ್ರಕರಣ ಸಂಬಂಧ ಆರು ಮಂದಿಯನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಫಾಝಿಲ್ ಕೊಲೆ ಸಂಬಂಧ ಸದ್ಯಕ್ಕೆ ಒಬ್ಬ ವ್ಯಕ್ತಿಯನ್ನು ಮಾತ್ರ ಬಂಧಿಸಿದ್ದೇವೆ. ಆದರೆ ಆರೋಪಿಗಳ ಬಗ್ಗೆ ಖಚಿತ ಸುಳಿವು ಸಿಕ್ಕಿದೆ. ಶೀಘ್ರದಲ್ಲೇ ಅವರನ್ನು ಬಂಧಿಸುತ್ತೇವೆ ಎಂಬ ವಿಶ್ವಾಸ ಇದೆ' ಎಂದು ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ದ್ವೇಷ ಸಂದೇಶ: 5 ಎಫ್‌ಐಆರ್

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರು ಹತ್ಯೆಗಳು ನಡೆದ ಬೆನ್ನಲ್ಲೇ ಸಾಮಾಜಿಕ ಜಾಲತಾಣಗಳಲ್ಲಿ ದ್ವೇಷ ಹರಡುವಂತಹ ಸಂದೇಶಗಳನ್ನು ಹರಿಯಬಿಡುತ್ತಿರುವವರ ವಿರುದ್ಧ ನಗರ ಪೊಲೀಸ್ ಕಮಿಷನರೇಟ್‌ನ ಸಾಮಾಜಿಕ ಜಾಲತಾಣ ಕೋಶ ಹದ್ದಿನ ಕಣ್ಣಿಟ್ಟಿದೆ. ಐದು ಆಕ್ಷೇಪಾರ್ಹ ಸಂದೇಶಗಳನ್ನು ಗುರುತಿಸಿರುವ ಪೊಲೀಸರು ಸೈಬರ್, ಆರ್ಥಿಕ ಮತ್ತು ಮಾದಕ ವಸ್ತುಗಳಿಗೆ ಸಂಬಂಧಿಸಿದ (ಸೆನ್) ಅಪರಾಧಗಳ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ.

'ಸಾಮಾಜಿಕ ಮಾಧ್ಯಮಗಳಲ್ಲಿ ಕೆಲವರು ಪ್ರಚೋದನಕಾರಿ ಸಂದೇಶಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಅಂಥವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಜಿಲ್ಲಾಡಳಿತ ಶನಿವಾರ ಏರ್ಪಡಿಸಿದ್ದ ಶಾಂತಿಸಭೆಯಲ್ಲಿ ಸಾರ್ವಜನಿಕರು ಒತ್ತಾಯಿಸಿದ್ದರು. 'ದ್ವೇಷ ಹಬ್ಬಿಸುವ ಅಥವಾ ಆಕ್ಷೇಪಾರ್ಹ ಸಂದೇಶಗಳನ್ನು ಹಂಚಿಕೊಳ್ಳುವವರ ಮೇಲೆ ನಿಗಾ ಇಟ್ಟಿದ್ದೇವೆ. ಇಂಥ ಸಂದೇಶ ಗಳಿಂದ ಕಾನೂನು ಸುವ್ಯವಸ್ಥೆಗೆ ಧಕ್ಕೆ ಆಗುತ್ತದೆ' ಎಂದು ನಗರ ಪೊಲೀಸ್ ಕಮಿಷನರ್ ತಿಳಿಸಿದ್ದಾರೆ.

'ಸತ್ತವರು ಮುಸ್ಲಿಮರಾದರೆ ಪರಿಹಾರಕ್ಕೆ ಅರ್ಹರಲ್ಲವೇ?'

ಬೆಂಗಳೂರು: 'ಪ್ರವೀಣ್ ನೆಟ್ಟಾರು ಸಾವಿಗೆ ಸ್ಪಂದಿಸಿದ ಮಾದರಿಯಲ್ಲಿಯೇ ಮಸೂದ್ ಮತ್ತು ಫಾಝಿಲ್ ಸಾವಿಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಂದಿಸಬೇಕಿತ್ತು' ಎಂದು ಕಾಂಗ್ರೆಸ್ ಶಾಸಕ ದಿನೇಶ್ ಗುಂಡೂರಾವ್ ಅಭಿಪ್ರಾಯಪಟ್ಟಿದ್ದಾರೆ.

ಟ್ವೀಟ್ ಮಾಡಿರುವ ಅವರು, 'ಬಸವರಾಜ ಬೊಮ್ಮಾಯಿ ಅವರೇ ನೀವು, ಪ್ರವೀಣ್ ಸಾವಿಗೆ ಸ್ಪಂದಿಸಿದ್ದು ಅನುಕರಣೀಯ. ಆದರೆ, ಹತರಾದ ಮಸೂದ್ ಹಾಗೂ ಫಾಝಿಲ್‌ಗೆ ನಿಮ್ಮಿಂದ ಕೊಂಚವಾದರೂ ಸಾಂತ್ವನ ಬೇಡವೇ? ಎಂದು ಪ್ರಶ್ನಿಸಿದ್ದಾರೆ.

'ಪ್ರವೀಣ್ ಮನೆಗೆ ಹೋದಿರಿ, ₹ 25 ಲಕ್ಷ ಪರಿಹಾರ ಕೊಟ್ಟಿದ್ದೀರಿ. ಇಲ್ಲಿ ತಕರಾರಿಲ್ಲ. ಆದರೆ, ಮಸೂದ್, ಫಾಝಿಲ್ ಮಾಡಿದ ತಪ್ಪೇನು? ಸತ್ತವರು ಮುಸ್ಲಿಮರಾದರೆ ಪರಿಹಾರಕ್ಕೆ ಅರ್ಹರಲ್ಲವೇ?' ಎಂದು ಪ್ರಶ್ನಿಸಿದರು.

ಟಿ.ಮೋಹನದಾಸ್ ಪೈ ನಿಧನ

ಉಡುಪಿ: ಡಾ.ಟಿ.ಎಂ.ಎ. ಪೈ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ, ಟಿ. ಮೋಹನದಾಸ್ ಪೈ (89) ಭಾನುವಾರ ಮಣಿಪಾಲದ ಕೆಎಂಸಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರಿಗೆ ನಾಲ್ವರು ಸಹೋದರರು, ಮೂವರು ಸಹೋದರಿಯರು ಇದ್ದಾರೆ.

ಡಾ.ಟಿ.ಎಂ.ಎ. ಪೈ ಪ್ರತಿಷ್ಠಾನ, ಎಂಜಿಎಂ ಕಾಲೇಜು ಟ್ರಸ್ಟ್, ಮಣಿಪಾಲ್ ಮೀಡಿಯ ನೆಟ್‌ವರ್ಕ್ ಸಂಸ್ಥೆಗಳ ಅಧ್ಯಕ್ಷರಾಗಿದ್ದರು. ಇಂಡಿಯನ್ ನ್ಯೂಸ್‌ಪೇಪರ್ ಸೊಸೈಟಿ (ಐಎನ್‌ಎಸ್) ಕಾರ್ಯನಿರ್ವಾಹಕ ಸಮಿತಿ ಸದಸ್ಯರಾಗಿ ಎರಡು ಅವಧಿ ಸೇವೆ ಸಲ್ಲಿಸಿದ್ದರು. 1989ರಲ್ಲಿ ಐಸಿಡಿಎಸ್‌ನ ಜಂಟಿ ಆಡಳಿತ ನಿರ್ದೇಶಕರಾಗಿ, 1995ರಲ್ಲಿ ಆಡಳಿತ ನಿರ್ದೇಶಕರಾಗಿ ನಂತರ ಚೇರ್ಮನ್ ಆಗಿದ್ದರು.

ಆ.1ರಂದು ಬೆಳಿಗ್ಗೆ 9ರಿಂದ 11ರವರೆಗೆ ಉಡುಪಿ ಎಂಜಿಎಂ ಕಾಲೇಜು ಆವರಣದಲ್ಲಿ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ಬಳಿಕ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿವಿಧ ಜಿಲ್ಲೆಗಳಲ್ಲಿ ಧಾರಾಕಾರ ಮಳೆ ● ಕೆರೆ–ಕಟ್ಟೆಗಳು ಭರ್ತಿ ತಗ್ಗು ಪ್ರದೇಶಗಳ ಬಡಾವಣೆಗೆ ನುಗ್ಗಿದ ನೀರು

ವಸತಿ ಶಾಲೆ ಜಲಾವೃತ: ವಿದ್ಯಾರ್ಥಿಗಳ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಗ್ರಾಮಾಂತರ, ಕೊಡಗು, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗಿದೆ. ಮಳೆ ನೀರು ಮನೆಗಳಿಗೆ ನುಗ್ಗಿದ್ದು, ತಗ್ಗು ಪ್ರದೇಶ ಬಡಾವಣೆಗಳು ಜಲಾವೃತವಾಗಿವೆ.

ಶನಿವಾರ ರಾತ್ರಿ ಸುರಿದ ಮಳೆಗೆ ತುಮಕೂರು ಮತ್ತು ಕೋಲಾರ ನಗರದಲ್ಲಿ ವಿವಿಧ ಬಡಾವಣೆಗಳು ಜಲಾವೃತವಾಗಿವೆ.

ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಹೋಬಳಿಯ ಸೋದೇನಹಳ್ಳಿ ಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಆವರಣ ಜಲಾವೃತಗೊಂಡಿದೆ. ವಿದ್ಯಾರ್ಥಿಗಳು ಊಟ, ತಿಂಡಿಗಾಗಿ ಪರದಾಡುತ್ತಿದ್ದಾರೆ. ಕುಡಿಯುವ ನೀರು ಪೂರೈಕೆ ಟ್ಯಾಂಕ್‌ನಲ್ಲಿ ಮಳೆಯ ನೀರು ಸೇರಿದ್ದು, ನೀರು ಸೇವಿಸದಂತೆ ವಿದ್ಯಾರ್ಥಿಗಳಿಗೆ ಸೂಚಿಸಲಾಗಿದೆ. ಶಾಲೆಗೆ ಸದ್ಯ ರಜೆ ಘೋಷಿಸಲಾಗಿದೆ.

ಕೋಲಾರ/ಚಿಕ್ಕಬಳ್ಳಾಪುರ (ವರದಿ): ಶನಿವಾರ ರಾತ್ರಿ ಮತ್ತು ಭಾನುವಾರ ಸುರಿದ ಬಿರುಸಿನ ಮಳೆಯಿಂದ ಎರಡು ಜಿಲ್ಲೆಯಲ್ಲಿ ಕೆರೆ, ಕಟ್ಟೆಗಳು ತುಂಬಿದ್ದು, ಜಲಾಶಯಗಳತ್ತ ಹೆಚ್ಚಿನ ನೀರು ಹರಿದು ಬರುತ್ತಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಬಹುತೇಕ ಕಡೆ ರಾತ್ರಿಯಿಡೀ ಮಳೆಯಾಗಿದೆ. ಚಿಂತಾಮಣಿ ತಾಲ್ಲೂಕಿನ ಕೈವಾರದಲ್ಲಿ 12.7 ಸೆಂ.ಮೀ ಮಳೆ ಸುರಿದಿದ್ದು ಇದು ಜಿಲ್ಲೆಯಲ್ಲಿ ಸುರಿದ ಗರಿಷ್ಠ ಮಳೆಯಾಗಿದೆ. ಬಾಗೇಪಲ್ಲಿ ತಾಲ್ಲೂಕಿನ ಚಿತ್ರಾವತಿ ಜಲಾಶಯಕ್ಕೆ ನೀರಿನ ಹರಿವು ಹೆಚ್ಚಿದೆ.

ಗೌರಿಬಿದನೂರು ತಾಲ್ಲೂಕಿನ ಉತ್ತರಪಿನಾಕಿನಿ ನದಿಯಲ್ಲಿ ಹರಿವು ಹೆಚ್ಚಿದ್ದು, ಚಿಂತಾಮಣಿ ಮತ್ತು ಶಿಡ್ಲಘಟ್ಟ ತಾಲ್ಲೂಕಿನ ವಿವಿಧ ಚೆಕ್‌ಡ್ಯಾಂಗಳು, ಕೆರೆಗಳು ತುಂಬಿವೆ. ಚೇಳೂರು ತಾಲ್ಲೂಕಿನಲ್ಲಿ ಈರುಳ್ಳಿ, ಟೊಮೆಟೊ ಹಾಗೂ ಮುಸುಕಿನ ಜೋಳ ಹಾಳಾಗಿದೆ.

ಕೋಲಾರಮ್ಮನ ಕೆರೆ ಭರ್ತಿಯಾಗಿದೆ. ಕೋಲಾರ, ಮಾಲೂರು, ಮುಳಬಾಗಿಲು, ಬಂಗಾರಪೇಟೆ ತಾಲ್ಲೂಕಿನ ವಿವಿಧೆಡೆ ಬಿರುಸಿನ ಮಳೆಯಾಗಿದೆ. ಕೋಲಾರ ನಗರ ಮತ್ತು ಅಳಗನೂರಿನಲ್ಲಿ ಗರಿಷ್ಠ 4 ಸೆ.ಮೀ. ಮಳೆ ಸುರಿದಿರುವುದು ದಾಖಲಾಗಿದೆ.

ರಾಮನಗರ ಜಿಲ್ಲೆ ಮಂಚನಾಯಕನಹಳ್ಳಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಗರಿಷ್ಠ 12.8 ಸೆಂ.ಮೀ. ನಷ್ಟು ಮಳೆ ಸುರಿದಿದೆ. ಚನ್ನಪಟ್ಟಣ ತಾಲ್ಲೂಕಿನ ಮತ್ತಿಕೆರೆಯಲ್ಲಿ 7.5 ಸೆಂ.ಮೀ., ನಾಗವಾರ– ದಶವಾರದಲ್ಲಿ 6.5 ಸೆಂ.ಮೀ., ರಾಮನಗರ ತಾಲ್ಲೂಕಿನ ಬೈರಮಂಗಲದಲ್ಲಿ 7.3 ಸೆಂ.ಮೀ. ಕೆಂಚನಕುಪ್ಪೆ ಗ್ರಾ.ಪಂ. ವ್ಯಾಪ್ತಿಯಲ್ಲಿ 8 ಸೆಂ.ಮಿ. ಸುರಿದಿದೆ.

ನಾಪೋಕ್ಲು (ಕೊಡಗು ಜಿಲ್ಲೆ): ನಾಪೋಕ್ಲು ವ್ಯಾಪ್ತಿಯಲ್ಲಿ ಭಾನುವಾರ ಗುಡುಗು ಸಹಿತ ಮಳೆಯಾಯಿತು. ಸೋಮ ವಾರಪೇಟೆ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗಿದ್ದು, ಹೊನ್ನಮ್ಮನ ಕೆರೆ ಅವಧಿಗೂ ಮುನ್ನ ತುಂಬಿದೆ.

ತುಮಕೂರು ಜಿಲ್ಲೆಯ ದೊಡ್ಡೇರಿ ಹೋಬಳಿಯ ಸೋದೇನಹಳ್ಳಿಯಲ್ಲಿ ಡಾ.ಬಿ. ಆರ್‌.ಅಂಬೇಡ್ಕರ್ ವಸತಿ ಶಾಲೆ ಜಲಾವೃತಗೊಂಡಿರುವುದು

ಬಾಲಕಿ ಸೇರಿ ಮೂವರು ಸಾವು

ತುಮಕೂರು: ಮಳೆ ನೀರು ನಿಂತಿದ್ದ ಮನೆಯಲ್ಲಿ ವಿದ್ಯುತ್ ಪ್ರವಹಿಸಿ ಶನಿವಾರ ರಾತ್ರಿ ಜಯನಗರ ನಿವಾಸಿ ಕೆ.ಸಿ ವೀರಣ್ಣ (75) ಎಂಬುವರು ಮೃತಪಟ್ಟರು.

ಅಲ್ಲದೆ, ಗುಬ್ಬಿ ಪಟ್ಟಣದ ಬೆಲ್ಲದಪೇಟೆಯಲ್ಲಿ ಆನಂದ್ ದೀಕ್ಷಿತ್ ಎಂಬುವರ ಮನೆಯ ಗೋಡೆಯು ಕುಸಿದು ಬಿದ್ದಿದೆ.

ಸಿಡಿಲು ಬಡಿದು ಸಾವು: ಕಲಬುರಗಿ ಜಿಲ್ಲೆಯ ಕಮಲಾಪುರ ತಾಲ್ಲೂಕು ಮಳಸಾಪುರದಲ್ಲಿ ಭಾನುವಾರ ಸಿಡಿಲು ಬಡಿದು ಶೈಲಜಾ ಶರಣಪ್ಪ ಜಮಾದಾರ (17) ಮೃತಪಟ್ಟರು. ಪ್ರಥಮ ವರ್ಷದ ಪಿಯು ವಿದ್ಯಾರ್ಥಿನಿಯಾದ ಅವರು, ಕಳೆ ಕೀಳಲು ತಂದೆ ಶರಣಪ್ಪ ಜೊತೆ ಹೊಲಕ್ಕೆ ತೆರಳಿದ್ದಾಗ ಅವಘಡ ಸಂಭವಿಸಿದೆ.

ಹಳ್ಳದಲ್ಲಿ ಕೊಚ್ಚಿ ಹೋದ ಮಹಿಳೆ ಸಾವು:
ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ತೀರ್ಥ ಗ್ರಾಮದ ಹಳ್ಳದಲ್ಲಿ ಕೊಚ್ಚಿಕೊಂಡು ಹೋಗಿದ್ದ ತೀರ್ಥ ಗ್ರಾಮದ ಶ್ರೀದೇವಿ ನಿಂಗಣ್ಣಾ ಪೂಜಾರಿ (45) ಮಹಿಳೆಯೊಬ್ಬರು ಶವವಾಗಿ ಪತ್ತೆಯಾಗಿದ್ದಾರೆ.
ಜಮೀನಿನಲ್ಲಿ ಕೆಲಸ ಮುಗಿಸಿತೆರಳುವಾಗ ಹಳ್ಳದ ನೀರಿನ ರಭಸ ಲೆಕ್ಕಿಸದೇ ಹಳ್ಳ ದಾಟಲು ಯತ್ನಿಸಿದ್ದು, ಹಳ್ಳದಲ್ಲಿ ಕೊಚ್ಚಿಕೊಂಡು ಹೋದರು. ಭಾನುವಾರ ಬೆಳಿಗ್ಗೆ ಹೆಬಳ್ಳಿ ಗ್ರಾಮದ ಬಳಿ ಶವ ಪತ್ತೆಯಾಯಿತು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು	ಹೊರಹರಿವು
			(ಕ್ಯುಸೆಕ್‌ಗಳಲ್ಲಿ)	
ಕೆ ಆರ್ ಎಸ್*	124.80	124.80	15,189	16,747
ಹಾರಂಗಿ	2,859	2,857.98	5,720	1,020
ಕಬಿನಿ	2,284	2,283.30	5,447	5,000
ಹೇಮಾವತಿ	2,922	2,922	11,062	11,062
ಲಿಂಗನಮಕ್ಕಿ	1,819	1,798	6,204	3,318
ಸೂಪಾ (ಮೀ)	564	541.80	3,460	1,923
ಮಾಣಿ	595	584	900	-
ತುಂಗಭದ್ರಾ	1,633	1,632.26	41,688	37,427
ಮಲಪ್ರಭಾ	2,079.50	2,069.50	1,609	394
ಘಟಪ್ರಭಾ	2,175	2,157.65	5,347	179
ಭದ್ರಾ	186	184	5,236	4,634
ಆಲಮಟ್ಟಿ (ಮೀ)	519.60	518.57	21,923	18,451
ನಾರಾಯಣಪುರ (ಮೀ)	492.25	491.85	25,000	29,080

* ನೆಲಮಟ್ಟದಿಂದ

ಎಬಿವಿಪಿಯ 30 ಮಂದಿ ಬಿಡುಗಡೆ

ಬೆಂಗಳೂರು: ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ನಿವಾಸಕ್ಕೆ ಮುತ್ತಿಗೆ ಹಾಕಿ ಗಲಭೆ ಸೃಷ್ಟಿಸಿದ್ದ ಆರೋಪದ ಮೇರೆಗೆ ಬಂಧಿಸಲಾಗಿದ್ದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ (ಎಬಿವಿಪಿ) 30 ಕಾರ್ಯಕರ್ತರು ಭಾನುವಾರ ಜಾಮೀನಿನ ಮೇಲೆ ಬಿಡುಗಡೆಗೊಂಡರು.

ಜೆ.ಸಿ.ನಗರ ಠಾಣೆ ಯಲ್ಲಿ ದಾಖಲಾಗಿದ್ದ ಪ್ರಕರಣ ಆಧರಿಸಿ, 29 ಯುವಕರು ಹಾಗೂ ಒಬ್ಬ ಯುವತಿಯನ್ನು ಶನಿವಾರ ಬಂಧಿಸಲಾಗಿತ್ತು. 'ಷರತ್ತುಬದ್ಧ ಪೊಲೀಸ್ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಅಗತ್ಯಬಿದ್ದರೆ ನೋಟಿಸ್ ಜಾರಿಗೊಳಿಸಿ ವಿಚಾರಣೆಗೆ ಬರುವಂತೆ ಸೂಚನೆ ನೀಡಲಾಗುವುದು' ಎಂದು ಉತ್ತರ ವಿಭಾಗದ ಡಿಸಿಪಿ ವಿನಾಯಕ್ ಪಾಟೀಲ್ ತಿಳಿಸಿದ್ದಾರೆ.

'ದೇವೇಗೌಡರ ಮೇಲೆ ಕೆಟ್ಟ ದೃಷ್ಟಿ': ಕಣ್ಣೀರಿಟ್ಟ ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಸೋಮನಹಳ್ಳಿ ದೇವಾಲಯದ ಬಳಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರನ್ನು ನೆನೆದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಕಣ್ಣೀರಿಟ್ಟರು.

ಕೆಲ ಮುಖಂಡರ ಪಕ್ಷ ಸೇರ್ಪಡೆ ಕಾರ್ಯಕ್ರಮ ಅದಾಗಿತ್ತು. ನೇರ ಪ್ರಸಾರದಲ್ಲಿ ದೇವೇಗೌಡರು ವೀಕ್ಷಿಸುತ್ತಿದ್ದರು. ಆ ದೃಶ್ಯವನ್ನು ಪರದೆಯಲ್ಲಿ ತೋರಿಸಲಾಗುತ್ತಿತ್ತು. 'ಅನಾರೋಗ್ಯದ ಕಾರಣ ದೇವೇಗೌಡರು ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ. ಯಾರದೋ ಕೆಟ್ಟ ಕಣ್ಣು ಅವರ ಮೇಲೆ ಬಿದ್ದಿದೆ' ಎಂದು ಕುಮಾರಸ್ವಾಮಿ ಕಣ್ಣೀರಿಟ್ಟರು. ಈ ವೇಳೆ ಎಚ್.ಡಿ.ರೇವಣ್ಣ ಸಹ ಭಾವುಕರಾದರು.

'ನನ್ನನ್ನು ಸಿ.ಎಂ ಮಾಡಿದ್ದು ನಾನು ಎಂದು ಮಾಜಿ ಮುಖ್ಯಮಂತ್ರಿಯೊಬ್ಬರು ಹೇಳುತ್ತಾರೆ. ಆದರೆ, ತಂದೆ–ತಾಯಿ, ನಿಮ್ಮೆಲ್ಲರ ಆಶೀರ್ವಾದದಿಂದ ಅದು ಸಾಧ್ಯವಾಗಿದೆ' ಎಂದು ಕಾಂಗ್ರೆಸ್‌ನ ಸಿದ್ದರಾಮಯ್ಯ ಅವರಿಗೆ ತಿರುಗೇಟು ನೀಡಿದರು. 'ಜಿಲ್ಲೆಗೆ ನೀಡಿದ್ದ ಅನುದಾನ ಕಡಿತಗೊಳಿಸಿದ್ದ ಬಿಜೆಪಿ ಸರ್ಕಾರ ಮಂಡ್ಯದಲ್ಲಿ ವಿಜಯ ಪತಾಕೆ ಹಾರಿಸುತ್ತೇವೆ ಎನ್ನುತ್ತಾರೆ. ಆದರೆ, ಯಾವ ರೀತಿ ಪತಾಕೆ ಹಾರಿಸುತ್ತಾರೋ ಗೊತ್ತಿಲ್ಲ' ಎಂದು ಸಚಿವ ನಾರಾಯಣ ಗೌಡ ವಿರುದ್ಧ ಪರೋಕ್ಷವಾಗಿ ವ್ಯಂಗ್ಯವಾಡಿದರು.

'ಕಿತ್ತಾಟ ಬಿಟ್ಟು ಒಗ್ಗೂಡೋಣ'

ಚಿತ್ರದುರ್ಗ: 'ಆಂತರಿಕ ಕಿತ್ತಾಟ ಬದಿಗಿಟ್ಟು ಒಗ್ಗೂಡೋಣ. ಕಾಂಗ್ರೆಸ್ ಹೋರಾಟವು ಬಿಜೆಪಿ ಮತ್ತು ಜೆಡಿಎಸ್ ವಿರುದ್ಧವೇ ಹೊರತು, ಪಕ್ಷದ ನಾಯಕರ ವಿರುದ್ಧವಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

ತಾಲ್ಲೂಕಿನ ಸೀಬಾರದಲ್ಲಿ ಭಾನುವಾರ ಪಕ್ಷದ ಮುಖಂಡರ ಸಭೆ ಯಲ್ಲಿ ಮಾತನಾಡಿದ ಅವರು,'ಮುಖಂಡರು ಕಿತ್ತಾಡಿಕೊಂಡರೆ ಜನರಲ್ಲಿ ಪಕ್ಷದ ಬಗ್ಗೆ ವಿಶ್ವಾಸ ಉಳಿಯುವುದಿಲ್ಲ. ಜನ ಕಾಂಗ್ರೆಸ್‌ಗೆ ಮತ ನೀಡಲು ಸಿದ್ಧರಾಗಿದ್ದಾರೆ. ಈಗಾಗಲೇ ಕಾಂಗ್ರೆಸ್ ಮನೆ ಬಾಗಿಲಿಗೇ ಅಧಿಕಾರ ಬಂದಂತಾಗಿದೆ. ಎಲ್ಲರೂ ಒಗ್ಗೂಡಿ ಅದನ್ನು ಸ್ವಾಗತಿಸಬೇಕು' ಎಂದು ಸಲಹೆ ನೀಡಿದರು.

ಶಾಲೆಯಲ್ಲಿ 'ಹ್ಯಾಂಡ್ ಗ್ರೆನೇಡ್' ಪತ್ತೆ

ಅಥಣಿ: ಜಿಲ್ಲೆಯ ಗಡಿಗೆ ಹೊಂದಿಕೊಂಡಿರುವ, ಮಹಾರಾಷ್ಟ್ರದ ಜತ್ತ ತಾಲ್ಲೂಕಿನ ಕುಡನೂರು ಗ್ರಾಮದ ಸರ್ಕಾರಿ ಮರಾಠಿ ಶಾಲೆಯಲ್ಲಿ ಭಾನುವಾರ 'ಹ್ಯಾಂಡ್ ಗ್ರೆನೇಡ್' ಪತ್ತೆಯಾಗಿದೆ. ಆ ಗ್ರಾಮ ಸೇರಿದಂತೆ ಅಥಣಿಯಲ್ಲೂ ಆತಂಕದ ಸ್ಥಿತಿ ಹುಟ್ಟಿತ್ತು.

ಸಿಕ್ಕ 'ಗ್ರನೇಡ್' ಅನ್ನೇ ಮಕ್ಕಳು ಬಾಲ್ ಎಂದು ತಿಳಿದು ಆಟವಾಡುತ್ತಿದ್ದರು. ಇದನ್ನು ಗ್ರಾಮಸ್ಥರು ಸಾಂಗ್ಲಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಬಾಂಬ್ ನಿಷ್ಕ್ರಿಯ ದಳ ಅದನ್ನು ವಶಕ್ಕೆ ಪಡೆಯಿತು. 'ಬೇರೆ ಸ್ಫೋಟಕಗಳು ಪತ್ತೆಯಾಗಿಲ್ಲ. ದೊರೆತಿರುವ ಗ್ರೆನೇಡ್ ಮೇಲೆ ಉರ್ದು ಲಿಪಿ ಇದೆ' ಎಂದು ಮೂಲಗಳು ತಿಳಿಸಿವೆ.

ಇಥಿಯೋಪಿಯಾ ವ್ಯಕ್ತಿಗೆ ಮಂಕಿಪಾಕ್ಸ್ ಇಲ್ಲ

ಚಿಕ್ಕಬಳ್ಳಾಪುರ: 'ರಾಜ್ಯಕ್ಕೆ ಪ್ರವಾಸ ಬಂದಿರುವ ಇಥಿಯೋಪಿಯಾ ಪ್ರಜೆಯಲ್ಲಿ ಮಂಕಿಪಾಕ್ಸ್ ಸೋಂಕು ಇಲ್ಲ' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ವ್ಯಕ್ತಿಗೆ ಸ್ಮಾಲ್‌ಪಾಕ್ಸ್ ಸೋಂಕು ಇರುವುದು ದೃಢಪಟ್ಟಿದೆ' ಎಂದರು

ಗೌರವಧನ ಹೆಚ್ಚಳ–ಗ್ರಾ.ಪಂ ಸದಸ್ಯರ ಆಗ್ರಹ

ಮೈಸೂರು: 'ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರ ಗೌರವಧನವನ್ನು ಡಿ.25ರ ಒಳಗೆ ಹೆಚ್ಚಿಸಬೇಕು. ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಪಾಸ್ ನೀಡಬೇಕು' ಎಂದು ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದ ಆಗ್ರಹಪಡಿಸಿದೆ.

'ಸರ್ಕಾರ ಈ ಬೇಡಿಕೆಗೆ ಸ್ಪಂದಿಸದೇ ಇದ್ದಲ್ಲಿ ನಮ್ಮನ್ನು ಪ್ರತಿನಿಧಿಸುವ 25 ವಿಧಾನಪರಿಷತ್ ಸದಸ್ಯರ ನೇತೃತ್ವದಲ್ಲಿ ಡಿ.26ರಂದು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಲಾಗುವುದು' ಎಂದು ಒಕ್ಕೂಟದ ಅಧ್ಯಕ್ಷ ಸತೀಶ್ ಕಾಡಶೆಟ್ಟಿಹಳ್ಳಿ ಭಾನುವಾರ ಎಚ್ಚರಿಸಿದರು.

ಒಕ್ಕೂಟದಿಂದ ನಗರದ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಆಯೋಜಿಸಿದ್ದ 'ಗ್ರಾಮ ಪಂಚಾಯಿತಿ ಸದಸ್ಯರ ಸ್ವಾಭಿಮಾನಿ ಸಮಾವೇಶ'ದಲ್ಲಿ ಅವರು ಮಾತನಾಡಿದರು.

'ಭಾರತೀಯ ಸಂವಿಧಾನದ ಆಶಯದಂತೆ ಗ್ರಾಮ ಪಂಚಾಯಿತಿಗಳನ್ನು ಸ್ಥಳೀಯ ಸ್ವಯಂ ಸರ್ಕಾರಗಳಾಗಿ ಪರಿವರ್ತಿಸಬೇಕು. ಇದಕ್ಕಾಗಿ ಹೆಚ್ಚಿನ ಅನುದಾನ ಒದಗಿಸಬೇಕು. ನಾವೂ ಜನಪ್ರತಿನಿಧಿಗಳೇ. ಶಾಸಕರು ನಮ್ಮ ಅಧಿಕಾರದ ವ್ಯಾಪ್ತಿಯಲ್ಲಿ ಶಾಸಕರು ಅಥವಾ ಸಂಸದರು ಹಸ್ತಕ್ಷೇಪ ಮಾಡಬಾರದು. ನಮ್ಮ ಅಧಿಕಾರವನ್ನು ದುರ್ಬಲಗೊಳಿಸಬಾರದು' ಎಂದು ಒತ್ತಾಯಿಸಿದರು.

'ಜಿ.ಪಂ ಸಿಇಒ ಹಾಗೂ ತಾ.ಪಂ ಇಒಗಳು ಮಾರ್ಕೆಟಿಂಗ್ ಏಜೆಂಟರಾಗಿದ್ದಾರೆ. ಅಧಿಕೃತ ಆದೇಶಗಳಿಲ್ಲದಿದ್ದರೂ. ತಮಗೆ ಬೇಕಾದ ಕೆಲಸಗಳಿಗೆ ಗ್ರಾಮ ಪಂಚಾಯಿತಿ ಸದಸ್ಯರನ್ನು ಬಳಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಅವರು ಒತ್ತಾಯಿಸಿದರು.

'ಗ್ರಾಮ ಪಂಚಾಯಿತಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಶಾಖಾ ಕಚೇರಿಗಳಲ್ಲ. ಗ್ರಾ.ಪಂಗಳಿಗೆ ಸ್ವತಂತ್ರ ಅಸ್ತಿತ್ವವಿದೆ. ಅದನ್ನು ಉಳಿಸಿಕೊಂಡು ಹೋಗಲು ಗ್ರಾಮ ಸ್ವರಾಜ್ ಅನುಷ್ಠಾನಕ್ಕೆ ಬಲ ತುಂಬಬೇಕು' ಎಂದು ಕೋರಿದರು.



ಮೈಸೂರಿನ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ಸ್ವಾಭಿಮಾನಿ ಸಮಾವೇಶದಲ್ಲಿ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರು ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

'ಕೆವಿಪಿವೈ' ರದ್ದಾದ ನಂತರ ಇನ್‌ಸ್ಪೈರ್ ಕಾರ್ಯಕ್ರಮ ಮುನ್ನೆಲೆಗೆ ಬಂದಿದೆ. ಇದು ಭಾರತದ ಸಂಶೋಧನಾ ಅಸ್ಮಿತೆಗೆ ಪೂರಕವಾಗಿ ರೂಪಿಸಲ್ಪಟ್ಟಿದೆ. ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಮೂಲಕ ಮೂಲ ವಿಜ್ಞಾನದ ವಿಷಯಗಳ ವಿವಿಧ ಹಂತದ ಸಂಶೋಧನೆ ಮತ್ತು ಅಭಿವೃದ್ಧಿ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಹುದು.

ಮೂಲ ವಿಜ್ಞಾನ ಸಂಶೋಧನೆಗೆ ಸ್ಫೂರ್ತಿ

'ಇನ್‌ಸ್ಪೈರ್'

ಗುರುರಾಜ್ ಎಸ್. ದಾವಣಗೆರೆ

ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ(Department of Science and Technology - DST) ಇಲಾಖೆಯು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ(IISc) ಮುಖಾಂತರ ನಡೆಸುತ್ತಿದ್ದ ಕಿಶೋರ ವೈಜ್ಞಾನಿಕ ಪ್ರೋತ್ಸಾಹನ್ ಯೋಜನ (KVPY) ಪರೀಕ್ಷೆ ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ರದ್ದುಗೊಂಡಿದೆ. ಈ ಹಿನ್ನೆಲೆಯಲ್ಲಿ ಡಿಎಸ್‌ಟಿ ವಿಭಾಗದವರೇ ನಡೆಸುವ 'ಇನ್‌ಸ್ಪೈರ್' (INSPIRE - Innovation in Science Pursuit for Inspired Research) ಕಾರ್ಯಕ್ರಮ ಮತ್ತೆ ಮುನ್ನೆಲೆಗೆ ಬಂದಿದೆ.

ಪಿಯುಸಿಯಲ್ಲಿ ವಿಜ್ಞಾನ ಮತ್ತು ಪ್ರಥಮ ಪದವಿಯಲ್ಲಿ ಮೂಲ ವಿಜ್ಞಾನ ಓದುವ ವಿದ್ಯಾರ್ಥಿಗಳಿಗೆಂದೇ ಕೆವಿಪಿವೈ ಮೀಸಲಾಗಿತ್ತು. ಪಿಯುಸಿ ಶಿಕ್ಷಣದಲ್ಲಿ ಶೇ 75 ರಷ್ಟು ಅಂಕ ಪಡೆದ ವಿದ್ಯಾರ್ಥಿಗಳು ಕೆವಿಪಿವೈ ಪರೀಕ್ಷೆ ಬರೆಯಲು ಅರ್ಹತೆ ಪಡೆಯುತ್ತಿದ್ದರು. ಈಗ ಪರೀಕ್ಷೆ ಇಲ್ಲವಾದ್ದರಿಂದ ಮೂಲ ಹಾಗೂ ನಿಸರ್ಗ ವಿಜ್ಞಾನ ವಿಷಯಗಳ ಸಂಶೋಧನೆಯಲ್ಲಿ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳು ಇನ್‌ಸ್ಪೈರ್ ಕಾರ್ಯಕ್ರಮಕ್ಕೆ ದಾಖಲಾಗಬೇಕಿದೆ.

ಇನ್‌ಸ್ಪೈರ್ ಕಾರ್ಯಕ್ರಮ ಭಾರತದ ಸಂಶೋಧನಾ ಅಸ್ಮಿತೆಗೆ ಪೂರಕವಾಗಿ ರೂಪಿಸಲ್ಪಟ್ಟಿದೆ. ಇದರ ಮೂಲಕ 10 ರಿಂದ 27 ವರ್ಷದವರು ಮೂಲ ವಿಜ್ಞಾನದ ವಿಷಯಗಳ ವಿವಿಧ ಹಂತದ ಸಂಶೋಧನೆ ಮತ್ತು ಅಭಿವೃದ್ಧಿ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಹುದು. ಇದು ಪ್ರಮುಖವಾಗಿ ಮೂರು ಹಂತಗಳಲ್ಲಿ ಕಾರ್ಯ ನಿರ್ವಹಿಸುತ್ತದೆ.

ಸೀಟ್ಸ್ (SEATS - Scheme For Early Attraction Of Talents)

ಇದು 10 ರಿಂದ 15 ವರ್ಷ ವಯಸ್ಸಿನ ಶಾಲಾ ವಿದ್ಯಾರ್ಥಿಗಳಿಗಾಗಿ ರೂಪಿಸಿದ ಕಾರ್ಯಕ್ರಮ. ಇದರಲ್ಲಿ ಎರಡು ಭಾಗಗಳಿವೆ. ಮೊದಲನೆಯದು ಇನ್‌ಸ್ಪೈರ್ ಪ್ರಶಸ್ತಿ. ಎರಡನೆಯದು ಇಂಟರ್ನ್‌ಷಿಪ್. 6 ರಿಂದ 10ನೇ ತರಗತಿಯಲ್ಲಿ ಕಲಿಯುವ ಎಳೆಯ ಮನಸ್ಸುಗಳಲ್ಲಿ ಮೂಲ ವಿಜ್ಞಾನದಲ್ಲಿ ಆಸಕ್ತಿ ಬೆಳೆಸಿ ಅವರನ್ನು ಸಂಶೋಧನಾ ರಂಗಕ್ಕೆ ಕರೆತರಲು ಮಾಡುತ್ತಿರುವ ವಿನೂತನ ಪ್ರಯತ್ನ ಇದು. ಪ್ರತಿ ವರ್ಷ 10 ಲಕ್ಷ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ₹5 ಸಾವಿರ ಮೊತ್ತದ ಇನ್‌ಸ್ಪೈರ್ ಪ್ರಶಸ್ತಿ ನೀಡಲಾಗುತ್ತದೆ. ಇಂಟರ್ನ್‌ಷಿಪ್ ಅಂಗವಾಗಿ 11ನೇ ತರಗತಿಯಲ್ಲಿ ವಿಜ್ಞಾನ ವಿಷಯಗಳ ಅಧ್ಯಯನ ಮಾಡುವ ಐವತ್ತು ಸಾವಿರ ವಿದ್ಯಾರ್ಥಿಗಳಿಗೆ ಸಮ್ಮರ್ ಕ್ಯಾಂಪ್ ಆಯೋಜಿಸಿ ರಾಷ್ಟ್ರೀಯ – ಅಂತರರಾಷ್ಟ್ರೀಯ ಖ್ಯಾತಿಯ ವಿಜ್ಞಾನಿ - ಸಂಶೋಧಕರೊಂದಿಗೆ ಸಮಾಲೋಚನೆ, ಪ್ರಯೋಗ, ಪ್ರಾತ್ಯಕ್ಷಿಕೆಗಳ ಅವಕಾಶ ಕಲ್ಪಿಸಿಕೊಡಲಾಗುತ್ತದೆ. ಮೂಲ ವಿಜ್ಞಾನವನ್ನು ಹೇಗೆ ಅಧ್ಯಯನ ಮಾಡಬೇಕು ಎಂಬ ಒಳನೋಟ ನೀಡುವ, ಯಾವ ಯಾವ ಕ್ಷೇತ್ರಗಳಲ್ಲಿ ಸಂಶೋಧನೆ ನಡೆಸಬೇಕು ಎಂಬ ಬಗ್ಗೆ ತಿಳುವಳಿಕೆ ನೀಡುವ ಗಂಭೀರ ಚರ್ಚೆ - ಪ್ರಶ್ನೋತ್ತರ ಕಾರ್ಯಕ್ರಮಗಳು ಇದರಲ್ಲಿರುತ್ತವೆ. ಯಶಸ್ವಿಯಾಗಿ ಇಂಟರ್ನ್‌ಷಿಪ್ ಮುಗಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನೂ ನೀಡಲಾಗುತ್ತದೆ.

ಸ್ಕಾಲರ್‌ಷಿಪ್ ಫಾರ್ ಹೈಯರ್ ಎಜುಕೇಶನ್ (SHE)

ಜೆಇಇ, ಮೇನ್ಸ್, ಜೆಇಇ ಅಡ್ವಾನ್ಸ್, ನೀಟ್, ಎನ್‌ಟಿಎಸ್‌ಇ ಪರೀಕ್ಷೆಗಳಲ್ಲಿ ಮೊದಲ 10 ಸಾವಿರ ರ‍್ಯಾಂಕ್‌ಗಳಿಸಿದ ವಿದ್ಯಾರ್ಥಿಗಳು ಇನ್‌ಸ್ಪೈರ್ ಸ್ಕಾಲರ್‌ಷಿಪ್‌ಗೆ ಅರ್ಹರಾಗಿರುತ್ತಾರೆ. ಜೊತೆಗೆ, ಆಯಾ ರಾಜ್ಯದ ಶಿಕ್ಷಣ ವ್ಯವಸ್ಥೆ ಹಾಗೂ ಬೋರ್ಡ್‌ಗಳು ನಡೆಸುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳಲ್ಲಿ ಉನ್ನತ ಅಂಕಗಳಿಸಿದ ಶೇ 1 ರಷ್ಟು ವಿದ್ಯಾರ್ಥಿಗಳು ಮೂಲ ಹಾಗೂ ನೈಸರ್ಗಿಕ ವಿಜ್ಞಾನ ವಿಷಯಗಳಲ್ಲಿ ಪದವಿ ಶಿಕ್ಷಣ ಆಯ್ದುಕೊಂಡವರೂ ಈ ಸ್ಕಾಲರ್‌ಷಿಪ್ ಪಡೆಯಲು ಅರ್ಹತೆ ಗಳಿಸುತ್ತಾರೆ.

ತೀವ್ರಗತಿಯ ಸಂಶೋಧನಾ ಪ್ರವೃತ್ತಿ ಬೆಳೆಸುವುದನ್ನು ಗುರಿಯಾಗಿಟ್ಟುಕೊಂಡಿರುವ 'ಶಿ' ಕಾರ್ಯಕ್ರಮದಲ್ಲಿ ಪ್ರತಿ ವರ್ಷ ಮೂಲ ವಿಜ್ಞಾನ ವಿಷಯಗಳನ್ನು ಪದವಿ ಮತ್ತು ಸ್ನಾತಕೋತ್ತರ ಹಂತಗಳಲ್ಲಿ ಕಲಿಯುತ್ತಿರುವ 17ರಿಂದ 22 ವಯೋಮಾನದ ಹತ್ತು ಸಾವಿರ ವಿದ್ಯಾರ್ಥಿಗಳಿಗೆ ವಾರ್ಷಿಕ ₹80 ಸಾವಿರ ವಿದ್ಯಾರ್ಥಿ ವೇತನ ನೀಡಲಾಗುತ್ತದೆ. ಕೆವಿಪಿವೈ ರದ್ದಾಗಿರುವುದರಿಂದ ಅಲ್ಲಿ ನೀಡಲಾಗುತ್ತಿದ್ದ ಶಿಷ್ಯವೇತನ ಮತ್ತು ಸಂಶೋಧನೆ ಬೇಕಾದ ಸವಲತ್ತುಗಳನ್ನು ಇನ್‌ಸ್ಪೈರ್‌ನ ಅಡಿಯಲ್ಲಿ ನೀಡಲಾಗುತ್ತದೆ. ಇನ್ನು ಮುಂದೆ ಇನ್‌ಸ್ಪೈರ್ ಕಾರ್ಯಕ್ರಮ ಸೇರುವ ವಿದ್ಯಾರ್ಥಿಗಳ ಸಂಖ್ಯೆ 12 ಸಾವಿರಕ್ಕೆ ಏರಲಿದೆ.

ಅಶ್ಯೂರ್ಡ್ ಆಪರ್ಚುನಿಟೀಸ್ ಫಾರ್ ರಿಸರ್ಚ್ ಕರಿಯರ್ಸ್ (AORC)

ಇದರ ಉದ್ದೇಶ ದೇಶ ಎದುರಿಸುತ್ತಿರುವ ಪ್ರತಿಭಾ ಪಲಾಯನದ ಸಮಸ್ಯೆಯನ್ನು ಸಮರ್ಥವಾಗಿ ಎದುರಿಸುವುದು. ಪ್ರತಿಭಾ ಸಂಪನ್ನರಾದ ನಮ್ಮ ಯುವ ವಿಜ್ಞಾನಿ - ಸಂಶೋಧಕರಿಗೆ ನಮ್ಮದೇ ನೆಲದಲ್ಲಿ ಅವರಿಗೆ ಸಿಗಬೇಕಾದ ಅವಕಾಶ, ಸ್ಥಾನಮಾನ ಮತ್ತು ಸಂಶೋಧನಾ ವಿಷಯಗಳನ್ನು ನೀಡುವುದು ಎಓಆರ್‌ಸಿಯ ಗುರಿ. ಸಂಶೋಧನ ಸವಲತ್ತು, ಸುಸಜ್ಜಿತ ಪ್ರಯೋಗಾಲಯ ಹಣ – ಖ್ಯಾತಿ – ಐಷಾರಾಮಿ ಜೀವನದ ಆಸೆಗಾಗಿ ದೇಶ ತೊರೆಯಬೇಕೆನ್ನುವ ಸಂಶೋಧನಾ ಮನಸುಗಳನ್ನು ಇಲ್ಲಿಯೇ ನೆಲೆಸುವಂತೆ ಮಾಡಿ ಅವರಿಂದ ದೇಶದ ಉನ್ನತಿಗೆ ಬೇಕಾದ ಸಂಶೋಧನೆಗಳನ್ನು ಮಾಡಿಸಿ ಅವರ ಸಾಧನೆಗೆ ತಕ್ಕ 'ಇನ್‌ಸ್ಪೈರ್ ಫ್ಯಾಕಲ್ಟಿ ಅವಾರ್ಡ್' ಅನ್ನೂ ನೀಡಲಾಗುತ್ತದೆ. 22 ರಿಂದ 27 ವಯೋಮಾನದ ಒಂದು ಸಾವಿರ ಸಂಶೋಧಕರಿಗೆ ಡಾಕ್ಟರೇಟ್ ಪದವಿ ಪಡೆಯಲು ಶಿಷ್ಯ ವೇತನ ನೀಡಲಾಗುತ್ತದೆ ಮತ್ತು ಪಿಎಚ್‌ಡಿ ಮುಗಿಸಿದ ಸಾವಿರ ಸಂಶೋಧಕರಿಗೆ ಡಾಕ್ಟರೇಟ್ ನಂತರದ ಉನ್ನತ ಸಂಶೋಧನೆಗಾಗಿ ಮತ್ತಷ್ಟು ಶಿಷ್ಯವೇತನದ ಜೊತೆ ದೇಶದ ಅತ್ಯುನ್ನತ ಸಂಶೋಧನಾ ಸಂಸ್ಥೆ ಹಾಗೂ ಸ್ವಾಯತ್ತ ಸಂಸ್ಥೆಗಳಲ್ಲಿ ಕೆಲಸ ಮಾಡಲು 5 ವರ್ಷಗಳ ಅವಧಿಯ ಸೇವಾ ಅವಕಾಶವನ್ನು ನೀಡಲಾಗುತ್ತದೆ. ವಿಶೇಷವೆಂದರೆ ಮೂಲ ಮತ್ತು ಅನ್ವಯಿಕ ವಿಜ್ಞಾನ ಶಾಖೆಗಳೆರಡರಲ್ಲೂ ದುಡಿಯುವ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಸಂಶೋಧನೆ ನಡೆಸುವವರಿಗೂ ಈ ಅವಕಾಶಗಳಿರುತ್ತವೆ.

ಇನ್‌ಸ್ಪೈರ್ ಕುರಿತ ಹೆಚ್ಚಿನ ಮಾಹಿತಿಗೆ ಈ ಜಾಲತಾಣಗಳನ್ನು ಸಂಪರ್ಕಿಸಬಹುದು.
https://online-inspire.gov.in
https://dst.gov.in
https://transformingindia.mygov.in

(ಲೇಖಕರು: ಪ್ರಾಚಾರ್ಯರು, ವಿಡಿಯಾ ಪೂರ್ಣ ಪ್ರಜ್ಞ ಪದವಿ ಪೂರ್ವ ಕಾಲೇಜು, ಬೆಂಗಳೂರು)

ಇದು ಕಲಾಂ ಕನಸಿನ ಕೂಸು

ಇನ್‌ಸ್ಪೈರ್ ಸ್ಕಾಲರ್‌ಷಿಪ್ ಯೋಜನೆ ಡಾ. ಎಪಿಜೆ ಅಬ್ದುಲ್ ಕಲಾಂ ಅವರ ಕನಸಿನ ಕೂಸು. 11ನೇ ಪಂಚವಾರ್ಷಿಕ ಯೋಜನೆಯ ಭಾಗವಾದ ಈ ಇನ್‌ಸ್ಪೈರ್ ಸ್ಕಾಲರ್‌ಷಿಪ್ ಕಾರ್ಯಕ್ರಮಕ್ಕೆ ಡಿಸೆಂಬರ್ 13, 2008ರ ಬಜೆಟ್‌ನಲ್ಲಿ ₹1979.25 ಕೋಟಿ ಮೀಸಲಿರಿಸಲಾಗಿತ್ತು. ಈಗ ಅದರ ಪ್ರಮಾಣ ₹2200 ಕೋಟಿಗೆ ತಲುಪಿದೆ. ಉನ್ನತ ಶಿಕ್ಷಣ ವಿಭಾಗಗಳಲ್ಲಿ ಸಂಶೋಧನೆ ನಡೆಸುವ ವಿದ್ಯಾರ್ಥಿಗಳು ಪ್ರತಿ ಬೇಸಿಗೆಯಲ್ಲಿ ನುರಿತ ಸಂಶೋಧಕರ ಮಾರ್ಗದರ್ಶನದಲ್ಲಿ ದೇಶದ ಪ್ರತಿಷ್ಠಿತ ಪ್ರಯೋಗಾಲಯವೊಂದರಲ್ಲಿ ಒಂದಾದರೂ ಪ್ರಾಜೆಕ್ಟ್ ಮಾಡಲೇಬೇಕು.

ಪ್ರತಿ ವರ್ಷ ಅಕ್ಟೋಬರ್ ಮಧ್ಯಭಾಗದಿಂದ ಡಿಸೆಂಬರ್ ಅಂತ್ಯದವರೆಗೆ ಇನ್‌ಸ್ಪೈರ್ ಸ್ಕಾಲರ್‌ಷಿಪ್‌ಗೆ ಅರ್ಜಿ ಸಲ್ಲಿಸಬಹುದು. ಶಾಲಾ ವಿದ್ಯಾರ್ಥಿಗಳಿಗಾಗಿ ಇರುವ ಈ ಸ್ಕಾಲರ್‌ಷಿಪ್ ಯೋಜನೆಯನ್ನು ಮಾನಕ್ (MANAK - Million minds Augumenting National Aspirations And Knowledge)ಎಂದು ಕರೆಯುತ್ತಾರೆ.

ಪ್ರತಿ ಶಾಲೆಯೂ ಪ್ರತಿವರ್ಷ ಮೂಲಭೂತ ಮತ್ತು ಹೊಸತು ಎನ್ನಿಸುವ ಸಂಶೋಧನೆ ಕೈಗೊಂಡ ತನ್ನ ಶಾಲೆಯ ವಿದ್ಯಾರ್ಥಿಗಳನ್ನು ಇನ್‌ಸ್ಪೈರ್ ಸ್ಕಾಲರ್‌ಷಿಪ್‌ಗೆ ನಾಮನಿರ್ದೇಶನ ಮಾಡಬಹುದು. ವಿಜ್ಞಾನ, ಗಣಿತ, ಎಂಜಿನಿಯರಿಂಗ್, ಮೆಡಿಸಿನ್, ಫಾರ್ಮಸಿ, ಅಗ್ರಿಕಲ್ಚರ್ ವಿಷಯಗಳಲ್ಲಿ ಸಂಶೋಧನೆ ಕೈಗೊಳ್ಳುವ ಅಭ್ಯರ್ಥಿಗಳು ಇನ್‌ಸ್ಪೈರ್ ಫ್ಯಾಕಲ್ಟಿ ಅವಾರ್ಡ್ ಗೆ ಅರ್ಹತೆ ಪಡೆಯುತ್ತಾರೆ.

ಡಿಪಾರ್ಟ್‌ಮೆಂಟ್ ಆಫ್ ಅಟಾಮಿಕ್ ಎನರ್ಜಿ ಆ್ಯಂಡ್ ಬೇಸಿಕ್ ಸೈನ್ಸಸ್, IISER, NISER, ಜಗದೀಶ್ ಬೋಸ್ ನ್ಯಾಷನಲ್ ಸೈನ್ಸ್ ಟ್ಯಾಲೆಂಟ್ ಸರ್ಚ್ ಎಕ್ಸಾಮಿನೇಷನಲ್ ಒಲಂಪಿಯಾಡ್‌ಗಳಲ್ಲಿ ಆಯ್ಕೆಯಾದವರು ಇನ್‌ಸ್ಪೈರ್ ಕಾರ್ಯಕ್ರಮಕ್ಕೆ ಅರ್ಹತೆ ಪಡೆಯುತ್ತಾರೆ.

ವಿದ್ಯಾರ್ಥಿ ವೇತನ ಕೈಪಿಡಿ

- **ಎಚ್‌ಡಿಎಫ್‌ಸಿ ಬ್ಯಾಂಕ್ ಪರಿವರ್ತನಾ ಇಸಿಎಸ್ ಸ್ಕಾಲರ್‌ಷಿಪ್ 2022-23**

ವಿವರ: ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ 1 ರಿಂದ ಸ್ನಾತಕೋತ್ತರ ಪದವಿ ತರಗತಿ, ಡಿಪ್ಲೊಮಾ, ಪದವಿ, ವೃತ್ತಿಪರ ಕೋರ್ಸ್‌ಗಳಲ್ಲಿ ಕಲಿಯುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ಈ ಸ್ಕಾಲರ್‌ಷಿಪ್ ಯೋಜನೆ ರೂಪಿಸಲಾಗಿದೆ.
ಅರ್ಹತೆ: ಭಾರತೀಯ ಪ್ರಜೆಯಾಗಿರಬೇಕು.ಕನಿಷ್ಠ ಶೇ 55 ಅಂಕ ಗಳಿಸಿರಬೇಕು. ಕಳೆದ ಮೂರು ವರ್ಷಗಳಿಂದ ವೈಯಕ್ತಿಕ ಹಾಗೂ ಕೌಟುಂಬಿಕ ತೊಂದರೆಯಿಂದ ಶಿಕ್ಷಣ ಮುಂದುವರಿಸಲು ಕಷ್ಟಪಡುತ್ತಿರುವ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಕುಟುಂಬದ ವಾರ್ಷಿಕ ಆದಾಯ ₹ 2.5 ಲಕ್ಷದ ಒಳಗಿರಬೇಕು.
ಆರ್ಥಿಕ ನೆರವು: ₹ 75,000
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ
ಅರ್ಜಿ ಸಲ್ಲಿಕೆಗೆ ಕೊನೆ ದಿನ: 31.8.2022
ಹೆಚ್ಚಿನ ಮಾಹಿತಿಗೆ : www.b4s.in/praja/HEC12

- **ದಿ ಟಾಟಾ ಕ್ಯಾಪಿಟಲ್ ಪಂಖ್ ಸ್ಕಾಲರ್‌ಷಿಪ್**

ವಿವರ: ಟಾಟಾ ಕ್ಯಾಪಿಟಲ್ ಲಿಮಿಟೆಡ್ 6ರಿಂದ 12 ನೇ ತರಗತಿ, ವೃತ್ತಿಪರ ಕೋರ್ಸ್‌ಗಳಲ್ಲಿ ಕಲಿಯುತ್ತಿರುವ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ಸ್ಕಾಲರ್‌ಷಿಪ್ ಯೋಜನೆ ರೂಪಿಸಲಾಗಿದೆ.
ಅರ್ಹತೆ: ಭಾರತೀಯ ಪ್ರಜೆಯಾಗಿರಬೇಕು. ಕನಿಷ್ಠ ಶೇ 60 ಅಂಕ ಗಳಿಸಿರಬೇಕು. ಕುಟುಂಬದ ವಾರ್ಷಿಕ ಆದಾಯ ₹ 4 ಲಕ್ಷಕ್ಕಿಂತ ಹೆಚ್ಚಿರಬಾರದು.
ಆರ್ಥಿಕ ನೆರವು: ಬೋಧನಾ ಶುಲ್ಕ ಶೇ 80ರವರೆಗೆ
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್
ಅರ್ಜಿ ಸಲ್ಲಿಕೆಗೆ ಕೊನೆ ದಿನ: 31.8.2022
ಮಾಹಿತಿಗೆ: www.b4s.in/praja/TCPS14
ಕೃಪೆ: buddy4study.com

ಶಿಕ್ಷಣವೇ ಶಕ್ತಿ ಸ್ಪರ್ಧಾ ಕ್ರಿಯೇಟಿವ್ ಶಿಕ್ಷಣ ಸಂಸ್ಥೆ (ರಿ.), ಶಿವಮೊಗ್ಗ
ನೋಂದಣಿ ಸಂಖ್ಯೆ: DRSH/SOR/269/2019-20
ನವೋದಯ, ಮೊರಾರ್ಜಿ ದೇಸಾಯಿ, ಸೈನಿಕ ಶಾಲೆಗಳ ಪ್ರವೇಶ ಪರೀಕ್ಷೆಗಳ ತರಬೇತಿ ಕೇಂದ್ರ
(ಕೇಂದ್ರ ಕಛೇರಿ) ಸತೀಶ್ ಟೈರ್ಸ್, ಮೊದಲ ಮಹಡಿ, ಜಿಲ್ಲಾ ಪಂಚಾಯತ್ ಕಛೇರಿ ಪಕ್ಕ, ಕುವೆಂಪು ರಸ್ತೆ ಶಿವಮೊಗ್ಗ.
8050730717, 7204636072, 9482324006, 9731118556, 9686596072, 8123816072
4 & 5ನೇ ತರಗತಿ ವಿದ್ಯಾರ್ಥಿಗಳಿಗೆ ಪ್ರವೇಶ ಪ್ರಾರಂಭವಾಗಿದೆ
2022-23ನೇ ಸಾಲಿನಲ್ಲಿ ಜವಾಹರ ನವೋದಯ ಶಾಲೆಗಳಿಗೆ 6ನೇ ತರಗತಿಗೆ ಪ್ರವೇಶಪಡೆದ ನಮ್ಮ ಸಂಸ್ಥೆಯ ವಿದ್ಯಾರ್ಥಿಗಳಿಗೆ ಅಭಿನಂದನೆಗಳು.

ಪ್ರಸಕ್ತ ವರ್ಷದಲ್ಲಿ 4 & 5ನೇ ತರಗತಿಯ ವಿದ್ಯಾರ್ಥಿಗಳಿಗೆ 2022-23ನೇ ಸಾಲಿನ ನವೋದಯ ಮೊರಾರ್ಜಿ ದೇಸಾಯಿ ಪ್ರವೇಶ ಪರೀಕ್ಷೆಗೆ Online ಮತ್ತು Offline ತರಬೇತಿಗಳು ಪ್ರಾರಂಭವಾಗಿವೆ.
ನುರಿತ ತರಬೇತುದಾರರಿಂದ ಅತ್ಯುತ್ತಮ ಗುಣಮಟ್ಟದ ತರಬೇತಿ ಪಡೆದು ಕರ್ನಾಟಕ ರಾಜ್ಯದಲ್ಲಿಯೇ ಅತಿಹೆಚ್ಚಿನ ಫಲಿತಾಂಶ ನೀಡುವ ಏಕೈಕ ಸಂಸ್ಥೆ ಶಿಕ್ಷಣವೇ ಶಕ್ತಿ. ನಮ್ಮ ಸಂಸ್ಥೆಯ ತರಬೇತಿ ವಿಧಾನವನ್ನು ತಿಳಿಯಲು ನಮ್ಮ Youtube Channel Shikshanave Shakti Shimoga ಎಂದು Search ಮಾಡಿ ತಪ್ಪದೇ ಉಚಿತವಾಗಿ Subscribe ಮಾಡಿಕೊಳ್ಳಿ.
ವಿಶೇಷ ದಾಖಲಾತಿ: 75ನೇ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತವಾಗಿ ಆಗಸ್ಟ್ 15ರ ಒಳಗೆ ಪ್ರವೇಶ ಪಡೆಯುವ ಮೊದಲ 75 ವಿದ್ಯಾರ್ಥಿಗಳ Online ತರಗತಿಗಳಿಗೆ ಶೇ. 50ರಷ್ಟು ರಿಯಾಯಿತಿಯನ್ನು ನೀಡಲಾಗುವುದು.
ವಿಕಲಚೇತನ ಹಾಗೂ ತಂದೆ ಮತ್ತು ತಾಯಿ ಇಬ್ಬರೂ ಪೋಷಕರು ಇಲ್ಲದಿರುವ ವಿದ್ಯಾರ್ಥಿಗಳಿಗೆ ಸೂಕ್ತ ದಾಖಲೆಗಳನ್ನು ಒದಗಿಸಿದಲ್ಲಿ ಸಂಪೂರ್ಣವಾಗಿ ಉಚಿತ Online ತರಬೇತಿ ನೀಡಲಾಗುವುದು.
For Online Abacus Classes, Teacher's Training, Abacus & Vedic Maths Franchise - 9611151104 | For NEET, CET, JEE - 7338387013

ಗಣಿತ ಪದವೀಧರರಿಗೆ ಬೇಡಿಕೆ



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್

- **ನನ್ನ ಮಗಳು ಮೊದಲ ವರ್ಷದ ಪಿಯುಸಿ (ಪಿಸಿಎಂಬಿ) ಓದುತ್ತಿದ್ದು, ದ್ವಿತೀಯ ಪಿಯುಸಿ ನಂತರ, ಯಾವ ಕೋರ್ಸ್ ಓದಿದರೆ ಯಾವ ನೌಕರಿ ಪಡೆಯಬಹುದು ಎಂಬ ಮಾಹಿತಿ ತಿಳಿಸಿ.**
ಸತೀಶ, ದಾವಣಗೆರೆ.
ವಿದ್ಯಾರ್ಥಿಗಳ ಆಸಕ್ತಿ, ಅಭಿರುಚಿ ಮತ್ತು ಸ್ವಾಭಾವಿಕ ಪ್ರತಿಭೆಯಂತೆ ವೃತ್ತಿಯೋಜನೆಯನ್ನು ಮಾಡಿ ಅದಕ್ಕೆ ಅನುಗುಣವಾಗಿ ಕೋರ್ಸ್ ಆಯ್ಕೆ ಮಾಡಬೇಕು.
ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/c/EducationalExpertManagementCareerConsultant
- **ನಾನು ಪಿಯುಸಿ (ವಿಜ್ಞಾನ) ಮಾಡಿದ್ದೇನೆ. ಐಎಎಸ್ ಅಧಿಕಾರಿ ಆಗಬೇಕೆಂಬ ಹಂಬಲವಿದೆ. ಪದವಿಯಲ್ಲಿ ಕಲಾ ವಿಭಾಗ ತೆಗೆದುಕೊಂಡರೆ ಹೆಚ್ಚಿನ ಅಂಕ ಪಡೆದು, ರ‍್ಯಾಂಕ್ ಪಡೆಯಲು ಸಾಧ್ಯವಾಗುತ್ತದೆ ಎಂದುಕೊಂಡಿದ್ದೇನೆ. ಆದರೆ, ಕಡಿಮೆ ಉದ್ಯೋಗಾವಕಾಶದ ಕಾರಣ, ಮನೆಯವರು ಕಲಾ ವಿಭಾಗ ತೆಗೆದುಕೊಳ್ಳಲು ಬಿಡುತ್ತಿಲ್ಲ. ಸಲಹೆ ಕೊಡಿ.**
ಇರ್ಫಾನ್, ಊರು ತಿಳಿಸಿಲ್ಲ.
ಯುಪಿಎಸ್‌ಸಿ ಕಠಿಣವಾದ ಮೂರು ಹಂತದ ಪರೀಕ್ಷೆ. ಈ ಪರೀಕ್ಷೆಯಲ್ಲಿ ನಿಮ್ಮ ಆಸಕ್ತಿಯ ಅನುಸಾರ, ಯಾವ ಐಚ್ಛಿಕ ವಿಷಯವನ್ನು ತೆಗೆದುಕೊಳ್ಳಬೇಕೆಂದು ಈಗಲೇ ನಿರ್ಧರಿಸಿದರೆ, ಪದವಿ ಹಂತದಲ್ಲಿ ಯಾವ ವಿಭಾಗ ತೆಗೆದುಕೊಳ್ಳಬಹುದೆಂದು ನಿರ್ಧರಿಸಬಹುದು. ವಿಜ್ಞಾನ ವಿಭಾಗದಲ್ಲೇ ಮುಂದುವರೆದರೆ, ಯುಪಿಎಸ್‌ಸಿ ಜೊತೆಗೆ ಇನ್ನಿತರ ಅವಕಾಶಗಳನ್ನೂ ಅನ್ವೇಷಿಸಬಹುದು. ಕಲಾ ವಿಭಾಗದಲ್ಲಿ ಕಡಿಮೆ ಉದ್ಯೋಗಾವಕಾಶಗಳಿವೆ ಎನ್ನುವುದು ತಪ್ಪು ಅಭಿಪ್ರಾಯ.
- **ನಾನು ಬಿ.ಎಸ್ಸಿ (ಪಿಸಿಎಂಸಿ) ಮಾಡಿದ್ದೇನೆ. ಈಗ ಎಂ.ಎಸ್ಸಿ (ಭೂಗೋಳಶಾಸ್ತ್ರ) ಮಾಡಬೇಕು ಅಂದುಕೊಂಡಿದ್ದೇನೆ. ಇದರಿಂದ ಅನುಕೂಲ ಆಗಬಹುದೇ? ಈ ನಿರ್ಧಾರ ಸರಿಯೇ?**
ಸುಮನಾ ಎಂ, ಬೆಂಗಳೂರು.
ಸಾಮಾನ್ಯವಾಗಿ, ನಿಮ್ಮ ಆಸಕ್ತಿ, ಅಭಿರುಚಿ ಮತ್ತು ಸ್ವಾಭಾವಿಕ ಪ್ರತಿಭೆಯಂತೆ ವೃತ್ತಿಯೋಜನೆಯನ್ನು ಮಾಡಿ, ಅದಕ್ಕೆ ಅನುಗುಣವಾಗಿ ಕೋರ್ಸ್ ಆಯ್ಕೆ ಮಾಡಬೇಕು. ವೃತ್ತಿಯೋಜನೆ ಮಾಡದೆ ಕೋರ್ಸ್ ಆಯ್ಕೆ ಮಾಡಿದರೆ, ಇಂತಹ ಗೊಂದಲ ಗಳಿಂದ, ಭವಿಷ್ಯದ ಬಗ್ಗೆ ಆತಂಕಗಳು ಮೂಡುವುದು ಸಹಜ. ಈಗಲೂ, ಕಾಲ ಮಿಂಚಿಲ್ಲ; ನಿಮ್ಮ ಭವಿಷ್ಯದ ಕನಸಿನಂತೆ, ವೃತ್ತಿ ಯೋಜನೆಯನ್ನು ಮಾಡಿ, ಅದರಂತೆ ಮುಂದಿನ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸೂಕ್ತ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=MHnPg_sp6E0
- **ನಾನು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದೇನೆ. ಪೂರಕ ಪರೀಕ್ಷೆ ಬರೆದ ನಂತರ, ಏನು ಮಾಡಬಹುದು ತಿಳಿಸಿ.**
- **ಶೋಯಿಬ್, ಬಿರಾದಾರ್.**
ಪರೀಕ್ಷೆಯ ನಿರಾಶೆಯನ್ನು ಒಂದು ಸಣ್ಣ ಹಿನ್ನಡೆಯಂತೆ ಭಾವಿಸಿ. ಮುಖ್ಯವಾಗಿ ಪರೀಕ್ಷೆಯಲ್ಲಿನ ವೈಫಲ್ಯಕ್ಕೆ ಕಾರಣಗಳನ್ನು ಮೌಲ್ಯಮಾಪನ ಮಾಡಿ, ಮುಂದೆ ಹೀಗಾಗದಂತೆ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಿ. ಪೂರಕ ಪರೀಕ್ಷೆಯ ನಂತರ, ಜೀವನದ ಕನಸು ಗಳು ಮತ್ತು ನಿಮ್ಮ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು, ಸೂಕ್ತವಾದ ವೃತಿಯೋಜನೆಯನ್ನು ಮಾಡಿ, ಅದರಂತೆ ಮುಂದಿನ ಕೋರ್ಸ್ ಆಯ್ಕೆಗಳಿರಲಿ. ಜೀವನದ ಪಾಠಶಾಲೆಯಲ್ಲಿ ಯಶಸ್ಸು ನಿಮ್ಮದಾಗಲಿ.
- **ನಾನು ಬಿ.ಎಸ್ಸಿ (ಪಿಸಿಎಂ) ಮುಗಿಸಿ, ಕೆಎಎಸ್‌ಗೆ ತಯಾರಿ ನಡೆಸಿದ್ದೇನೆ. ಆದರೆ, ಆದರೆ ಈ ಸಲ ಎಂ.ಎಸ್ಸಿ (ಗಣಿತ) ಮಾಡಬೇಕು ಎಂದುಕೊಂಡಿದ್ದೇನೆ. ಕೆಎಎಸ್ ತಯಾರಿ ಮುಂದುವರಿಸಲೇ ಅಥವಾ ಎಂ.ಎಸ್ಸಿ ಮಾಡಲೇ ಗೊತ್ತಾಗುತ್ತಿಲ್ಲ. ಎಂ.ಎಸ್ಸಿ (ಗಣಿತ)ದಲ್ಲಿ ಮುಂದುವರಿದರೆ ಉದ್ಯೋಗಾವಕಾಶಗಳು ಹೇಗಿವೆ ತಿಳಿಸಿ.**
ಆನಂದ ಕೆಕ್ಕಾರ್, ಊರು ತಿಳಿಸಿಲ್ಲ.

ಎಂ.ಎಸ್ಸಿ (ಗಣಿತ) ಪದವೀಧರರಿಗೆ ಬೇಡಿಕೆಯಿದ್ದು, ಸಾಕಷ್ಟು ಉದ್ಯೋಗಾವಕಾಶಗಳಿವೆ. ಖಾಸಗಿ ಕ್ಷೇತ್ರದ ಐಟಿ, ರಿಸರ್ಚ್ ಸಂಸ್ಥೆಗಳಲ್ಲಿ, ವೃತ್ತಿಯ ಅವಕಾಶಗಳಿವೆ. ಇದಲ್ಲದೆ, ಕೆಎಎಸ್/ಐಎಎಸ್ ಮಾಡಿ ಸರ್ಕಾರಿ ವಲಯದ ಉನ್ನತ ಹುದ್ದೆಗಳನ್ನು ಪಡೆದುಕೊಳ್ಳಬಹುದು. ಎಂ.ಎಸ್ಸಿ ನಂತರ,
ಡಾಕ್ಟರೇಟ್ ಮಾಡಿದರೆ ಶಿಕ್ಷಕ ವೃತ್ತಿಯ ಆಕರ್ಷಕ ಅವಕಾಶಗಳಿವೆ. ಹಾಗಾಗಿ, ಎಂ.ಎಸ್ಸಿ ಜೊತೆಗೆ ಕೆಎಎಸ್ ಪರೀಕ್ಷೆಗೆ ತಯಾರಿಯನ್ನೂ ಮಾಡಬಹುದೇ ಎಂದು ಪರಿಶೀಲಿಸಿ.
- **ಸಂಖ್ಯಾಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದೇನೆ. ಇಂಟೀರಿಯರ್ ಡಿಸೈನ್ ಕೋರ್ಸ್ ಮಾಡಲು ಮನಸ್ಸು ಮಾಡಿದ್ದೇನೆ. ಯಾವ ಕಾಲೇಜು ಸೂಕ್ತ ಎಂದು ಹೇಳಬಹುದೇ?**
ದರ್ಶಿನಿ, ಊರು ತಿಳಿಸಿಲ್ಲ.
ಸಂಖ್ಯಾಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯ ನಂತರ, ನೀವು ಬೇರೊಂದು ವಿಭಾಗದ ಕೋರ್ಸ್ ಮಾಡಲು ಬಲವಾದ ಕಾರಣಗಳಿರಬೇಕು. ಹಾಗಾಗಿ, ನಿಮ್ಮ ನಿರ್ಧಾರ ಸರಿಯೇ ಎಂದು ಮತ್ತೊಮ್ಮೆ ಅವಲೋಕಿಸಿ. ಉತ್ತಮ ಕಾಲೇಜು ಆಯ್ಕೆ ಪ್ರಕ್ರಿಯೆ ಕುರಿತ ಮಾರ್ಗದರ್ಶನಕ್ಕಾಗಿ, ಈ ವಿಡಿಯೊ ವೀಕ್ಷಿಸಿ: https://www.youtube.com/watch?v=DmaXk-MuoOI

ಇನ್ನಷ್ಟು ಪ್ರಶ್ನೋತ್ತರಗಳಿಗೆ www. prajavani.net/Shikshana ಇಲ್ಲಿಗೆ ಭೇಟಿ ನೀಡಿ.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

‘ಹಸಿರುಮನೆ ಪರಿಣಾಮ’ದಲ್ಲಿ ಹಸಿರ ಹೆಸರೇಕೆ ಬಂತು?

> ಭೂಮಿಯ ಉಷ್ಣತೆ ದಿನದಿನಕ್ಕೆ ಹೆಚ್ಚುತ್ತಿದೆ. ಇದಕ್ಕೆ ‘ಗ್ರೀನ್‌ಹೌಸ್ ಪರಿಣಾಮ’ ಎನ್ನುತ್ತಾರೆ. ಅದರ ಅನುಭವ ಬೇಕೆಂದರೆ ಹಗಲು ವೇಳೆ ಯಾವುದಾದರೂ ಪಾಲಿಹೌಸ್ ಒಳಕ್ಕೆ ಹೋಗಿ ನಿಲ್ಲಿ ಅಥವಾ ಗಾಜುಗಳನ್ನು ಏರಿಸಿಕೊಂಡು ಕಾರಲ್ಲಿ ಕೂತರೂ ಆದೀತು.



ಪರಿಸರ

ಚೇತನ ಶೀತಲಬಾವಿ

‘ಹಸಿರು ಮನೆ ಪರಿಣಾಮ‘ (ಗ್ರೀನ್‌ಹೌಸ್ ಎಫೆಕ್ಟ್) ಎಂಬ ನುಡಿಗಟ್ಟನ್ನು ಎಲ್ಲರೂ ಕೇಳಿರುತ್ತಾರೆ. ಈ ಪರಿಣಾಮದಿಂದಾಗಿಯೇ ಭೂಮಿಯ ಉಷ್ಣತೆ ಏರುತ್ತಿದೆ ಎಂಬುದೂ ಖಾತ್ರಿಯಾಗಿದೆ. ಆದರೆ ಇದು ಅನೇಕರಿಗೆ ಗೊಂದಲ ಹುಟ್ಟಿಸುವಂತಿದೆ. ಏಕೆಂದರೆ ಹಸಿರು ಅಥವಾ ಹಸಿರು ಮನೆ ಅಂದರೆ ನಮ್ಮ ಸಾಮಾನ್ಯ ಅರ್ಥದಲ್ಲಿ ಗಿಡಮರಗಳ, ದಟ್ಟ ಅರಣ್ಯದ ಚಿತ್ರಣ ನಮಗೆ ಮೂಡುತ್ತದೆ. ಇದರ ಪರಿಣಾಮ ಅದು ಹೇಗೆ ಭೂಮಿಯ ಉಷ್ಣತೆಯನ್ನು ಏರಿಸುತ್ತದೆ? ಈ ಗೊಂದಲ ಕೆಲವರಲ್ಲಿ ಸಹಜವಾಗಿಯೇ ಮೂಡುತ್ತದೆ.

ವಾಸ್ತವ ಏನೆಂದು ನೋಡೋಣ; ಬ್ರಿಟಿಷರು ಗಾಜಿನ ಮನೆಯಲ್ಲಿ ಸಸ್ಯಗಳನ್ನು ಬೆಳೆಸುತ್ತಿದ್ದರು. ಏಕೆಂದರೆ ಬ್ರಿಟನ್‌ನಲ್ಲಿ ಅಥವಾ ಯುರೋಪ್‌ನ ಅನೇಕ ದೇಶಗಳಲ್ಲಿ ಚಳಿ ತುಂಬಾ ಜಾಸ್ತಿ. ಬಿಸಿಲು ಜಾಸ್ತಿ ಇರುವ ಭಾರತದಂಥ ದೇಶದಲ್ಲಿ ಬೆಳೆಯುವ ಸಸ್ಯಗಳು (ಉದಾ: ಸೌತೆಕಾಯಿ) ಅಲ್ಲಿ ಬೆಳೆಯುವುದಿಲ್ಲ. ಚಳಿಗಾಲದಲ್ಲಂತೂ ಏನನ್ನೂ ಬೆಳೆಸಲು ಸಾಧ್ಯವಿಲ್ಲದಂಥ ಸ್ಥಿತಿ. ಅಲ್ಲಿನ ಘೋರ ಚಳಿಯಲ್ಲೂ ಸಸ್ಯಗಳನ್ನು ಬೆಳೆಸಲೆಂದೇ ಅವರು ಗಾಜಿನ ಮನೆಗಳನ್ನು ನಿರ್ಮಾಣ ಮಾಡಿ, ಅದರಲ್ಲಿ ತಮಗಿಷ್ಟವಾದ ಸಸ್ಯಗಳನ್ನು ಬೆಳೆಸುತ್ತಿದ್ದರು.

ಪಾಲಿಹೌಸ್

ಗಾಜಿನದೇ ಸೂರು, ಕಿಟಕಿ, ತೆಲುಗೋಡೆ ಮತ್ತು ಬಾಗಿಲು ಇದ್ದರೆ ಅದರಲ್ಲಿ ಸೆಕೆ ಜಾಸ್ತಿ ಇರುತ್ತದೆ. ಅಲ್ಲಿನ ಕೃತಕ ಪರಿಸರದಲ್ಲಿ ಶಾಖ ಹೆಚ್ಚಿರುವುದರಿಂದ ಚಳಿಗಾಲದಲ್ಲೂ ಬೆಳೆ ಚೆನ್ನಾಗಿ ಬರುತ್ತದೆ. ಗಾಳಿಯ ಹೊಡೆತ, ಕೀಟಬಾಧೆ ಇವೆಲ್ಲ ಇರುವುದಿಲ್ಲ. ಸಸ್ಯಗಳಿಗೆ ಅಗತ್ಯವಿದ್ದಷ್ಟು ತೇವಾಂಶ ಸಿಗುವಂತೆ ಮಾಡಬಹುದು. ಅದಕ್ಕೇ ಬ್ರಿಟಿಷರು ಬೆಂಗಳೂರಿನಲ್ಲೂ ಲಾಲ್‌ಬಾಗ್‌ನಲ್ಲಿ 1889ರಲ್ಲಿ ನಿರ್ಮಿಸಿದ ಗಾಜಿನ ಮನೆ ಗೊತ್ತಲ್ಲ? ಅದಕ್ಕೆ ಅವರು ಗ್ಲಾಸ್‌ಹೌಸ್ ಹೆಸರಿನ ಬದಲು ‘ಗ್ರೀನ್‌ಹೌಸ್’ ಎಂದು ಕರೆಯುತ್ತಾರೆ.

ಗಾಜಿನ ಬದಲು ಪ್ಲಾಸ್ಟಿಕ್‌ನಂಥ ಪಾರಕ ಹಾಳೆಗಳನ್ನು ಹೊದಿಸಿದರೂ ಅಂಥ ಮನೆಗಳಲ್ಲಿ ಸೆಕೆ ತುಂಬ ಜಾಸ್ತಿ ಇರುತ್ತದೆ. ನಮ್ಮಲ್ಲೂ ಈಗೀಗ ‘ಪಾಲಿ ಹೌಸ್’ (ಅಂದರೆ ಪಾಲಿಥೀನ್-ಪ್ಲಾಸ್ಟಿಕ್- ಹಾಳೆಗಳನ್ನು ಹೊದಿಸಿದ ಕುಟೀರ) ರೈತರಲ್ಲಿ ಸಾಕಷ್ಟು ಜನಪ್ರಿಯ ಆಗುತ್ತಿದೆ. ಹೂಹಣ್ಣು ತರಕಾರಿಗಳನ್ನು ಉದ್ಯಮ ರೂಪದಲ್ಲಿ ಬೆಳೆಸುವವರಿಗಂತೂ ಇಂಥ ಪಾಲಿಹೌಸ್ ಬೇಕೇಬೇಕು. ಪುಷ್ಪೋದ್ಯಮ ಅರಳಿ ನಿಂತಿರುವುದೇ ಪಾಲಿಹೌಸ್ ಅಥವಾ ‘ಗ್ರೀನ್‌ಹೌಸ್’ಗಳಲ್ಲಿ.

‘ಸೆಕೆ ಹೆಚ್ಚಾಗುತ್ತದೆ’ ಎಂಬುದಕ್ಕೇ ‘ಗಾಜಿನ ಮನೆ ಪರಿಣಾಮ’ ಎನ್ನುತ್ತಾರೆ. ಗಾಜಿನ ಅಥವಾ ಪ್ಲಾಸ್ಟಿಕ್ ಮನೆಯಲ್ಲಿ ಶಾಖ ಜಾಸ್ತಿ ಏಕೆ ಎಂಬುದನ್ನು ಈಗ ನೋಡೋಣ.

ಸೂರ್ಯನ ಬೆಳಕಿನ ತರಂಗಗಳು ಗಾಜನ್ನು ಅಥವಾ ಪ್ಲಾಸ್ಟಿಕ್ಕನ್ನು ಸಲೀಸಾಗಿ ದಾಟಿ ಮನೆಯೊಳಕ್ಕೆ ಬರುತ್ತದೆ. ಆದರೆ ಹಾಗೆ ಬಂದ ಬೆಳಕು ನೆಲ ಅಥವಾ ಸಸ್ಯಗಳ ಮೇಲೆ ಬಿದ್ದ ನಂತರ ಅದು ಶಾಖದ (ಅವಗೆಂಪು) ಕಿರಣಗಳಾಗಿ ಚದುರುತ್ತದೆ. ಅದು ಗಾಜನ್ನು ಭೇದಿಸಿ ಹೊರಕ್ಕೆ ಹೋಗಲಾರದು. ಒಂಥರಾ ಏಕಮುಖ ರಸ್ತೆಯ ಹಾಗೆ.

ಚಲಿಸದೇ ನಿಂತ ಬಸ್ ಅಥವಾ ಕಾರಿನಲ್ಲಿ ನಾವು ಇದನ್ನು ಅನುಭವಿಸುತ್ತೇವೆ. ಗಾಜಿನ ಮೂಲಕ ಒಳಕ್ಕೆ ಬರುವ ಬೆಳಕು ಸೆಕೆಯನ್ನು ಹೆಚ್ಚಿಸುತ್ತದೆ. ‘ಕಿಟಕಿ ತೆರೀರಿ’, ‘ಗಾಜು ಇಳಿಸ್ರೀ’ ಎಂದು ಕೇಳುವಂತಾಗುತ್ತದೆ.

ಗಾಜಿನ ಹೊದಿಕೆ ಇಲ್ಲದ ವಾತಾವರಣದಲ್ಲೂ ಗಾಳಿಯಲ್ಲಿ ‘ಕೆಲವು’ ಅನಿಲ ಕಣಗಳು ಬೆಳಕಿನ ಕಿರಣಗಳನ್ನು ಅತ್ತಿತ್ತ ಚದುರಿಸಿ, ಅವಗೆಂಪು ಕಿರಣಗಳನ್ನಾಗಿ ಮಾಡುತ್ತವೆ. ಅಂದರೆ ಅವು ಶಾಖವನ್ನು ಹೀರಿಕೊಳ್ಳುತ್ತವೆ ವಿನಾ ಮತ್ತೆ ಆ ಬೆಳಕು ಬಾಹ್ಯಾಕಾಶಕ್ಕೆ ಪ್ರತಿಫಲನಗೊಳ್ಳಲು ಬಿಡುವುದಿಲ್ಲ. ನೀರಿನ ಆವಿ, ಕಾರ್ಬನ್ ಡೈಆಕ್ಸೈಡ್, ನೈಟ್ರಸ್ ಆಕ್ಸೈಡ್, ಮೀಥೇನ್ ಮತ್ತು ಓಝೋನ್ ಕಣಗಳು ಹೀಗೆ ಬೆಳಕನ್ನು ಚದುರಿಸಿ ಭೂಮಿಯನ್ನು ಬೆಚ್ಚಗೆ ಇಡುತ್ತವೆ. ಅದಕ್ಕೇ ಅವುಗಳಿಗೆ ಗ್ರೀನ್‌ಹೌಸ್ ಗ್ಯಾಸ್ ಅಥವಾ ‘ಹಸಿರುಮನೆ ಅನಿಲಗಳು’ ಎನ್ನುತ್ತಾರೆ. ಮಿಥೇನ್ ಮತ್ತು ವಾಹನಗಳ ಹೊಗೆಯ ಅನಿಲಗಳು ಬಿಸಿಲಿಗೆ ಒಡೆದು ನೈಟ್ರಸ್ ಆಕ್ಸೈಡ್ ಮತ್ತು ನೆಲಮಟ್ಟದ ಓಝೋನ್ ಕಣಗಳಾಗಿ ಸೆಕೆಯನ್ನು ಇನ್ನೂ ಹೆಚ್ಚು ಮಾಡುತ್ತದೆ.

ಹೀಗೆ ಭೂಮಿಯ ಸೆಕೆಯನ್ನು ಹೆಚ್ಚಿಸುವ ಅನಿಲಗಳಿಗೆ ನಾವು ‘ಶಾಖವರ್ಧಕ ಅನಿಲಗಳು’ ಎಂದು ಹೇಳಬೇಕು. ತುಸು ಪ್ರಮಾಣದಲ್ಲಿ ಈ ಅನಿಲಗಳು ವಾತಾವರಣದಲ್ಲಿ ಇರಲೇಬೇಕು, ಏಕೆಂದರೆ ಭೂಮಿ ಬೆಚ್ಚಗೆ ಇರಬೇಕು. ಈ ಅನಿಲಗಳು ಇಲ್ಲದಿದ್ದರೆ ಭೂಮಿ ತೀರಾ ತಂಪಾಗಿ ಯಾರೂ ಬದುಕಲು ಸಾಧ್ಯವಿಲ್ಲದ ಹಿಮಚೆಂಡು ಆಗಿಬಿಡುತ್ತಿತ್ತು. ಆದರೆ ಏನಾಗುತ್ತಿದೆ ಎಂದರೆ ನಾವು ಮನುಷ್ಯರು ತುಂಬ ದೊಡ್ಡ ಪ್ರಮಾಣದಲ್ಲಿ ಪೆಟ್ರೋತೈಲ ಮತ್ತು ಕಲ್ಲಿದ್ದಲಿನಂಥ ಫಾಸಿಲ್(ಪಳೆಯುಳಿಕೆ) ಇಂಧನಗಳನ್ನು ಉರಿಸುವುದರಿಂದ ವಾತಾವರಣದಲ್ಲಿ ಇಂಗಾಲದ ಡೈಆಕ್ಸೈಡ್ ಪ್ರಮಾಣ ಹೆಚ್ಚುತ್ತಿದೆ. ಚರಂಡಿಯ ರೊಚ್ಚೆ, ಸೆಗಣಿ ಮತ್ತು ಕೆಸರಿನ ಕೆರೆ-ಕಾಲುವೆಗಳಿಂದ ಮೀಥೇನ್ ಉತ್ಪಾದನೆಯೂ ಹೆಚ್ಚುತ್ತಿದೆ. ಇವೆಲ್ಲ ಸೇರಿ, ಒಂದು ಅಗೋಚರ ಕಂಬಳಿಯ ಹಾಗೆ ವಾಯುಮಂಡಲವನ್ನು ಸುತ್ತಿಕೊಳ್ಳುತ್ತಿವೆ.

ಭೂಮಿಯ ಉಷ್ಣತೆ ದಿನದಿನಕ್ಕೆ ಹೆಚ್ಚುತ್ತಿದೆ. ಇದಕ್ಕೇ ‘ಗ್ರೀನ್‌ಹೌಸ್ ಪರಿಣಾಮ’ ಎನ್ನುತ್ತಾರೆ. ಅದರ ಅನುಭವ ಬೇಕೆಂದರೆ ಹಗಲು ವೇಳೆ ಯಾವುದಾದರೂ ಪಾಲಿಹೌಸ್ ಒಳಕ್ಕೆ ಹೋಗಿ ನಿಲ್ಲಿ. ಅಥವಾ ಗಾಜುಗಳನ್ನು ಏರಿಸಿಕೊಂಡು ಕಾರಲ್ಲಿ ಕೂತರೂ ಆದೀತು. ❖

ಜೇಡ ಕಡಜ

ಚಿತ್ರ: ಲೇಖಕರದ್ದು

ಕೀಟ–ನೋಟ

ಹೈಮೆನೋಪ್ಟೆರ ಎಂಬ ಗುಂಪಿನಲ್ಲಿ ಬಹಳಷ್ಟು ಕಡಜಗಳು ಪರಭಕ್ಷಕ ಮತ್ತು ಪರತಂತ್ರ ಕೀಟಗಳು. ಜೇಡವೂ ಸಹ ಒಂದು ಪರಭಕ್ಷಕ ಜೀವಿಯಾಗಿದ್ದು ಅದನ್ನೇ ಬೇಟೆಯಾಡಬಲ್ಲ ಪರಭಕ್ಷಕ ಕೀಟ ಈ ಜೇಡ ಕಡಜ.

ಜೇಡ ಕಡಜ(Spider wasp), ಹೆಸರೇ ಹೇಳುವಂತೆ ಇದು ವಿವಿಧ ಜೇಡಗಳನ್ನು ಆಕ್ರಮಿಸಿ ತನ್ನ ವಿಷಮುಳ್ಳಿನಿಂದ ಪಕ್ಷವಾತ (Paralyze) ಅಥವಾ ಪಾರ್ಶ್ವವಾಯುಗೊಳಿಸುತ್ತದೆ. ನಂತರ ಆ ಜೇಡವನ್ನು ತನ್ನ ಬಾಯಿಯಲ್ಲಿ ಕಚ್ಚಿ ತಂದು ನೆಲದೊಳಗೆ ತಾನು ಮಾಡಿರುವ ಗೂಡು ತೂಬಿನಲ್ಲಿಡುತ್ತದೆ. ನಂತರ ಅದರ ಮೇಲೆ ತನ್ನದೊಂದು ಮೊಟ್ಟೆಯನ್ನಿಟ್ಟು ಗೂಡನ್ನು ಮುಚ್ಚುತ್ತದೆ. ಪುನಃ ಸತ್ತ ಇರುವೆಗಳನ್ನು ಹೊತ್ತು ತಂದು ತನ್ನ ಗೂಡಿನ ಸುತ್ತಲು ಆವರಿಸುತ್ತದೆ. ಈ ಇರುವೆಗಳಲ್ಲಿರುವ ರಾಸಾಯನಿಕದಿಂದ ಇತರೆ ಕೀಟಗಳು ಗೂಡನ್ನು ಪ್ರವೇಶಿಸದಂತೆ ವಿಸರ್ಜಿಸುವ ಕ್ರಿಯೆಯೂ ವಿಸ್ಮಯಕಾರಿ.

ಒಂದೆರೆಡು ದಿನಗಳ ನಂತರ ಜೇಡದ ಮೈಮೇಲಿಟ್ಟ ಕಡಜದ ಮೊಟ್ಟೆಯೊಡದು ಹೊರಬಂದ ಮರಿಯು ಜೇಡದ ಮೃದು ಅಂಗಾಂಗಗಳನ್ನು ತಿನ್ನುತ್ತಾ ಬೆಳೆಯುತ್ತದೆ. ಬೇಟೆಯಾಡಿದ ಜೇಡವನ್ನು ಇದು ಕೊಲ್ಲುವುದಿಲ್ಲ. ಆದರೆ, ಕಾಲಕ್ರಮೇಣ ತನ್ನ ಮರಿ ಹಂತಗಳಿಗೆ ಹಂತಹಂತವಾಗಿ ಆಹಾರ ಸಿಗಲೆಂದು ಕೋಶಾವಸ್ಥೆಯವರೆಗೆ ಜೇಡವನ್ನು ತಿನ್ನಬೇಕಾದ್ದರಿಂದ ಒಂದೇ ಬಾರಿಗೆ ಸಾಯಿಸುವುದಿಲ್ಲ. ಅಂತಿಮ ಹಂತ ತಲುಪಿದ ಕಡಜದ ಮರಿಯು ಮುಂದುವರೆದು ರೇಷ್ಮೆಯಂತಹ ದಾರದೆಳೆಗಳನ್ನು ಹೆಣೆಯುತ್ತ ಕೋಶಾವಸ್ಥೆಗೆ ತಲುಪುತ್ತದೆ.

ಪಾಂಪಿಲಿಡೆ(Pompilidae) ಕುಟುಂಬದ ಈ ಕಡಜ ಒಂಟಿ ಜೀವನ ನಡೆಸಬಲ್ಲ ಕೀಟ. ಬಹಳ ಬಲಿಷ್ಠ ಹಾಗೂ ವೇಗ ಗತಿಯಲ್ಲಿ ಇದು ವಾಯುಯಾನ ಮಾಡಬಲ್ಲದು. ಇದರ ಮುಂಗಾಲುಗಳು ನೆಲವನ್ನು ಅಗೆಯಲು ಸಹಕಾರಿಯಾಗಿದ್ದು ಎದೆಯ ಮಾಂಸಖಂಡಗಳು ಇದಕ್ಕಾಗಿಯೇ ಬಹಳ ಬಲಿಷ್ಠವಾಗಿವೆ.

ಈ ಜೇಡ ಕಡಜಗಳು ಹೂವುಗಳಿಂದ ಮಕರಂದ ಹೀರಿ ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತವೆ. ನೀಲಗಿರಿ ಹೂವುಗಳೆಂದರೇ ಇವಕ್ಕೆ ಬಹಳ ಇಷ್ಟ. ಗಂಡು ಕಡಜಗಳು ಸಮಾಗಮಕ್ಕೆಂದೇ ಹೆಣ್ಣು ಕಡಜಗಳನ್ನು ಆಹ್ವಾನಿಸಲು ಸೂಕ್ತ ಸ್ಥಳ(Perch territories)ಗಳನ್ನು ನಿಗದಿ ಪಡಿಸಿಕೊಳ್ಳುತ್ತವೆ. ಇಂತಹ ಸ್ಥಳಗಳಲ್ಲಿ ಒಂದೆಡೆ ಕೂತು ಅಲ್ಲಿ ಸುಳಿದಾಡುವ ಹೆಣ್ಣುಗಳಲ್ಲಿ ಸೂಕ್ತ ಹೆಣ್ಣು ಯಾವುದೆಂದು ಹೊಂಚು ಹಾಕುತ್ತ ಅದರೊಟ್ಟಿಗೆ ಸಮಾಗಮವಾಗುತ್ತದೆ. ವಿವಿಧ ಕಾಂತಿಯುತ ಬಣ್ಣಗಳಲ್ಲಿ ದಕ್ಕುವ ಈ ಜೇಡ ಕಡಜಗಳಲ್ಲಿ 4500ಕ್ಕೂ ಹೆಚ್ಚು ವಿಧಗಳಿವೆ.

ಲೇಖಕರು: ಕೃಷಿ ಅಧಿಕಾರಿಗಳು

PROGRESS THROUGH QUALITY EDUCATION
SOUTH EAST ASIAN EDUCATION TRUST (R) S.E.A.E.T
KNOWLEDGE IS SUPREME

S.E.A COLLEGE OF ENGINEERING & TECHNOLOGY
(Approved by AICTE & Affiliated to Visvesvaraya Technological University)
Ekta Nagar, Near Ayyappanagar Circle, Devasandra Main Road, Virgo Nagar Post, K.R. Puram, Bangalore - 560 049.

ADMISSION OPEN - 2022-23

SOUTH EAST ASIAN GROUP OF INSTITUTIONS

BE
Computer Science & Engineering
Mechanical Engineering
Electronics & Comm. Engineering
Civil Engineering
Information Science & Engineering
CSE (IoT & Cyber Security with Block Chain Technology)
Artificial Intelligence & Machine Learning
MBA
M.Tech
CSE
VLSI Design & Embeded Systems
CET CODE E-153
RESEARCH CENTER / Ph.D
Mechanical / Computer Science / Electronics
Management / Chemistry / Mathematics / Commerce
New Branch Started in the year 2022-23.
Agricultural Engineering

DEGREE
UG : BA/B.Com/B.Sc./BBA
BBA (Aviation) / BTTM / BHM
B.Sc (Clinical & Nutrition)
BA (Criminology)/BSW/B.Voc.
PG : MA (Eng/Kannada/Economics/Journalism)
M.Com / MBA / M.Sc (CS) / MTTM /
PG DIPLOMA in Hospital Administration
New Courses Started in the year 2022-23.
B.Sc. in Aircraft Maintenance / MCA
NURSING: GNM / B.Sc. (N) / PB.B.Sc. (N)
M.Sc. (N) / BPT / B.Sc. (Allied HS)
LAW: LLB / BA LLB
EDUCATION: B.Ed
PUC: SCIENCE / COMMERCE / ARTS
ITI: FITTER / ELECTRICAL
ELECTRONICS MECHANIC
SCHOOL: ICSE SYLLABUS : STD 1st – 10th
STATE SYLLABUS : STD 1st – 10th

TRAINING & PLACEMENT

Sl.No	Academic year	Placement Percentage
1	2019-20	78%
2	2020-21	83%
3	2021-22	92%

Package offered
Maximum Package offered : 12 LPA
Average Package offered : 6 LPA
Lowest Package offered : 4 LPA

We have over 200+ recruiters from IT , Non-IT, Core and Product Companies.
100% ASSURED PLACEMENTS | ACADEMIC PARTNERS | TRAINING PARTNERS | INTERNSHIP PARTNERS
Digital Labs @ SEACET through TNSIF
Capgemini
accenture
JOBS IN USA through
CONCINNATE partners
Infosys Springboard
TCS
DESTINATION
JSpiders
INTERNSHALA
SkillDzire

CONTACT : 7353945999 / 9448956755 / 9008471763
www.seaedu.ac.in E-mail : principal.seacet@gmail.com / priseadegree@gmail.com seaeduinfo@seaedu.ac.in

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಕೊಳೆಯೇ ಕಾಣದ ಲೋಕವಿಲ್ಲ, ಕೊಳೆಯಿಲ್ಲದ ದೇಹವಿಲ್ಲ. ಬಂದ ಕೊಳೆಯನ್ನು ಆಗಾಗ ತೊಳೆದುಕೊಳ್ಳುವುದು ಚೊಕ್ಕತನದ ಲಕ್ಷಣ.

– ಶಿವರಾಮ ಕಾರಂತ

ಪಿಎಂಎಲ್‌ಎ ಕುರಿತ ತೀರ್ಪು ಕಳವಳಕಾರಿ, ಮರುಪರಿಶೀಲನೆಗೆ ಅರ್ಹ

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ)– 2002ರ ಅಡಿಯಲ್ಲಿನ ಹಲವು ಕಠಿಣ ಅಂಶಗಳನ್ನು ಸುಪ್ರೀಂ ಕೋರ್ಟ್ ಈಚೆಗೆ ನೀಡಿದ ತೀರ್ಪಿನಲ್ಲಿ ಎತ್ತಿಹಿಡಿದಿರುವುದು, ನಾಗರಿಕರ ಹಲವು ಹಕ್ಕುಗಳನ್ನು ದುರ್ಬಲಗೊಳಿಸುವಂತಿದೆ. ಅಲ್ಲದೆ, ಕಾರ್ಯಾಂಗದ ಅತಿರೇಕಗಳಿಗೆ ವಿರುದ್ಧವಾಗಿ ಕಾನೂನು ನೀಡಿದ್ದ ರಕ್ಷಣೆಯು ಬಲ ಕಳೆದುಕೊಳ್ಳುವ ಸಾಧ್ಯತೆ ಕೂಡ ಇದೆ. ಪಿಎಂಎಲ್‌ಎ ಅಡಿಯಲ್ಲಿ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ.) ನೀಡಿರುವ ಅಧಿಕಾರವನ್ನು ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ನೇತೃತ್ವದ ಪೀಠವು ಮಾನ್ಯ ಮಾಡಿದೆ. ಕಾಯ್ದೆಯ ಅಡಿಯಲ್ಲಿನ ಬಂಧನ ಹಾಗೂ ಆಸ್ತಿ ಜಪ್ತಿ ಮಾಡುವುದಕ್ಕೆ ಸಂಬಂಧಿಸಿದ ಕಠಿಣ ನಿಯಮಗಳು ಸಂವಿಧಾನಬದ್ಧವಾಗಿಯೇ ಇವೆ, ಅವು ನಿರಂಕುಶ ಅಧಿಕಾರವನ್ನು ನೀಡುವುದಿಲ್ಲ ಎಂದು ಕೋರ್ಟ್ ಹೇಳಿದೆ. ಪಿಎಂಎಲ್‌ಎ ಅಡಿಯಲ್ಲಿನ ಹಲವು ಅಂಶಗಳು ಕಾನೂನಿನ ಸ್ವೀಕೃತ ತತ್ವಗಳಿಗೆ ವಿರುದ್ಧವಾಗಿ ಇವೆ, ಅವು ನ್ಯಾಯಾಲಯಗಳು ನೀಡಿರುವ ಹಲವು ನಿರ್ದೇಶನಗಳಿಗೆ ಅನುಗುಣವಾಗಿ ಇಲ್ಲ ಎಂಬ ತೀವ್ರ ಟೀಕೆಗೆ ಗುರಿಯಾಗಿವೆ. ಇ.ಡಿ. ಕೂಡ ಪೊಲೀಸರಂತೆ ಕೆಲಸ ಮಾಡುತ್ತಿರುವ ಕಾರಣ, ಪೊಲೀಸ್ ವ್ಯವಸ್ಥೆಗೆ ಅನ್ವಯವಾಗುವ ಮಾನದಂಡವೇ ಇ.ಡಿ.ಗೆ ಕೂಡ ಅನ್ವಯವಾಗಬೇಕು ಎಂದು ಅರ್ಜಿದಾರರು ಕೋರಿದ್ದರು. ಆದರೆ, ಈ ವಾದವನ್ನು ನ್ಯಾಯಾಲಯವು ಒಪ್ಪಿಕೊಂಡಿಲ್ಲ ಎನ್ನುವುದನ್ನು ತೀರ್ಪು ತೋರಿಸುತ್ತಿದೆ.

ಈ ಕಾಯ್ದೆಯ ಕೆಲವು ಅಂಶಗಳು ಪ್ರಜೆಗಳ ಹಲವು ಮೂಲಭೂತ ಹಕ್ಕುಗಳಿಗೆ ಸವಾಲು ಹಾಕುವಂತೆ ಇವೆ

ಕಾನೂನಿನ ಅಡಿಯಲ್ಲಿ ಒಪ್ಪಿತವಾಗಿರುವ ಹಲವು ನಿಯಮಗಳಿಗೆ ಹೊರತಾದ ಅಂಶಗಳು ತೀರ್ಪಿನಲ್ಲಿ ಇವೆ. ಆರೋಪವನ್ನು ಸಾಬೀತು ಮಾಡುವ ಹೊಣೆಯು ತನಿಖಾ ಸಂಸ್ಥೆಯ ಮೇಲೆ ಇರುವುದು ಸಹಜ. ಆದರೆ, ಕಾಯ್ದೆಯ ಸೆಕ್ಷನ್ 24ರ ಪ್ರಕಾರ, ಆರೋಪವನ್ನು ಸುಳ್ಳು ಎಂದು ಸಾಬೀತು ಮಾಡುವ ಹೊಣೆಯು ಆರೋಪಿಯ ಮೇಲೆ ಇರುತ್ತದೆ. ಆರೋಪ ಸಾಬೀತಾಗುವವರೆಗೂ ವ್ಯಕ್ತಿ ನಿರಪರಾಧಿಯೆಂದೇ ಪರಿಗಣಿತವಾಗುತ್ತಾನೆ ಎನ್ನುವ, ಕ್ರಿಮಿನಲ್ ಅಪರಾಧಕ್ಕೆ ಸಂಬಂಧಿಸಿದ ಕಾನೂನುಗಳ ಹಿಂದೆ ಇರುವ ತತ್ವಕ್ಕೆ ಇದು ವಿರುದ್ಧ. ಬಂಧನದ ಸಂದರ್ಭದಲ್ಲಿ ಇ.ಡಿ. ಎದುರು ನೀಡಿದ ಹೇಳಿಕೆಯನ್ನು ಕೋರ್ಟ್‌ನಲ್ಲಿ ಸಾಕ್ಷ್ಯವಾಗಿ ಪರಿಗಣಿಸಬಹುದು ಎನ್ನುವ ಅಂಶವನ್ನೂ ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಇದು ಕೂಡ ಒಪ್ಪಿತ ತತ್ವಕ್ಕೆ ವಿರುದ್ಧ. ಆರೋಪಿಯು ತನ್ನ ಮೇಲಿನ ಆರೋಪಗಳಿಗೆ ತಾನೇ ಸಾಕ್ಷಿಯಾಗಲು ಸಾಧ್ಯವಿಲ್ಲ ಎಂಬುದು ಕಾನೂನಿನ ಅಡಿಯಲ್ಲಿ ಸ್ವೀಕೃತವಾಗಿರುವ ತತ್ವ. ಪಿಎಂಎಲ್‌ಎ ಅಡಿ ಬಂಧಿತನಾಗುವ ವ್ಯಕ್ತಿಗೆ ಜಾಮೀನು ನೀಡಲು ಇರುವ ನಿಯಮಗಳು ಬಹಳ ಕಠಿಣವಾಗಿವೆ. ಆದರೂ ಕೋರ್ಟ್ ಅವನ್ನು ಎತ್ತಿಹಿಡಿದಿದೆ. ಜಾಮೀನಿನ ಹಕ್ಕಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಈ ಹಿಂದೆ ನೀಡಿದ್ದ ತೀರ್ಪುಗಳಿಗೆ ಇದು ಹೊಂದಿಕೆಯಾಗುತ್ತಿಲ್ಲ. ಜಾಮೀನಿನ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಉದಾರ ನಿಲುವು ತಳೆದ ನಿದರ್ಶನಗಳು ಹಲವು ಇವೆ. ಜಾರಿ ನಿರ್ದೇಶನಾಲಯವು ದಾಖಲಿಸುವ ಪ್ರಕರಣದ ವರದಿಯ ಪ್ರತಿಯನ್ನು (ಪೊಲೀಸರು ದಾಖಲಿಸುವ ಪ್ರಥಮ ಮಾಹಿತಿ ವರದಿಯ ರೀತಿಯದ್ದು) ಆರೋಪಿಗೆ ನೀಡುವುದು ಕಡ್ಡಾಯ ಅಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆದರೆ, ಈ ವರದಿಯ ಪ್ರತಿಯನ್ನು ಪಡೆಯುವುದು ಆರೋಪಿಯ ಸಹಜ ಹಕ್ಕು ಎಂದು ಪರಿಗಣಿತವಾಗಿದೆ.

ಸರ್ಕಾರವು ತನ್ನ ರಾಜಕೀಯ ವಿರೋಧಿಗಳು ಹಾಗೂ ಟೀಕಾಕಾರರ ವಿರುದ್ಧ ಇ.ಡಿ.ಯನ್ನು ಒಂದು ಅಸ್ತ್ರವಾಗಿ ಮತ್ತೆ ಮತ್ತೆ ಬಳಸಿಕೊಂಡಿದೆ. ಈ ಅಸ್ತ್ರವನ್ನು ಬಳಸಿಕೊಂಡು ಕಾರ್ಯಾಂಗವು ಅತಿರೇಕದ ವರ್ತನೆ ತೋರುತ್ತಿರುವುದು ಕಾಣುವಂತಿದ್ದರೂ ಈ ತೀರ್ಪು ಪ್ರಜೆಗಳ ಹಕ್ಕುಗಳನ್ನು ರಕ್ಷಿಸಲು ವಿಫಲವಾಗಿದೆ. ಪಿಎಂಎಲ್‌ಎಯ ಕೆಲವು ಅಂಶಗಳು ಪ್ರಜೆಗಳ ಹಲವು ಮೂಲಭೂತ ಹಕ್ಕುಗಳಿಗೆ ಸವಾಲು ಹಾಕುವಂತೆ ಇವೆ. ವ್ಯಾಪಕವಾಗಿ ದುರ್ಬಳಕೆ ಮಾಡಿಕೊಳ್ಳಲು ಅವಕಾಶ ಇರುವ ಇಂತಹ ಅಂಶಗಳನ್ನು ಕಾನೂನಿನ ಭಾಗವಾಗಿ ಮುಂದುವರಿಯಲು ಬಿಡುವುದು ತಪ್ಪು. ಆರೋಪ ಸಾಬೀತು ಆಗುವವರೆಗೂ ವ್ಯಕ್ತಿಯನ್ನು ಅಪರಾಧಿ ಎಂದು ಪರಿಗಣಿಸಲಾಗದು ಎಂಬ ತತ್ವವು ಸಂವಿಧಾನದ ಮೂಲಕ ಖಾತರಿಪಡಿಸಿರುವುದಲ್ಲ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್ ಮುಂದೆ ಹೇಳಿದೆ ಎಂಬುದು ಗಮನಾರ್ಹ. ಇದನ್ನು ಕೋರ್ಟ್ ಒಪ್ಪಿದೆ. ಆರೋಪ ಸಾಬೀತಾಗುವವರೆಗೂ ಅಪರಾಧಿ ಅಲ್ಲ ಎಂಬ ಪೂರ್ವನಂಬಿಕೆಯ ತತ್ವವನ್ನು ಸಂಸತ್ತು, ಶಾಸನಸಭೆಯು ಕಾನೂನಿನ ಮೂಲಕ ಇಲ್ಲವಾಗಿಸಬಹುದು ಎಂದು ಕೋರ್ಟ್ ಹೇಳಿದೆ. ಈ ತೀರ್ಪು ಒಟ್ಟಾರೆಯಾಗಿ ಕಳವಳಗಳನ್ನು ಮೂಡಿಸುವಂಥದ್ದು. ಇದನ್ನು ಕೋರ್ಟ್ ಮರುಪರಿಶೀಲನೆಗೆ ಒಳಪಡಿಸಬೇಕು.

ದಿನದ ಟ್ವೀಟ್

ಕಾಯುವ ಪರಿಸ್ಥಿತಿ

ನಮ್ಮ ಸಮಾಜದಲ್ಲಿ ಸಮಯಕ್ಕೆ ಸರಿಯಾಗಿ ಕೆಲಸ ಮಾಡುವವರು, ಸಮಯಕ್ಕೆ ಸರಿಯಾಗಿ ಹಾಜರಾಗುವವರು ಬೇರೆಯವರಿಗಾಗಿ ಕಾಯಲೇಬೇಕಾದ ಪರಿಸ್ಥಿತಿ ಬರುತ್ತದೆ!

ಜಾವೇದ್ ಅಖ್ತರ್, ಗೀತರಚನೆಕಾರ

ಕಿಡಿನುಡಿ

ನಟನೊಬ್ಬನ ಬೆತ್ತಲೆ ದೇಹ ನಮಗೆ ಸಿಟ್ಟು ತರಿಸುತ್ತದೆ, ಬುಕರ್ ಪ್ರಶಸ್ತಿ ಪುರಸ್ಕೃತ ಕಾದಂಬರಿ ಸಿಟ್ಟು ತರಿಸುತ್ತದೆ. ಕೆಟ್ಟ ಆಡಳಿತ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳ ಕುಸಿತ ಹೊರತುಪಡಿಸಿ ಉಳಿದವೆಲ್ಲವೂ ನಮಗೆ ಸಿಟ್ಟು ತರಿಸುತ್ತವೆ.

ಅಜಯ್ ಕಾಮತ್, ನೇತ್ರತಜ್ಞ

25 ವರ್ಷಗಳ ಹಿಂದೆ

ಶುಕ್ರವಾರ, 1-8-1997

• ಬಂಧನಕ್ಕೆ 'ಸಹಕರಿಸದ' ಬಿಹಾರ ಸರ್ಕಾರದ ವಜಾಕ್ಕೆ ಒತ್ತಾಯ

ನವದೆಹಲಿ, ಜುಲೈ 31 (ಪಿಟಿಐ, ಯುಎನ್‌ಐ)– ಮೇವು ಹಗರಣದ ಆರೋಪಿ ಮಾಜಿ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಅವರನ್ನು ಬಂಧಿಸಲು ಬಿಹಾರ ರಾಜ್ಯ ಸರ್ಕಾರ ಸಹಕರಿಸದಿರುವ ಬಗ್ಗೆ ಲೋಕಸಭೆಯಲ್ಲಿ ವಿವಿಧ ಪಕ್ಷಗಳ ಮುಖಂಡರು ಇಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದಾಗ ಕೋಲಾಹಲಕಾರಿ ವಾತಾವರಣ ನಿರ್ಮಾಣವಾಗಿ, ಸಮತಾ ಪಕ್ಷವು ಬಿಹಾರದಲ್ಲಿ ಆರ್‌ಜೆಡಿ ಸರ್ಕಾರವನ್ನು ವಜಾ ಮಾಡಬೇಕೆಂದು ಆಗ್ರಹಪಡಿಸಿತು.

'ಲಾಲೂ ಅವರ ಪತ್ನಿ ರಾಬ್ಡಿ ದೇವಿ ಅವರ ಸರ್ಕಾರವು ಸಂವಿಧಾನ ಬಿಕ್ಕಟ್ಟನ್ನು ಸೃಷ್ಟಿಸಿದೆ. ಇದಕ್ಕೆ ಗುಜ್ರಾಲ್ ಸರ್ಕಾರವೇ ಹೊಣೆ' ಎಂದು ವಿರೋಧಪಕ್ಷಗಳು ಆರೋಪಿಸಿದವು.

ಮಾಜಿ ಮುಖ್ಯಮಂತ್ರಿಯನ್ನು ಬಂಧಿಸಲು ರಾಜ್ಯ ಸರ್ಕಾರ ಸಹಕರಿಸದಿದ್ದಲ್ಲಿ ಸೇನೆಯ ನೆರವು ಪಡೆಯುವಂತೆ ವಿಶೇಷ ನ್ಯಾಯಾಲಯವು ಸಿಬಿಐಗೆ ಸೂಚಿಸಿತ್ತು ಎಂದು ವರದಿಯಾಗಿರುವ ಬಗ್ಗೆ ಸಮತಾ ಪಕ್ಷದ ನಿತೀಶ್‌ಕುಮಾರ್ ಹಾಗೂ ಬಿಜೆಪಿಯ ಜಸ್ವಂತ್ ಸಿಂಗ್ ಆಶ್ಚರ್ಯ ವ್ಯಕ್ತಪಡಿಸಿದರು.

• ವೀರಪ್ಪನ್‌ಗೆ ಕ್ಷಮಾದಾನ ಇಲ್ಲ: ಕರುಣಾನಿಧಿ ಸ್ಪಷ್ಟನೆ

ಚೆನ್ನೈ, ಜುಲೈ 31 (ಪಿಟಿಐ)– ಕಾಡುಗಳ್ಳ ಮತ್ತು ದಂತಚೋರ ವೀರಪ್ಪನ್‌ಗೆ 'ಕ್ಷಮಾದಾನ' ನೀಡುವುದನ್ನು ಸಂಪೂರ್ಣ ನಿರಾಕರಿಸಿರುವ ತಮಿಳುನಾಡು ಮುಖ್ಯಮಂತ್ರಿ ಎಂ. ಕರುಣಾನಿಧಿ, ವೀರಪ್ಪನ್ ವಿರುದ್ಧ ಇರುವ ಎಲ್ಲಾ ಮೊಕದ್ದಮೆಗಳಿಗೆ ಶಿಕ್ಷೆ ಜಾರಿಯಾದ ಮೇಲೆ ಆ ಶಿಕ್ಷೆಯ ಪ್ರಮಾಣವನ್ನು ಕಡಿಮೆಗೊಳಿಸುವ ಬಗ್ಗೆ ಪರಿಶೀಲಿಸಲಾಗುವುದು ಎಂದು ಭರವಸೆ ನೀಡಿದ್ದಾರೆ.

'ಕಾನೂನಿನ ಅನ್ವಯ ವೀರಪ್ಪನ್‌ಗೆ ಕ್ಷಮಾದಾನ ಅಸಾಧ್ಯ; ಆದರೆ, ಶಿಕ್ಷೆಯ ಪ್ರಮಾಣ ಇಳಿಸಲು ಅವಕಾಶಗಳಿವೆ. ಇದನ್ನು ವಿಚಾರಣೆ ನಂತರ ಪರಿಶೀಲಿಸಲಾಗುವುದು' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 1-8-1972

• ಸೇನೆ ವಾಪಸು ಜತೆಗೇ ಕಾಶ್ಮೀರ ನಿಯಂತ್ರಣ ರೇಖೆ ನಿರ್ಧಾರ

ನವದೆಹಲಿ, ಜುಲೈ 31– ಸಿಮ್ಲಾ ಒಪ್ಪಂದದ ಪ್ರಕಾರ ಸೈನಿಕ ಪಡೆಗಳನ್ನು ಅಂತರರಾಷ್ಟ್ರೀಯ ಗಡಿಗೆ ವಾಪಸು ಕರೆಸಿಕೊಳ್ಳುವುದಕ್ಕೆ ಕ್ರಮವನ್ನೂ 'ಜಮ್ಮು ಮತ್ತು ಕಾಶ್ಮೀರದಲ್ಲಿ ನಿಯಂತ್ರಣ ರೇಖೆ ನಿರ್ದೇಶನವನ್ನೂ ಜೊತೆ ಜೊತೆಯಲ್ಲಿಯೇ' ತೆಗೆದುಕೊಳ್ಳಬೇಕೆಂದು ವಿದೇಶಾಂಗ ಸಚಿವ ಸ್ವರಣ್ ಸಿಂಗ್ ಅವರು ಇಂದು ಸಂಸತ್ತಿನ ಉಭಯ ಸದನಗಳಿಗೂ ತಿಳಿಸಿದರು.

ಸುಭದ್ರ, ಶಾಂತಿ ಸ್ಥಾಪನೆ ತತ್ವಗಳನ್ನು ಪಾಕಿಸ್ತಾನ ಒಪ್ಪಿಕೊಂಡು ಜಮ್ಮು ಮತ್ತು ಕಾಶ್ಮೀರದಲ್ಲಿ ಜುಲೈ 17ರಂದು ಇದ್ದ ನಿಯಂತ್ರಣ ರೇಖೆಯನ್ನು ಗೌರವಿಸುವುದಕ್ಕೆ ಸಮ್ಮತ ನೀಡಿದ ನಂತರವೇ ಭಾರತವು ಅಂತರರಾಷ್ಟ್ರೀಯ ಗಡಿಗೆ ತನ್ನ ಪಡೆಗಳನ್ನು ವಾಪಸು ಕರೆಸಿಕೊಳ್ಳಲು ಒಪ್ಪಿಗೆ ನೀಡಿತೆಂದು ಸಚಿವರು ನುಡಿದರು.

• ಬೆಲೆ ಏರಿಕೆ ವಿರುದ್ಧ ಸಂಸತ್ ಕಳವಳ 'ತೀವ್ರ ಬಿಕ್ಕಟ್ಟು' ಸಾಧ್ಯತೆ ಬಗ್ಗೆ ಎಚ್ಚರಿಕೆ

ನವದೆಹಲಿ, ಜುಲೈ 31– ಅಗತ್ಯ ವಸ್ತುಗಳ ಬೆಲೆಗಳು ಸತತವಾಗಿ ಏರುತ್ತಿರುವುದರ ವಿರುದ್ಧ ಇಂದು ಸಂಸತ್ತಿನ ಉಭಯ ಸದನಗಳೂ ತೀವ್ರ ಆತಂಕ ವ್ಯಕ್ತಪಡಿಸಿದವಲ್ಲದೆ ಉದ್ಭವಿಸುತ್ತಿರುವ 'ಆರ್ಥಿಕ ಬಿಕ್ಕಟ್ಟಿನ' ಸೂಚಿ ಈ ಬೆಲೆ ಏರಿಕೆಯೆಂದು ನುಡಿದರು.

ಲೋಕಸಭೆಯಲ್ಲಿ ಈ ವಿಷಯ ಕುರಿತು ನಿಲುವಳಿ ಸೂಚನೆಗೆ ಅಧ್ಯಕ್ಷರು ಅವಕಾಶ ನೀಡದಿದ್ದಾಗ ಕುಪಿತರಾದ ವಿರೋಧಿ ಪಕ್ಷದ ಸದಸ್ಯರು (ಕಮ್ಯುನಿಸ್ಟ್ ಮತ್ತು ಕೆಲವು ಪಕ್ಷೇತರರನ್ನುಳಿದು) ಕೆಲಕಾಲ ಸಭಾತ್ಯಾಗ ಮಾಡಿದರು.

ಅಗತ್ಯ ಬಳಕೆಯ ವಸ್ತುಗಳು– ಅದರಲ್ಲೂ ಮುಖ್ಯವಾಗಿ ಆಹಾರ ಧಾನ್ಯಗಳ ಬೆಲೆಗಳು ತೀವ್ರವಾಗಿ ಏರಿರುವುದರ ಬಗೆಗೆ ಸದಸ್ಯರಂತೆ ತಮಗೂ ಕಳವಳವುಂಟೆಂದು ಹಣಕಾಸು ಮಂತ್ರಿ ವೈ.ಬಿ. ಚವಾಣ್ ಅವರು ನುಡಿದರು.

ಈ ಬಯಲು ಪ್ರಯೋಗಾಲಯವನ್ನು ರಕ್ಷಿಸಲು ಕಾನೂನು ಬಿಗಿಗೊಳಿಸುವುದು ಅನಿವಾರ್ಯ

ಅಂಟಾರ್ಕ್ಟಿಕಾ: ಸಂಶೋಧನೆಗೆ ಬಿಗಿನೀತಿ

ವಿಶ್ಲೇಷಣೆ

ಟಿ.ಆರ್. ಅನಂತರಾಮು

ಲೋಕಸಭೆಯಲ್ಲಿ ಅನೇಕ ಮಸೂದೆಗಳು ಮಂಡನೆಯಾಗುತ್ತವೆ, ಅದರಲ್ಲಿ ಕೆಲವು ಸದ್ದುಗದ್ದಲದ ನಡುವೆ ಯಾವುದೇ ಚರ್ಚೆ ಇಲ್ಲದೆ ಅಂಗೀಕಾರ ಆಗುತ್ತವೆ. ಜುಲೈ 22ರಂದು ಗದ್ದಲದ ನಡುವೆಯೇ ಅಂಗೀಕರಿಸಿದ ಮಸೂದೆಯೊಂದು ಅಂಟಾರ್ಕ್ಟಿಕಾ ಖಂಡದಲ್ಲಿ ಭಾರತ ನಡೆಸುವ ಸಂಶೋಧನಾ ಚಟುವಟಿಕೆಗಳನ್ನು ಕಾನೂನಿನ ಮೂಲಕ ನಿಯಂತ್ರಿಸುವುದಕ್ಕೆ ಸಂಬಂಧಿಸಿದೆ. ಬೆಲೆ ಏರಿಕೆ ಬಗ್ಗೆ ಲೋಕಸಭೆಯಲ್ಲಿ ದೊಡ್ಡ ಮಟ್ಟದಲ್ಲಿ ಗದ್ದಲ, ಗಲಾಟೆ ಆಗುತ್ತಿದ್ದ ಸಂದರ್ಭದಲ್ಲಿ ಸದ್ದಿಲ್ಲದೆ ಈ ಮಸೂದೆ ಮಂಡನೆಯೂ ಆಯಿತು, ಅಂಗೀಕಾರವೂ ಪಡೆಯಿತು. ಚರ್ಚೆಯೇ ಆಗಲಿಲ್ಲ. ಏಕೆಂದರೆ ಈ ಮಸೂದೆಯು ಭಾರತದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳ ಲಾಭ- ನಷ್ಟಗಳನ್ನು ನಿರ್ದೇಶಿಸುವಂತಹುದು ಆಗಿರಲಿಲ್ಲ.

ಅಂಟಾರ್ಕ್ಟಿಕಾ ಖಂಡಕ್ಕೆ ಅನೇಕ ವಿಶೇಷಣಗಳಿವೆ. ಭೂಗೋಳದ ದಕ್ಷಿಣ ತುದಿಯಲ್ಲಿರುವ ನಿರ್ಜನಖಂಡ, ಶ್ವೇತಖಂಡ, ಹಿಮದ ಮರುಭೂಮಿ, ಜಗತ್ತಿನ ಅತಿ ಶೀತಲಖಂಡ, ಅತಿ ಎತ್ತರದಖಂಡ, ದುರ್ಗಮಖಂಡ ಇತ್ಯಾದಿ. ಈ ಒಂದೊಂದೂ ನಿಜವೇ ಹೌದು. 1911ರಲ್ಲಿ ನಾರ್ವೆಯ ಅಮುಂಡ್‌ಸನ್ ಈ ಖಂಡದ ದಕ್ಷಿಣ ಧ್ರುವದ ಮೇಲೆ ನಿಂತ ನಂತರ ಅನೇಕ ರಾಷ್ಟ್ರಗಳು ಈ ಹಿಮದ ಖಂಡದ ಬಗ್ಗೆ ಅತಿ ಉತ್ಸಾಹ ತೋರಿದವು. ಈ ಖಂಡದಲ್ಲಿ ಹಿಮದ ಸ್ತರಗಳ ಕೆಳಗೆ ಹುದುಗಿರಬಹುದಾದ ಖನಿಜ ಸಂಪನ್ಮೂಲದ ಒಡೆತನ ಗಳಿಸುವುದೇ ಆ ದೇಶಗಳ ಪ್ರಧಾನ ಗುರಿಯಾಗಿತ್ತು. ನಾರ್ವೆ, ಆಸ್ಟ್ರೇಲಿಯಾ ಸೇರಿದಂತೆ ಹಲವು ರಾಷ್ಟ್ರಗಳು ಅವಸರದಲ್ಲಿ ಯಾತ್ರೆ ಹೊರಟು ಸಾವು–ನೋವನ್ನೂ ಲೆಕ್ಕಿಸದೆ ಅಲ್ಲಿ ಶಿಬಿರ ಹೂಡಿ ತಮ್ಮ ತಮ್ಮ ಭೂಭಾಗಗಳನ್ನು ಗುರುತಿಸಿಕೊಂಡು ಧ್ವಜ ಹಾರಿಸಿದ್ದವು; ಪರಸ್ಪರ ಘರ್ಷಣೆಯಲ್ಲಿ ತೊಡಗಿದ್ದವು.

ಕೊನೆಗೆ 1959ರಲ್ಲಿ ಒಮ್ಮತಕ್ಕೆ ಬಂದವು. ಪರಿಣಾಮವಾಗಿ ಅಂತರರಾಷ್ಟ್ರೀಯ ಒಪ್ಪಂದವೊಂದು ರೂಪುಗೊಂಡಿತು. ಅದು ಈಗಲೂ ಊರ್ಜಿತವಾಗಿದೆ. ಈ ಒಪ್ಪಂದಕ್ಕೆ ಭಾರತವೂ ಸೇರಿದಂತೆ 30 ದೇಶಗಳು ಸಹಿ ಹಾಕಿವೆ. ಈ ಒಪ್ಪಂದದ ರೀತ್ಯ ಅಂಟಾರ್ಕ್ಟಿಕಾ ಖಂಡ ಯಾವೊಂದು ದೇಶದ ಸ್ವತ್ತೂ ಅಲ್ಲ; ಅದು ಇಡೀ ಜಗತ್ತಿಗೆ ಸೇರಿದ ನಿಸರ್ಗದ ಆಸ್ತಿ. ಅಲ್ಲಿ ಮಿಲಿಟರಿಗೆ ಪ್ರವೇಶವಿಲ್ಲ, ಗಣಿಗಾರಿಕೆ ನಡೆಸುವಂತಿಲ್ಲ, ಸುತ್ತಣ ದಕ್ಷಿಣ ಸಾಗರದಲ್ಲಿ ಮೀನುಗಾರಿಕೆಗೆ ಅವಕಾಶವಿಲ್ಲ, ಪರಮಾಣು ಸ್ಫೋಟಿಸುವಂತಿಲ್ಲ. ಇಂತಹ ಹಲವು ಕರಾರುಗಳು ಜಾರಿಗೆ ಬಂದ ಮೇಲೆ ಈಗ ಅಂಟಾರ್ಕ್ಟಿಕಾ ಖಂಡ ವಿಜ್ಞಾನಕ್ಕೆ ಮುಡುಪಾದ ಖಂಡ ಎಂದು ಜಗತ್ತು ಒಪ್ಪಿಕೊಂಡಿದೆ.

ಈ 30 ರಾಷ್ಟ್ರಗಳು ಒಂದು ಕೂಟವನ್ನು ನಿರ್ಮಿಸಿಕೊಂಡಿವೆ. ಅಲ್ಲಿನ ಕಾನೂನು ಕಟ್ಟಲೆಗಳನ್ನು ಕಾಲಕಾಲಕ್ಕೆ ಪರಿಷ್ಕರಿಸಿ ಮರು ರೂಪಿಸುತ್ತವೆ. ನಿಜವಾಗಿ ವಿಜ್ಞಾನದಲ್ಲಿ ಆಸಕ್ತಿ ಇರುವ ರಾಷ್ಟ್ರಗಳು ಅಲ್ಲಿ ಕೇಂದ್ರಗಳನ್ನು ತೆರೆದು, ಸಂಶೋಧನೆಯಲ್ಲಿ ತೊಡಗಿವೆ. ಜೀವನ್ಮರಣ ಹೋರಾಟ ಎಂಬುದು ಅಲ್ಲಿ ನಿತ್ಯ ನಿರಂತರ. ಏಕೆಂದರೆ ರಷ್ಯಾ ತೆರೆದ ಓಸ್ತಾಕ್ ಎಂಬ ಕೇಂದ್ರದಲ್ಲಿ 1983ರಲ್ಲಿ ಉಷ್ಣತೆ ಮೈನಸ್ 89 ಡಿಗ್ರಿ ಸೆಲ್ಸಿಯಸ್‌ಗೆ ಇಳಿದಿತ್ತು. ಇಲ್ಲಿ ಜಗತ್ತಿನ ಶೇ 90 ಭಾಗ ಸಿಹಿನೀರು ಹಿಮಗಡ್ಡೆಯ ರೂಪದಲ್ಲಿದೆ. ಒಂದುವೇಳೆ ಇದೆಲ್ಲವೂ ಕರಗಿದರೆ ಜಗತ್ತಿನ ಸಾಗರ ಮಟ್ಟ 60 ಮೀಟರ್ ಹೆಚ್ಚುತ್ತದೆಂಬ ಎಚ್ಚರಿಕೆಯನ್ನು ವಿಜ್ಞಾನಿಗಳು ಕೊಟ್ಟಿದ್ದಾರೆ. ಆದರೆ ಒಮ್ಮೆಗೇ ಹೀಗಾಗುವುದು ಅಸಂಭವ.

ವಿಜ್ಞಾನದ ಅನೇಕ ಕ್ಷೇತ್ರಗಳ ಬಗ್ಗೆ ಇಲ್ಲಿರುವ ಒಂದೊಂದು ಸಂಶೋಧನಾ ಕೇಂದ್ರವೂ ದೊಡ್ಡ ಪ್ರಮಾಣದಲ್ಲಿ ಕೆಲಸ ಮಾಡುತ್ತಿದೆ. ಅಲ್ಲಿನ ಸೂಕ್ಷ್ಮಜೀವಿಗಳು, ಹಿಮನದಿಗಳ ಸರಿತ, ಶೈತ್ಯಕ್ಕೆ ಜೀವಿಗಳ ಹೊಂದಾಣಿಕೆ, ಭೂಕಾಂತತ್ವ, ಖಂಡದ ನೆತ್ತಿಯ ಮೇಲೆ ಕಂಡಿದ್ದ ಓಜೋನ್ ಪದರದ ರಂಧ್ರ- ಹೀಗೆ ಅಂಟಾರ್ಕ್ಟಿಕಾ ಖಂಡದ ಸಂಶೋಧನೆ ಎಂದರೆ ವಿಜ್ಞಾನದ ಎಲ್ಲ ಜ್ಞಾನಶಿಸ್ತುಗಳ ಸಂಗಮ. 1976ರಲ್ಲಿ ಇಲ್ಲಿನ ಲಾರ್ಸನ್ ಐಸ್ ಷೆಲ್ಫ್ ಎಂಬ ಭಾಗದಿಂದ ಕಿತ್ತುಬಂದ ಹಿಮದ ತುಂಡು 3,600 ಚದರ ಕಿಲೊಮೀಟರ್ ವಿಸ್ತೀರ್ಣವಿತ್ತು. ಹೆಚ್ಚು ಕಡಿಮೆ ಇಡೀ ಉಡುಪಿ ಜಿಲ್ಲೆಯನ್ನೇ ಅದರ ಮೇಲೆ ಕೂಡಿಸಬಹುದಾಗಿತ್ತು. ಈ ಬಗೆಯ ಸಂಗತಿಗಳು ದಕ್ಷಿಣ ಸಾಗರದ ಮೇಲೆ ಬೀರುವ ಪ್ರಭಾವ ಕುರಿತೇ ಸಂಶೋಧನೆಗಳಾಗುತ್ತಿವೆ.

ಭಾರತ, 1981ರಲ್ಲೇ ಅಂಟಾರ್ಕ್ಟಿಕಾ ಯಾತ್ರೆಯನ್ನು ಅತ್ಯಂತ ಯಶಸ್ವಿಯಾಗಿ ಕೈಗೊಂಡಿತ್ತು. ಅಲ್ಲಿ ದಕ್ಷಿಣ ಗಂಗೋತ್ರಿ ಎಂಬ ಕೇಂದ್ರವನ್ನು ತೆರೆದು ಸಂಶೋಧನೆ ಮಾಡಿ 1983ರಲ್ಲಿ ಅಂಟಾರ್ಕ್ಟಿಕಾ ಕೂಟದ ಸದಸ್ಯತ್ವ ಗಳಿಸಿತು. 40 ವರ್ಷಗಳಿಂದ ಪ್ರತಿವರ್ಷವೂ ಈ ಖಂಡಕ್ಕೆ ಸಂಶೋಧಕರನ್ನು ಕಳಿಸುತ್ತಿದೆ. 'ದಕ್ಷಿಣ ಗಂಗೋತ್ರಿ' ಕೇಂದ್ರ ಹಿಮದಿಂದಲೇ ಮುಚ್ಚಿಹೋಗಿತ್ತು. ತೇಲುವ ಹಿಮಗಡ್ಡೆಯ ಮೇಲೆ ಅದನ್ನು ಸ್ಥಾಪಿಸಲಾಗಿತ್ತು. ಮುಂದೆ ಅದನ್ನು ತೊರೆದು, ಮೈತ್ರಿ ಎಂಬ ಕೇಂದ್ರವನ್ನು ತೆರೆಯಿತು. ಇದೀಗ ಭಾರತೀ ಎಂಬ ಮತ್ತೊಂದು ಕೇಂದ್ರದಲ್ಲಿ ಭಾರತ ಸಂಶೋಧನಾ ನಿರತವಾಗಿದೆ.

ಉಳಿದ ಕೂಟ ದೇಶಗಳಂತೆ ಭಾರತ ಇಲ್ಲಿ ಅಂತರರಾಷ್ಟ್ರೀಯ ಕಾನೂನಿಗೆ ಬದ್ಧವಾಗಿಯೇ ಕೆಲಸ ಮಾಡುತ್ತಿದೆ. ಹೀಗಿರುವಾಗ, ಲೋಕಸಭೆಯಲ್ಲಿ ಅಂಟಾರ್ಕ್ಟಿಕಾ ಕುರಿತ ಮಸೂದೆಯನ್ನು ಮಂಡಿಸುವ ಅಗತ್ಯವೇನಿತ್ತು? ಏಕಿಷ್ಟು ತರಾತುರಿ ಎನ್ನಿಸಬಹುದು. ವಾಸ್ತವವಾಗಿ ಇದು ತರಾತುರಿಯಲ್ಲ, ಬದಲು ತಡವಾದ ನಿರ್ಧಾರ. ಈಗಾಗಲೇ ಆ ಖಂಡದ ಕೂಟ ರಾಷ್ಟ್ರಗಳಲ್ಲಿ 27 ರಾಷ್ಟ್ರಗಳು ತಮ್ಮ ತಮ್ಮ ದೇಶಗಳಲ್ಲಿ, ಅಂಟಾರ್ಕ್ಟಿಕಾದಲ್ಲಿ ಸಂಶೋಧನೆ ಮಾಡುವಾಗ, ಪಾಲಿಸಬೇಕಾದ ನೀತಿನಿಯಮಗಳನ್ನು ಕಾನೂನುಬದ್ಧಗೊಳಿಸಿವೆ; ನ್ಯಾಯಮಂಡಳಿಗಳನ್ನು ಸ್ಥಾಪಿಸಿವೆ. ಭಾರತಕ್ಕೆ ಈ ಒತ್ತಡವೂ ಇತ್ತು. ಜೊತೆಗೆ 2016ರ ಪ್ಯಾರಿಸ್ ಒಪ್ಪಂದಕ್ಕೆ ಬದ್ಧವಾಗಿ ಪರಿಸರ ಉಳಿಸುವ ಹೊಣೆಯೂ ಇತ್ತು. ಏಕೆಂದರೆ ಈ ಹಿಮದ ಖಂಡದಲ್ಲಿ ಮಾಲಿನ್ಯವು ಶೂನ್ಯ. ಅಲ್ಲಿಗೆ ಹೋದ ಸಂಶೋಧನಾ ತಂಡಗಳು ಮಾಲಿನ್ಯ ಮಾಡುತ್ತಿರುವುದು ಉಂಟು.

ಲೋಕಸಭೆಯಲ್ಲಿ ಈಗ ಅಂಗೀಕಾರ ಪಡೆದಿರುವ ಮಸೂದೆಯು ನಮ್ಮ ಸಂಶೋಧನೆ ಕುರಿತಂತೆ ಹಲವು ಕಠಿಣ ಕಾನೂನುಗಳನ್ನು ಒಳಗೊಳ್ಳುತ್ತದೆ. ನಮ್ಮಲ್ಲಿರುವ ಪರಿಸರ ಕೂನೂನನ್ನು ಹಿಮದ ಖಂಡಕ್ಕೂ ವಿಸ್ತರಿಸಲು ಉದ್ದೇಶಿಸಲಾಗಿದೆ. ಸರ್ಕಾರ ಕಳಿಸುವ ತಂಡಗಳ ಜೊತೆಗೆ ಖಾಸಗಿ ತಂಡಗಳೂ ಹೋಗುತ್ತವೆ. ಬಿಡಿ ವ್ಯಕ್ತಿಗಳು ಭಾಗಿಯಾಗುವ ಅವಕಾಶವಿದೆ. ಅಂಥ ಸಂದರ್ಭದಲ್ಲಿ ಕಾನೂನು ಮುರಿದರೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಮಸೂದೆ ಸೂಚಿಸುತ್ತದೆ. ಇದನ್ನು ಅನ್ವಯಗೊಳಿಸಲು ದೊಡ್ಡ ಪಡೆಯೇ ಇದೆ. ರಕ್ಷಣಾ ಸಚಿವಾಲಯ, ವಿದೇಶಾಂಗ ಸಚಿವಾಲಯ, ಆರ್ಥಿಕ ಸಚಿವಾಲಯ, ಕಾನೂನು ಸಚಿವಾಲಯ, ವಿಜ್ಞಾನ– ತಂತ್ರಜ್ಞಾನ ಸಚಿವಾಲಯ, ಪ್ರವಾಸೋದ್ಯಮ ಸಚಿವಾಲಯ ಹೀಗೆ ಅನೇಕ ಕ್ಷೇತ್ರದ ಸದಸ್ಯರು ಈ ಸಮಿತಿಯಲ್ಲಿರುತ್ತಾರೆ. ಗೋವಾದಲ್ಲಿರುವ ರಾಷ್ಟ್ರೀಯ ಧ್ರುವ ಮತ್ತು ಸಾಗರ ಸಂಶೋಧನಾ ಕೇಂದ್ರವು ಭಾರತದ ಅಂಟಾರ್ಕ್ಟಿಕಾ ಯಾತ್ರೆಯನ್ನು ರೂಪಿಸುತ್ತದೆ, ಅನುಷ್ಠಾನಗೊಳಿಸುತ್ತದೆ. ಇದೀಗ ಅದರ ಹೊಣೆ ಹೆಚ್ಚಾಗಿದೆ. ಈ ಮಸೂದೆಯ ಪ್ರಕಾರ ಅಂಟಾರ್ಕ್ಟಿಕಾದಲ್ಲಿ ಹೊಸ ಪ್ರಭೇದದ ಪಕ್ಷಿ–ಪ್ರಾಣಿ, ಗಿಡ- ಮರ, ಅಷ್ಟೇ ಏಕೆ, ಸೂಕ್ಷ್ಮಜೀವಿಗಳನ್ನೂ ಪರಿಚಯಿಸುವಂತಿಲ್ಲ. ಮೂಲದಲ್ಲಿ ಹೇಗಿದೆಯೋ ಆ ಪರಿಸರ ಹಾಗೆಯೇ ಉಳಿಯಬೇಕು ಎಂಬ ಅಂಶವೂ ಮಸೂದೆಯಲ್ಲಿ ಸೇರಿದೆ.

ಅಂಟಾರ್ಕ್ಟಿಕಾದಲ್ಲಿ ಸಂಶೋಧನೆಯ ಹೆಸರಿನಲ್ಲಿ ಈಗಾಗಲೇ ನಗರಗಳೇ ತಲೆ ಎತ್ತಿವೆ. ವಿಮಾನ ಮತ್ತು ಹೆಲಿಕಾಪ್ಟರ್‌ಗಳ ಹಾರಾಟ ಅಲ್ಲಿ ಸರ್ವಸಾಮಾನ್ಯ. ಹೀಗೆ ಹಾರಾಡುವಾಗ ಅಲ್ಲಿನ ಜೀವಿಗಳಿಗೆ ಗಾಸಿಯಾಗಬಾರದು, ಅವು ಗಾಬರಿಗೆ ಒಳಗಾಗಬಾರದು ಎಂಬ ಅಂಶವನ್ನು ಭಾರತ ಸಮ್ಮತಿಸಿ, ಕೆಳಹಂತದ ಹಾರಾಟವನ್ನು ನಿಷೇಧಿಸಿದೆ. ಅಲ್ಲಿ ಯಾವುದೇ ಗಣಿ ಕಾರ್ಯಾಚರಣೆಗೂ ಅವಕಾಶವಿಲ್ಲ. ಯಾವ ಜೀವಿಗಳನ್ನೂ ಬಂಧಿಸಿಟ್ಟು ಸಂಶೋಧನೆ ಮಾಡುವಂತಿಲ್ಲ, ಭಾರತಕ್ಕೆ ತರುವಂತಿಲ್ಲ. ಈ ನಿಯಮಗಳನ್ನು ಉಲ್ಲಂಘಿಸಿದರೆ ಏಳು ವರ್ಷದವರೆಗೆ ಕಠಿಣ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ, ಇಲ್ಲವೇ ₹ 50 ಲಕ್ಷದವರೆಗೆ ದಂಡ ತೆರಬೇಕಾಗುತ್ತದೆ. ಇಡೀ ಖಂಡವೇ ಬಯಲು ಪ್ರಯೋಗಾಲಯ. ಇದನ್ನು ಉಳಿಸಿಕೊಳ್ಳಲು ಕಾನೂನಿನ ಕುಣಿಕೆಯನ್ನು ಬಿಗಿಸೊಳಿಸುವುದು ಅನಿವಾರ್ಯ ಎಂಬ ತೀರ್ಮಾನಕ್ಕೆ ಭಾರತವೂ ಬದ್ಧವಾಗಿದೆ.

ಚುರುಮುರಿ

ಎಲ್ಲರಿಗೂ ಗೇಮ್ಸ್!

• ಸುಮಂಗಲಾ

ಕಾಮನ್‌ವೆಲ್ತ್ ಪಂದ್ಯಗಳನ್ನು ನೋಡುತ್ತಿದ್ದ ಬೆಕ್ಕಣ್ಣ 'ಶಿಂದೆ ಶಾಸಕರ ತಂಡವನ್ನು ಕಳಿಸಿದ್ದರೆ ಟ್ರಿಪಲ್ ಜಂಪ್, ಹೈಜಂಪ್, ಲಾಂಗ್ ಜಂಪ್, ಹರ್ಡಲ್ಸ್ ಎಲ್ಲಾದ್ರಾಗೆ ಒಂದಿಷ್ಟು ಪದಕನಾದ್ರೂ ಗೆದ್ದು ಬರತಿದ್ರು... ಛೇ ಛೇ... ಎಂಥಾ ಛಾನ್ಸ್ ತಪ್ಪಿತು' ಎಂದಿತು.

'ಹುಚ್‌ಪ್ಯಾಲಿ... ಅವೆಲ್ಲ ನೆಲದ ಮ್ಯಾಗೆ ನಡಿಯೂ ಜಂಪ್‌ಗಳು. ಅವೇನು ಒಂದು ಬಣದಿಂದ ಇನ್ನೊಂದು ಬಣಕ್ಕೆ, ಪಕ್ಷದಿಂದ ಪಕ್ಷಕ್ಕೆ ಜಂಪ್ ಮಾಡಿದಷ್ಟು ಸುಲಭ ಅಂತ ಮಾಡೀಯೇನ್... ಇವೆಲ್ಲಾ ಸ್ಪರ್ಧೆಗೆ ಛಲೋ ಕಸರತ್ತು, ದಿನಾ ಅಭ್ಯಾಸ ಮಾಡಬೇಕಾಗತೈತಿ' ಎಂದೆ.

'ಅದೇ ಮತ್ತ... ಏನೂ ಕಸರತ್ತು ಮಾಡದೇನೆ ಎಷ್ಟ್ ಮಸ್ತ್ ಜಂಪಿಂಗ್ ಪಂಟರಾಗಿರ್ತಾರ! ಸ್ವಲ್ಪ ಕಸರತ್ತು ಮಾಡಿದರ ಎಲ್ಲಾ ಥರದ ಜಂಪಿಂಗ್, ರನ್ನಿಂಗ್ ಸ್ಪರ್ಧೆವಳಗ ನಮ್ಮ ರಾಜಕಾರಣಿಗಳೇ ಗೆಲ್ತಾರ. ಎಲ್ಲಾ ಗೇಮ್ಸ್‌ಗಳನ್ನ ಬರೀ ಆಟಗಾರರಿಗೇ ಎದಕ್ಕ ನಡಸಬಕು? ರಾಜಕಾರಣಿಗಳಿಗೂ ನಡಸಬಕು' ಎಂದು ವಾದ ಹೂಡಿತು.

'ಬೇರೆಬೇರೆ ದೇಶದ ರಾಜಕಾರಣಿಗಳು ಥರಾವರಿ ಆಟದೊಳಗ ಪಳಗಿರ್ತಾರ. ಹಿಂಗಾಗಿ ಎಲ್ಲಾ ದೇಶದ ರಾಜಕಾರಣಿ ಪಂಟರಿಗೆ ಒಂದೇ ಥರದ ಪಂದ್ಯ ನಡೆಸಾಕೆ ಆಗಂಗಿಲ್ಲವಲ್ಲ...' ನಾನೂ ಯೋಚನೆಗೆ ಬಿದ್ದೆ.

'ಮೊದಲು ರಾಷ್ಟ್ರ ಮಟ್ಟದಲ್ಲಿ ನಡಸೂಣು. ಕುರ್ಚಿ ಹಾರಿಸಿ, ಹಿಡಿಯೂ ಪಂದ್ಯ, ಪಕ್ಷದಿಂದ ಪಕ್ಷಕ್ಕೆ ಜಂಪಿಂಗ್ ಪಂದ್ಯ, ಜನರ ಕಣ್ಣಿಗೆ ಮಂಕುಬೂದಿ ಎರಚೂ ಪಂದ್ಯ, ಭ್ರಷ್ಟಾಚಾರದ ಕೆಸರೊಳಗೇ ನಿಂತರೂ, ಮೈಕೈಗೆ ಒಂದಿಷ್ಟೂ ಕೆಸರು ಅಂಟಿಸಿಕೊಳ್ಳದ ಪಂದ್ಯ, ಎರಡೇ ಕೈಯಲ್ಲಿ ಕೋಟಿಗಟ್ಟಲೆ ಕಾಸು ಬಾಚುವ ಪಂದ್ಯ...' ಬೆಕ್ಕಣ್ಣನ ಪಟ್ಟಿ ಬೆಳೆಯುತ್ತಲೇ ಇತ್ತು.

'ರಾಜಕಾರಣಿಗಳಿಗಷ್ಟೇ ಎದಕ್ಕ... ನಮ್ಮ ಅಧಿಕಾರಿಗಳಿಗೂ ಇಂತಾ ಕೆಲವು ಗೇಮ್ಸ್ ನಡೆಸೂಣು ಹಂಗಾರೆ. ಅವರೇನು ಕಡಿಮಿ ಪಂಟರೇನ್ ಮತ್ತ'.

'ನಿಮಗ ಶ್ರೀಸಾಮಾನ್ಯರಿಗೂ ಗೇಮ್ಸ್ ನಡಸಬಕು ಮತ್ತ. ಕಾಸಿಗೆ ಮತ ಮಾರಿಕೊಳ್ಳೂ ಪಂದ್ಯ, ಬೆಲೆಯೇರಿಕೆ, ರಸ್ತೆಗುಂಡಿ ಇತ್ಯಾದಿ ಹತ್ ಸಮಸ್ಯೆಗಳಿದ್ದರೂ ಬೋಪರಾಕ್ ಹಾಕೂ ಪಂದ್ಯ' ಅಂತ ಹೇಳುತ್ತ ಬೆಕ್ಕಣ್ಣ ಮುಸಿಮುಸಿ ನಕ್ಕಿತು!

ಸಂಗತ

ಮಕ್ಕಳ ತಟ್ಟೆಯಲ್ಲಿ ಮೊಟ್ಟೆ...

ಬಿಸಿಯೂಟದಿಂದ ಮಕ್ಕಳ ಆರೋಗ್ಯ ತುಸು ಸುಧಾರಿಸಿದೆ. ಊಟದ ಜೊತೆ ಮೊಟ್ಟೆಯನ್ನು ವಾರಕ್ಕೆ ಮೂರು ಬಾರಿಯಾದರೂ ಕೊಡಬೇಕು

• ಉದಯ ಗಾಂವಕರ್

ಇದು ಬಹಳ ಹಳೆಯ ಕತೆ. ಆದರೂ ನೆನಪಿಸುವೆ. ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಕೆ. ಕಾಮರಾಜ್ ಅವರ ಕಾರು ಗ್ರಾಮವೊಂದರ ರೈಲ್ವೆ ಕ್ರಾಸಿಂಗ್ ಬಳಿ ನಿಂತಿತ್ತು. ರೈಲು ಇನ್ನೇನು ಬರಬೇಕಿತ್ತು. ಕಾಮರಾಜರು ಕಿಟಕಿಯಾಚೆ ನೋಡಿದರು. ಒಬ್ಬ ಹುಡುಗ ದನ ಮೇಯಿಸುತ್ತಿದ್ದ. ಅವನೊಡನೆ ಮಾತನಾಡಬೇಕೆನಿಸಿತು ಅವರಿಗೆ. ಕರೆದು 'ಯಾಕಪ್ಪಾ ಶಾಲೆಗೆ ಹೋಗಲಿಲ್ಲ?' ಎಂದು ಕೇಳಿದರು. ತಕ್ಷಣವೇ ಆತ 'ದಿನವೂ ಶಾಲೆಗೆ ಹೋದರೆ ನೀವು ಊಟ ಹಾಕುತ್ತೀರಾ?' ಎಂದು ಕೇಳಿದ. ಆ ಬುಡಕಟ್ಟು ಹುಡುಗ ಅವರನ್ನು ಗುರುತಿಸಿರಲಿಲ್ಲ. ಆದರೆ, ಈ ಘಟನೆಯು ಕಾಮರಾಜ್ ಅವರು ದೇಶದಲ್ಲೇ ಮೊದಲ ಬಾರಿಗೆ 1956ರಲ್ಲಿ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಯೋಜನೆ ಜಾರಿಗೊಳಿಸಲು ಕಾರಣವಾಯಿತು.

ಸರ್ಕಾರಗಳು ಜಗತ್ತನ್ನು ದಮನಿತರ ಹೃದಯದ ಮೂಲಕ ನೋಡಬೇಕೇ ವಿನಾ ಶೋಷಕರ ಮಿದುಳಿನ ಮೂಲಕವಲ್ಲ ಎಂಬುದನ್ನು ಈ ವಿದ್ಯಮಾನವು ಪುಷ್ಟೀಕರಿಸುತ್ತದೆ. ಈಗ ಮಕ್ಕಳ ಊಟದ ತಟ್ಟೆಗೆ ಮೊಟ್ಟೆಯೂ ಸೇರಿಕೊಂಡಿದೆ.

ಖಾಸಗಿ ಶಾಲೆಗಳ ಮಕ್ಕಳಿಗೆ ಹೋಲಿಸಿದರೆ, ಸರ್ಕಾರಿ ಶಾಲೆಗಳ ಹೆಚ್ಚಿನ ಮಕ್ಕಳು ಪೀಚಲಾಗಿರುತ್ತಾರೆ. ಕಡಿಮೆ ತೂಕ, ಬಿಳಿಚಿಕೊಂಡ ತುಟಿ. ಇವೆಲ್ಲವೂ ನ್ಯೂನಪೋಷಣೆಯ ಸೂಚಕಗಳು. ಕಳೆದ ವರ್ಷ ನಡೆದ ಒಂದು ಅಧ್ಯಯನದ ಪ್ರಕಾರ ಯಾದಗಿರಿ ಜಿಲ್ಲೆಯ ಸರ್ಕಾರಿ ಶಾಲೆಗಳಲ್ಲಿನ ಶೇ 74ರಷ್ಟು ವಿದ್ಯಾರ್ಥಿಗಳು ನ್ಯೂನಪೋಷಣೆಯಿಂದ ಬಳಲುತ್ತಿದ್ದಾರೆ. ಕಲಬುರಗಿ, ಕೊಪ್ಪಳ, ಬೀದರ್, ರಾಯಚೂರು ಜಿಲ್ಲೆಗಳಲ್ಲೂ ಮುಕ್ಕಾಲು ಪಾಲು ಮಕ್ಕಳ ದೇಹ ತೂಕ ಅವರ ಎತ್ತರಕ್ಕೆ ತಕ್ಕದಾಗಿರಲಿಲ್ಲ. ಜೊತೆಗೆ, ರಕ್ತಹೀನತೆ, ಏಕಾಗ್ರತೆ ಕೊರತೆಯಂತಹ ಸಮಸ್ಯೆಗಳಿಂದ ಬಳಲುತ್ತಿದ್ದರು. ಕಳೆದ ಡಿಸೆಂಬರ್‌ನಿಂದ ಕಲ್ಯಾಣ ಕರ್ನಾಟಕ ಜಿಲ್ಲೆಗಳ ಹದಿನಾಲ್ಕೂವರೆ ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದಲ್ಲಿ ಮೊಟ್ಟೆ ನೀಡುವ ಕಾರ್ಯಕ್ರಮವನ್ನು ಆರಂಭಿಸಿದ ಮೇಲೆ ನ್ಯೂನಪೋಷಣೆಯ ತೀವ್ರತೆ ಇಳಿಮುಖವಾಯಿತು. ನ್ಯೂನಪೋಷಣೆಯ ವಿಚಾರದಲ್ಲಿ ಬೇರೆ ಜಿಲ್ಲೆಗಳಲ್ಲೂ ಪರಿಸ್ಥಿತಿ ತೀರಾ ಭಿನ್ನವಾಗಿಲ್ಲ. ಮೊಟ್ಟೆ ನೀಡುವ ಯೋಜನೆಯನ್ನು ರಾಜ್ಯ ಸರ್ಕಾರವು ಈಚೆಗೆ ಎಲ್ಲ ಜಿಲ್ಲೆಗಳ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿನ 1ರಿಂದ 8ನೇ ತರಗತಿಯ ಮಕ್ಕಳಿಗೆ (ವರ್ಷದಲ್ಲಿ 46 ದಿನ) ವಿಸ್ತರಿಸಿದೆ. ಇದು ಅಗತ್ಯವಾಗಿ ಆಗಬೇಕಿದ್ದ ಕೆಲಸ.

ಕೆಲವು ಮಕ್ಕಳಿಗೆ ಹೊಟ್ಟೆ ತುಂಬಾ ಊಟ ಸಿಗುತ್ತಿಲ್ಲ. ಊಟ ದೊರೆಯುತ್ತಿರುವ ಮಕ್ಕಳಲ್ಲೂ ನ್ಯೂನಪೋಷಣೆ ಇರಲು ಊಟದಲ್ಲಿ ಆಹಾರದ ವಿವಿಧ ಘಟಕಗಳು ಅವಶ್ಯಕ ಪ್ರಮಾಣದಲ್ಲಿ ದೊರೆಯದಿರುವುದೇ ಕಾರಣ ಎನ್ನುತ್ತದೆ ಪೋಷಣೆಯ ಬೆನ್ನುಹತ್ತಿ ಹೋದ 'ಈಟ್–ಲ್ಯಾನ್ಸೆಟ್' ಅಧ್ಯಯನ. ಈ ಅಧ್ಯಯನದ ಮುಖ್ಯ ಗ್ರಹಿಕೆ ಮತ್ತು ಶಿಫಾರಸುಗಳು ಗಮನಾರ್ಹವಾಗಿವೆ. ಗ್ರಾಮೀಣ ಭಾರತೀಯರು ನಿತ್ಯವೂ ಸರಾಸರಿ 2,214 ಕಿಲೊ ಕ್ಯಾಲರಿ ಆಹಾರವನ್ನು ಸೇವಿಸಿದರೆ, ಪಟ್ಟಣಿಗರು ತುಸು ಕಮ್ಮಿ. ಅವರು ಸರಾಸರಿ 2,169 ಕಿಲೊ ಕ್ಯಾಲರಿ ಸೇವಿಸುತ್ತಾರೆ. ಇದು ಅವರು ತೆಗೆದುಕೊಳ್ಳಬೇಕಾದ ಸರಾಸರಿ ಕ್ಯಾಲರಿಗಿಂತ 400 ಕಿಲೊ ಕ್ಯಾಲರಿ ಕಡಿಮೆ. ಶ್ರೀಮಂತ ವರ್ಗದವರು ಸರಾಸರಿ 3,000 ಕಿಲೊ ಕ್ಯಾಲರಿ ಸೇವಿಸುತ್ತಾರೆ. ಇದು, ಅಗತ್ಯ ಎಂದು ಗುರುತಿಸಿರುವುದಕ್ಕಿಂತ 400 ಕಿಲೊ ಕ್ಯಾಲರಿ ಜಾಸ್ತಿ.

ನಮ್ಮ ಮಕ್ಕಳ ನ್ಯೂನಪೋಷಣೆಗೆ ಮುಖ್ಯ ಕಾರಣವೆಂದರೆ ನಮ್ಮ ಊಟದ ತಟ್ಟೆಯ ಬಹುಭಾಗವು ಧಾನ್ಯ ಮೂಲದ ಆಹಾರದಿಂದ ತುಂಬಿರುವುದು. ಅಧ್ಯಯನವು ನೀಡಿರುವ ಶಿಫಾರಸಿನಂತೆ ನಮ್ಮ ಆಹಾರದ ಮೂರನೇ ಒಂದು ಭಾಗವು ಅಂದರೆ 800 ಕಿಲೊ ಕ್ಯಾಲರಿ ಶಕ್ತಿಯು ಧಾನ್ಯಗಳಿಂದ ಬಂದರೆ ಸಾಕು. ನಮ್ಮ ಬಹುತೇಕ ಮಕ್ಕಳಿಗೆ ಅರ್ಧದಷ್ಟು ಶಕ್ತಿ ದೊರೆಯುವುದು ಅಕ್ಕಿ, ಗೋಧಿ, ಜೋಳ, ರಾಗಿ ಮುಂತಾದ ಧಾನ್ಯಗಳಿಂದ. ಹಳ್ಳಿಗಳಲ್ಲಂತೂ ಮುಕ್ಕಾಲು ಪಾಲು ಆಹಾರವೇ ಧಾನ್ಯಮೂಲದ್ದಾಗಿರುತ್ತದೆ ಎನ್ನುತ್ತದೆ ಅಧ್ಯಯನ. ನಮ್ಮ ಆಹಾರದ ಶೇ 29ರಷ್ಟು ಅಂದರೆ 729 ಕ್ಯಾಲರಿಯಷ್ಟು ಶಕ್ತಿಯು ಮೊಟ್ಟೆ, ಹಾಲು, ಮೀನು, ಮಾಂಸ, ಕಾಳುಗಳಿಂದ ಬರಬೇಕು. ಆದರೆ, ಹಳ್ಳಿಯ ಬಡ ಮಕ್ಕಳು ತಾವು ಸೇವಿಸಬೇಕಾಗಿದ್ದ ಪ್ರೋಟೀನಿನ ಶೇ 6ರಷ್ಟನ್ನು ಮಾತ್ರ ಸೇವಿಸುತ್ತಿದ್ದಾರೆ. ಇದು ಚಿಂತೆಗೀಡುಮಾಡುವ ವಿಷಯ. ಹೀಗಾದಲ್ಲಿ ಭವಿಷ್ಯದ ಭಾರತ ರೋಗಗ್ರಸ್ತವಾಗುತ್ತದೆ. ಶಕ್ತಿಹೀನವಾಗುತ್ತದೆ.

ಬಿಸಿಯೂಟದಿಂದ ಮಕ್ಕಳ ಆರೋಗ್ಯ ಸುಧಾರಿಸುತ್ತಿದೆ. ಊಟದ ಜೊತೆ ಮೊಟ್ಟೆಯನ್ನು ವಾರಕ್ಕೆ ಮೂರು ಬಾರಿಯಾದರೂ ಕೊಡಬೇಕು. ತಮಿಳುನಾಡಿನ ಮಕ್ಕಳಿಗೆ ವಾರದ ಐದು ದಿನಗಳು ಮೊಟ್ಟೆ ದಿನಗಳು. ಆಂಧ್ರ, ತೆಲಂಗಾಣ ಹೀಗೆ ಹದಿಮೂರು ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶದ ಮಕ್ಕಳಿಗೆ ಮೊಟ್ಟೆಯ ಶಕ್ತಿ ದೊರೆಯುತ್ತಿದೆ.

ಜೀವನಶೈಲಿ ಕಾಯಿಲೆಗಳಾದ ರಕ್ತದೊತ್ತಡ, ಮಧುಮೇಹಕ್ಕೆ ನಮ್ಮ ಆಹಾರದಲ್ಲಿ ಶರ್ಕರ, ಪಿಷ್ಟ ಹೆಚ್ಚಿರುವ ಧಾನ್ಯ- ಸಿಹಿತಿನಿಸುಗಳೇ ಕಾರಣವೆಂದು ಇತ್ತೀಚಿನ ಕೆಲವು ಅಧ್ಯಯನಗಳು ದೃಢಪಡಿಸುತ್ತವೆ. ಮೀನು, ಮಾಂಸ, ಕಾಳು, ಮೊಟ್ಟೆಯನ್ನು ಊಟದ ತಟ್ಟೆಯಲ್ಲಿ ಹಾಕುವುದರಿಂದ ಊಟದಲ್ಲಿ ದೇಹ ನಿರ್ಮಾಣದ ಪೋಷಕಗಳ ಪ್ರಮಾಣ ಹೆಚ್ಚುತ್ತದೆ. ಆಹಾರದ ವಿಷಯದಲ್ಲಿ ಶ್ರೇಷ್ಠ- ಕನಿಷ್ಠ ಎಂಬ ಭೇದ ಬೇಡ. ಮಕ್ಕಳ ವಿಚಾರದಲ್ಲಿ ಅಪೌಷ್ಟಿಕತೆ ನಿವಾರಣೆಯೇ ನಮಗೆ ಮುಖ್ಯವಾಗಬೇಕು.

ವಾಚಕರ ವಾಣಿ

ಅಮೃತ ಮಹೋತ್ಸವ: ಆತ್ಮಾವಲೋಕನಕ್ಕೆ ಸುಸಂದರ್ಭ

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಭ್ರಮದಲ್ಲಿದ್ದೇವೆ. ವ್ಯವಸ್ಥೆಯ ಊನಗಳ ಬಗೆಗೆ ಆತ್ಮಾವಲೋಕನ ಮಾಡಿಕೊಳ್ಳಲು ಇದು ಸುಸಂದರ್ಭ. ಪ್ರತೀ ಇಲಾಖೆಯೂ ಭ್ರಷ್ಟಾಚಾರಮುಕ್ತ ಮತ್ತು ಜನಸ್ನೇಹಿ ಆಗುವಂತೆ ನೋಡಿಕೊಳ್ಳಬೇಕು. ಅದರಲ್ಲಿ ಕಿಂಚಿತ್ತಾದರೂ ನಾವು ಯಶಸ್ಸು ಗಳಿಸಿದರೆ ಅದು ದೊಡ್ಡ ಸಾಧನೆ. ನಮ್ಮ ಸ್ವಾತಂತ್ರ್ಯ ಹೋರಾಟಗಾರರಿಗೆ ಮತ್ತು ಅವರು ಪ್ರತಿಪಾದಿಸಿದ ಮೌಲ್ಯಗಳಿಗೆ ಈ ಮೂಲಕ ನಾವು ಗೌರವ ತೋರಬೇಕು.

ಕೆ.ಸಿ. ನರಸಿಂಹ ಗೌಡ, ಮದ್ದೂರು

ದುಷ್ಟ ಆಟಗಳಿಂದ ದೂರವಿರಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ವಾರಗಳ ಅವಧಿಯಲ್ಲಿ ಮೂರು ಕೊಲೆಗಳಾಗಿವೆ. ಇಲ್ಲಿ ಹತ್ಯೆಗೆ ಒಳಗಾಗಿದ್ದು ಯಾವುದೋ ಒಂದು ಮತ-ಜಾತಿಗೆ ಸೇರಿದ ವ್ಯಕ್ತಿಗಳು ಮಾತ್ರವಲ್ಲ. ಮಾನವೀಯತೆಯ ಹತ್ಯೆಯಾಗಿದೆ. ಹರಿದ ನೆತ್ತರು, ಸುರಿದ ಕಣ್ಣೀರಿನ ಬಣ್ಣ ಒಂದೇ. ಮೊದಲು ಮಾನವರಾಗೋಣ. ಸ್ವಾರ್ಥಶಕ್ತಿಗಳ ಹುನ್ನಾರಗಳಿಗೆ ಮುಗ್ಧರು ಮರುಳಾಗುವುದು ಬೇಡ. ರಾಜಕೀಯ ದುಷ್ಟ ಆಟಗಳಿಂದ ದೂರವಿದ್ದು, ಶಾಂತಿಯಿಂದ ಸಹಬಾಳ್ವೆ ನಡೆಸಲು ಅಲ್ಲಿನ ಜನ ಪಣ ತೊಡಬೇಕು.

ಲೋಹಿತ ಹಸೂರೆ, ಚಿಕ್ಕೋಡಿ

ಹಿರಿಯರಿಗೆ ನೆಮ್ಮದಿಯ ಬದುಕು ಸಿಗಲಿ

ಜಗತ್ತಿನ ಒಟ್ಟು ಜನಸಂಖ್ಯೆಯಲ್ಲಿ 60 ವರ್ಷ ವಯಸ್ಸು ಮೀರಿದ ಹಿರಿಯ ನಾಗರಿಕರ ಪ್ರಮಾಣವು ಹೆಚ್ಚುತ್ತಿರುವುದಾಗಿ ಇತ್ತೀಚೆಗೆ ಮಾಧ್ಯಮಗಳಲ್ಲಿ ವರದಿಯಾಗಿದೆ. ಹಿರಿಯ ನಾಗರಿಕರು ನಮ್ಮಲ್ಲಿ ನಾನಾ ರೀತಿಯ ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಅದರಲ್ಲಿ ಮುಖ್ಯವಾದುದು ಆರೋಗ್ಯ ಸಮಸ್ಯೆ. ನಿವೃತ್ತಿಯವರೆಗೂ ಕುಟುಂಬಕ್ಕಾಗಿ ದಣಿವರಿಯದೆ ದುಡಿದ ಹಿರಿಯ ಜೀವಗಳಿಗೆ ಇಳಿವಯಸ್ಸಿನಲ್ಲಿ ಕಾಯಿಲೆಗಳು ದೈಹಿಕವಾಗಿ ನೋವು ನೀಡಿದರೆ, ಕುಟುಂಬದವರ ನಿರ್ಲಕ್ಷ್ಯವು ಭಾವನಾತ್ಮಕವಾಗಿ ಬಾಧಿಸುತ್ತದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಿರಿಯ ನಾಗರಿಕರಿಗಾಗಿ ಬೇರೆ ಬೇರೆ ರೀತಿಯಲ್ಲಿ ಹಲವು ರಿಯಾಯಿತಿಗಳನ್ನು ನೀಡಿವೆಯಾದರೂ, ಬ್ಯಾಂಕು, ಅಂಚೆ ಕಚೇರಿ ಮತ್ತು ಇತರ ಹಣಕಾಸು ಸಂಸ್ಥೆಗಳಲ್ಲಿ ಅವರು ಇರಿಸಿರುವ ಠೇವಣಿಗೆ ಕೊಡಮಾಡುವ ಬಡ್ಡಿದರವು ಕೆಲವು ವರ್ಷಗಳ ಹಿಂದಿನ ಮಟ್ಟಕ್ಕೆ ಹೋಲಿಸಿದರೆ ಈಗ ತೀರಾ ಕಡಿಮೆ. ಎಷ್ಟೋ ಹಿರಿಯರು ಬಡ್ಡಿ ಹಣದಲ್ಲೇ ಜೀವನ ಸಾಗಿಸುತ್ತಿದ್ದು, ಬೆಲೆ ಏರಿಕೆಯ ಈ ದುಬಾರಿಯ ದಿನಗಳು ಅವರಿಗೆ ಮತ್ತಷ್ಟು ದುಬಾರಿಯಾಗಿವೆ. ಹಾಗಾಗಿ, ಹಿರಿಯರಿಗಾಗಿ ಪ್ರತ್ಯೇಕ ಆಸ್ಪತ್ರೆ, ಆಶ್ರಯ ತಾಣಗಳನ್ನು ಸರ್ಕಾರವು ತೆರೆದರೆ ಅವರ ಬದುಕಿಗೆ ಸ್ವಲ್ಪಮಟ್ಟಿಗಾದರೂ ಆಸರೆ ಸಿಗಬಹುದು.

ಕೆ.ವಿ.ವಾಸು, ಮೈಸೂರು

ಮೇ(ಲ್)ಲುಗೈ!

ಸಿಇಟಿ ಫಲಿತಾಂಶ: ಬಾಲಕರು ಮೇಲುಗೈ
ಪ್ರತಿ ಬಾರಿಯೂ ಪಿಯುಸಿ,
ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶಗಳಲ್ಲಿ
ಬಾಲಕಿಯರೇ ಮೇಲುಗೈ!
ಸದ್ಯ, ಈ ಸಾರಿ ಸಿಇಟಿಯಲ್ಲಾದರೂ
ಹುಡುಗರು ಸೈ ಅನ್ನಿಸಿಕೊಂಡರಲ್ಲ!

ಮ.ಗು.ಬಸವಣ್ಣ, ಸುತ್ತೂರು

ದೃಶ್ಯ ಮಾಧ್ಯಮ: ಜವಾಬ್ದಾರಿ ಅರಿಯಲಿ

ಅತ್ಯಾಚಾರ, ಲೈಂಗಿಕ ಹಗರಣ, ಕೊಲೆ ಹಾಗೂ ಕೋಮುವೈಷಮ್ಯದಂಥ ವಿಷಯಗಳನ್ನು ದೃಶ್ಯಮಾಧ್ಯಮದ ಕೆಲವು ವಾಹಿನಿಗಳು ಅತಿರಂಜಿತವಾಗಿ ಪ್ರಸಾರ ಮಾಡುತ್ತಿವೆ. ನೈತಿಕತೆಯ ಪರಿಧಿ ದಾಟಿ, ಸಮಾಜದ ಮೇಲಾಗುವ ಪರಿಣಾಮವನ್ನೂ ಗಮನಿಸದೆ ಇಂತಹ ಸುದ್ದಿಗಳನ್ನು ದಿನವಿಡೀ ಪ್ರಸಾರ ಮಾಡುವುದು ತರವಲ್ಲ. ಇಂಥ ವಿಚಾರಗಳಲ್ಲಿ ಮಾಧ್ಯಮಗಳು ಸ್ವಯಂ ನಿಯಂತ್ರಣ ಹೊಂದುವುದು ಅತ್ಯಗತ್ಯ.

ಕೊಲೆ, ಹಲ್ಲೆಯಂಥ ಪ್ರಕರಣಗಳಲ್ಲಿ ಸಿ.ಸಿ. ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿಗಳನ್ನು ನಿರಂತರವಾಗಿ ತೋರಿಸುವ ಅಗತ್ಯವಾದರೂ ಏನಿದೆ? ಸಮಾಜದ ಆರೋಗ್ಯ ಕಾಪಾಡಲು ನೆರವಾಗಬೇಕಾದ ಮಾಧ್ಯಮಗಳೇ ಅದನ್ನು ಕೆಡಿಸುವ ಕೆಲಸ ಮಾಡಬಾರದು.

ನಾರಾಯಣರಾವ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗಾ

ಜನಸಾಮಾನ್ಯರಲ್ಲಿ ಮೂಡಲಿ ತಿಳಿವಳಿಕೆ

ವ್ಯಕ್ತಿಯೊಬ್ಬ ಕೊಲೆಯಾದರೆ ಅದಕ್ಕೆ ಜಾತಿ, ಮತದ ಲೇಪನ ನೀಡುವುದರಿಂದ ಸಮಾಜದ ಸಾಮರಸ್ಯ ಹದಗೆಡುತ್ತದೆ. ಅಷ್ಟೇ ಅಲ್ಲ, ಪರಸ್ಪರ ಸೌಹಾರ್ದದಿಂದ ಬಾಳುತ್ತಿರುವವರ ಮನಸ್ಸಿನಲ್ಲಿ ಅನಗತ್ಯ ಅನುಮಾನಗಳು ಮೂಡುತ್ತವೆ. ವಿಶ್ವಾಸ, ನೆಮ್ಮದಿ ನಾಶವಾಗುತ್ತದೆ. ರಾಜಕಾರಣಿಗಳು ಮತ್ತು ಅವರ ಅನುಯಾಯಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಹೊಂಚು ಹಾಕಿರುತ್ತಾರೆ. ಸಿಕ್ಕ ಅವಕಾಶವನ್ನು ಜಾತಿ, ಧರ್ಮದ ಹೆಸರಿನಲ್ಲಿ ದುರ್ಬಳಕೆ ಮಾಡಿಕೊಳ್ಳುವ ಪರಿಪಾಟ ಹೆಚ್ಚುತ್ತಿರುವುದು ಕಳವಳಕಾರಿ. ನಾಗರಿಕರು ಎಚ್ಚೆತ್ತುಕೊಳ್ಳಬೇಕು. ಸ್ವಾರ್ಥಶಕ್ತಿಗಳ ಹುನ್ನಾರ ಅರಿತು ಪ್ರಜ್ಞಾವಂತಿಕೆಯನ್ನು ಮೆರೆಯಬೇಕು.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಗಡಿ ಗ್ರಾಮಗಳ ಸಮಸ್ಯೆ ನಿವಾರಣೆಗೆ ಸ್ಪಂದಿಸಿ

ನೆರೆರಾಜ್ಯಗಳ ಗಡಿಗಳಿಗೆ ಹೊಂದಿಕೊಂಡಿರುವ ಕರ್ನಾಟಕದ ಗಡಿಗ್ರಾಮಗಳ ಅಭಿವೃದ್ಧಿಗೆ ಸರ್ಕಾರ ಈಗಲಾದರೂ ಗಂಭೀರವಾಗಿ ಪ್ರಯತ್ನಿಸಬೇಕು. ಈ ಸಂಬಂಧದ 'ಒಳನೋಟ' (ಪ್ರ.ವಾ., ಜುಲೈ 31), ರಾಜ್ಯದ ಗಡಿ ಪ್ರದೇಶಗಳ ಸಮಸ್ಯೆಗಳಿಗೆ ಕನ್ನಡಿ ಹಿಡಿದಿದೆ. ಅವುಗಳ ನಿವಾರಣೆಗೆ ಸರ್ಕಾರ ತಕ್ಷಣ ಸ್ಪಂದಿಸಬೇಕು.

ಗಡಿ ಪ್ರದೇಶಗಳಲ್ಲಿ ಮೂಲ ಸೌಕರ್ಯ ವೃದ್ಧಿಗೆ ಆದ್ಯತೆ ನೀಡಬೇಕು. ಸರ್ಕಾರಿ ಶಾಲೆಗಳ ಬಲವರ್ಧನೆಯು ತುರ್ತಾಗಿ ಆಗಬೇಕು. ಆರೋಗ್ಯ ಕೇಂದ್ರಗಳ ನ್ಯೂನತೆಗಳನ್ನು ಸರಿಪಡಿಸಬೇಕು. ಸರೀಕರ ಎದುರು ತಲೆಎತ್ತಿ ನಿಲ್ಲಲು ಬೇಕಾದ ಕನಿಷ್ಠ ಸೌಕರ್ಯಗಳನ್ನು ಇನ್ನಾದರೂ ಕಲ್ಪಿಸಲಿ.

ಶಕುಂತಲಾ ಎನ್.ಎಚ್., ಬಾಗೇಪಲ್ಲಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪಶ್ಚಿಮ ಘಟ್ಟ | ಪರಿಸರ ಸೂಕ್ಷ್ಮ ಪ್ರದೇಶ: ಕರಡು ಅಧಿಸೂಚನೆಯಲ್ಲಿ ಏನಿದೆ?

ನೈಸರ್ಗಿಕ ಪಾರಂಪರಿಕ ಪ್ರದೇಶಗಳು ಎಂದು ಯುನೆಸ್ಕೊ ಪಟ್ಟಿ ಮಾಡಿರುವ ಪ್ರದೇಶಗಳನ್ನೂ ಹೊಂದಿರುವ ಪಶ್ಚಿಮ ಘಟ್ಟಗಳನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸುವ ಕರಡು ಅಧಿಸೂಚನೆಯನ್ನು ಕೇಂದ್ರ ಸರ್ಕಾರವು ಜುಲೈ 6ರಂದು ಪ್ರಕಟಿಸಿದೆ. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು 2018ರ ಅಕ್ಟೋಬರ್ 3ರಂದು ಹೊರಡಿಸಿದ್ದ ಅಧಿಸೂಚನೆಯನ್ನು ರದ್ದುಪಡಿಸಲಾಗಿದೆ. ಸಾರ್ವಜನಿಕರು ಆಕ್ಷೇಪಗಳನ್ನು ಸಲ್ಲಿಸಲು ಅಧಿಸೂಚನೆ ಪ್ರಕಟವಾದ ದಿನದಿಂದ 60 ದಿನಗಳವರೆಗೆ ಅವಕಾಶ ಇದೆ. ಸೆಪ್ಟೆಂಬರ್ 3ಕ್ಕೆ ಈ ಗಡುವು ಕೊನೆಗೊಳ್ಳಲಿದೆ. ಕರಡು ಅಧಿಸೂಚನೆ ಪ್ರಕಾರ, ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಏನು ಮಾಡಬಾರದು, ಏನು ಮಾಡಬಹುದು ಎಂಬುದರ ವಿವರ ಇಲ್ಲಿದೆ

ಉಲ್ಲಂಘನೆಗೆ ಶಿಕ್ಷೆ

ಅಧಿಸೂಚನೆಯ ಯಾವುದೇ ಅಂಶದ ಉಲ್ಲಂಘನೆಯಾದಲ್ಲಿ, ಪರಿಸರ (ರಕ್ಷಣೆ) ಕಾಯ್ದೆ 1986ರ ಅಡಿಯಲ್ಲಿ ಮತ್ತು ಇತರ ಕಾಯ್ದೆಗಳ ಅಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು.

ಅಧಿಸೂಚನೆಯಲ್ಲಿರುವ ಯಾವುದೇ ಅಂಶವು ಪರಿಸರ ಸೂಕ್ಷ್ಮ ಪ್ರದೇಶದಲ್ಲಿರುವ ಆಸ್ತಿ ಮಾಲೀಕತ್ವದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

ಗಣಿಗಾರಿಕೆ

ಗಣಿಗಾರಿಕೆ, ಕ್ವಾರಿಗಳು ಮತ್ತು ಮರಳು ಗಣಿಗಾರಿಕೆಗೆ ಸಂಪೂರ್ಣ ನಿಷೇಧ ಇದೆ. ಇಂತಹ ಚಟುವಟಿಕೆಗಳು ಅಲ್ಲಿ ಈಗಾಗಲೇ ನಡೆಯುತ್ತಿದ್ದರೆ ಅಂತಿಮ ಅಧಿಸೂಚನೆ ಪ್ರಕಟವಾದ ಐದು ವರ್ಷಗಳೊಳಗೆ ಅಥವಾ ಅದಕ್ಕೆ ಮೊದಲೇ ಅವುಗಳ ಗುತ್ತಿಗೆ ಅವಧಿ ಮುಗಿದರೆ, ಗುತ್ತಿಗೆ ಅವಧಿ ಮುಗಿದ ತಕ್ಷಣವೇ ಅವುಗಳನ್ನು ಸ್ಥಗಿತಗೊಳಿಸಬೇಕು.

ಉಷ್ಣ ವಿದ್ಯುತ್ ಸ್ಥಾವರ: ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಗೆ ಅವಕಾಶ ಇಲ್ಲ. ಹಾಗೆಯೇ, ಈಗಾಗಲೇ ಇರುವ ಉಷ್ಣ ವಿದ್ಯುತ್ ಸ್ಥಾವರಗಳ ವಿಸ್ತರಣೆಯನ್ನೂ ಮಾಡುವಂತಿಲ್ಲ.

ಕೈಗಾರಿಕೆ: ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಅಥವಾ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 'ಕೆಂಪು' ವರ್ಗಕ್ಕೆ ಸೇರಿಸಿರುವ ಕೈಗಾರಿಕೆಗಳಿಗೆ ಅವಕಾಶ ಇಲ್ಲ. ಈಗಾಗಲೇ ಇಲ್ಲಿ ಇರುವ 'ಕೆಂಪು' ವರ್ಗಕ್ಕೆ ಸೇರಿದ ಕೈಗಾರಿಕೆಗಳು ಮುಂದುವರಿಯಬಹುದು. ಇಲ್ಲಿ ಇರುವ ಆರೋಗ್ಯ ರಕ್ಷಣೆ ಸಂಸ್ಥೆಗಳೂ ಮುಂದುವರಿಯಬಹುದು. ಆದರೆ, ಅವು ಪ್ರಸ್ತುತ ಇರುವ ನಿಯಮಗಳು ಮತ್ತು ನಿಬಂಧನೆಗಳಿಗೆ ಅನುಗುಣವಾಗಿ ಇರಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣಕ್ಕೆ ಈಗಾಗಲೇ ಇರುವ ಪ್ರಸ್ತಾವಗಳು ಜಾರಿಗೆ ಬರಬಹುದು. ಆಸ್ತಿಯ ಮಾಲೀಕತ್ವ ಬದಲಾವಣೆಗೆ ಯಾವ ನಿರ್ಬಂಧವೂ ಇಲ್ಲ.

ನಿರ್ಮಾಣ ಕಾಮಗಾರಿ: 20 ಸಾವಿರ ಚದರ ಮೀಟರ್ ವಿಸ್ತೀರ್ಣದೊಳಗೆ ನಿರ್ಮಾಣವಾಗುವ ಹೊಸ ಕಟ್ಟಡಗಳು ಅಥವಾ ನಿರ್ಮಾಣಗಳಿಗೆ, ಈಗಾಗಲೇ ಇರುವ ಕಟ್ಟಡ ಅಥವಾ ನಿರ್ಮಾಣವನ್ನು 20 ಸಾವಿರ ಚದರ ಮೀಟರ್ ವಿಸ್ತೀರ್ಣದೊಳಗೆ ವಿಸ್ತರಣೆಗೆ ಅವಕಾಶ ಇದೆ. 50 ಹೆಕ್ಟೇರ್ ಪ್ರದೇಶದೊಳಗೆ, 1.5 ಲಕ್ಷ ಚದರ ಮೀಟರ್ ಒಳಗಿನ ವಿಸ್ತೀರ್ಣದಲ್ಲಿ ಟೌನ್‌ಶಿಪ್ ಅಥವಾ ಪ್ರದೇಶ ಅಭಿವೃದ್ಧಿ ಯೋಜನೆಗೆ ಅವಕಾಶ ಇದೆ. ಮನೆಗಳ ದುರಸ್ತಿ, ವಿಸ್ತರಣೆ, ನವೀಕರಣಕ್ಕೆ ನಿಯಮಗಳು ಮತ್ತು ನಿಬಂಧನೆಗಳಿಗೆ ಅನುಗುಣವಾಗಿ ಅವಕಾಶ ಇದೆ.



ಜಲ ವಿದ್ಯುತ್ ಯೋಜನೆ, ಕೈಗಾರಿಕೆಗಳಿಗೆ ಷರತ್ತುಗಳು

ಈ ಎಲ್ಲ ಯೋಜನೆ ಮತ್ತು ಚಟುವಟಿಕೆಗಳಿಗೆ ಈ ಕೆಳಗಿನ ನಿಯಮಗಳು ಮತ್ತು ನಿಯಂತ್ರಣಗಳು ಅನ್ವಯ

ಜಲ ವಿದ್ಯುತ್ ಯೋಜನೆಗಳು: 2006ರ ಸೆಪ್ಟೆಂಬರ್ 14ರಂದು ಪ್ರಕಟವಾದ ಪರಿಸರ ಪರಿಣಾಮ ಅಂದಾಜು ಅಧಿಸೂಚನೆಗೆ ಅನುಗುಣವಾಗಿ, ಹೊಸ ಜಲ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸಲು ಅವಕಾಶ ನೀಡಲಾಗುವುದು. ಆದರೆ, ಈ ಕೆಳಗಿನ ಷರತ್ತುಗಳನ್ನು ಪೂರೈಸಬೇಕು:

1. ಪ್ರತಿ ಯೋಜನೆಯ ಸಮಗ್ರ ಅಧ್ಯಯನ ನಡೆಸಿ, ಕನಿಷ್ಠ ಹರಿವಿನ ಪ್ರಮಾಣ ನಿಗದಿ ಆಗುವವರೆಗೆ, ಅತ್ಯಂತ ಕಡಿಮೆ ನೀರು ಹರಿವಿನ ಸಮಯದಲ್ಲಿ ಕೂಡ ಶೇ 30ರಷ್ಟು ನೀರು ನದಿಯಲ್ಲಿ ಹರಿಯುವಂತೆ ನೋಡಿಕೊಳ್ಳಬೇಕು
2. ಪ್ರತಿ ಯೋಜನೆಯಲ್ಲಿಯೂ ನದಿಯ ನೀರಿನ ಹರಿವಿನ ಶೈಲಿ, ಅರಣ್ಯ ಮತ್ತು ಜೀವವೈವಿಧ್ಯದಲ್ಲಿ ಆಗುವ ನಷ್ಟದ ಅಧ್ಯಯನ ನಡೆಸಬೇಕು
3. ಎರಡು ಯೋಜನೆಗಳ ನಡುವಣ ಅಂತರವು ಕನಿಷ್ಠ ಮೂರು ಕಿ.ಮೀ. ಇರಬೇಕು. ಯಾವುದೇ ಸಂದರ್ಭದಲ್ಲಿಯೂ ನದಿ ಪಾತ್ರದ ಶೇ 50ರಷ್ಟಕ್ಕಿಂತ ಹೆಚ್ಚು ಭಾಗವು ಅಬಾಧಿತವಾಗಿಯೇ ಇರಬೇಕು

ಕಿತ್ತಳೆ/ಬಿಳಿ ವರ್ಗದ ಕೈಗಾರಿಕೆ: ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಅಥವಾ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕಿತ್ತಳೆ ಅಥವಾ ಬಿಳಿ ಬಣ್ಣ ವರ್ಗದಲ್ಲಿ ಸೇರಿಸಿರುವ ಕೈಗಾರಿಕೆಗಳಿಗೆ ಅವಕಾಶ ಇದೆ. ಆದರೆ, ಪರಿಸರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಪರಿಸರದ ಮೇಲೆ ಅತ್ಯಂತ ಕಡಿಮೆ ಪರಿಣಾಮ ಬೀರುವ ಕೈಗಾರಿಕೆಗಳಿಗೆ ಉತ್ತೇಜನ ನೀಡಲಾಗುವುದು.

ಕೇಂದ್ರದ ಪರಿಸರ ಮತ್ತು ಅರಣ್ಯ ಸಚಿವಾಲಯವು 2006ರಲ್ಲಿ ಪ್ರಕಟಿಸಿದ್ದ ಪರಿಸರ ಪರಿಣಾಮ ಅಂದಾಜು ಅಧಿಸೂಚನೆಯ ಪರಿಚ್ಛೇದದಲ್ಲಿ ಸೇರ್ಪಡೆಯಾಗಿರುವ ಚಟುವಟಿಕೆಗಳು ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ನಡೆಯುತ್ತಿದ್ದರೆ, ಪರಿಸರ ಪರವಾನಗಿ ನೀಡುವ ಮುನ್ನ, ಅಂತಹ ಚಟುವಟಿಕೆಗಳನ್ನು ಪರಿಶೀಲನೆಗೆ ಒಳಪಡಿಸಿ ಪರಿಸರದ ಮೇಲೆ ಅದರಿಂದಾಗುವ ಪರಿಣಾಮವನ್ನು ಅಂದಾಜಿಸಬೇಕು. ಈ ಚಟುವಟಿಕೆಯ ಅಗತ್ಯದ ಬಗ್ಗೆಯೂ ಪರಿಶೀಲನೆ ನಡೆಸಬೇಕು. ಆದರೆ, ನಿರ್ದಿಷ್ಟವಾಗಿ ನಿಷೇಧಿಸಲಾದ ಚಟುವಟಿಕೆಗಳನ್ನು ಮಾತ್ರ ಪರಿಸರ ಪರವಾನಗಿ ನೀಡಲು ಪರಿಗಣಿಸುವಂತಿಲ್ಲ.

ಪರಿಸರಸೂಕ್ಷ್ಮ ಪ್ರದೇಶದಲ್ಲಿರುವ ಅರಣ್ಯ ಭೂಮಿಯನ್ನು ಅರಣ್ಯೇತರ ಚಟುವಟಿಕೆಗಳಿಗೆ ಬಳಸುವುದಾದರೆ, ಯೋಜನೆಯ ಎಲ್ಲ ಮಾಹಿತಿ– ಪರವಾನಗಿಗಾಗಿ ಅರ್ಜಿ ಹಾಕಿದಲ್ಲಿಂದ ಅನುಮೋದನೆವರೆಗೆ– ಕೇಂದ್ರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಮತ್ತು ರಾಜ್ಯ ಅರಣ್ಯ ಸಚಿವಾಲಯದ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಬೇಕು.

ಪರಿಶಿಷ್ಟ ಪಂಗಡಗಳು ಮತ್ತು ಇತರ ಪಾರಂಪರಿಕ ಅರಣ್ಯ ನಿವಾಸಿಗಳು (ಅರಣ್ಯ ಹಕ್ಕುಗಳ ಮಾನ್ಯತೆ) ಕಾಯ್ದೆ 2006ರ ಅಡಿಯಲ್ಲಿ ಮಾಹಿತಿಯುಕ್ತ ಸಮ್ಮತಿ ನಿಯಮವನ್ನು ಪಾಲಿಸಬೇಕು. ಯೋಜನೆ ಅಥವಾ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಗ್ರಾಮಸಭೆಯ ಅನುಮತಿ ಕಡ್ಡಾಯ.

ಅನುಷ್ಠಾನ, ನಿಗಾ ವ್ಯವಸ್ಥೆ

ಅಧಿಸೂಚನೆಯಲ್ಲಿರುವ ನಿಯಮಗಳು ಮತ್ತು ನಿಬಂಧನೆಗಳನ್ನು ಅನುಷ್ಠಾನಗೊಳಿಸುವುದು ಮತ್ತು ಅದರ ಮೇಲೆ ನಿಗಾ ಇರಿಸುವುದು ಪಶ್ಚಿಮ ಘಟ್ಟಗಳು ಹಾದು ಹೋಗುವ ರಾಜ್ಯಗಳ ಹೊಣೆಗಾರಿಕೆ. ನಿರ್ಬಂಧಗಳ ಹೇರಿಕೆ ಮತ್ತು ಪರಿಣಾಮಕಾರಿ ನಿಗಾಕ್ಕೆ ಅಗತ್ಯವಾದ ವ್ಯವಸ್ಥೆಗಳನ್ನು ರಾಜ್ಯ ಸರ್ಕಾರ ರೂಪಿಸಬೇಕು. ಜತೆಗೆ, ಈಗಾಗಲೇ ಇರುವ ಸಂಸ್ಥೆಗಳು ಮತ್ತು ಪ್ರಕ್ರಿಯೆಗಳನ್ನು ಬಲಪಡಿಸಬೇಕು. ನಿರ್ಧಾರ ಕೈಗೊಳ್ಳುವಿಕೆಯಲ್ಲಿ ಸ್ಥಳೀಯ ಸಮುದಾಯದ ಭಾಗೀದಾರಿಕೆಯನ್ನು ಗಟ್ಟಿಗೊಳಿಸಬೇಕು. ಯಾವೆಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದನ್ನು ರಾಜ್ಯ ಸರ್ಕಾರವು ಕೇಂದ್ರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯಕ್ಕೆ ತಿಳಿಸಬೇಕು.

ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಪಶ್ಚಿಮ ಘಟ್ಟಗಳು ಹಾದು ಹೋಗುವ ಆರು ರಾಜ್ಯಗಳ ಜತೆಗೆ ಸಮನ್ವಯದಲ್ಲಿ 'ಪಶ್ಚಿಮ ಘಟ್ಟಗಳಿಗಾಗಿ ನಿರ್ಧಾರ ಬೆಂಬಲ ಮತ್ತು ನಿಗಾ ಕೇಂದ್ರವನ್ನು ಸ್ಥಾಪಿಸಬೇಕು. ಈ ಕೇಂದ್ರವು ಪಶ್ಚಿಮ ಘಟ್ಟ ಪ್ರದೇಶದ ಪರಿಸರ ಸ್ಥಿತಿಗತಿಯ ಅಧ್ಯಯನ ನಡೆಸಿ, ವರದಿ ಸಿದ್ಧಪಡಿಸಬೇಕು. ಇದು ನಿಯಮಿತವಾಗಿ ನಡೆಯಬೇಕು. ಅಧಿಸೂಚನೆಯಲ್ಲಿ ಇರುವ ಅಂಶಗಳ ಅನುಷ್ಠಾನಕ್ಕೆ ಬೆಂಬಲ ವ್ಯವಸ್ಥೆಯನ್ನು ಈ ಕೇಂದ್ರವು ರೂಪಿಸಬೇಕು. ವೈಜ್ಞಾನಿಕವಾದ ನಿರ್ಧಾರ ಕೈಗೊಳ್ಳುವಿಕೆ ಮತ್ತು ಅನುಷ್ಠಾನವನ್ನು ಬಲಪಡಿಸಲು ಈ ಕೇಂದ್ರವು ನೆರವಾಗಲಿದೆ

ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಅವಕಾಶ ಇರುವ ಚಟುವಟಿಕೆಗಳು ಮತ್ತು ಯೋಜನೆಗಳಿಗೆ ಅನುಮೋದನೆ ನೀಡಿದ ಬಳಿಕದ ನಿಗಾ ವ್ಯವಸ್ಥೆಯನ್ನು ರೂಪಿಸುವುದು ರಾಜ್ಯ ಸರ್ಕಾರ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಸಚಿವಾಲಯದ ಪ್ರಾದೇಶಿಕ ಕಚೇರಿಯ ಹೊಣೆಗಾರಿಕೆ. ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಯೋಜನೆಗಳಿಗೆ ಪರಿಸರ ಅನುಮೋದನೆ ಅಥವಾ ಅರಣ್ಯ ಅನುಮೋದನೆ ನೀಡಿದ ಬಳಿಕ, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಪ್ರಾದೇಶಿಕ ಕಚೇರಿಯು ಕನಿಷ್ಠ ವರ್ಷಕ್ಕೆ ಒಮ್ಮೆಯಾದರೂ ಪರಿಶೀಲನೆ ನಡೆಸಬೇಕು.

ಜಲ (ಮಾಲಿನ್ಯ ತಡೆ ಮತ್ತು ನಿಯಂತ್ರಣ) ಕಾಯ್ದೆ 1974 ಅಥವಾ ವಾಯು (ಮಾಲಿನ್ಯ ತಡೆ ಮತ್ತು ನಿಯಂತ್ರಣ) ಕಾಯ್ದೆ 1981ರ ಅಡಿಯಲ್ಲಿ ಅನುಮೋದನೆ ಪಡೆದು ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಸ್ಥಾಪನೆಗೊಂಡ ಎಲ್ಲ ಯೋಜನೆಗಳನ್ನು ವರ್ಷಕ್ಕೆ ಒಂದು ಬಾರಿ ಪರಿಶೀಲನೆಗೆ ಒಳಪಡಿಸಬೇಕು. ಇದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹೊಣೆಗಾರಿಕೆ. ಪಶ್ಚಿಮ ಘಟ್ಟ ಪ್ರದೇಶದ ಪರಿಸರ ಆರೋಗ್ಯ ಸ್ಥಿತಿಗತಿ ವರದಿಯನ್ನು ಆಯಾ ರಾಜ್ಯ ಸರ್ಕಾರಗಳು ಸಿದ್ಧಪಡಿಸಬೇಕು. ಇದು ಪ್ರತಿ ವರ್ಷ ನಡೆಯಬೇಕು. ಅಧಿಸೂಚನೆಯಲ್ಲಿರುವ ಅಂಶಗಳ ಅನುಷ್ಠಾನ ಮತ್ತು ಅವುಗಳ ಮೇಲಿನ ನಿಗಾಕ್ಕಾಗಿ ಕೈಗೊಂಡ ಕ್ರಮಗಳ ವಿವರಗಳು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಬೇಕು.

ಅಭಿಪ್ರಾಯ ತಿಳಿಸಿ

ಪಶ್ಚಿಮ ಘಟ್ಟವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸುವುದಕ್ಕೆ ಸಂಬಂಧಿಸಿದ ಪರ–ವಿರೋಧ ಅಭಿಪ್ರಾಯಗಳನ್ನು ಓದುಗರು 9606038256 ವಾಟ್ಸ್‌ಆ್ಯಪ್ ಸಂಖ್ಯೆಗೆ ಕಳುಹಿಸಬಹುದು. ಅಭಿಪ್ರಾಯವು 60 ಪದಗಳನ್ನು ಮೀರಬಾರದು. ಆಯ್ದ ಅಭಿಪ್ರಾಯಗಳನ್ನು ಪ್ರಕಟಿಸಲಾಗುವುದು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 187

ವಿಷ್ಣು-ದಧೀಚಿ ಮಹಾಯುದ್ಧ

ಕಪಟವೇಷವನ್ನು ಧರಿಸಿ ದಧೀಚಿಯ ಬಳಿಗೆ ಬಂದ ಹರಿ 'ಬ್ರಹ್ಮರ್ಷಿಯಾದ ಎಲೈ ದಧೀಚಿಮುನಿ, ನೀನು ಸದಾಶಿವನನ್ನು ಆರಾಧಿಸುವವನು. ನಾನು ನಿನ್ನಿಂದ ವರವೊಂದನ್ನು ಯಾಚಿಸಬೇಕೆಂದಿರುವೆ. ಅದನ್ನು ನೀನು ದಯವಿಟ್ಟು ಕೊಡಬೇಕು' ಎಂದು ಕೋರಿದ. ಇದಕ್ಕೆ ದಧೀಚಿ 'ನೀನು ನಿಜವಾದ ಬ್ರಾಹ್ಮಣನಲ್ಲ. ಪರಮೇಶ್ವರನ ಅನುಗ್ರಹದಿಂದ ನನಗೆ ಮೂರು ಕಾಲಗಳ ಜ್ಞಾನವೂ ಇದೆ. ನೀನು ಹರಿಯೆಂಬುದನ್ನು ನಾನು ತಿಳಿದಿರುವೆ. ದುಷ್ಟಬುದ್ಧಿಯಾದ ಕ್ಷುವರಾಜನು ನಿನ್ನನ್ನು ಆರಾಧಿಸಿರುವನು. ಅವನ ಸಹಾಯಕ್ಕಾಗಿ ಈಗ ನೀನು ನನ್ನ ಬಳಿಗೆ ಬ್ರಾಹ್ಮಣರೂಪದಿಂದ ಬಂದಿರುವೆ. ನೀನು ಭಕ್ತಪರಾಧೀನನೆಂಬುದನ್ನು ಬಲ್ಲೆ. ಆದರೆ ನಿನ್ನ ಕಪಟರೂಪವನ್ನು ತ್ಯಜಿಸು. ಶಿವನನ್ನು ಆರಾಧಿಸುವ ನನಗೆ ಯಾರ ಭಯವೂ ಇಲ್ಲ. ಸದಾ ಶಿವನನ್ನೇ ಧ್ಯಾನಿಸುವ ನಾನು, ಯಾವಾಗಲೂ ಸುಳ್ಳನ್ನು ಹೇಳುವುದಿಲ್ಲ' ಎಂದ.

'ಎಲೈ ದಧೀಚಿಮುನಿ, ಶಿವನನ್ನು ಆರಾಧಿಸುವ ನಿನಗೆ ಯಾರಿಂದಲೂ ಭಯವಿಲ್ಲ. ನೀನು ಸರ್ವಜ್ಞನು. ನಿನ್ನಲ್ಲೊಂದು ಮನವಿ ಮಾಡಿಕೊಳ್ಳುವೆ. ನೀನು ಕ್ಷುವರಾಜನಿಗೆ ಹೆದರುತ್ತೇನೆ ಅಂತ ಒಮ್ಮೆ ನನಗಾಗಿ ಹೇಳು' ಎಂದು ವಿಷ್ಣು ಕೋರುತ್ತಾನೆ. ಹರಿಯ ಕೋರಿಕೆಯನ್ನು ಕೇಳಿ ಶಿವಭಕ್ತೋತ್ತಮನಾದ ದಧೀಚಿಮುನಿಯು ನಕ್ಕು, 'ಎಲೈ ವಿಷ್ಣುವೆ, ದೇವದೇವನಾದ ಶಂಕರನ ಪ್ರಭಾವದಿಂದ ನಾನು ಎಲ್ಲಿಯೂ ಯಾರಿಗೂ ಹೆದರುವುದಿಲ್ಲ' ಎಂದ. ದಧೀಚಿಯ ಮಾತನ್ನು ಕೇಳಿ ವಿಷ್ಣು ಕೋಪಗೊಂಡು, ಅವನನ್ನು ಸಂಹರಿಸಲು ತನ್ನ ಚಕ್ರವನ್ನು ಮೇಲಕ್ಕೆತ್ತಿದ. ಆದರೆ ಆ ಚಕ್ರವು ಈಶ್ವರನ ಮಹಿಮೆಯಿಂದ ದಧೀಚಿಮುನಿಯನ್ನು ಸಂಹರಿಸಲು ಅಶಕ್ತವಾಯಿತು. ವಿಷ್ಣುಚಕ್ರವು ಶಕ್ತಿರಹಿತವಾದುದನ್ನು ನೋಡಿ ದಧೀಚಿಮುನಿಯು ಮಂದಹಾಸದಿಂದ ನಗುತ್ತಾ 'ಓ ನಾರಾಯಣನೆ, ಮಹಾದಾರುಣವಾದ ಈ ಚಕ್ರವನ್ನು ನೀನು ಶಿವನ ಅನುಗ್ರಹದಿಂದಲೇ ಪಡೆದಿರುವೆ. ಆದಕಾರಣ ಈ ಚಕ್ರವು ಶಿವಭಕ್ತನಾದ ನನ್ನನ್ನು ಹಿಂಸಿಸಲಾರದು' ಎನ್ನುತ್ತಾನೆ. ಇದರಿಂದ ಮತ್ತಷ್ಟು ಕೋಪಗೊಂಡ ಹರಿಯು, ದಧೀಚಿಯ ಮೇಲೆ ಅನೇಕ ಮಹಾಸ್ತ್ರಗಳನ್ನು ಪ್ರಯೋಗಿಸಿದ. ಬ್ರಾಹ್ಮಣನೊಡನೆ ಯುದ್ಧ ಮಾಡಲು ಸಿದ್ಧನಾದ ವಿಷ್ಣುವಿಗೆ ದೇವತೆಗಳು ತಿಳಿವಳಿಕೆಯಿಲ್ಲದೆ ಸಹಾಯ ಮಾಡಲು ಬಂದರು. ಹರಿಯು ಪ್ರಳಯ ಭಯಂಕರವಾದ ಬ್ರಹ್ಮಾಸ್ತ್ರ ಮುಂತಾದ ಮಹಾಸ್ತ್ರಗಳನ್ನು ಪ್ರಯೋಗಿಸಿದರೆ, ಇಂದ್ರ ಮೊದಲಾದ ದೇವತೆಗಳು ತಮ್ಮ ತಮ್ಮ ಮಹಾಯುಧಗಳನ್ನು ದಧೀಚಿಯತ್ತ ಬೀಸಿದರು.

ಆಗ ವಜ್ರಮಯವಾದ ಅಸ್ಥಿಗಳುಳ್ಳ ದಧೀಚಿಯು ಒಂದು ಹಿಡಿ ದರ್ಭೆಯನ್ನು ತೆಗೆದುಕೊಂಡು, ಅದನ್ನ ಅಭಿಮಂತ್ರಿಸಿದ. ಶಿವನನ್ನು ಸ್ಮರಿಸುತ್ತಾ ವಿಷ್ಣು ಮತ್ತು ದೇವತೆಗಳ ಮೇಲೆ ಪ್ರಯೋಗಿಸಿದ. ದರ್ಭೆಯು ಶಂಕರನ ಮಹಿಮೆಯಿಂದ ಪ್ರಳಯಾಗ್ನಿಯಂತೆ ಭಯಂಕರವಾದ ತ್ರಿಶೂಲವಾಯಿತು. ಕಾಲಾಗ್ನಿಯಂತೆ ಭಯಂಕರವಾದ ಬೆಂಕಿಯ ಜ್ವಾಲೆಗಳನ್ನು ಉಗುಳುತ್ತಾ ದೇವತೆಗಳನ್ನೆಲ್ಲಾ ದಹಿಸಲು ಮುನ್ನುಗ್ಗಿತು. ವಿಷ್ಣು, ಇಂದ್ರ ಮೊದಲಾದವರಿಂದ ಪ್ರಯೋಗಿಸಲ್ಪಟ್ಟ ಆಯುಧಗಳೆಲ್ಲವೂ ತ್ರಿಶೂಲಕ್ಕೆ ನಮಸ್ಕರಿಸಿ, ದೂರಸರಿದವು. ಇದನ್ನು ನೋಡಿ ಭಯಭೀತರಾದ ದೇವತೆಗಳೆಲ್ಲರೂ ಓಡಿ ಹೋದರು. ಹರಿಯೂ ಭಯಗೊಂಡನಾದರೂ, ಓಡಿ ಹೋಗದೆ ಅಲ್ಲೆ ನಿಂತು ಕಾದಾಡಲು ನಿರ್ಧರಿಸಿದ. ಮೊದಲಿಗೆ ತ್ರಿಶೂಲದಿಂದ ಪಾರಾಗಲು ಹರಿಯು ತನ್ನಂತೆ ಸ್ವರೂಪವುಳ್ಳ ಮತ್ತು ಪರಾಕ್ರಮಿಗಳಾದಂತಹ ಲಕ್ಷಗಟ್ಟಲೆ ವಿಷ್ಣುಗಳನ್ನು ತನ್ನ ದೇಹದಿಂದ ಸೃಜಿಸಿದ. ಆ ವಿಷ್ಣುಗಣಗಳು ಪರಾಕ್ರಮದಿಂದ ದಧೀಚಿಯೊಂದಿಗೆ ಭಯಂಕರವಾಗಿ ಯುದ್ಧ ಮಾಡಿದರು. ಆದರೆ ಶಿವಭಕ್ತನಾದ ದಧೀಚಿಮುನಿಯು ಆ ವಿಷ್ಣುಗಣಗಳೊಡನೆ ಯುದ್ಧಮಾಡಿ, ಅವುಗಳನ್ನು ತನ್ನ ತೇಜಸ್ಸಿನಿಂದ ಭಸ್ಮಮಾಡಿದ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಬುಡಕಟ್ಟು ಸಮುದಾಯದ ಮಹಿಳೆಯೊಬ್ಬರು ರಾಷ್ಟ್ರಪತಿ ಹುದ್ದೆಗೆ ಏರಿದ ದಿನ, ಮೀಸಲಾತಿಯನ್ನು ರದ್ದುಪಡಿಸಬೇಕು' ಎಂದು ಡಾ.ಬಿ. ಆರ್.ಅಂಬೇಡ್ಕರ್ ಅವರು ಹೇಳಿದ್ದರು. ಇದನ್ನು ಈಗ ವಿನಯವಾಗಿ ನೆನಪಿಸುತ್ತಿದ್ದೇವೆ' ಎಂಬ ಪೋಸ್ಟರ್ ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಂಚಿಕೆಯಾಗುತ್ತಿದೆ. ಈ ಬರಹ ಇರುವ ಪೋಸ್ಟರ್‌ನಲ್ಲಿ ಅಂಬೇಡ್ಕರ್ ಅವರ ಚಿತ್ರವೂ ಇದೆ. ಬುಡಕಟ್ಟು ಸಮುದಾಯದ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಆದ ನಂತರ, ಈ ಪೋಸ್ಟರ್ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗಿದೆ.



ಇದು ಸುಳ್ಳು ಸುದ್ದಿ ಎಂದು ಆಲ್ಟ್ ನ್ಯೂಸ್, ದಿ ಕ್ವಿಂಟ್, ಫ್ಯಾಕ್ಟ್ಲಿ ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಈ ರೀತಿ ಹೇಳಿದ್ದಾರೆ ಎಂಬುದಕ್ಕೆ ಎಲ್ಲಿಯೂ ಪುರಾವೆಗಳು ಇಲ್ಲ. ಅಂಬೇಡ್ಕರ್ ಅವರ ಸಂಪೂರ್ಣ ಬರಹ, ಭಾಷಣ, ಉಪನ್ಯಾಸ ಮತ್ತು ಸಂಸತ್ತಿನಲ್ಲಿ ಮಾಡಿದ ಭಾಷಣಗಳ ಸಂಗ್ರಹದ 22 ಸಂಪುಟಗಳನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಪ್ರಕಟಿಸಿದೆ. ಅವುಗಳಲ್ಲಿಯೂ ಇಂತಹ ಹೇಳಿಕೆ ಇಲ್ಲ. ಈ ಸಂಪುಟಗಳ ರಚನೆಯಲ್ಲಿ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದ ಹರಿ ನರ್ಕೆ ಅವರು ಸಹ ಈ ಮಾತನ್ನೇ ಹೇಳಿದ್ದಾರೆ. ಇದು ಸುಳ್ಳುಸುದ್ದಿ ಎಂದು ಮೂರೂ ವೇದಿಕೆಗಳು ತಮ್ಮ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿವೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಮರೆವು-ಶಿವಕೃಪೆ

ರವಿನಿಲದೆ ಸುತ್ತುತಿರೆ ಕೊರಗು ಕಳವಳವೇಕೊ ? |
ಸವೆಯಿಸುತಲೆಲ್ಲವನು ಕಡೆಗೊಯ್ವನವನು ||
ಕವಳಿಸುವುದೆಲ್ಲವನು ಮರೆವು; ಬಾಳೊಳ್
ಅದೊಂದು |
ಶಿವಕೃಪೆಯ ಲಕ್ಷಣವೊ – ಮಂಕುತಿಮ್ಮ || 683 ||

ಪದ-ಅರ್ಥ: ಸವೆಯಿಸುತಲೆಲ್ಲವನು = ಸವೆಯಿಸುತಲಿ + ಎಲ್ಲವನು, ಕಡೆಗೊಯ್ವನವನು = - ಕಡೆಗೆ + ಒಯ್ವನು(ಒಯ್ಯುತ್ತಾನೆ) + ಅವನು, ಕವಳಿಸುವುದೆಲ್ಲವನು = ಕವಳಿಸುವುದು(ನುಂಗುವುದು) + ಎಲ್ಲವನು, ಬಾಳೊಳ್ = ಬಾಳಲ್ಲಿ.

ವಾಚ್ಯಾರ್ಥ: ಸೂರ್ಯ ನಿಲ್ಲದೆ ಸುತ್ತುತ್ತಿದ್ದರೆ ನಿನಗೇಕೆ ಕಳವಳ? ಅವನು ಎಲ್ಲವನ್ನು ಸವೆಯಿಸುತ್ತ ಕೊನೆಗೆ ಒಯ್ದುಬಿಡುತ್ತಾನೆ. ಮರೆವು ಎಲ್ಲವನ್ನು ನುಂಗಿಬಿಡುತ್ತದೆ. ಬಾಳಿನಲ್ಲಿ ಮರೆವು ಒಂದು ಶಿವಕೃಪೆ.

ವಿವರಣೆ: ಸೂರ್ಯ ಒಂದು ಕ್ಷಣವೂ ನಿಲ್ಲದೆ ಸುತ್ತುತ್ತಾನೆ. ಅವನಿಗೆ ಅದು ಪ್ರದಕ್ಷಿಣೆ. ಆದರೆ ಅವನು ಒಂದು ಸುತ್ತು ಮುಗಿಸಿದರೆ ನಮ್ಮ ಆಯುಷ್ಯದಲ್ಲಿ ಒಂದು ದಿನ ಕೊರೆಯಾಯಿತು. ಅದಕ್ಕಾಗಿ ಕಳವಳವೇಕೆ? ಸೂರ್ಯ ದಿನಗಳನ್ನು ಕರಗಿಸುತ್ತಾನೆ. ಇಂದಿನ ಘಟನೆಗಳು ನಾಳೆ ನೆನಪುಗಳಾಗುತ್ತವೆ. ಕೆಲದಿನಗಳ, ತಿಂಗಳುಗಳ ನಂತರ ಮರೆಯಾಗಿ ಸವೆದು ಹೋಗುತ್ತವೆ. ಒಳ್ಳೆಯ, ಕೆಟ್ಟ ಘಟನೆಗಳ ಅನೇಕ ನೆನಪುಗಳನ್ನು ಮರೆಯಿಸಿ ಕಾಲದ ತೆಕ್ಕೆಯಲ್ಲಿ ತೆಗೆದುಕೊಂಡು ಹೋಗುತ್ತಾನೆ ಸೂರ್ಯ. ಕೆಲವೊಂದು ನೆನಪುಗಳು ತುಂಬ ಸುಂದರ. ಅವುಗಳನ್ನು ನೆನೆಸಿಕೊಳ್ಳುತ್ತಲೇ ನಾಳಿನ ಕಷ್ಟಗಳ ತೆರೆಗಳನ್ನು ದಾಟಿ ಹೋಗಬಹುದು. ಆದರೆ ಕೆಲವು ನೆನಪುಗಳು ಬಲು ಕ್ರೂರ. ಅವು ಇಂದು, ನಾಳೆಗಳ ಸಂಭ್ರಮವನ್ನು ಹೊಸಕಿ ಹಾಕುತ್ತವೆ. ಕೆಟ್ಟ ಘಟನೆ ನಡೆದದ್ದು ಕೆಲವು ಕ್ಷಣಗಳಾದರೂ, ಅದರ ನೆನಪಿನ ವಾಸನೆ ಬದುಕಿನುದ್ದಕ್ಕೂ ಕಾಡುತ್ತದೆ. ನಿತ್ಯೋತ್ಸವದ ಕವಿ ನಿಸಾರ್ ಅಹಮದ್ ನೆನಪಿನ ಕಾಟವನ್ನು ತುಂಬ ಚೆನ್ನಾಗಿ ಮನಮುಟ್ಟಿಸಿದ್ದಾರೆ.

"ಎಲ್ಲ ಮರೆತಿರುವಾಗ ಇಲ್ಲಸಲ್ಲದ ನೆವವ
ಹೂಡಿಬರದಿರು ಮತ್ತೆ ಹಳೆಯ ನೆನಪೆ
ಕಲ್ಲಿನಂದದಿ ಬಿದ್ದು ತಿಳಿಯಾದ ಎದೆಗೊಳವ
ರಾಡಿಗೊಳಿಸುವೆ ಏಕೆ ಮಧುರ ನೆನಪೆ ?

ಸತ್ತ ಭೂತವನೆತ್ತಿ ಹದ್ದಿನಂದದಿ ತಂದು
ನನ್ನ ಮನದಂಗಳಕೆ ಹಾಕದಿರು ನೆನಪೇ.
ಭವ್ಯ ಭವಿತವ್ಯಕ್ಕೆ ಮೊಗಮಾಡಿ ನಿಂತಿರುವೆ
ಬೆನ್ನಲ್ಲೆ ಇರಿಯದಿರು ಓ ಚೆಂದ ನೆನಪೇ.

ಕೆಟ್ಟ ನೆನಪುಗಳಂತೆ ಒಳ್ಳೆಯ ನೆನಪುಗಳೂ ಕಾಡುತ್ತವೆ. ನಿಸಾರ್ ಹೇಳುವಂತೆ ನೆನಪುಗಳು ಹದ್ದಿನಂತೆ ಹಳೆಯ, ಸತ್ತ ಭೂತಕಾಲದ ಘಟನೆಗಳನ್ನು, ನಮ್ಮ ಇಂದಿನ ಮನದ ಅಂಗಳಕ್ಕೆ ತಂದು ಹಾಕುತ್ತವೆ. ನೆನಪುಗಳು ಮರೆಯಾದಷ್ಟು ಬದುಕು ಹಗುರಾಗುತ್ತದೆ. ಇಲ್ಲವಾದರೆ ಅವುಗಳ ಭಾರ ಬದುಕನ್ನು ಕುಸಿಯುವಂತೆ ಮಾಡುತ್ತದೆ. ಅದಕ್ಕೇ ವಯಸ್ಸಾದಂತೆ ಮರೆವು ಅಡರುತ್ತದೆ. ಮರೆವು ಭಗವಂತನ ಕೃಪೆ. ಆ ಕೃಪೆ ಇಲ್ಲದಿದ್ದರೆ ನೆನಪುಗಳು ನಮ್ಮನ್ನು ಕುಕ್ಕಿ, ಕುಕ್ಕಿ ಜೀವನವನ್ನು ದುಸ್ಸಹಗೊಳಿಸಿಬಿಡಬಹುದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಆಗಸ್ಟ್ 1, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುದ್ಧ ಚತುರ್ಥಿ ಗಂ. 29-14 ನಕ್ಷತ್ರ: ಪೂರ್ವಫಲ್ಗುಣಿ ಗಂ. 16-06 ಯೋಗ: ಪರಿಘ ಗಂ. 19-03, ಕರಣ: ವಣಿಜ ಗಂ. 16-49, ಕರ್ಕಾಟಕ ಮಾಸದ 15 ನೇ ದಿನ.
ರಾಹುಕಾಲ : ಬೆಳಿಗ್ಗೆ 07:30 – 09:00, ಸೂರ್ಯೋದಯ : 06-19 ಸೂರ್ಯಾಸ್ತ : 06-54
ಮುಸ್ಲಿಂ ದಿನಾಂಕ : 02 ಮೊಹರಮ್,
ದಿನ ವಿಶೇಷ : ಶ್ರಾವಣ ಸೋಮವಾರ, ಅದೃಷ್ಟ ಸಂಖ್ಯೆ : 5, 9

ಮೇಷ : ವಿದೇಶದಲ್ಲಿನ ಹುದ್ದೆಗೆ ಕರೆ ಬಂದು ಹೋಗುವ ತಯಾರಿಯನ್ನು ನಡೆಸುವಿರಿ. ತಂದೆ ಮಕ್ಕಳ ಸಂಬಂಧದಲ್ಲಿ ಮನಸ್ತಾಪ ಉಂಟಾಗಬಹುದು. ಲಕ್ಷ್ಮಿಯನ್ನು ಪೂಜಿಸಿದಲ್ಲಿ ಏಳಿಗೆ ಹೊಂದಲು ಸಾಧ್ಯ.

ವೃಷಭ : ಮದುವೆಯ ಸಲುವಾಗಿ ವಸ್ತ್ರಾಭರಣದ ಖರೀದಿ ಮಾಡಬಹುದು. ಅಧಿಕ ಶ್ರಮದಿಂದ ದೀರ್ಘಕಾಲಿಕ ಕಾರ್ಯಗಳು ಚಾಲನೆಗೊಂಡು ಸಂತಸ ವೃದ್ಧಿಯಾಗುವುದು. ಉತ್ತಮ ದೈವ ಬಲವಿದ್ದು ಸುಖ, ಸಂಪತ್ತು ಸಿಗಲಿದೆ

ಮಿಥುನ : ಉದ್ಯೋಗ ಹಾಗು ಜೀವನ ಪ್ರವೃತ್ತಿಯಲ್ಲಿ ಮಧ್ಯಮ ರೀತಿಯ ಪ್ರಗತಿಯು ತೋರಿಬರುವುದು. ಬುದ್ಧಿಕೌಶಲದಿಂದ ಕಾರ್ಯಕ್ಷೇತ್ರದಲ್ಲಿ ಮುನ್ನಡೆ ಸಾಧಿಸಿ. ನೆರೆಯವರೊಂದಿಗೆ ಸಂಬಂಧಗಳು ಮತ್ತಷ್ಟು ಸುಧಾರಿಸಲಿದೆ.

ಕರ್ಕಾಟಕ : ವೈದ್ಯಕೀಯ ವಿದ್ಯಾರ್ಥಿ ಸಮೂಹಕ್ಕೆ ಉತ್ತಮ ಅವಕಾಶಗಳು ಲಭಿಸಲಿವೆ. ಬಹಳ ದಿನದಿಂದ ಇದ್ದಂತಹ ಶತ್ರು ಬಾಧೆ ದೇವತಾನುಗ್ರದಿಂದ ನಿವಾರಣೆ ಆಗಲಿದೆ. ಯೋಜನೆ ಕಾರ್ಯರೂಪಕ್ಕೆ ತರಲು ಶ್ರಮ ವಹಿಸಿ.

ಸಿಂಹ : ನಿರುದ್ಯೋಗಿಗಳಿಗೆ ಸಂಸ್ಥೆಯ ಆಗು-ಹೋಗುಗಳನ್ನು ನೋಡುವ ಹುದ್ದೆ ಪ್ರಾಪ್ತಿಯಾದರೆ ತಿರಸ್ಕರಿಸುವುದು ಸರಿಯಲ್ಲ. ಉದ್ಯೋಗ ದೊರೆತ ಕಾರಣದಿಂದಾಗಿ ಜೀವನದಲ್ಲಿನ ಸಮಸ್ಯೆಗಳು ದೂರಾಗುವುದು.

ಕನ್ಯಾ : ಹಾರ್ಡ್‌ವೇರ್ ಅಂಗಡಿಯವರಿಗೆ ಹಣಕಾಸಿನ ವಹಿವಾಟು ಉತ್ತಮವಾಗಿದ್ದು ಮಾರಾಟ ಕ್ಷೇತ್ರವನ್ನು ಹೆಚ್ಚಿಸಿಕೊಳ್ಳುವಿರಿ. ಸಮಸ್ಯೆಗಳನ್ನು ಯಾವುದೇ ಗಲಾಟೆ-ಗೌಜುಗಳಿಲ್ಲದೆ ನಾಜೂಕಾಗಿ ಬಗೆಹರಿಸಿಕೊಳ್ಳುವ ಪ್ರಯತ್ನ ನಡೆಸಿ.

ತುಲಾ: ಖರ್ಚು ಕಡಿಮೆ ಮಾಡುವುದನ್ನು ಅಭ್ಯಾಸಿಸಿ. ಸ್ನೇಹಿತರಿಂದ ಸಹಾಯ ಸಹಕಾರಗಳು ಸಕಾಲದಲ್ಲಿ ದೊರೆಯಲಿದೆ. ಹಳೆಯ ವಾಹನದ ಕೊಡು ಕೊಳ್ಳುವಿಕೆಯಲ್ಲಿ ಲೆಕ್ಕ ಪತ್ರಗಳಲ್ಲಿ ಹೆಚ್ಚಿನ ಗಮನವಿರಲಿ.

ವೃಶ್ಚಿಕ : ನಿಮ್ಮ ನಿವೃತ್ತಿಯ ಹಣದಲ್ಲಿ ಮಕ್ಕಳ ಹೆಸರಿಗೆ ಮನೆ ಕೊಳ್ಳುವ ಯೋಗ ಅಥವಾ ಭೂಮಿ ಖರೀದಿಯ ಯೋಗವಿದೆ. ತಾಂತ್ರಿಕ ಮತ್ತು ವಿಜ್ಞಾನ ವಿದ್ಯಾಭ್ಯಾಸಗಳಲ್ಲಿ ಹೆಚ್ಚಿನ ಪರಿಣತಿ ಸಾಧಿಸುವರು.

ಧನು : ಪ್ರಾಪ್ತ ವಯಸ್ಕರಿಗೆ ಉತ್ತಮ ಸಂಬಂಧದೊಡನೆ ವಿವಾಹ ನಿಶ್ಚಯವಾಗುವುದು. ಆಹಾರ ಬೆಳೆಗಳು ರೈತರಿಗೆ ನಿರೀಕ್ಷೆಗೂ ಮೀರಿದ ಆದಾಯ ತರಲಿದೆ. ನಿಮ್ಮ ದುಡುಕು ನಿರ್ಧಾರಗಳಿಂದ ಮುಖಭಂಗವಾಗುವ ಲಕ್ಷಣಗಳಿವೆ

ಮಕರ : ಉದ್ಯೋಗ ವ್ಯವಹಾರಗಳಲ್ಲಿ ಯಾವುದೇ ತೊಂದರೆಗಳಿರುವುದಿಲ್ಲ. ಇತರರ ಸಹಕಾರದಿಂದ ಈ ದಿನ ನಿಮ್ಮ ಕೆಲಸ ಕಾರ್ಯಗಳು ಹೂ ಎತ್ತಿದಂತೆ ನೆರವೇರುವುದು. ಬಟ್ಟೆ ಉದ್ಯಮದವರಿಗೆ ಲಾಭ ಬರುವುದು.

ಕುಂಭ : ನಿಧಾನಗತಿಯಲ್ಲಿ ನಡೆಯುತ್ತಿದ್ದ ಕಾರ್ಯಗಳು ಮಹಾಗಣಪತಿಯ ಆಶೀರ್ವಾದದಿಂದ ಶೀಘ್ರಗತಿಯನ್ನು ಹೊಂದಿ ಪ್ರಗತಿಯನ್ನು ಹೊಂದುತ್ತದೆ. ನಂಬಿರುವ ದೇವರು ನಿಮ್ಮ ಕೈ ಬಿಡಲಿಲ್ಲವೆಂಬುದು ಅನುಭವಕ್ಕೆ ಬರಲಿದೆ.

ಮೀನ : ಆಡಳಿತಾರೂಢ ಜನರ ಸಂಪರ್ಕದಿಂದ ಕೆಲಸಗಳನ್ನು ಸಾಧಿಸಿಕೊಳ್ಳಲು ಕಷ್ಟವೆನಿಸುವುದು. ನೀರಿಗೆ ಸಂಬಂಧಿಸಿದ ಸರ್ಕಾರದ ಬೃಹತ್ ಯೋಜನೆಗಳ ಗುತ್ತಿಗೆ ಕೆಲಸಗಳನ್ನು ಪಾಲುದಾರಿಕೆಯಲ್ಲಿ ಪಡೆಯುವುದಕ್ಕೆ ಪ್ರಯತ್ನ ಮಾಡಿ.

ಪದಬಂಧ 5036

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಲೋಭ ನಡುವಿದ್ದಾಗ ಮೂಡಿದ ಆಸೆ (4)
3.ವಿಷ್ಣುವನ್ನು ಹೀಗೂ ಕರೆವರು (4)
5.ಮುಳ್ಳುಗಳ ನಡುವೆ ಅರಳುವ ಸುಂದರ ಹೂ (3)
7.ಸಜಾತಿಯಲ್ಲೇ ಜೈಲುವಾಸ ಬಂದಿದೆಯಲ್ಲಾ! (2)
9.ರಮಣನ ಎದುರು ನಡೆದ ಕಾಳಗ (2)
11.ಮುದುಕರಲ್ಲೇ ಆಭರಣವಿದೆ ! (2)
12.ಮಿತಿಗೆ ಒಳಪಟ್ಟಿದ್ದು ಮಿಡಿತದಲ್ಲಿದೆ (2)
14.ಪಾಕ ಮಾಡುವಾಗ ಕುಡಿದಿರುವ ಶರಬತ್ತು (3)
16.ಕಡ ಕೇಳಿ ಪಡೆದಿರುವ ಭರಣಿ (4)
17.ತಂದೆಯ ತಂದೆಯಿವನು (4)

ಮೇಲಿಂದ ಕೆಳಕ್ಕೆ
1.ಪ್ರಯಾಸದಿಂದ ಕೈಗೊಂಡ ಸಂಚಾರ (3)
2. ನಡುಗುವುದನ್ನು ನೋಡಿದ್ದಕ್ಕೇ ಮಂದಹಾಸ (2)
3. ಬಿಂಕದಿಂದ ತಯಾರಿಸಿಕೊಟ್ಟ ಲೋಹದ ಎಳೆ (2)
4. ತಾರುಣ್ಯವನ್ನು ಹೊಂದಿದವನು (3)
6. ಅತಿಯಾದ ಆಸೆ (3)
8. ಮತ್ತೊಬ್ಬನ ಸಾಲಕ್ಕೆ ಹೊಣೆ ನಿಂತ ವ್ಯಕ್ತಿ (5)
9. ಮಾಘ ಶುದ್ಧ ಸಪ್ತಮಿಯನ್ನು ಹೀಗೂ ಹೇಳುವರು (5)
10.ಜನ ಮಾಡುತ್ತಿರುವ ಊಟ (3)
11.ಈತ ವಯಸ್ಸಾದವನು (3)
13. ಪ್ರಕಾರ ಈ ತರ ಬಂದಿದೆ! (3)
14. ಪಾನಕ ಕುಡಿದು ಮಾಡಿರುವ ಅಡುಗೆ (2)
15. ಪಿನಾಕದ ಬಳಿ ಕಾಣಿಸಿಕೊಂಡಿರುವ ಮಂಗ (2)



5035ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚರಕ 3.ಪಗಾರ
5.ಕರೆ 6.ಟಗರು
7.ನೆಪ 9.ವರಸೆ
10.ಹೆಳವ 11.ಸೆಹ
13.ಕರ್ತವ್ಯ 15.ಮನೆ
16.ಟಿಸಿಲು 17.ನರ್ತನ

ಮೇಲಿಂದ ಕೆಳಕ್ಕೆ:
1.ಚಹರೆ 2.ಕರಟ
3.ಪನ್ನೀರು 4.ರವಾನೆ
5.ಕತ್ತಿವರಸೆ 8.ಪರಿವರ್ತನೆ
12.ಹತೋಟಿ 13.ಕನಲು
14.ವ್ಯಸನ 15.ಮರ್ದನ

ಸುಡೊಕು 5422

4			3		8			
	7						8	
9				2				6
							6	
	2	6	9		7			
	4		6		1		7	5
			1					7
8		7					9	1
	9		8		6	4		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5421 ಸುಡೊಕು

1	5	8	4	3	2	9	7	6
3	7	6	9	8	1	2	4	5
9	2	4	6	5	7	1	8	3
8	9	5	2	7	4	6	3	1
4	6	1	5	9	3	7	2	8
7	3	2	1	6	8	5	9	4
5	4	9	3	2	6	8	1	7
2	1	7	8	4	5	3	6	9
6	8	3	7	1	9	4	5	2

ಐಎಸ್‌ಐ ನಂಟು: ಕರ್ನಾಟಕದ ಮದರಸಾ ವಿದ್ಯಾರ್ಥಿ ಬಂಧನ

ಸಹರನ್‌ಪುರ, ಉತ್ತರ ಪ್ರದೇಶ (ಪಿಟಿಐ): ಭಯೋತ್ಪಾದಕ ಸಂಘಟನೆಯ ನಂಟಿರುವ ಶಂಕೆಯ ಮೇಲೆ ಇಲ್ಲಿನ ದೇವಬಂದ್ ಮದರಸಾದಲ್ಲಿ ನೆಲೆಸಿದ್ದ ಕರ್ನಾಟಕ ಮೂಲದ ವಿದ್ಯಾರ್ಥಿ ಫಾರೂಕ್ ಎಂಬಾತನನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಭಾನುವಾರ ಬಂಧಿಸಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ವಿಪಿನ್ ಟಾಡಾ ತಿಳಿಸಿದ್ದಾರೆ.

ಬಂಧಿತ ಫಾರೂಕ್ ಹಲವು ಭಾಷೆಗಳನ್ನು ಬಲ್ಲವನಾಗಿದ್ದು, ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಜೊತೆಗೆ ಸಾಮಾಜಿಕ ಜಾಲತಾಣದ ಆ್ಯಪ್ ಒಂದರ ಮೂಲಕ ಸಂಪರ್ಕದಲ್ಲಿದ್ದ. ಈತನನ್ನು ಎನ್‌ಐಎ ವಿಚಾರಣೆಗೆ ಒಳಪಡಿಸಿದೆ ಎಂದು ಮೂಲಗಳು ತಿಳಿಸಿವೆ.

ಎಲ್‌ಇಟಿ ಉಗ್ರನ ಹತ್ಯೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ಭಾನುವಾರ ಭದ್ರತಾ ಪಡೆಗಳು ಗುಂಡಿನ ಚಕಮಕಿಯಲ್ಲಿ ಲಷ್ಕರ್–ಎ–ತಯಬಾ (ಎಲ್‌ಇಟಿ) ಉಗ್ರ ಸಂಘಟನೆಯ ಸದಸ್ಯ ಇರ್ಷಾದ್ ಭಟ್ ಎಂಬಾತನನ್ನು ಹತ್ಯೆ ಮಾಡಿವೆ.

‘ಖಚಿತ ಮಾಹಿತಿ ಮೇರೆಗೆ ಭದ್ರತಾ ಪಡೆಗಳು ಶನಿವಾರ ಬಾರಾಮುಲ್ಲಾದ ಬಿನ್ನೇರ್‌ನಲ್ಲಿ ಶೋಧ ನಡೆಸಿದ್ದವು’ ಎಂದು ಮೂಲಗಳು ಹೇಳಿವೆ.

ಎಸ್‌ಯುವಿಯಲ್ಲಿ ₹49 ಲಕ್ಷ ನಗದು ಪತ್ತೆ: ಪಶ್ಚಿಮ ಬಂಗಾಳ ಪೊಲೀಸರ ಕಾರ್ಯಾಚರಣೆ

ಜಾರ್ಖಂಡ್‌ನ ಮೂವರು ಶಾಸಕರ ಬಂಧನ

ಹೌರಾ (ಪಿಟಿಐ): ಜಾರ್ಖಂಡ್‌ನ ಮೂವರು ಕಾಂಗ್ರೆಸ್ ಶಾಸಕರು ಸಂಚರಿಸುತ್ತಿದ್ದ ಎಸ್‌ಯುವಿಯಲ್ಲಿ ₹49 ಲಕ್ಷ ನಗದು ಪತ್ತೆಯಾಗಿದ್ದು, ಈ ಶಾಸಕರನ್ನು ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಅವರು ಸಂಚರಿಸುತ್ತಿದ್ದ ವಾಹನವನ್ನು ರಾಷ್ಟ್ರೀಯ ಹೆದ್ದಾರಿ 16ರ ರಾಣಿಹತಿ ಎಂಬಲ್ಲಿ ಶನಿವಾರ ರಾತ್ರಿ ತಡೆದು ಶೋಧ ನಡೆಸಲಾಗಿತ್ತು.

ಶಾಸಕರಾದ ಇರ್ಫಾನ್ ಅನ್ಸಾರಿ, ರಾಜೇಶ್ ಕಚ್ಛಪ್ ಮತ್ತು ನಮನ್ ಬಿಕ್ಸಲ್ ಕೊಂಗರಿ, ಚಾಲಕ ಮತ್ತು ಇನ್ನೊಬ್ಬರನ್ನು ಬಂಧಿಸಲಾಗಿದೆ. ಇಷ್ಟು ದೊಡ್ಡ ಮೊತ್ತವನ್ನು ಏಕೆ ಒಯ್ಯಲಾಗುತ್ತಿದೆ ಎಂಬ ಪ್ರಶ್ನೆಗೆ ಉತ್ತರ ನೀಡಲು ಅವರು ವಿಫಲರಾದ ಕಾರಣ, ಅವರನ್ನು ಬಂಧಿಸಲಾಯಿತು.

‘ನಗದು ಒಯ್ದಿರುವುದಕ್ಕೆ ಅವರು ನೀಡಿದ ಕಾರಣ ನಮಗೆ ಸರಿ ಎಂದು ಕಂಡಿಲ್ಲ. ಆದಿವಾಸಿ ಮಹಿಳೆಯರಿಗೆ ಹಂಚಲು ಸೀರೆ ಖರೀದಿಗೆ ಈ ಹಣ ಒಯ್ಯುತ್ತಿರುವುದಾಗಿ ಅವರು ಹೇಳಿದ್ದಾರೆ’ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬಂಧಿತರ ಮೇಲೆ ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಭ್ರಷ್ಟಾಚಾರ ತಡೆ ಕಾಯ್ದೆ ಅಡಿಯಲ್ಲಿಯೂ ಪ್ರಕರಣ ದಾಖಲಿಸಲಾಗಿದೆ.

ಬಂಧನಕ್ಕೆ ಒಳಗಾದ ಶಾಸಕರಾದ ರಾಜೇಶ್ ಕಶ್ಯಪ್, ನಮನ್ ಬಿಕ್ಸಲ್ ಮತ್ತು ಇರ್ಫಾನ್ ಅನ್ಸಾರಿ —ಪಿಟಿಐ ಚಿತ್ರ

‘ಜಾರ್ಖಂಡ್ ಭ್ರಷ್ಟಾಚಾರದ ಕೇಂದ್ರ’

ಜಾರ್ಖಂಡ್ ರಾಜ್ಯವು ಭ್ರಷ್ಟಾಚಾರದ ಕೇಂದ್ರವಾಗಿದೆ ಎಂದು ಬಿಜೆಪಿ ಭಾನುವಾರ ಆರೋಪಿಸಿದೆ.

ಕಾಂಗ್ರೆಸ್ ಪಕ್ಷದ ಸಣ್ಣ ಮತ್ತು ದೊಡ್ಡ ಮುಖಂಡರೆಲ್ಲರೂ ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ ಎಂದು ಬಿಜೆಪಿ ವಕ್ತಾರ ಸಯ್ಯದ್ ಝಫರ್ ಇಸ್ಲಾಂ ಆರೋಪಿಸಿದ್ದಾರೆ. ಶಾಸಕರ ಭ್ರಷ್ಟಾಚಾರವನ್ನು ತಮ್ಮ ಪಕ್ಷದ ಮೇಲೆ ಹೊರಿಸಲು ಕಾಂಗ್ರೆಸ್ ಯತ್ನಿಸುತ್ತಿದೆ. ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ಜತೆ ನಂಟು ಹೊಂದಿದ್ದ ಅಧಿಕಾರಿಗಳನ್ನು ಜಾರಿ ನಿರ್ದೇಶನಾಲಯವು ಇತ್ತೀಚೆಗೆ ಬಂಧಿಸಿದೆ. ಕಾಂಗ್ರೆಸ್‌ನ ಮೂವರು ಶಾಸಕರು ಭಾರಿ ನಗದಿನೊಂದಿಗೆ ಸಿಕ್ಕಿಬಿದ್ದಿರುವುದನ್ನು ಇಡೀ ದೇಶವೇ ನೋಡಿದೆ ಎಂದೂ ಅವರು ಹೇಳಿದ್ದಾರೆ.

ಶಾಸಕರನ್ನು ಶನಿವಾರ ರಾತ್ರಿಯಿಡೀ ತನಿಖೆಗೆ ಒಳಪಡಿಸಲಾಗಿತ್ತು. ಬಳಿಕ ಬಂಧಿಸಲಾಯಿತು ಎಂದು ಅಧಿಕಾರಿ ಹೇಳಿದ್ದಾರೆ.

ಅಮಾನತು: ಈ ಮೂವರು ಶಾಸಕರನ್ನು ಕಾಂಗ್ರೆಸ್ ಪಕ್ಷವು ಅಮಾನತು ಮಾಡಿದೆ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಈ ಮೂವರು ಶಾಸಕರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತು ಮಾಡಿದ್ದಾರೆ ಎಂದು ಕಾಂಗ್ರೆಸ್ ಪಕ್ಷದ ಜಾರ್ಖಂಡ್ ಉಸ್ತುವಾರಿ ಅವಿನಾಶ್ ಪಾಂಡೆ ಹೇಳಿದ್ದಾರೆ.

‘ಸರ್ಕಾರ ಉರುಳಿಸಲು ಬಿಜೆಪಿ ಯತ್ನ’

ರಾಂಚಿ (ಪಿಟಿಐ): ಜಾರ್ಖಂಡ್‌ನಲ್ಲಿರುವ ಜೆಎಂಎಂ ನೇತೃತ್ವದ ಸರ್ಕಾರವನ್ನು ಉರುಳಿಸಲು ಬಿಜೆಪಿ ಯತ್ನಿಸುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ಶಾಸಕರಿಗೆ ತಲಾ ₹10 ಕೋಟಿ ಮತ್ತು ಹೊಸ ಸರ್ಕಾರದಲ್ಲಿ ಸಚಿವ ಸ್ಥಾನ ನೀಡುವ ಆಮಿಷ ಒಡ್ಡಲಾಗುತ್ತಿದೆ ಎಂದು ಕಾಂಗ್ರೆಸ್ ಮುಖಂಡ ಮತ್ತು ಜಾರ್ಖಂಡ್ ಸಚಿವ ಆಲಂಗೀರ್ ಆಲಂ ಮಾಧ್ಯಮಗೋಷ್ಠಿಯಲ್ಲಿ ಆಪಾದಿಸಿದ್ದಾರೆ.

ಶಾಸಕರು ಸಂಚರಿಸುತ್ತಿದ್ದ ಎಸ್‌ಯುವಿಯಲ್ಲಿ ಪತ್ತೆಯಾದ ನಗದು —ಪಿಟಿಐ ಚಿತ್ರ

₹10 ಕೋಟಿ ಮತ್ತು ಬಿಜೆಪಿ ನೇತೃತ್ವದಲ್ಲಿ ರಚನೆಯಾಗುವ ಸರ್ಕಾರದಲ್ಲಿ ಸಚಿವ ಸ್ಥಾನ ನೀಡುವ ಆಮಿಷ ಒಡ್ಡಲಾಗಿದೆ ಎಂದು ಕಾಂಗ್ರೆಸ್ ಶಾಸಕ ಕುಮಾರ್ ಜೈಮಂಗಲ್ ಆರೋಪಿಸಿದ್ದಾರೆ. ಇದಕ್ಕೆ ಸಂಬಂಧಿಸಿ, ಹೌರಾದಲ್ಲಿ ಬಂಧಿತರಾಗಿರುವ ಮೂವರು ಶಾಸಕರ ಮೇಲೆ ದೂರನ್ನೂ ನೀಡಲಾಗಿದೆ.

‘ಕೋಲ್ಕತ್ತಕ್ಕೆ ಹೋಗಿ ಹಣ ಪಡೆದುಕೊಳ್ಳುವಂತೆ ರಾಜೇಶ್ ಕಚ್ಛಪ್ ಮತ್ತು ನಮನ್ ಬಿಕ್ಸಲ್ ಅವರು ನನಗೆ ಹೇಳಿದ್ದರು. ಕೋಲ್ಕತ್ತದಿಂದ ನನ್ನನ್ನು ಗುವಾಹಟಿಗೆ ಕರೆದೊಯ್ಯುವ ಯೋಜನೆಯನ್ನು ಇರ್ಫಾನ್ ಅನ್ಸಾರಿ ಮತ್ತು ರಾಜೇಶ್ ಕಚ್ಛಪ್ ಹೊಂದಿದ್ದರು. ಅಲ್ಲಿ, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರನ್ನು ಭೇಟಿ ಮಾಡಿಸುವುದಾಗಿ ಹೇಳಿದ್ದರು’ ಎಂದು ಜೈಮಂಗಲ್ ಆರೋಪಿಸಿದ್ದಾರೆ.

ಸುದ್ದಿ 2 ನಿಮಿಷ

ದಶಕದಲ್ಲಿ ₹9,661 ಕೋಟಿ ಮೌಲ್ಯದ ಚಿನ್ನ ವಶ

ನವದೆಹಲಿ: ಸುಂಕ ಮತ್ತು ಕಂದಾಯ ಗುಪ್ತಚರ ನಿರ್ದೇಶನಾಲಯಗಳು (ಡಿಆರ್‌ಐ) ಕಳೆದ 10 ವರ್ಷಗಳಲ್ಲಿ ದೇಶದಾದ್ಯಂತ ಸುಮಾರು 29 ಸಾವಿರ ಪ್ರಕರಣಗಳಲ್ಲಿ ₹9,661.60 ಕೋಟಿ ಮೌಲ್ಯದ ಚಿನ್ನ ವಶಪಡಿಸಿಕೊಂಡಿವೆ.

ತಮಿಳುನಾಡು, ಮಹಾರಾಷ್ಟ್ರ ಹಾಗೂ ಕೇರಳದಲ್ಲಿ ಹೆಚ್ಚು ಪ್ರಕರಣ ವರದಿಯಾಗಿವೆ. 2012ರಿಂದ 2022ರ ಜೂನ್ ಅವಧಿಯಲ್ಲಿ 29,506 ಪ್ರಕರಣ ದಾಖಲಾಗಿವೆ. ಈ ಪೈಕಿ 1,543 ಪ್ರಕರಣಗಳು ಈ ವರ್ಷದ ಮೊದಲ ಆರು ತಿಂಗಳುಗಳಲ್ಲಿ ನಡೆದಿವೆ.

ಹಣಕಾಸು ಸಚಿವಾಲಯವು ಲೋಕಸಭೆಯಲ್ಲಿ ಇತ್ತೀಚೆಗೆ ನೀಡಿರುವ ಮಾಹಿತಿ ಪ್ರಕಾರ, ಅತಿ ಹೆಚ್ಚು ಪ್ರಕರಣಗಳು ವರದಿಯಾದ ರಾಜ್ಯಗಳಲ್ಲಿ ತಮಿಳುನಾಡು (7,722) ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ಮಹಾರಾಷ್ಟ್ರ (7,047) ಹಾಗೂ ಕೇರಳ (5,080) ಇವೆ. ಈ ವರ್ಷದ ಮೊದಲ ಆರು ತಿಂಗಳಲ್ಲಿ ಕೇರಳ (470) ಮೊದಲ ಸ್ಥಾನ, ನಂತರದಲ್ಲಿ ತಮಿಳುನಾಡು (435) ಹಾಗೂ ಮಹಾರಾಷ್ಟ್ರ (177) ಇವೆ. ಇದೇ ಅವಧಿಯಲ್ಲಿ ಕರ್ನಾಟಕದಲ್ಲಿ 1,608 ಪ್ರಕರಣಗಳು ವರದಿಯಾಗಿವೆ. 2018ರ ಈ ಅವಧಿಯಲ್ಲಿ ಕರ್ನಾಟಕದಲ್ಲಿ (1,608) ಹೆಚ್ಚು ಪ್ರಕರಣಗಳು ವರದಿಯಾಗಿದ್ದವು.

ಬಾಲಕಿ ಮೇಲೆ ಅತ್ಯಾಚಾರ: ತಂದೆ– ಮಗನಿಗೆ 20 ವರ್ಷ ಜೈಲು

ಕೋಟಾ (ರಾಜಸ್ಥಾನ) (ಪಿಟಿಐ): 13 ವರ್ಷದ ಬಾಲಕಿಯ ಮೇಲೆ ಆಕೆಯ ಸೋದರ ಸಂಬಂಧಿಯೇ ಅತ್ಯಾಚಾರ ನಡೆಸಿದ್ದು, ಈ ಸಂಬಂಧ ಪೋಕ್ಸೊ ನ್ಯಾಯಾಲಯವು ತಂದೆ–ಮಗನಿಗೆ 20 ವರ್ಷಗಳ ಜೈಲು ಶಿಕ್ಷೆಯನ್ನು ಶನಿವಾರ ವಿಧಿಸಿದೆ.

‘ನ್ಯಾಯಾಧೀಶ ದೀಪಕ್ ದುಬೆ ಅವರು, ಅಪಹರಣ ಮತ್ತು ಅತ್ಯಾಚಾರ ಕಾಯ್ದೆಗಳ ಅಡಿಯಲ್ಲಿ 24 ವರ್ಷದ ಯುವಕನಿಗೆ ಶಿಕ್ಷೆ ವಿಧಿಸಿದ್ದಾರೆ. ಜತೆಗೆ, ₹30 ಸಾವಿರ ದಂಡ ಕಟ್ಟಲೂ ಆದೇಶ ನೀಡಿದ್ದಾರೆ. ಕೃತ್ಯಕ್ಕೆ ಸಹಕರಿಸಿದ ಯುವಕನ 56 ವರ್ಷದ ತಂದೆಗೂ ಶಿಕ್ಷೆ ವಿಧಿಸಿ, ₹20 ಸಾವಿರ ದಂಡ ಕಟ್ಟಲು ನ್ಯಾಯಾಲಯ ಹೇಳಿದೆ’ ಎಂದು ಸರ್ಕಾರಿ ವಕೀಲ ಲಲಿತ್ ಶರ್ಮಾ ತಿಳಿಸಿದ್ದಾರೆ.

ಶಿವಸೇನಾ ಮುಗಿಸಲು ಸಂಚು: ಉದ್ಧವ್

ಮುಂಬೈ (ಪಿಟಿಐ): ಸಂಜಯ ರಾವುತ್ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ.) ವಶಕ್ಕೆ ಪಡೆದಿರುವ ಕ್ರಮವು, ಶಿವಸೇನಾ ಪಕ್ಷವನ್ನು ಮುಗಿಸುವ ಸಂಚಿನ ಭಾಗ ಎಂದು ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಆರೋಪಿಸಿದ್ದಾರೆ.

‘ಸಂಜಯ್ ರಾವುತ್ ಅವರನ್ನು ಇ.ಡಿ. ಬಂಧಿಸಬಹುದು. ಇದೆಂಥಾ ಸಂಚು? ಹಿಂದೂಗಳು ಹಾಗೂ ಮರಾಠಿಗರಿಗೆ ಪಕ್ಷ ಬಲ ತುಂಬುವ ಕೆಲಸ ಮಾಡಿದ್ದರೂ, ಸೇನಾವನ್ನು ನಾಶಪಡಿಸುವ ಸಂಚು ನಡೆಯುತ್ತಿದೆ’ ಎಂದು ಉದ್ಧವ್ ಹೇಳಿದ್ದಾರೆ. ‘ಪ್ರತಿಪಕ್ಷಗಳನ್ನು ಶತ್ರುಗಳ ರೀತಿಯಲ್ಲಿ ನೋಡಬಾರದು ಎಂಬುದಾಗಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಅಭಿಪ್ರಾಯಪಟ್ಟಿದ್ದಾರೆ’ ಎಂಬುದನ್ನು ಉದ್ಧವ್ ನೆನಪಿಸಿದರು.

‘ರಾಜಕೀಯವಾಗಿ ಬೆಳೆಯಲು ಸಹಾಯ ಮಾಡಿದ ಪಕ್ಷವನ್ನು ತೊರೆದ ಕೆಲವರು ತಮ್ಮ ನಿಷ್ಠೆ ಬದಲಿಸಿದ್ದಾರೆ. ಎರಡು ವರ್ಷ ಜೈಲಿನಲ್ಲಿ ಕಳೆದಿದ್ದ ಆನಂದ್ ದಿಘೆ ಅವರು ನಿಷ್ಠೆ ಹೇಗಿರಬೇಕು ಎಂದು ಶಿವಸೈನಿಕರಿಗೆ ತೋರಿಸಿಕೊಟ್ಟಿದ್ದರು. ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರು ಮುಂಬೈ ಹಾಗೂ ಮರಾಠಿಗರ ಬಗ್ಗೆ ಕೀಳಾಗಿ ಮಾತನಾಡಿದ್ದಾರೆ. ಈ ಬಗ್ಗೆ ಜೀತದಾಳಾಗಿ ಬದಲಾಗಿರುವವರ ಪ್ರತಿಕ್ರಿಯೆ ಏನಿತ್ತು? ರಾಜ್ಯಪಾಲರ ಮಾತು ಒಪ್ಪುವುದಿಲ್ಲ ಎಂದಷ್ಟೇ ಹೇಳಿ ಸುಮ್ಮನಾದರು’ ಎಂದು ಶಿವಸೇನಾ ವಿರುದ್ಧ ಬಂಡಾಯವೆದ್ದು ಮುಖ್ಯಮಂತ್ರಿ ಆಗಿರುವ ಏಕನಾಥ ಶಿಂದೆ ಅವರನ್ನು ಉದ್ಧವ್ ಠಾಕ್ರೆ ತರಾಟೆಗೆ ತೆಗೆದುಕೊಂಡರು.

ಇ.ಡಿ ಕಚೇರಿಗೆ ತೆರಳುವಾಗ ರಾವುತ್ ಅವರು ಕೇಸರಿ ವಸ್ತ್ರ ಪ್ರದರ್ಶಿಸಿದರು —ಪಿಟಿಐ ಚಿತ್ರ

> ಆದಾಯ ತೆರಿಗೆ ಇಲಾಖೆಯಿಂದ ಹಲವರಿಗೆ ನೋಟಿಸ್ ಜಾರಿಯಾಗಿದ್ದರೂ ಇ.ಡಿ ಅಧಿಕಾರಿಗಳು ಪದೇ ಪದೇ ರಾವುತ್ ಅವರನ್ನೇ ಗುರಿಯಾಗಿಸಿ ತನಿಖೆ ನಡೆಸುವುದು ಏಕೆ?
>
> **ಅಜಿತ್ ಪವಾರ್,** ಎನ್‌ಸಿಪಿ ಮುಖಂಡ

ಏನೇನಾಯ್ತು?

- ಇ.ಡಿ. ವಾಹನಗಳನ್ನು ತಡೆಯಲು ಮುಂದಾದ ಶಿವಸೇನಾ ಕಾರ್ಯಕರ್ತರ ಯತ್ನಕ್ಕೆ ಸ್ಥಳೀಯ ಪೊಲೀಸರ ತಡೆ; ಪ್ರತಿಭಟನೆ ನಡೆಸಿದ ಕೆಲವರನ್ನು ವಶಕ್ಕೆ ಪಡೆದ ಪೊಲೀಸರು
- ಬಲ್ಲಾರ್ಡ್ ಎಸ್ಟೇಟ್ ಪ್ರದೇಶದಲ್ಲಿನ ಇ.ಡಿ. ಕಚೇರಿಗೆ ತೆರಳುವ ಮಾರ್ಗದಲ್ಲಿ ಕೆಲ ಸಮಯ ವಾಹನ ಸಂಚಾರ ಬಂದ್ ಮಾಡಿದ್ದ ಪೊಲೀಸರು; ಈ ಮಾರ್ಗದಲ್ಲಿ ಪೊಲೀಸರ ನಿಯೋಜನೆ, ಬ್ಯಾರಿಕೇಡ್ ಅಳವಡಿಕೆ
- ರಾವುತ್ ನಿವಾಸದ ಸುತ್ತ ಪೊಲೀಸರು ಹಾಗೂ ಸಿಆರ್‌ಪಿಎಫ್ ಸಿಬ್ಬಂದಿ ನಿಯೋಜನೆ; ಇ.ಡಿ. ಕಚೇರಿಗೆ ತೆರಳುವಾಗ ವಾಹನದಲ್ಲಿ ಎದ್ದುನಿಂತು ಕೇಸರಿ ವಸ್ತ್ರ ಪ್ರದರ್ಶಿಸಿದ ರಾವುತ್

‘ತನಿಖೆಗೆ ಹೆದರಿ ಬಂಡಾಯ ಎದ್ದಿದ್ದನ್ನು ಒಪ್ಪಿಕೊಳ್ಳಲಿ’

‘ಕೇಂದ್ರೀಯ ತನಿಖಾ ಸಂಸ್ಥೆಗಳಿಂದ ತಮ್ಮನ್ನು ತಾವು ಕಾಪಾಡಿಕೊಳ್ಳಲು ಪಕ್ಷದ ನಾಯಕತ್ವದ ವಿರುದ್ಧ ತಿರುಗಿ ಬಿದ್ದಿದ್ದನ್ನು ಬಂಡಾಯ ಶಾಸಕರು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು’ ಎಂದು ಸಂಜಯ ರಾವುತ್ ಅವರು ಹೇಳಿದ್ದಾರೆ. ಶಿವಸೇನಾ ಮುಖವಾಣಿ ‘ಸಾಮ್ನಾ’ ಪತ್ರಿಕೆಯ ತಮ್ಮ ಅಂಕಣದಲ್ಲಿ ರಾವುತ್ ಹೀಗೆ ಬರೆದಿದ್ದಾರೆ.

‘ಹಿಂದುತ್ವವನ್ನು ಶಿವಸೇನಾ ತೊರೆದಿದ್ದರಿಂದ ನಾವು ಬಿಜೆಪಿ ಜೊತೆ ಕೈಜೋಡಿಸಿದೆವು ಎಂದು ಹೇಳುವುದನ್ನು ಬಂಡಾಯ ಶಾಸಕರು ನಿಲ್ಲಿಸಬೇಕು. ಅನಗತ್ಯವಾಗಿ ಏಕೆ ಹಿಂದುತ್ವವನ್ನು ದೂಷಿಸುತ್ತೀರಿ. ಜಾರಿ ನಿರ್ದೇಶನಾಲಯದಿಂದ ತಪ್ಪಿಸಿಕೊಳ್ಳಲು ಪಕ್ಷ ಬಿಟ್ಟು ಓಡಿಹೋಗಿದ್ದೇವೆ ಎಂದು ಹೇಳುವ ಪ್ರಾಮಾಣಿಕತೆಯನ್ನು ಅವರು ತೋರಲಿ’ ಎಂದು ಹೇಳಿದ್ದಾರೆ.

ತನಿಖೆಯ ಒತ್ತಡದಿಂದ ತಾವು ಬಂಡಾಯ ನಾಯಕರ ಬಣ ಸೇರಿದ್ದಾಗಿ ಸೇನಾ ಮುಖಂಡ ಅರ್ಜುನ್ ಕೋಟ್ಕರ್ ಅವರು ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದಾರೆ ಎಂದು ರಾವುತ್ ಹೇಳಿದ್ದಾರೆ.

ಸೇನಾದ ಬಂಡಾಯ ಸಂಸದೆ ಭಾವನಾ ಗವಳಿ ಅವರ ಆಪ್ತ ರಯೀಸ್ ಖಾನ್ ಬಂಧನದ ಕುರಿತು ಮಾತನಾಡಿರುವ ರಾವುತ್, ‘ಬಿಜೆಪಿ ನಾಯಕ ಕಿರೀಟ್ ಸೋಮಯ್ಯ ಅವರು ಭಾವನಾ ಅವರ ಕ್ಷೇತ್ರಕ್ಕೆ ತೆರಳಿ ಪ್ರತಿಭಟನೆ ನಡೆಸಿದ್ದರು. ಭಾವನಾ ಅವರು ಶಿವಸೇನಾ ವಿರುದ್ಧ ಬಂಡಾಯ ಏಳುತ್ತಿದ್ದಂತೆ ರಯೀಸ್ ಅವರ ಬಿಡುಗಡೆ ಆಯಿತು. ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದ ಅವರ ಆಸ್ತಿಯನ್ನು ಮುಕ್ತಗೊಳಿಸಲಾಯಿತು’ ಎಂದು ಆರೋಪಿಸಿದ್ದಾರೆ.

‘ನಿರಪರಾಧಿಯಾಗಿದ್ದರೆ ಭಯವೇಕೆ’?

‘ಯಾವ ಅಕ್ರಮವನ್ನೂ ಎಸಗಿಲ್ಲ ಎಂದು ರಾವುತ್ ಘೋಷಿಸಿಕೊಂಡಿದ್ದಾರೆ. ಅವರು ನಿರಪರಾಧಿಯೇ ಆಗಿದ್ದರೆ ತನಿಖೆಗೆ ಏಕೆ ಹೆದರುತ್ತಿದ್ದಾರೆ’ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಔರಂಗಾಬಾದ್‌ನಲ್ಲಿ ಹೇಳಿದ್ದಾರೆ.

ರಾವುತ್ ಅವರು ಮಾಡಿರುವ ಟ್ವೀಟ್ ಉಲ್ಲೇಖಿಸಿ ಮಹಾರಾಷ್ಟ್ರ ಬಿಜೆಪಿಯ ಹಲವು ನಾಯಕರೂ ಹೇಳಿಕೆ ನೀಡಿದ್ದಾರೆ. ‘ಸಂಜಯ್ ರಾವುತ್ ಅವರು ಅನಗತ್ಯವಾಗಿ ಬಾಳಾಸಾಹೇಬ್ ಠಾಕ್ರೆ ಅವರ ಹೆಸರನ್ನು ಮಧ್ಯ ತರುತ್ತಿದ್ದಾರೆ ಮತ್ತು ಸೇನಾ ಕಾರ್ಯಕರ್ತರನ್ನು ಸರ್ಕಾರದ ವಿರುದ್ಧ ಎತ್ತಿಕಟ್ಟುತ್ತಿದ್ದಾರೆ. ತಪ್ಪು ಮಾಡಿಲ್ಲ ಎಂದಾದರೆ ಅವರು ಯಾವುದಕ್ಕೂ ಹೆದರಬಾರದು. ಸರ್ಕಾರ ಮತ್ತು ನ್ಯಾಯಾಂಗದ ಮೇಲೆ ಜನರು ವಿಶ್ವಾಸ ಇರಿಸಬೇಕು’ ಎಂದು ಮಹಾರಾಷ್ಟ್ರ ಮಾಜಿ ಸಚಿವ ಗಿರೀಶ್ ಮಹಾಜನ್ ಅವರು ಹೇಳಿದ್ದಾರೆ.

ಲಂಚ: 437 ದೂರವಾಣಿ ಕರೆ ಆಲಿಸಿದ ಸಿಬಿಐ

ನವದೆಹಲಿ (ಪಿಟಿಐ): ಸರ್ಕಾರೇತರ ಸಂಸ್ಥೆಗಳಿಗೆ (ಎನ್‌ಜಿಒ) ವಿದೇಶಿ ದೇಣಿಗೆಯ ಬಾಕಿ ಹಣ ಬಿಡುಗಡೆಗೆ ಅಧಿಕಾರಿಗಳು ಮತ್ತು ಮಧ್ಯವರ್ತಿಗಳು ಶೇ 5ರಿಂದ ಶೇ 10ರಷ್ಟು ಲಂಚ ಪಡೆಯುವುದು ಸಿಬಿಐ ತನಿಖೆಯಿಂದ ಗೊತ್ತಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ಉಲ್ಲಂಘನೆಯ ಪ್ರಕರಣಗಳ ಸಂಬಂಧ 437 ದೂರವಾಣಿ ಕರೆ ಸಂಭಾಷಣೆಗಳನ್ನು ಆಲಿಸಿದಾಗ ಲಂಚದ ಜಾಲ ಸಕ್ರಿಯವಾಗಿರುವುದು ಪತ್ತೆಯಾಗಿದೆ. ಎಫ್‌ಸಿಆರ್‌ಎ ಘಟಕದಲ್ಲಿನ ಗೃಹ ಸಚಿವಾಲಯದ ಅಧಿಕಾರಿಗಳು, ಎನ್‌ಜಿಒ ಪ್ರತಿನಿಧಿಗಳು, ಮಧ್ಯವರ್ತಿಗಳು ಮತ್ತು ಹವಾಲಾ ದಂಧೆಕೋರರು ಈ ಜಾಲದಲ್ಲಿರುವುದನ್ನು ಸಿಬಿಐ, ತಾಂತ್ರಿಕ ಕಣ್ಗಾವಲಿರಿಸಿ ಪತ್ತೆ ಮಾಡಿದೆ.

ಗೃಹ ಸಚಿವಾಲಯದ ಸೂಚನೆ ಮೇರೆಗೆ ಸಿಬಿಐ ನಡೆಸಿದ ತಾಂತ್ರಿಕ ಕಣ್ಗಾವಲಿನಲ್ಲಿ ಮಧ್ಯವರ್ತಿಗಳು ಮತ್ತು ಸಚಿವಾಲಯದ ಎಫ್‌ಆರ್‌ಎ ಘಟಕದ ಅಧಿಕಾರಿಗಳ ದೂರವಾಣಿ ಸಂಭಾಷಣೆ, ವಾಟ್ಸ್ ಆ್ಯಪ್ ಕರೆಗಳ ಮೇಲೆ ನಿಗಾವಹಿಸಿತ್ತು. ತನಿಖಾ ಸಂಸ್ಥೆಯ ಭ್ರಷ್ಟಾಚಾರ ನಿಗ್ರಹ ಘಟಕವು (ಎಸಿಬಿ) ಅಧಿಕಾರಿಗಳು ಮತ್ತು ಎನ್‌ಜಿಒಗಳ ನಡುವೆ ಮಧ್ಯವರ್ತಿಗಳು ಲಂಚದ ಮೊತ್ತ ನಿಗದಿಗೆ ಮಾತುಕತೆ ನಡೆಸಿರುವುದನ್ನು ಪತ್ತೆ ಹಚ್ಚಿತು. ಲಂಚ ಪಡೆಯುತ್ತಿದ್ದ ಎಫ್‌ಆರ್‌ಎ ಘಟಕದ ಆರು ಅಧಿಕಾರಿಗಳು ಸೇರಿ 16 ಆರೋಪಿಗಳನ್ನು ಮೇ 10ರಂದು ತನಿಖಾ ಸಂಸ್ಥೆ ಬಂಧಿಸಿತ್ತು.

ಈ ಸಂಬಂಧ ಇತ್ತೀಚೆಗೆ ನಾಲ್ಕು ಚಾರ್ಜ್‌ಶೀಟ್‌ಗಳನ್ನು ದಾಖಲಿಸಿದ್ದ ಸಿಬಿಐ, ಹೆಚ್ಚುವರಿ ಚಾರ್ಜ್‌ಶೀಟ್‌ಗಳ ಸಲ್ಲಿಕೆಗಾಗಿ ಹಗರಣದ ವಿಸ್ತೃತ ತನಿಖೆ ಆರಂಭಿಸಿತ್ತು. ಸಚಿವಾಲಯದಲ್ಲಿನ ಲಂಚದ ಜಾಲ, ಹಣಕಾಸು ವಹಿವಾಟು ವಿವರ, ಕರೆ ಆಲಿಕೆಗಳ ದತ್ತಾಂಶ, ಆರೋಪಿಗಳ ನಡುವಿನ ವಾಟ್ಸ್‌ಆ್ಯಪ್ ಸಂಭಾಷಣೆ, 12 ಪೆನ್ ಡ್ರೈವ್‌ಗಳು, 50 ಮೊಬೈಲ್ ಫೋನ್‌ಗಳನ್ನು ಸಿಬಿಐ ವಶಪಡಿಸಿಕೊಂಡಿದೆ.

ಲಂಚದ ಜಾಲ ಸಕ್ರಿಯವಾಗಿರುವ ಮಾಹಿತಿ ಗೃಹ ಸಚಿವಾಲಯಕ್ಕೆ ಸಿಗುತ್ತಿದ್ದಂತೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಿಬಿಐ ತನಿಖೆಗೆ ಸೂಚಿಸಿದ್ದರು. ತಾಂತ್ರಿಕ ಕಣ್ಗಾವಲಿರಿಸಲು ಸಿಬಿಐ ನಿರ್ದೇಶಕರಿಗೆ, ಗೃಹ ಸಚಿವಾಲಯದ ಕಾರ್ಯದರ್ಶಿ ಅಜಯ್ ಭಲ್ ಅವರೂ ಪತ್ರ ಬರೆದಿದ್ದರು.

‘ಜಪ್ತಿ ಮಾಡಿದ ಹಣ ನನಗೆ ಸೇರಿದ್ದಲ್ಲ’

ಕೋಲ್ಕತ್ತ (ಪಿಟಿಐ): ‘ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಜಪ್ತಿ ಮಾಡಿರುವ ಹಣ ನನಗೆ ಸೇರಿದ್ದಲ್ಲ. ನನ್ನ ವಿರುದ್ಧ ಷಡ್ಯಂತರ ನಡೆಸುತ್ತಿರುವವರು ಯಾರು ಎಂಬುದಕ್ಕೆ ಕಾಲವೇ ಉತ್ತರಿಸಲಿದೆ’ ಎಂದು ಮಾಜಿ ಸಚಿವ ಪಾರ್ಥ ಚಟರ್ಜಿ ಭಾನುವಾರ ಹೇಳಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ನಡೆದಿರುವ ಶಿಕ್ಷಕರ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಅವರನ್ನು ಇ.ಡಿ ಅಧಿಕಾರಿಗಳು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ.

ಆರೋಗ್ಯ ತಪಾಸಣೆಗಾಗಿ ಅವರನ್ನು ಜೋಕಾದಲ್ಲಿರುವ ಇಎಸ್‌ಐ ಆಸ್ಪತ್ರೆಗೆ ಭಾನುವಾರ ಕರೆದುಕೊಂಡು ಬರಲಾಗಿತ್ತು. ಈ ವೇಳೆ ಮಾಧ್ಯಮದವರು ಕೇಳಿದ ಪ್ರಶ್ನೆಗೆ ‘ನನಗಾಗದವರು ನಡೆಸಿರುವ ಪಿತೂರಿಗೆ ಬಲಿಪಶುವಾಗಿದ್ದೇನೆ. ಪಕ್ಷದಿಂದ ಅಮಾನತು ಮಾಡಿರುವುದು ಬೇಸರ ತರಿಸಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸಚಿವ ಸ್ಥಾನದಿಂದ ನನ್ನನ್ನು ವಜಾಗೊಳಿಸಿದ್ದಾರೆ. ಅವರ ನಿರ್ಧಾರ ಸರಿಯಾಗಿಯೇ ಇದೆ’ ಎಂದಿದ್ದಾರೆ.

ಪಾರ್ಥ ಅವರ ಆಪ್ತೆ ಅರ್ಪಿತಾ ಮುಖರ್ಜಿಗೆ ಸೇರಿದ ಎರಡು ಫ್ಲ್ಯಾಟ್‌ಗಳಲ್ಲಿ ಶೋಧ ಕಾರ್ಯ ನಡೆಸಿದ್ದ ಇ.ಡಿ ಅಧಿಕಾರಿಗಳು ಕೋಟ್ಯಂತರ ನಗದು ಹಾಗೂ ಚಿನ್ನಾಭರಣ ಜಪ್ತಿ ಮಾಡಿದ್ದರು.

‘ಬಂಧನದ ನಂತರ ಪಾರ್ಥ ಅವರು ಏಕೆ ಮೌನವಾಗಿದ್ದಾರೆ. ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ತಾವು ನಿರಪರಾಧಿ ಎಂಬುದನ್ನು ಸಾಬೀತುಪಡಿಸಲಿ. ಹಗರಣಕ್ಕೂ ಪಕ್ಷಕ್ಕೂ ಯಾವುದೇ ಸಂಬಂಧವಿಲ್ಲ’ ಎಂದು ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಕುನಾಲ್ ಘೋಷ್ ಹೇಳಿದ್ದಾರೆ.

ಮನದ ಮಾತು ಕಾರ್ಯಕ್ರಮದಲ್ಲಿ ಪ್ರಧಾನಿ ಅಭಿಮತ

‘ಜನಾಂದೋಲನವಾಗಿ ಅಮೃತ ಮಹೋತ್ಸವ’

ನವದೆಹಲಿ (ಪಿಟಿಐ): ‘ಸ್ವಾತಂತ್ರ್ಯದ ಅಮೃತ ಮಹೋತ್ಸವ’ ಒಂದು ಸಾಮೂಹಿಕ ಜನಾಂದೋಲನ ಆಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದು, ಜನರು ಆಗಸ್ಟ್ 2–15ರ ಅವಧಿಯಲ್ಲಿ ತಮ್ಮ ಸಾಮಾಜಿಕ ಜಾಲತಾಣಗಳ ಖಾತೆಗಳ ಪ್ರೊಫೈಲ್ ಚಿತ್ರವಾಗಿ ರಾಷ್ಟ್ರಧ್ವಜ ಬಳಸಬೇಕು ಎಂದು ಕರೆ ನೀಡಿದ್ದಾರೆ.

ಮಾಸಿಕ ‘ಮನ್ ಕೀ ಬಾತ್’ ರೇಡಿಯೊ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 75ನೇ ಸ್ವಾತಂತ್ರ್ಯೋತ್ಸವವನ್ನು ಅಮೃತ ಮಹೋತ್ಸವವಾಗಿ ಆಚರಿಸಲಾಗುತ್ತಿದೆ. ‘ಹರ್ ಘರ್ ತಿರಂಗಾ’ ಹೆಸರಿನ ವಿಶೇಷ ಅಭಿಯಾನವನ್ನು ಆಗಸ್ಟ್ 13 ರಿಂದ 15ರವರೆಗೂ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ನಮ್ಮ ಮನೆಗಳಲ್ಲಿಯೂ ರಾಷ್ಟ್ರಧ್ವಜಾರೋಹಣ ಮಾಡುವ ಮೂಲಕ ಈ ಅಭಿಯಾನವನ್ನು ಮುನ್ನಡೆಸೋಣ ಎಂದು ಜನತೆಗೆ ಕರೆ ನೀಡಿದರು. ರಾಷ್ಟ್ರಧ್ವಜವನ್ನು ವಿನ್ಯಾಸಗೊಳಿಸಿದ ಪಿಂಗಳಿ ವೆಂಕಯ್ಯ ಅವರ ಜನ್ಮದಿನೋತ್ಸವವೂ ಆಗಸ್ಟ್ 2ರಂದು ನಡೆಯಲಿದೆ ಎಂದೂ ಪ್ರಧಾನಿಹೇಳಿದರು.

ಚಾರಿತ್ರಿಕ ಹಿನ್ನೆಲೆ ಹೊಂದಿರುವ 75 ರೈಲ್ವೆ ನಿಲ್ದಾಣಗಳು 24 ರಾಜ್ಯಗಳಲ್ಲಿವೆ. ಜನತೆ ಈ ಅವಧಿಯಲ್ಲಿ ಅಲ್ಲಿಗೆ ಭೇಟಿ ನೀಡಬೇಕು ಎಂದು ಸಲಹೆ ಮಾಡಿದರು.

ಆಟಿಕೆ ಉದ್ಯಮಕ್ಕೆ ಶ್ಲಾಘನೆ: ಭಾರತದ ಆಟಿಕೆ ಉದ್ಯಮವು ಗಮನಾರ್ಹ ಸಾಧನೆ ಮಾಡಿದೆ. ಇದರ ರಫ್ತು ವಹಿವಾಟು ₹300–400 ಕೋಟಿಯಿಂದ ಈಗ ಒಟ್ಟು ₹ 2,600 ಕೋಟಿಗೆ ಏರಿಕೆಯಾಗಿದೆ ಎಂದು ಪ್ರಧಾನಿ ಮೋದಿ ಶ್ಲಾಘಿಸಿದರು.

ಹಿಂದೊಮ್ಮೆ ₹ 3000 ಕೋಟಿ ಮೌಲ್ಯದ ಆಟಿಕೆಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಈಗ, ಅದು ಶೇ 70ರಷ್ಟು ಕಡಿಮೆಯಾಗಿದೆ. ಈಗ ಸ್ಥಿತಿ ಬದಲಾಗಿದೆ. ₹ 2,600 ಕೋಟಿ ಮೌಲ್ಯದ ಆಟಿಕೆ ರಫ್ತು ಮಾಡಲಾಗಿದೆ. ಕೊರೊನಾ ಅವಧಿಯಲ್ಲಿಯೂ ಈ ಸಾಧನೆಯಾಗಿದೆ ಎಂದು ಹೇಳಿದರು.

ಶಿರಸಿ ರೈತನ ಕೊಂಡಾಡಿದ ಮೋದಿ

ಶಿರಸಿ: ಪ್ರಧಾನಿ ನರೇಂದ್ರ ಮೋದಿ ಭಾನುವಾರ ನಡೆಸಿದ 91ನೇ ಆವೃತ್ತಿಯ ‘ಮನ್ ಕಿ ಬಾತ್’ ಕಾರ್ಯಕ್ರಮದಲ್ಲಿ ಶಿರಸಿ ತಾಲ್ಲೂಕಿನ ತಾರಗೋಡ ಗ್ರಾಮದ ಜೇನು ಕೃಷಿಕ ಮಧುಕೇಶ್ವರ ಹೆಗಡೆ ಅವರನ್ನು ಶ್ಲಾಘಿಸಿದರು.

ದೇಶದ ವಿವಿಧೆಡೆಯ ಜೇನು ಕೃಷಿಕರು, ಆಯುರ್ವೇದಿಕ್ ಗಿಡಮೂಲಿಕೆ ಬೆಳೆಗಾರರನ್ನು ಶ್ಲಾಘಿಸಿದ ಪ್ರಧಾನಿ, ಮಧುಕೇಶ್ವರ ಅವರ ಜೇನು ಕೃಷಿ ಸಾಧನೆಯನ್ನು ವಿಶೇಷವಾಗಿ ಕೊಂಡಾಡಿದರು.

‘50 ಜೇನು ಕಾಲೊನಿಗೆ ಸರ್ಕಾರದ ಸಹಾಯಧನ ಸೌಲಭ್ಯ ಪಡೆದಿದ್ದ ಮಧುಕೇಶ್ವರ ಹೆಗಡೆ ಈಗ 800 ಜೇನು ಕಾಲೊನಿ ಪೋಷಿಸುತ್ತಿದ್ದಾರೆ. ವಿವಿಧ ಮಾದರಿ ಜೇನು ತುಪ್ಪಗಳನ್ನೂ ಉತ್ಪಾದಿಸುವುದು ವಿಶೇಷವೆನಿಸಿದೆ. ಜೇನು ಕೃಷಿಯ ಸಾಧನೆ ಅವರ ಹೆಸರನ್ನು ಪ್ರಸಿದ್ಧಿಗೆ ತಂದಿದೆ’ ಎಂದು ಬಣ್ಣಿಸಿದರು.


ಮಧುಕೇಶ್ವರ ಹೆಗಡೆ

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಮಧುಕೇಶ್ವರ ಹೆಗಡೆ, ‘ಜೇನುಕೃಷಿ ಪ್ರಧಾನಮಂತ್ರಿಯವರು ನನ್ನನ್ನು ಗುರುತಿಸುವಂತೆ ಮಾಡಿದೆ. ಮೋದಿಯವರಂತಹ ಪ್ರಧಾನಿ ನನ್ನ ಹೆಸರನ್ನು ಉಲ್ಲೇಖಿಸಬಹುದು ಎಂಬ ನಿರೀಕ್ಷೆಯೇ ಇರಲಿಲ್ಲ. ನನಗೆ ಅಚ್ಚರಿಯ ಜತೆ ಬಹಳ ಸಂತಸವಾಯಿತು’ ಎಂದರು.

‘ಅಮೃತ ಭಾರತಿಗೆ ಕನ್ನಡದ ಆರತಿ’: ಮೋದಿ ಶ್ಲಾಘನೆ

ಬೆಂಗಳೂರು: ಸ್ವಾತಂತ್ರ್ಯ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿರುವ ‘ಅಮೃತ ಭಾರತಿಗೆ ಕನ್ನಡದ ಆರತಿ’ ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ.

‘ಮನ್ ಕಿ ಬಾತ್’ ಕಾರ್ಯಕ್ರಮದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಮೋದಿ, ‘ಇದೊಂದು ವಿಶಿಷ್ಟವಾದ ಅಭಿಯಾನ. ಸ್ವಾತಂತ್ರ್ಯ ಹೋರಾಟಕ್ಕೆ ಕರ್ನಾಟಕದ ಕೊಡುಗೆ ಏನು ಎಂಬ ವಿಚಾರಗಳನ್ನು ಈ ಕಾರ್ಯಕ್ರಮ ಒಳಗೊಂಡಿದೆ. ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟಂತೆ 75 ವ್ಯಕ್ತಿ, 75 ಸ್ಥಳಗಳ ಪರಿಚಯ, 75 ವ್ಯಕ್ತಿಗಳಿಗೆ ಸಂಬಂಧಪಟ್ಟ ಪುಸ್ತಕ ಪ್ರಕಟಣೆ ಶ್ಲಾಘನೀಯವಾಗಿದೆ’ ಎಂದಿದ್ದಾರೆ.

‘ಅಮೃತ ಭಾರತಿಗೆ ಕನ್ನಡದ ಆರತಿ ಕಾರ್ಯಕ್ರಮಕ್ಕೆ ಪ್ರಧಾನಿ ಮೆಚ್ಚುಗೆ ವ್ಯಕ್ತಪಡಿಸಿರುವುದು ಖುಷಿ ತಂದಿದೆ. ರಾಷ್ಟ್ರಭಕ್ತಿಯನ್ನು ಬಡಿದೆಬ್ಬಿಸುವ ಉದ್ದೇಶದಿಂದ ರೂಪಿಸಿದ್ದ ಈ ಕಾರ್ಯಕ್ರಮಕ್ಕೆ ರಾಷ್ಟ್ರಮಟ್ಟದಲ್ಲಿ ಮೆಚ್ಚುಗೆ ಸಿಕ್ಕಿರುವುದು ನನ್ನ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನೀಲ್ ಕುಮಾರ್ ಹೇಳಿದ್ದಾರೆ.

ಪಂಜಾಬ್– ಹರಿಯಾಣದಲ್ಲಿ ರೈಲು ತಡೆ

ಎಂಎಸ್‌ಪಿ ಜಾರಿಗೆ ಆಗ್ರಹಿಸಿ ರೈತರ ಪ್ರತಿಭಟನೆ

ಚಂಡೀಗಡ (ಪಿಟಿಐ): ಪಂಜಾಬ್ ಮತ್ತು ಹರಿಯಾಣದ ಹಲವೆಡೆ ರೈತರು ರಸ್ತೆ ಹಾಗೂ ರೈಲು ತಡೆ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ಭಾನುವಾರ ಪ್ರತಿಭಟನೆ ನಡೆಸಿದರು.

ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆಯುವ ವೇಳೆ ಕೇಂದ್ರ ಸರ್ಕಾರವು ಹಲವು ಭರವಸೆಗಳನ್ನು ನೀಡಿತ್ತು. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನಿಗದಿಗೆ ಕಾಯ್ದೆ ಜಾರಿಗೊಳಿಸುವುದಾಗಿಯೂ ಹೇಳಿತ್ತು. ಕಾಯ್ದೆಗಳು ರದ್ದಾದ ಒಂದು ವರ್ಷದ ಬಳಿಕವೂ ಕೇಂದ್ರ ತನ್ನ ಮಾತನ್ನು ಉಳಿಸಿಕೊಳ್ಳಲಿಲ್ಲ ಎಂದು ಆರೋಪಿಸಿ ಸಂಯುಕ್ತ ಕಿಸಾನ್ ಮೋರ್ಚಾವು ದೇಶದಾದ್ಯಂತ ಪ್ರತಿಭಟನೆಗೆ ಕರೆ ನೀಡಿತ್ತು. ಇದರ ಭಾಗವಾಗಿ ಪಂಜಾಬ್ ಮತ್ತು ಹರಿಯಾಣದಲ್ಲಿ ಪ್ರತಿಭಟನೆಗಳು ನಡೆದಿವೆ.

ಪಟಿಯಾಲಾ ಜಿಲ್ಲೆಯ ರಾಜ್‌ಪುರದಲ್ಲಿ ಭಾರತೀಯ ಕಿಸಾನ್ ಯೂನಿಯನ್‌ನ ಸದಸ್ಯರು ರೈಲು ಹಳಿಗಳ ಮೇಲೆ ಮಲಗಿ ಕೇಂದ್ರ ಸರ್ಕಾರದ ವಿರುದ್ಧ ಭಾನುವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ನಮ್ಮ ಬೇಡಿಕೆಗಳಿಗೆ ಕೇಂದ್ರ ಕಿವಿಗೊಡುತ್ತಿಲ್ಲ. ಕೇಂದ್ರದ ಈ ಕ್ರಮವೇ ನಾವು ಪ್ರತಿಭಟಿಸುವಂತೆ ಮಾಡಿತು ಎಂದು ರೈತರು ಆರೋಪಿಸಿದ್ದಾರೆ. ಪ್ರತಿಭಟನೆ ವೇಳೆ ರೈತರು, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಹರಿಯಾಣದ ಹಿಸಾರ್‌ನಲ್ಲಿ ಪ್ರತಿಭಟಿಸುತ್ತಿದ್ದ ವೇಳೆ, ಪ್ರತಿಕೃತಿ ದಹಿಸಲು ರೈತರು ಮುಂದಾದರು. ಈ ವೇಳೆ ರೈತರು ಮತ್ತು ಪೊಲೀಸರ ನಡುವೆ ಘರ್ಷಣೆ ಉಂಟಾಯಿತು. ಮೊದಲು ಚಕ್ಕಾ ಜಾಮ್ (ರಸ್ತೆ ತಡೆ) ನಡೆಸಲು ನಿರ್ಧರಿಸಲಾಗಿತ್ತು. ಸ್ಪರ್ಧಾತ್ಮಕ ಪರೀಕ್ಷೆ ಮತ್ತು ತೀಜ್ ಹಬ್ಬ ಇರುವುದರಿಂದ ರಸ್ತೆತಡೆ ಯೋಜನೆಯನ್ನು ಕೈಬಿಡಲಾಯಿತು ಎಂದು ಹರಿಯಾಣದ ರೈತರು ಹೇಳಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 08047106868

General

ತಕ್ಷಣ ಬೇಕಾಗಿದ್ದಾರೆ: ಮಾರ್ಕೆಟಿಂಗ್‌ಅಲ್ಲ, ನೇರನೇಮಕಾತಿ ಕಂಪನಿಗಳಿಗೆ, ಆಫೀಸ್ಗಳಿಗೆ ವಿದ್ಯಾರ್ಹತೆಯಿರುವ, ವಿದ್ಯಾರ್ಹತೆಯಿಲ್ಲದವರಿಗೂ, ಯುವಕ, ಯುವತಿಯರಿಗೆವಸತಿ ಊಟದೊಂದಿಗೆ 16,500-54,600/-. 9980462311, 9620228807

ಶಿಕ್ಷಣಕ್ಕೆ

ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ: 9845114560

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಪ್ರವಾಸ

Travel

8/10 ದಿನಗಳ ಕಾಶಿ,ಗಯಾ,ಅಯೋಧ್ಯ, ನೈಮಿಶಾರಣ್ಯ ಗೋರಕ್‌ಪುರ್. 13/23 ದಿನಗಳ ಬದರಿನಾಥ್, ಕೇದಾರನಾಥ್ ಗಂಗೋತ್ರಿ ಯುಮುನೋತ್ರಿ ವೈಷ್ಣೋದೇವಿ ಅಮೃತ್‌ಸರ್ ದೆಹಲಿ ಹಾಗು 14 ದಿನಗಳ ಪಂಚದಾರಕಾ ಮಾತೃಗಯಾ,ಉಜ್ಜಯಿನಿ ಅಗಸ್ಟ್ ಸೆಪ್ಟಂಬರ್ ಅಕ್ಟೋಬರ್ ತಿಂಗಳಲ್ಲಿ ಶ್ರೀಸುಧಾ ಟ್ರಾವಲ್ಸ್ 080-22429289 9019301300 9448119290

ಶ್ರೇಯಸ್ ಟೂರ್ಸ್: 13.08.2022 5ದಿನಗಳು ಸಂಪೂರ್ಣಅಹೋಬಲಂ ನವನಾರಸಿಂಹ ಯಾಗಂಟಿ ಬೇಲಂಗುಹೆ ಮಹಾನಂದಿ ಶ್ರೀಶೈಲಂ ಮಂತ್ರಾಲಯ 18.8.22 6ದಿನಗಳು ಕೇರಳದ ಕೊಚ್ಚಿನ್ ಗುರುವಾಯೂರು ಅಲೆಪ್ಪಿ ಮುನ್ನಾರ್ ತೇಕಡಿ ತಿರುವನಂತಪುರಂ ಅತ್ರಪಳ್ಳಿ ಪಾಲ್ಸ್.14.09.2022 6ದಿನಗಳು ಕಾಶಿ ಗಯಾ ಪ್ರಯಾಗ್‌ರಾಜ್ ನೈಮಿಷ್ಯಾರಣ್ಯ ಅಯೋಧ್ಯೆ ವಿಂಧ್ಯಾವಾಸಿನಿ ಸೀತಾಮಡು.06.08.2022 13.08.2022 6ದಿನಗಳು ನವಗ್ರಹರಾಮೇಶ್ವರಂ ಚಿದಂಬರಂ ಮದುರೈ ಕನ್ಯಾಕುಮಾರಿ ಇತರೆ.14.09.22 10ದಿನಗಳು ಅಖಂಡ ನೇಪಾಳ ರಾಷ್ಟ್ರ(ಮುಕ್ತಿನಾಥಸಹಿತ) 6ವಿಮಾನಗಳಲ್ಲಿ.02.09.2022 12ದಿನಗಳು ಚಾರ್‌ದಾಮ್ ಯಾತ್ರೆ ಗಂಗೋತ್ರಿಯಮುನೋತ್ರಿ ಕೇದಾರ್‌ನಾಥ ಬದರಿನಾಥ. 8073824856/ 9206979202/ 6366322639

09.09.2022 ರಿಂದ 12 ದಿನಗಳು ದೆಹಲಿ, ಹರಿದ್ವಾರ್, ಗಂಗೋತ್ರಿ ಯಮುನೋತ್ರಿ, ಕೇದಾರನಾಥ್, ಬದ್ರಿನಾಥ್. ಸಂಪರ್ಕಿಸಿ: ಶ್ರೀಗಂಗಾ ಟೂರಿಸ್ಟ್, 9480253807

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮಾತೃಗಯಾ ಉಜ್ಜಯಿನಿ ಓಂಕಾರೇಶ್ವರ್ ಸೋಮನಾಥ್,ದ್ವಾರಕಾ ನಾಗೇಶಂ 08.08.2022 ರಿಂದ 10 ದಿನಗಳು. ಯುಮುನೋತ್ರಿ ಗಂಗೋತ್ರಿ,ಕೇದಾರನಾಥ್ ಬದರಿನಾಥ್,ಹರಿದ್ವಾರ್ 15.09.2022 17.09.2022 07.10.2022 10.10.2022 ರಿಂದ 14/18 ದಿನಗಳು. ದೆಹಲಿ,ಆಗ್ರಾ,ಮಥುರ ಕಾಶಿ,ಗಯಾ,ಪ್ರಯಾಗ, ಹರಿದ್ವಾರ್ 17.09.2022 07.10.2022 10.10.2022 ರಿಂದ 13/17 ದಿನಗಳು. ಶ್ರೀಶೈಲಂ,ಮಹಾನಂದಿ ಅಹೋಬಲ ನವನಸಿಂಹ 11.08.2022 ರಿಂದ 5 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

ಭವಿಷ್ಯ

Astrology

ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ. ಎಲ್ಲಾ ರೀತಿಯ ದೈಹಿಕ, ಮಾನಸಿಕ ಕಾಯಿಲೆಗಳು, ನಿಮ್ಮೆಲ್ಲಾ ರೀತಿಯ ಪರಹಾರವಾಗದ ಸಮಸ್ಯೆಗಳು, ಜನ್ಮಜನ್ಮಾಂತರಗಳ ದೋಷಗಳ ನಿವಾರಣೆಗಾಗಿ ಕೂಡಲೇ ಸಂಪರ್ಕಿಸಿ. 7676750280

★॥ಶ್ರೀಕೇದಾರನಾಥ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತ_ಪರಿಹಾರ. 9148773459

★ಸಿಗಂಧೂರುಚೌಡೇಶ್ವರಿ ಜ್ಯೋತಿಷ್ಯ★ ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ, ಉದ್ಯೋಗ, ಹಣಕಾಸು ಇನ್ನಾವುದೇ ಸಮಸ್ಯೆಗಳಿಗೆ 100%ಪರಿಹಾರ. ಪಂಡಿತ್ ಲಕ್ಷ್ಮಣ್ ಆಚಾರ್ಯ 7019622190

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

Classifieds

Book Your Classifieds Ads
Online Log in to dhclassifieds.com
For More Details Call
9880856233 • 9886213331
Email: Santhoshkumar@deccanherald.co.in

ಚೆಸ್ ಒಲಿಂಪಿಯಾಡ್: ಭಾರತ 'ಬಿ' ತಂಡ ಜಯಭೇರಿ, ಮಹಿಳೆಯರಿಗೆ ಗೆಲುವು

ಭಾರತ 'ಎ' ತಂಡಕ್ಕೆ ಮಣಿದ ಗ್ರೀಸ್

ಮಹಾಬಲಿಪುರಂ (ಪಿಟಿಐ): ಚೆಸ್ ಒಲಿಂಪಿಯಾಡ್‌ನ ಮುಕ್ತ ವಿಭಾಗದಲ್ಲಿ ಭಾರತದ ಮೂರೂ ತಂಡಗಳು ಗೆಲುವಿನ ಓಟ ಮುಂದುವರಿಸಿವೆ.

ಭಾನುವಾರ ನಡೆದ ಮೂರನೇ ಸುತ್ತಿನಲ್ಲಿ ಭಾರತ 'ಎ' ತಂಡ 3–1 ರಲ್ಲಿ ಗ್ರೀಸ್ ವಿರುದ್ಧ ಜಯಿಸಿತು. ಭಾರತ 'ಬಿ' 4–0 ರಲ್ಲಿ ಸ್ವಿಟ್ಜರ್‌ಲೆಂಡ್ ವಿರುದ್ಧ, ಭಾರತ 'ಸಿ' ತಂಡ 3–1 ರಲ್ಲಿ ಐಸ್‌ಲ್ಯಾಂಡ್ ಎದುರು ಗೆದ್ದಿತು.

ಟಾಪ್‌ಬೋರ್ಡ್‌ನಲ್ಲಿ ಆಡಿದ ಭಾರತ 'ಎ' ತಂಡದ ಪಿ.ಹರಿಕೃಷ್ಣ, ಗ್ರೀಸ್‌ನ ದಿಮಿತ್ರೊಸ್ ಮಾಸ್ತ್ರೊವಸಿಲಿಸ್ ಎದುರು 30 ನಡೆಗಳಲ್ಲಿ ಗೆದ್ದು ಪೂರ್ಣ ಪಾಯಿಂಟ್ಸ್ ಸಂಗ್ರಹಿಸಿದರು.

ಅರ್ಜುನ್ ಎರಿಗೈಸಿ ಅವರು 51 ನಡೆಗಳಲ್ಲಿ ಅಥನಾಸಿಯೊಸ್ ಮಾಸ್ತ್ರೊವಸಿಲಿಸ್ ಅವರನ್ನು ಸೋಲಿಸಿದರು. ಆದರೆ ವಿದಿತ್ ಸಂತೋಷ್ ಗುಜರಾತಿ ಮತ್ತು ಕೆ.ಶಶಿಕಿರಣ್ ಪೂರ್ಣ ಪಾಯಿಂಟ್ಸ್ ಸಂಗ್ರಹಿಸಲು ವಿಫಲರಾದರು. ಇವರು ಕ್ರಮವಾಗಿ ಥಿಯೊಡರೊ ನಿಕೊಲಸ್ ಹಾಗೂ ಇಯೊನಿಡಿಸ್ ಎವ್ಗೆನಿಯೊಸ್ ಜತೆ ಡ್ರಾ ಮಾಡಿಕೊಂಡರು.

ಯುವ ಆಟಗಾರರನ್ನು ಒಳಗೊಂಡಿರುವ ಭಾರತ 'ಬಿ' ತಂಡದ ಅಮೋಘ ಓಟ ಮುಂದುವರಿದಿದ್ದು, ಸತತ ಮೂರನೇ ಪಂದ್ಯವನ್ನು 4–0 ಅಂತರಿಂದ ಗೆದ್ದುಕೊಂಡಿತು.

ಡಿ.ಗುಕೇಶ್ ಸ್ವಿಟ್ಜರ್‌ಲೆಂಡ್‌ನ ಜಾರ್ಜಿಯಾಡಿಸ್ ನಿಕೊ ಎದುರು, ನಿಹಾಲ್ ಸರಿನ್ ಅವರು ಬಾಗ್ನೆರ್ ಸೆಬಾಸ್ಟಿಯನ್ ಎದುರು, ಆರ್. ಪ್ರಜ್ಞಾನಂದ ಅವರು ಪೆಲೆಟಿಯರ್ ಯಾನ್ನಿಕ್ ಎದುರು ಹಾಗೂ ರೌನಕ್ ಸಾಧ್ವಾನಿ ಅವರು ಬೆನೆಜಿಗೆರ್ ಫ್ಯಾನಿಯಾನ್ ಎದುರು ಗೆದ್ದರು.

ಕಪ್ಪು ಕಾಯಿಗಳೊಂದಿಗೆ ಆಡಿದ ಪ್ರಜ್ಞಾನಂದ ಅವರು ಗೆಲುವಿಗೆ 67 ನಡೆಗಳನ್ನು ತೆಗೆದುಕೊಂಡರು.

ಐಸ್‌ಲ್ಯಾಂಡ್ ಎದುರು ಆಡಿದ ಭಾರತ 'ಸಿ' ತಂಡದಲ್ಲಿ ಎಸ್.ಪಿ.ಸೇತುರಾಮನ್ ಮತ್ತು ಅಭಿಜಿತ್ ಗುಪ್ತಾ ಅವರು ಗೆಲುವು ಪಡೆದರೆ, ಸೂರ್ಯಶೇಖರ್ ಗಂಗೂಲಿ ಹಾಗೂ ಅಭಿಮನ್ಯು ಪುರಾಣಿಕ್ ಅವರು ತಮ್ಮ ಎದುರಾಳಿಗಳ ಜತೆ ಪಾಯಿಂಟ್ ಹಂಚಿಕೊಂಡರು.

ಮಹಿಳಾ ತಂಡಗಳಿಗೆ ಜಯ: ಮಹಿಳಾ ವಿಭಾಗದಲ್ಲಿ ಕಣದಲ್ಲಿರುವ ಭಾರತದ ತಂಡಗಳು ಮೂರನೇ ಸುತ್ತಿನಲ್ಲಿ ಗೆಲುವು ಸಾಧಿಸಿದವು.

ಭಾರತ 'ಎ' ತಂಡ ಇಂಗ್ಲೆಂಡ್ ತಂಡವನ್ನು 3–1 ರಿಂದ ಪರಾಭವಗೊಳಿಸಿತು. ಆರ್.ವೈಶಾಲಿ ಅವರು ಟೊಮಾ ಕ್ಯಾಥರಿನಾ ಎದುರು, ಭಕ್ತಿ ಕುಲಕರ್ಣಿ ಅವರು ಕಲ್ಯೆಯಲಹನ್ ಅಕ್ಷಯ ಎದುರು ಗೆದ್ದರು. ಡಿ.ಹರಿಕಾ– ಹೌಸ್ಕಾ ಯೊಹಾಂಕ ಹಾಗೂ ತಾನಿಯಾ ಸಚ್‌ದೇವ್– ಯಾವ್ರೊ ಲಾನ್ ನಡುವಿನ ಪಂದ್ಯ ಡ್ರಾದಲ್ಲಿ ಕೊನೆಗೊಂಡಿತು.

ಭಾರತದ ತಾನಿಯಾ ಸಚ್‌ದೇವ್ –ಪಿಟಿಐ ಚಿತ್ರ

ಗಾಲ್ಫ್: 3ನೇ ಸ್ಥಾನದಲ್ಲಿ ಜೀವ್

ಯಟಾಕ್ಸಿಟಾ, ಇಂಗ್ಲೆಂಡ್: ಭಾರತದ ಜೀವ್ ಮಿಲ್ಖಾ ಸಿಂಗ್ ಅವರು ಇಲ್ಲಿ ನಡೆಯುತ್ತಿರುವ ಜೆಸಿಬಿ ಗಾಲ್ಫ್ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಸುತ್ತಿನ ಬಳಿಕ ಮೂರನೇ ಸ್ಥಾನ ಕಾಯ್ದುಕೊಂಡಿದ್ದಾರೆ.

ಜರ್ಮನಿಯ ಅಲೆಕ್ಸಾಂಡರ್ ಸೆಜಾ ಮೊದಲ ಸ್ಥಾನದಲ್ಲಿದ್ದರೆ, ದಕ್ಷಿಣ ಆಫ್ರಿಕಾದ ಜೇಮ್ಸ್ ಕಿಂಗ್‌ಸ್ಟನ್ ಎರಡನೇ ಸ್ಥಾನದಲ್ಲಿದ್ದರು.

ಎರಡನೇ ಸ್ಥಾನದಲ್ಲಿ ಅಮನ್ ಗುಪ್ತಾ: ಸ್ಕಾಟ್ಲೆಂಡ್‌ನ ಸೇಂಟ್ ಆ್ಯಂಡ್ರ್ಯೂಸ್‌ನಲ್ಲಿ ನಡೆಯುತ್ತಿರುವ ಹೀರೊ ಓಪನ್ ಗಾಲ್ಫ್ ಟೂರ್ನಿಯಲ್ಲಿ ಭಾರತ–ಅಮೆರಿಕನ್ ಆಟಗಾರ ಅಮನ್ ಗುಪ್ತಾ ಎರಡನೇ ಸ್ಥಾನಕ್ಕೆ ಜಾರಿದ್ದರು. ಅಮೆರಿಕದ ಸೀನ್ ಕ್ರಾಕರ್ ಅವರು ಮೊದಲ ಸ್ಥಾನದಲ್ಲಿದ್ದರು.

ಜನಾಂಗೀಯತೆ ಪ್ರಭಾವ ಬೀರದು: ಸುನಕ್

ಲಂಡನ್ (ಪಿಟಿಐ): 'ಬ್ರಿಟನ್ ಪ್ರಧಾನಿ ಚುನಾವಣೆಯಲ್ಲಿ ಕನ್ಸರ್ವೇಟಿವ್ ಪಕ್ಷದ ಸದಸ್ಯರು ಮತ ಚಲಾಯಿಸುವಾಗ ತಳೆಯುವ ನಿರ್ಧಾರದಲ್ಲಿ ಜನಾಂಗೀಯತೆ ಎಂಬುದು ಪ್ರಭಾವ ಬೀರುವ ಅಂಶವಾಗದು' ಎಂದು ಮಾಜಿ ಹಣಕಾಸು ಸಚಿವ ರಿಷಿ ಸುನಕ್ ಭಾನುವಾರ ಹೇಳಿದ್ದಾರೆ.

ಸೆ.5ರಂದು ನಿರ್ಣಾಯಕವಾಗಿ ನಡೆಯಲಿರುವ ಚುನಾವಣೆಯ ಪ್ರಚಾರದ ಸಮೀಕ್ಷೆಗಳು, ಲಿಂಗ ಅಥವಾ ಜನಾಂಗೀಯತೆಯಂತಹ ಅಂಶಗಳು ಮುಂದಿನ ವಾರ ನಡೆಯಲಿರುವ ಟೋರಿ ಪಕ್ಷದ ಸದಸ್ಯರ ಅಂಚೆ ಮತದಾನದಲ್ಲಿ ಪ್ರಮುಖ ಪಾತ್ರವಹಿಸಲಿವೆ ಎನ್ನುತ್ತಿವೆ. ಇದನ್ನು ಸುನಕ್ ತಳ್ಳಿ ಹಾಕಿದ್ದಾರೆ.

ಭಾರತೀಯ ಮೂಲದ ಉದ್ಯಮಿ ಮತ್ತು ಕನ್ಸರ್ವೇಟಿವ್ ಪಕ್ಷದ ದೇಣಿಗೆದಾರ ಲಾರ್ಡ್ ರೇಮಿ ರೇಂಜರ್ ಅವರು ಕಳೆದ ವಾರ ವಿಡಿಯೊ ಹೇಳಿಕೆಯಲ್ಲಿ 'ರಿಷಿ ಸುನಕ್, ಟೋರಿ ನಾಯಕತ್ವದ ಚುನಾವಣೆಯಲ್ಲಿ ಸೋತರೆ, ಬ್ರಿಟನ್ ಜನಾಂಗೀಯವಾಗಿ ಕಾಣಿಸಲಿದೆ' ಎಂದು ಹೇಳಿದ್ದರು.

'ಯಾರದೇ ನಿರ್ಧಾರದಲ್ಲೂ ಇಂತಹ ಅಂಶ ಕಾರಣವಾಗಿರುತ್ತದೆ ಎಂದು ನಾನಂತೂ ಭಾವಿಸುವುದಿಲ್ಲ. ಈ ರೀತಿ ಯೋಚಿಸುವುದು ಸರಿಯಲ್ಲ' ಎಂದು 'ದಿ ಡೈಲಿ ಟೆಲಿಗ್ರಾಫ್'ಗೆ ನೀಡಿದ ಸಂದರ್ಶನದಲ್ಲಿ ಸುನಕ್ ಹೇಳಿದ್ದಾರೆ.

ಸುನಕ್ ಅವರ ತಿರುಚಿದ ಚಿತ್ರ: ಟ್ರಸ್ ಕಿಡಿ

ಬ್ರಿಟನ್ ನಿರ್ಗಮಿತ ಪ್ರಧಾನಿ ಬೋರಿಸ್ ಜಾನ್ಸನ್ ಅವರ ನಿಷ್ಠಾವಂತೆ ಮತ್ತು ಅವರ ಉತ್ತರಾಧಿಕಾರಿ ಸ್ಪರ್ಧೆಯ ಸಮೀಕ್ಷೆಗಳಲ್ಲಿ ಮುನ್ನಡೆಯಲ್ಲಿರುವ ವಿದೇಶಾಂಗ ಸಚಿವೆ ಲಿಜ್ ಟ್ರಸ್ ಅವರು, ತಮ್ಮ ಎದುರಾಳಿ ರಿಷಿ ಸುನಕ್ ಅವರ ತೇಜೋವಧೆಗೆ ತಿರುಚಿದ ಚಿತ್ರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡವರ ಮೇಲೆ ಕೆಂಡಕಾರಿದ್ದಾರೆ.

ಸಂಸ್ಕೃತಿ ಸಚಿವೆ ನದೀನ್ ಡೋರಿಸ್ ಅವರು, ರೋಮ್ ನಾಯಕ ಜೂಲಿಯಸ್ ಸೀಸರ್‌ಗೆ ಬೋರಿಸ್ ಜಾನ್ಸನ್ ಅವರನ್ನು ಮತ್ತು ಸೀಸರ್ ಬೆನ್ನಿಗೆ ಇರಿಯುವ ಕೊಲೆಗಡುಕ ಬ್ರೂಟಸ್‌ಗೆ ರಿಷಿ ಸುನಕ್ ಅವರನ್ನು ಹೋಲಿಸಿ ತಿರುಚಿದ ಚಿತ್ರವನ್ನು ತಮ್ಮ ಟ್ವಿಟರ್ ಖಾತೆಯಲ್ಲಿ ಮರು ಟ್ವೀಟ್ ಮಾಡಿದ್ದರು.

ಟಿ20 ಕ್ರಿಕೆಟ್: ವೆಸ್ಟ್ ಇಂಡೀಸ್‌ಗೆ ರೋಹಿತ್ ಶರ್ಮಾ ಬಳಗದ ಸವಾಲು

ಜಯದ ಓಟ ಮುಂದುವರಿಸುವತ್ತ ಚಿತ್ತ

ಬೆಸೆಟೆರ್, ಸೇಂಟ್ ಕಿಟ್ಸ್ (ಪಿಟಿಐ): ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ವೆಸ್ಟ್ ಇಂಡೀಸ್ ಎದುರಿನ ಟಿ20 ಕ್ರಿಕೆಟ್ ಸರಣಿಯಲ್ಲಿ ಜಯದ ಓಟವನ್ನು ಮುಂದುವರಿಸುವ ಆತ್ಮವಿಶ್ವಾಸದೊಂದಿಗೆ ಸೋಮವಾರ ಕಣಕ್ಕಿಳಿಯಲಿದೆ. ವಿಂಡೀಸ್ ಎದುರಿನ ಏಕದಿನ ಸರಣಿ ಗೆದ್ದ ನಂತರ 5 ಟಿ20 ಪಂದ್ಯಗಳ ಸರಣಿಯಲ್ಲಿ ಮೊದಲ ಪಂದ್ಯ ಜಯಿಸಿ 1–0 ಮುನ್ನಡೆ ಸಾಧಿಸಿತು.

ಪೂರನ್

ಟ್ರಿನಿಡಾಡ್‌ನಲ್ಲಿ ನಡೆದಿದ್ದ ಆ ಪಂದ್ಯದಲ್ಲಿ ಭಾರತ ತಂಡವು ತನ್ನ ಮೂವರು ಸ್ಪಿನ್ನರ್‌ಗಳಾದ ರವೀಂದ್ರ ಜಡೇಜ, ಆರ್. ಅಶ್ವಿನ್ ಮತ್ತು ರವಿ ಬಿಷ್ಣೋಯಿ ಅವರನ್ನು ಕಣಕ್ಕಿಳಿಸಿತ್ತು. ಅಶ್ವಿನ್ ಮತ್ತು ಬಿಷ್ಣೋಯಿ ತಲಾ ಎರಡು ಹಾಗೂ ಜಡೇಜ ಒಂದು ವಿಕೆಟ್ ಪಡೆದು ತಂಡದ ಜಯದ ಹಾದಿ ಸುಗಮಗೊಳಿಸಿದ್ದರು. ಬ್ಯಾಟಿಂಗ್‌ನಲ್ಲಿಯೂ ರೋಹಿತ್ ಶರ್ಮಾ ಅರ್ಧಶತಕ ಮತ್ತು ಕೊನೆಯ ಹಂತದ ಓವರ್‌ಗಳಲ್ಲಿ ದಿನೇಶ್ ಕಾರ್ತಿಕ್ ಬೀಸಾಟ ರಂಗೇರಿತ್ತು. ಇದರಿಂದಾಗಿ ಉಳಿದ ಬ್ಯಾಟರ್‌ಗಳ ವೈಫಲ್ಯವು ತಂಡದಕ್ಕೆ ಮೇಲೆ ಕೆಟ್ಟ ಪರಿಣಾಮ ಬೀರಲಿಲ್ಲ. ಹೋರಾಟದ ಮೊತ್ತ ಗಳಿಸಿ ಗುರಿ ನೀಡಲು ಸಾಧ್ಯವಾಯಿತು. ಆದರೆ ಸೂರ್ಯಕುಮಾರ್, ರಿಷಭ್ ಪಂತ್, ಶ್ರೇಯಸ್ ಅಯ್ಯರ್ ಮತ್ತು ಹಾರ್ದಿಕ್ ಪಾಂಡ್ಯ ಅವರು ತಮ್ಮ ಲಯಕ್ಕೆ ಮರಳಿದರೆ ಕೆಳಕ್ರಮಾಂಕದ ಮೇಲಿನ ಒತ್ತಡ ಕಡಿಮೆಯಾಗುತ್ತದೆ.

ರೋಹಿತ್ ಶರ್ಮಾ –ಎಎಫ್‌ಪಿ ಚಿತ್ರ

ಆತಿಥೇಯ ತಂಡದಲ್ಲಿರುವ ಅನುಭವಿ ಆಲ್‌ರೌಂಡರ್ ಜೇಸನ್ ಹೋಲ್ಡರ್ ಎರಡೂ ವಿಭಾಗಗಳಲ್ಲಿ ಲಯಕ್ಕೆ ಮರಳಿದರೆ ಭಾರತಕ್ಕೆ ಸವಾಲೊಡ್ಡಬಹುದು. ಬ್ಯಾಟಿಂಗ್‌ನಲ್ಲಿಯೂ ತಮ್ಮ ನೈಜ ಆಟಕ್ಕೆ ಮರಳುವ ಸವಾಲನ್ನು ವಿಂಡೀಸ್ ಪಡೆ ಎದುರಿಸುತ್ತಿದೆ.

ಪಂದ್ಯ ಆರಂಭ: ರಾತ್ರಿ 8

ನೇರಪ್ರಸಾರ: ಡಿಡಿ ಸ್ಪೋರ್ಟ್ಸ್

ವೀಸಾ ಸಮಸ್ಯೆ

ನವದೆಹಲಿ (ಪಿಟಿಐ): ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಣ ಟಿ20 ಸರಣಿಯ ಕೊನೆಯ ಎರಡು ಪಂದ್ಯಗಳನ್ನು ಅಮೆರಿಕದಲ್ಲಿ ಆಯೋಜಿಸಲಾಗಿದೆ.

ಆದರೆ, ಭಾರತ ತಂಡದ ಆಟಗಾರರಿಗೆ ಇದುವರೆಗೂ ವೀಸಾ ದೊರೆತಿಲ್ಲ. ಆದ್ದರಿಂದ ಪಂದ್ಯಗಳನ್ನು ಕೆರಿಬಿಯನ್ ನಾಡಿನಲ್ಲಿಯೇ ನಡೆಸಲು ಕ್ರಿಕೆಟ್ ವೆಸ್ಟ್ ಇಂಡೀಸ್ ಚಿಂತನೆ ನಡೆಸಿದೆ. ಅಮೆರಿಕದ ಫ್ಲಾರಿಡಾದ ಲಾಡೆರ್‌ಹಿಲ್, ಸೆಂಟ್ರಲ್ ಬ್ರೊವರ್ಡ್ ಪಾರ್ಕ್‌ನಲ್ಲಿ ಪಂದ್ಯಗಳನ್ನು ಆ. 6 ಹಾಗೂ 7ರಂದು ಆಯೋಜಿಸಲಾಗಿದೆ.

ಜಂಪ್‌ರೋಪ್ ಟೂರ್ನಿ: ಕರ್ನಾಟಕಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಆತಿಥೇಯ ಕರ್ನಾಟಕ ತಂಡವು ಭಾನುವಾರ ಇಲ್ಲಿ ಕೊನೆಗೊಂಡ 19ನೇ ರಾಷ್ಟ್ರೀಯ ಜಂಪ್‌ರೋಪ್ 'ಡಬಲ್ ಡಚ್' ಚಾಂಪಿಯನ್‌ಶಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಜಯಿಸಿದೆ.

ಕರ್ನಾಟಕ ಒಟ್ಟು 66 ಪದಕಗಳನ್ನು ಜಯಿಸಿದರೆ, ಮಹಾರಾಷ್ಟ್ರ 55 ಹಾಗೂ ಹರಿಯಾಣ 43 ಪದಕಗಳೊಂದಿಗೆ ಮೂರನೇ ಸ್ಥಾನ ಪಡೆದವು. ಡೆಮೊ ಕಪ್‌ನಲ್ಲಿ ಮಧ್ಯಪ್ರದೇಶ ಪ್ರಥಮ, ಹರಿಯಾಣ ಹಾಗೂ ಅಸ್ಸಾಂ ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದಿವೆ.

ವಿಜೇತ ತಂಡಗಳಿಗೆ ಭಾನುವಾರ ಸಂಜೆ ನಡೆದ ಕಾರ್ಯಕ್ರಮದಲ್ಲಿ ವಿಕಾಸ ಬ್ಯಾಂಕ್ ಅಧ್ಯಕ್ಷ ವಿಶ್ವನಾಥ ಚ. ಹಿರೇಮಠ ಪ್ರಶಸ್ತಿ ಪ್ರದಾನ ಮಾಡಿದರು.

ಬೆಂಗಳೂರು ರೇಸ್ ರದ್ದು

ಬೆಂಗಳೂರು: ಭಾನುವಾರ ನಡೆಯಬೇಕಿದ್ದ ಬೆಂಗಳೂರು ರೇಸ್ ಅನ್ನು ಪ್ರತಿಕೂಲ ಹವಾಮಾನದ ಕಾರಣ ರದ್ದುಪಡಿಸಲಾಗಿದೆ. ಕರ್ನಾಟಕ ಮೈಲ್ ಚಾಂಪಿ ಯನ್‌ಷಿಪ್ ಕಪ್ ರೇಸ್ ಅನ್ನು ಆ.4 ರಂದು (ಗುರುವಾರ) ನಡೆಸಲಾಗುವುದು ಎಂದು ಬೆಂಗಳೂರು ಟರ್ಫ್ ಕ್ಲಬ್ ಪ್ರಕಟಣೆಯಲ್ಲಿ ತಿಳಿಸಿದೆ.

ಟೆನಿಸ್: ಪ್ರಧಾನ ಸುತ್ತಿಗೆ ತೇಜಸ್

ಬೆಂಗಳೂರು: ಕರ್ನಾಟಕದ ತೇಜಸ್ ಆರ್. ಮತ್ತು ತಮಿಳುನಾಡಿನ ದೀಪ್ತಿ ವೆಂಕಟೇಶನ್ ಅವರು ಕೆಎಸ್‌ಎಲ್‌ಟಿಎ ಟ್ರಾನ್ಸ್‌ಫಾರ್ಮ್ ಸೂಪರ್ ಸಿರೀಸ್ 14 ವರ್ಷದೊಳಗಿನವರ ಟೆನಿಸ್ ಟೂರ್ನಿಯ ಮುಖ್ಯ ಸುತ್ತಿಗೆ ಪ್ರವೇಶಿಸಿದರು. ಮುಖ್ಯ ಸುತ್ತಿನ ಪಂದ್ಯಗಳು ಸೋಮವಾರ ಆರಂಭವಾಗಲಿವೆ.

ಭಾನುವಾರ ಬಾಲಕರ ವಿಭಾಗದ ಅರ್ಹತಾ ಸುತ್ತಿನ ಕೊನೆಯ ಪಂದ್ಯದಲ್ಲಿ ತೇಜಸ್ 6-3, 6-3ರಿಂದ ಸೋಹಮ್ ಸಚಿನ್ ಕಾಂಬ್ಳೆ ಅವರನ್ನು ಸೋಲಿಸಿದರು. ಬಾಲಕಿಯರ ವಿಭಾಗದಲ್ಲಿ ದೀಪ್ತಿ ವೆಂಕಟೇಶನ್ 4-6, 6-4, 6-1ರಿಂದ ಹರ್ಷಿಕಾ ಸತೀಶ್ ವಿರುದ್ಧ ಗೆದ್ದರು.

ಸಂಕ್ಷಿಪ್ತ ಸುದ್ದಿ

'ಪ್ರಿನ್ಸ್ ಚಾರ್ಲ್ಸ್ ಚಾರಿಟಿಗೆ ಬಿನ್‌ಲಾಡೆನ್ ಕುಟುಂಬದಿಂದ ದೇಣಿಗೆ'

ಲಂಡನ್ (ಪಿಟಿಐ): ಬ್ರಿಟನ್‌ನ ರಾಜಕುಮಾರ ಚಾರ್ಲ್ಸ್ ಅವರು ಸ್ಥಾಪಿಸಿರುವ 'ಪ್ರಿನ್ಸ್ ಆಫ್ ವೇಲ್ಸ್ ಚಾರಿಟಬಲ್ ಫಂಡ್', ಹತ್ಯೆಯಾದ ಅಲ್ ಕೈದಾ ನಾಯಕ ಒಸಾಮಾ ಬಿನ್ ಲಾಡೆನ್ ಅವರ ಕುಟುಂಬದಿಂದ 2013ರಲ್ಲಿ ₹ 9.6 ಕೋಟಿ (1 ದಶಲಕ್ಷ ಪೌಂಡ್) ದೇಣಿಗೆ ಸ್ವೀಕರಿಸಿತ್ತು ಎಂದು ಬ್ರಿಟನ್‌ನ ನಿಯತಕಾಲಿಕೆ ದಿ ಸಂಡೇ ಟೈಮ್ಸ್ ಭಾನುವಾರ ವರದಿ ಮಾಡಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ರಾಜಮನೆತನದ ಮೂಲಗಳು, 'ದೇಣಿಗೆ ಸ್ವೀಕರಿಸುವ ನಿರ್ಧಾರದಲ್ಲಿ ರಾಜಕುಮಾರ ಚಾರ್ಲ್ಸ್ ಅವರ ಪಾತ್ರ ಇಲ್ಲ' ಎಂದು ಹೇಳಿವೆ.

ಫಿಡೆಲ್ ರಾಮೋಸ್ ನಿಧನ

ಮನಿಲಾ (ಎಎಫ್‌ಪಿ): ದೇಶದ ಅಭಿವೃದ್ಧಿ ಮತ್ತು ಶಾಂತಿ ಸ್ಥಾಪನೆಗಾಗಿ ಶ್ರಮಿಸಿದ ಪ್ರಭಾವಿ ನಾಯಕ ಎಂದೇ ಗುರುತಿಸಲ್ಪಟ್ಟಿದ್ದ, ಫಿಲಿಪ್ಪೀನ್ಸ್‌ನ ಮಾಜಿ ಅಧ್ಯಕ್ಷ ಫಿಡೆಲ್ ರಾಮೋಸ್ (94) ಭಾನುವಾರ ನಿಧನರಾಗಿದ್ದಾರೆ.

1992 ರಿಂದ 1998ರ ವರೆಗೆ ಅಧ್ಯಕ್ಷರಾಗಿದ್ದ ರಾಮೋಸ್, ದೇಶದಲ್ಲಿ ದಂಗೆಯನ್ನು ಅವರು ಸಮಚಿತ್ತ ಹಾಗೂ ದಿಟ್ಟತನದಿಂದ ಎದುರಿಸಿದ್ದರು. ಈ ಕಾರಣಕ್ಕಾಗಿ ಅವರು 'ಸ್ಟೆಡಿ ಎಡ್ಡಿ' ಎಂದೇ ಹೆಸರಾಗಿದ್ದರು.

ರಷ್ಯಾ ನೌಕಾಪಡೆ ಕೇಂದ್ರ ಕಚೇರಿ ಮೇಲೆ ದಾಳಿ

ಕೀವ್ (ಎಪಿ): ರಷ್ಯಾದ ಕಪ್ಪು ಸಮುದ್ರದ ನೌಕಾಪಡೆಯ ಕೇಂದ್ರ ಕಚೇರಿ ಮೇಲೆ ಭಾನುವಾರ ಡ್ರೋನ್ ಮೂಲಕ ಕಡಿಮೆ ತೀವ್ರತೆಯ ಸ್ಫೋಟಕದಿಂದ ದಾಳಿ ನಡೆದಿದ್ದು, ಆರು ಜನರು ಗಾಯಗೊಂಡಿದ್ದಾರೆ.

ಇದರಿಂದಾಗಿ ರಷ್ಯಾ ನೌಕಾ ಪಡೆಯ ರಜೆ ದಿನ ರದ್ದು ಮಾಡಲಾಗಿದೆ. ಬಾಂಬ್ ದಾಳಿ ಹಿನ್ನೆಲೆಯಲ್ಲಿ, ಡಾನ್‌ಬಾಸ್ ತೊರೆಯುವಂತೆ ಉಕ್ರೇನ್ ನಾಗರಿಕರಿಗೆ ವೊಲೊಡಿಮಿರ್ ಝೆಲೆನ್‌ಸ್ಕಿ ಭಾನುವಾರ ಕರೆಕೊಟ್ಟಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಕರ್ನಾಟಕದ ಕೋಮುಹಿಂಸೆ ನಿಲ್ಲುವುದು ಯಾವಾಗ?
ಸಂವಾದ
ಭಾಗವಹಿಸುವವರು
ಮುನೀರ್ ಕಾಟಿಪಳ್ಳ, ರಾಜ್ಯಾಧ್ಯಕ್ಷ, ಡಿವೈಎಫ್‌ಐ, ಮಂಗಳೂರು
ಪ್ರೀತಿ ನಾಗರಾಜ್, ಲೇಖಕಿ, ಮೈಸೂರು
ವಿನಯ್ ಬಿದರೆ, ರಾಜ್ಯ ಕಾರ್ಯದರ್ಶಿ, ಬಿಜೆಪಿ, ಬೆಂಗಳೂರು
ಗೌರಿ, ಸಮನ್ವಯಕಾರ್ತಿ, ಕರ್ನಾಟಕ ಜನಶಕ್ತಿ, ಬೆಂಗಳೂರು
ಮಧ್ಯಾಹ್ನ 12 ರಿಂದ 1
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ಕನ್ನಡ ಧ್ವನಿ
ಒಳನೋಟ
ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ
https://bit.ly/30KYVZ9

ಸಂಜಯ್ ಅರೋರ ದೆಹಲಿ ಪೊಲೀಸ್ ಕಮಿಷನರ್

ನವದೆಹಲಿ (ಪಿಟಿಐ): ದೆಹಲಿ ಪೊಲೀಸ್ ಕಮಿಷನರ್ ಆಗಿ ಸಂಜಯ್ ಅರೋರ ಅವರನ್ನು ನೇಮಿಸಲಾಗಿದೆ. ತಮಿಳುನಾಡು ಕೇಡರ್‌ನ ಸಂಜಯ್ ಅವರು ಸದ್ಯ ಭಾರತ–ಟಿಬೆಟ್ ಗಡಿ ಪೊಲೀಸ್ ಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.



ಸಂಜಯ್

ಸಂಜಯ್ ಅರೋರ ಅವರು, ನರಹಂತಕ ವೀರಪ್ಪನ್ ಹಿಡಿಯುವಲ್ಲಿ ಯಶಸ್ವಿಯಾದ ವಿಶೇಷ ಕಾರ್ಯಪಡೆಯ ಭಾಗವಾಗಿದ್ದರು. ಇದಕ್ಕಾಗಿ ಅವರಿಗೆ ಮುಖ್ಯಮಂತ್ರಿ ಪದಕ ಕೂಡ ದೊರೆತಿದೆ. ಆಗ ತಮಿಳುನಾಡಿನ ಎಸ್‌ಪಿ ಆಗಿದ್ದರು.

ರಾಕೇಶ್ ಆಸ್ತಾನ ದೆಹಲಿ ಪೊಲೀಸ್ ಕಮಿಷನರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು. 1988 ಬ್ಯಾಚ್‌ನ ಸಂಜಯ್, ಸೋಮವಾರ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಅರುಣಾಚಲ ಪ್ರದೇಶ, ಗೋವಾ, ಮಿಜೋರಾಂ ಮತ್ತು ಕೇಂದ್ರಾಡಳಿತ ಪ್ರದೇಶಗಳ (ಎಜಿಎಂಯುಟಿ) ಕೇಡರ್ ಅಲ್ಲದವರನ್ನು ದೆಹಲಿಯ ಪೊಲೀಸ್ ಕಮಿಷನರ್ ಆಗಿ ನೇಮಿಸುತ್ತಿರುವುದು ಇದು ಮೂರನೇ ಬಾರಿಯಾಗಿದೆ.

ಸರ್ವಕಾಲಕ್ಕೂ ಸಲ್ಲುವ 'ವ್ಯಾಲ್ಯೂ ಇನ್ವೆಸ್ಟಿಂಗ್'

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಷೇರುಪೇಟೆಯಲ್ಲಿ ಕೆಲವು ಉತ್ತಮ ಕಂಪನಿಗಳ ಷೇರುಗಳು ಎಲೆಮರೆಯ ಕಾಯಿಗಳಂತೆ ಇರುತ್ತವೆ. ಅವುಗಳ ಆಂತರಿಕ ಮೌಲ್ಯ ಹೆಚ್ಚಿಗೆ ಇದ್ದರೂ ಷೇರು ಮಾರುಕಟ್ಟೆಯಲ್ಲಿ ಅವುಗಳಿಗೆ ಸಿಗಬೇಕಾದ ಮೌಲ್ಯ ಸಿಕ್ಕಿರುವುದಿಲ್ಲ. ವಾಸ್ತವದಲ್ಲಿ ಇರಬೇಕಾದ ಮೌಲ್ಯಕ್ಕಿಂತ ಕಡಿಮೆ ಮೌಲ್ಯವನ್ನು ಆ ಷೇರುಗಳು ಹೊಂದಿರುತ್ತವೆ. ಅಂತಹ ಷೇರುಗಳನ್ನು ಆಯ್ದು ಹೂಡಿಕೆ ಮಾಡುವುದು 'ವ್ಯಾಲ್ಯೂ ಇನ್ವೆಸ್ಟಿಂಗ್'.

ಇತ್ತೀಚಿನ ಮಾರುಕಟ್ಟೆ ಏರಿಳಿತಗಳ ನಡುವೆಯೂ ಉತ್ತಮ ಆಂತರಿಕ ಮೌಲ್ಯ ಹೊಂದಿರುವ ಕೆಲವು ಕಂಪನಿಗಳ ಷೇರುಗಳು ಹೂಡಿಕೆದಾರರಿಗೆ ಒಳ್ಳೆಯ ಲಾಭ ತಂದುಕೊಟ್ಟಿವೆ. 'ವ್ಯಾಲ್ಯೂ ಇನ್ವೆಸ್ಟಿಂಗ್' ಬಗ್ಗೆ ಒಂದಿಷ್ಟು ಕಲಿಯಲು ಇದೊಂದು ಸಂದರ್ಭ.

'ವ್ಯಾಲ್ಯೂ ಇನ್ವೆಸ್ಟಿಂಗ್'ನ ಹುಟ್ಟು: ಅಮೆರಿಕದ ಅರ್ಥಶಾಸ್ತ್ರಜ್ಞ ಮತ್ತು ಹೂಡಿಕೆದಾರ ಬೆಂಜಮಿನ್ ಗ್ರಹಾಂ 1920ರಲ್ಲಿ 'ವ್ಯಾಲ್ಯೂ ಇನ್ವೆಸ್ಟಿಂಗ್' (ಅಂದರೆ 'ಮೌಲ್ಯ ಆಧಾರಿತ ಹೂಡಿಕೆ') ಎಂಬ ಹೊಸ ವಿಧಾನ ಹುಟ್ಟುಹಾಕಿದರು. ಒಂದು ಶತಮಾನದ ಬಳಿಕವೂ ಬೆಂಜಮಿನ್ ಗ್ರಹಾಂ ತತ್ವಗಳು ಹೂಡಿಕೆದಾರರಿಗೆ ಪ್ರಸ್ತುತವಾಗಿವೆ. ಜಗತ್ತಿನ ಶ್ರೀಮಂತ ಹೂಡಿಕೆದಾರ ವಾರನ್ ಬಫೆಟ್ ಸಂಪತ್ತು ಸೃಷ್ಟಿಸಿದ್ದು ಕೂಡ ಇದೇ 'ವ್ಯಾಲ್ಯೂ ಇನ್ವೆಸ್ಟಿಂಗ್' ಮೂಲಕ.

ಮೌಲ್ಯ ಆಧಾರಿತ ಹೂಡಿಕೆ ಅಂದರೆ?: ಉದಾಹರಣೆಗೆ ₹ 1,000 ಆಂತರಿಕ ಮೌಲ್ಯ (Intrinsic Value) ಹೊಂದಿರುವ ಷೇರಿನ ಬೆಲೆ ಇಂದು ₹ 400 ಇದ್ದು, ಅದನ್ನು ನೀವು ಇಂದು ಖರೀದಿಸಿದಿರಿ ಎಂದಿಟ್ಟುಕೊಳ್ಳಿ. ಮುಂದಿನ ದಿನಗಳಲ್ಲಿ ಆ ಷೇರಿನ ಬೆಲೆ ₹ 1,000 ಆದಾಗ ನಿಮಗೆ ₹ 600 ಲಾಭವಾಗುತ್ತದೆ. ಹೀಗೆ ಕಡಿಮೆ ಬಂಡವಾಳ ಹೂಡಿಕೆ ಮಾಡಿ, ದೀರ್ಘಾವಧಿಯಲ್ಲಿ ಹೆಚ್ಚು ಲಾಭ ಗಳಿಸುವ ತತ್ವ 'ಮೌಲ್ಯ ಆಧಾರಿತ ಹೂಡಿಕೆ'. ಸರಳವಾಗಿ ಹೇಳುವುದಾದರೆ ಷೇರು ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಸಿಗುತ್ತಿರುವ ಅತ್ಯುತ್ತಮ ಕಂಪನಿಗಳ ಷೇರುಗಳನ್ನು ಹುಡುಕಿ ಹಣ ತೊಡಗಿಸುವ ಪ್ರಕ್ರಿಯೆಯನ್ನು ಮೌಲ್ಯ ಆಧಾರಿತ ಹೂಡಿಕೆ ಎನ್ನಬಹುದು.

ಅತ್ಯುತ್ತಮ ಕಂಪನಿಯೊಂದರ ಷೇರನ್ನು ಗುರುತಿಸಿ ಕಡಿಮೆ ಬೆಲೆಗೆ ಅದನ್ನು ಖರೀದಿಸಿದ್ದೀರಿ ಎಂದಮೇಲೆ ಮುಂದೊಂದು ದಿನ ಆ ಷೇರಿನ ಬೆಲೆ ಏರಿಕೆಯಾಗಲೇಬೇಕಲ್ಲವೇ? ಷೇರಿನ ಬೆಲೆ ಜಿಗಿದಾಗ ನೀವು ಹೂಡಿಕೆ ಮಾಡಿದ್ದ ಕಡಿಮೆ ಬಂಡವಾಳಕ್ಕೆ ಹೆಚ್ಚು ಲಾಭ ಸಿಗುತ್ತದೆಯಲ್ಲವೇ? ಇದೇ ವ್ಯಾಲ್ಯೂ ಇನ್ವೆಸ್ಟಿಂಗ್‌ನ ಜಾದೂ.

ಆದರೆ ವ್ಯಾಲ್ಯೂ ಇನ್ವೆಸ್ಟಿಂಗ್‌ಗಾಗಿ ಉತ್ತಮ ಷೇರುಗಳನ್ನು ಹುಡುಕುವುದು ಸುಲಭದ ಮಾತಲ್ಲ. ಕಂಪನಿಯ ಆರ್ಥಿಕ ಸ್ಥಿತಿಗತಿ ಮತ್ತು ಭವಿಷ್ಯದ ಮುನ್ನೋಟ (Fundamental Analysis) ಆಧರಿಸಿ ನಿರ್ಧರಿಸಬೇಕಾಗುತ್ತದೆ.

ಊಹೆ ಅಲ್ಲ: 'ಸಮಗ್ರ ಅಧ್ಯಯನ ಮತ್ತು ವಿಶ್ಲೇಷಣೆಯ ನಂತರ ಅಸಲು ಮತ್ತು ನಿರ್ದಿಷ್ಟ ಲಾಭಾಂಶದ ಸುರಕ್ಷತೆಯನ್ನು ಖಾತರಿಪಡಿಸುವ ಹಣಕಾಸು ಉತ್ಪನ್ನವನ್ನು ಮಾತ್ರ ಹೂಡಿಕೆ ಎಂದು ಪರಿಗಣಿಸಬಹುದು. ಯಾವ ಹೂಡಿಕೆಯು ಅಸಲು ಮತ್ತು ಲಾಭಾಂಶವನ್ನು ಖಾತರಿಪಡಿಸುವುದಿಲ್ಲವೋ ಅದು ಊಹಾತ್ಮಕ ಹೂಡಿಕೆ' ಎಂದು ಬೆಂಜಮಿನ್ ಗ್ರಹಾಂ ಹೇಳಿದ್ದಾರೆ. ಹಾಗಾಗಿ ಕಡಿಮೆ ಬೆಲೆಗೆ ಸಿಗುತ್ತವೆ ಎಂಬ ಒಂದೇ ಕಾರಣಕ್ಕೆ, ಒಳ್ಳೆಯ ಆಂತರಿಕ ಮೌಲ್ಯ ಹೊಂದಿರದ ಕಂಪನಿಗಳ ಷೇರುಗಳನ್ನು ಖರೀದಿಸಿದರೆ ನಷ್ಟ ಬಹುತೇಕ ಖಚಿತ.

ಹುಡುಕುವುದು ಹೇಗೆ?: ಒಳ್ಳೆಯ ಮೌಲ್ಯ ಹೊಂದಿರಬಹುದಾಗಿದ್ದರೂ ಷೇರುಪೇಟೆಯಲ್ಲಿ ಬಹಳ ಕಡಿಮೆ ದರಕ್ಕೆ ಸಿಗುತ್ತಿರುವ ಷೇರುಗಳನ್ನು ಪತ್ತೆ ಮಾಡಲು ಹಲವು ಅನುಪಾತಗಳನ್ನು ಬಳಸಲಾಗುತ್ತದೆ. ಪ್ರೈಸ್ ಟು ಅರ್ನಿಂಗ್ಸ್ ರೇಷಿಯೊ, ಪ್ರೈಸ್ ಅರ್ನಿಂಗ್ಸ್ ಟು ಗ್ರೋಥ್ ರೇಷಿಯೊ, ಪ್ರೈಸ್ ಟು ಬುಕ್ ರೇಷಿಯೊ, ಡಿವಿಡೆಂಡ್ ಯೀಲ್ಡ್ ರೇಷಿಯೊ, ಡೆಟ್ ಟು ಈಕ್ವಿಟಿ ರೇಷಿಯೊ, ರಿಟರ್ನ್ ಆನ್ ಈಕ್ವಿಟಿ ರೇಷಿಯೊ, ಪ್ರೈಸ್ ಟು ಸೇಲ್ಸ್ ಹೀಗೆ ಹಲವು ಅನುಪಾತಗಳು ಮೌಲ್ಯ ಆಧಾರಿತ ಹೂಡಿಕೆಗೆ ಷೇರುಗಳನ್ನು ಗುರುತಿಸಲು ನೆರವಿಗೆ ಬರುತ್ತವೆ. ಪ್ರತಿ ಅನುಪಾತವನ್ನು ಅರ್ಥ ಮಾಡಿಕೊಂಡು ಮುಂದುವರಿದಾಗ ನಿರ್ದಿಷ್ಟ ಷೇರಿನ ಭವಿಷ್ಯದ ಬಗ್ಗೆ ನಿಮ್ಮ ಲೆಕ್ಕಾಚಾರ ನಿಖರವಾಗುತ್ತದೆ.

ವಾಸ್ತವದಲ್ಲಿ ಹೊಂದಿರಬೇಕಾದ ಮೌಲ್ಯಕ್ಕಿಂತ ಹೆಚ್ಚಿನ ಮೌಲ್ಯ ಹೊಂದಿರುವ ಷೇರುಗಳನ್ನು 'ಓವರ್ ವ್ಯಾಲ್ಯೂಡ್' ಎಂದು ಗುರುತಿಸಲಾಗುತ್ತದೆ. ವಾಸ್ತವದಲ್ಲಿ ಹೊಂದಿರಬೇಕಾದ ಮೌಲ್ಯಕ್ಕಿಂತ ಕಡಿಮೆ ಮೌಲ್ಯ ಹೊಂದಿರುವ ಷೇರುಗಳು 'ಅಂಡರ್ ವ್ಯಾಲ್ಯೂಡ್' ಎಂದು ಪರಿಗಣಿತವಾಗುತ್ತವೆ. ಷೇರು ಹೂಡಿಕೆ ಮಾಡುವಾಗ ಅಂಡರ್ ವ್ಯಾಲ್ಯೂಡ್ ಷೇರುಗಳಿಗೆ ಆದ್ಯತೆ ಕೊಡಬೇಕು.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಹೆಚ್ಚಳ ಕಂಡ ಷೇರುಪೇಟೆ ಸೂಚ್ಯಂಕಗಳು

ಜುಲೈ 29ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಪ್ರಗತಿ ಸಾಧಿಸಿವೆ. 57,570 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇಕಡ 2.67ರಷ್ಟು ಜಿಗಿದಿದೆ. 17,158 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 2.62ರಷ್ಟು ಹೆಚ್ಚಳ ದಾಖಲಿಸಿದೆ. ರೂಪಾಯಿ ಮೌಲ್ಯ ಚೇತರಿಕೆ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕತೆ, ತ್ರೈಮಾಸಿಕ ಫಲಿತಾಂಶಗಳಲ್ಲಿ ಕಂಪನಿಗಳ ಉತ್ತಮ ಸಾಧನೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಲ್ಲಿ ಹೆಚ್ಚಿದ ಉತ್ಸಾಹ, ದೇಶಿ ಹೂಡಿಕೆದಾರರ ಪಾಲ್ಗೊಳ್ಳುವಿಕೆ ಸೇರಿ ಹಲವು ಅಂಶಗಳು ಸೂಚ್ಯಂಕಗಳ ಜಿಗಿತಕ್ಕೆ ಕಾರಣವಾಗಿವೆ. ಒಟ್ಟಾರೆಯಾಗಿ ಜುಲೈನಲ್ಲಿ ಸೂಚ್ಯಂಕಗಳು ಶೇ 8.5ರಷ್ಟು ಜಿಗಿದಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಲೋಹ ವಲಯ ಶೇ 7.7ರಷ್ಟು, ಮಾಧ್ಯಮ ವಲಯ ಶೇ 5ರಷ್ಟು ಮತ್ತು ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 3.5ರಷ್ಟು ಹೆಚ್ಚಳ ದಾಖಲಿಸಿವೆ.

ಈ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 145.87 ಕೋಟಿ ಮೌಲ್ಯದ ಷೇರುಗಳನ್ನು ಮಾತ್ರ ಮಾರಾಟ ಮಾಡಿದ್ದು ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 2,238.51 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಗಳಿಕೆ–ಇಳಿಕೆ: ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕದಲ್ಲಿ ಬಜಾಜ್ ಫಿನ್‌ಸರ್ವ್, ಬಜಾಜ್ ಫೈನಾನ್ಸ್, ಟಾಟಾ ಸ್ಟೀಲ್, ಎಸ್‌ಬಿಐ ಲೈಫ್ ಇನ್ಶೂರೆನ್ಸ್, ಇಂಡಸ್ ಇಂಡ್ ಬ್ಯಾಂಕ್ ಉತ್ತಮ ಗಳಿಕೆ ಕಂಡಿವೆ. ಜೊಮಾಟೊ, ಪಿಬಿ ಫಿನ್‌ಟೆಕ್, ಪೇಟಿಎಂ, ಡಾ ರೆಡ್ಡೀಸ್ ಕುಸಿತ ದಾಖಲಿಸಿವೆ.

ಬಿಎಸ್‌ಇ ಮಿಡ್ ಕ್ಯಾಪ್ ಸೂಚ್ಯಂಕ ಶೇ 1.6ರಷ್ಟು ಹೆಚ್ಚಳ ಕಂಡಿದೆ. ಎಚ್‌ಎಎಲ್, ಜಿಂದಾಲ್ ಸ್ಟೀಲ್ ಆ್ಯಂಡ್ ಪವರ್, ಬಜಾಜ್ ಹೋಲ್ಡಿಂಗ್ಸ್ ಆ್ಯಂಡ್ ಇನ್ವೆಸ್ಟ್‌ಮೆಂಟ್, ಪೇಜ್ ಇಂಡಸ್ಟ್ರೀಸ್, ಅದಾನಿ ಪವರ್, ಸನ್ ನೆಟ್‌ವರ್ಕ್ ಗಳಿಕೆ ಕಂಡಿವೆ. ಮಹಿಂದ್ರ ಆ್ಯಂಡ್ ಮಹೀಂದ್ರ ಫೈನಾನ್ಶಿಯಲ್ ಸರ್ವಿಸಸ್, ಶ್ರೀರಾಮ್ ಟ್ರಾನ್ಸ್‌ಪೋರ್ಟ್ ಫೈನಾನ್ಸ್ ಕಾರ್ಪೊರೇಷನ್, ಬಯೋಕಾನ್ ಮತ್ತು ಇಂದ್ರಪ್ರಸ್ಥ ಗ್ಯಾಸ್ ಕುಸಿತ ಕಂಡಿವೆ.

ಮುನ್ನೋಟ: ಹಣದುಬ್ಬರ ನಿಯಂತ್ರಿಸಲು ಆರ್‌ಬಿಐ ರೆಪೊ ದರವನ್ನು ಇನ್ನಷ್ಟು ಹೆಚ್ಚಳ ಮಾಡುವ ಸಾಧ್ಯತೆಯಿದೆ. ಈ ವಾರ ನಡೆಯಲಿರುವ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ಆರ್‌ಬಿಐ ಬಡ್ಡಿದರವನ್ನು 35 ಮೂಲಾಂಶಗಳಷ್ಟು ಹೆಚ್ಚಳ ಮಾಡಬಹುದು ಎಂಬ ಅಂದಾಜು ಇದೆ. ಬಡ್ಡಿ ದರ ಹೆಚ್ಚಳವಾದರೆ ಅದು ಮಾರುಕಟ್ಟೆ ಮೇಲೆ ಒಂದಿಷ್ಟು ಪರಿಣಾಮ ಬೀರಲಿದೆ.

ಐಟಿಸಿ, ಬರ್ಜರ್ ಪೇಂಟ್ಸ್, ಡಾಬರ್, ಬಿಎಚ್‌ಇಎಲ್, ಬ್ರಿಟಾನಿಯಾ, ಜೊಮಾಟೊ, ವೋಲ್ಟಾಸ್, ಲುಪಿನ್, ಬಜಾಜ್ ಕನ್ಸೂಮರ್ ಕೇರ್, ಬಾರ್ಬಿಕ್ಯೂ, ಎವರೆಡಿ, ಎಸ್ಕಾರ್ಟ್ಸ್, ಗುಡ್ ಇಯರ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ಜೂನ್‌ನಲ್ಲಿ ₹ 4,989 ಕೋಟಿ ಮೌಲ್ಯದ ಖರೀದಿ

9 ತಿಂಗಳ ಬಳಿಕ ಷೇರುಪೇಟೆಗೆ ಮರಳಿದ ವಿದೇಶಿ ಹೂಡಿಕೆದಾರರು

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಒಂಬತ್ತು ತಿಂಗಳ ಬಳಿಕ ಭಾರತದ ಬಂಡವಾಳ ಮಾರುಕಟ್ಟೆಯತ್ತ ಮತ್ತೆ ಮುಖ ಮಾಡಿದ್ದಾರೆ. ಜುಲೈನಲ್ಲಿ ₹ 4,989 ಕೋಟಿ ಮೌಲ್ಯದ ಷೇರುಗಳನ್ನು ಅವರು ಖರೀದಿಸಿದ್ದಾರೆ.

ಡಾಲರ್ ಸೂಚ್ಯಂಕ ತುಸು ಇಳಿಕೆ ಆಗಿರುವುದು ಹಾಗೂ ಕಾರ್ಪೊರೇಟ್ ವಲಯದ ಜೂನ್ ತ್ರೈಮಾಸಿಕದ ಫಲಿತಾಂಶ ಉತ್ತಮವಾಗಿರುವ ಕಾರಣ ಬಂಡವಾಳ ಹೂಡಿಕೆ ಮಾಡಿದ್ದಾರೆ.

ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ಜೂನ್ ತಿಂಗಳಿನಲ್ಲಿ ₹ 50,145 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದರು. 2020ರ ಮಾರ್ಚ್ ಬಳಿಕ ಆಗಿರುವ ಗರಿಷ್ಠ ಹಿಂತೆಗೆತ ಇದು. 2020ರ ಮಾರ್ಚ್‌ನಲ್ಲಿ ₹61,973 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದರು.

2021ರ ಅಕ್ಟೋಬರ್‌ನಿಂದ 2022ರ ಜೂನ್‌ವರೆಗಿನ ಅವಧಿಯಲ್ಲಿ ₹ 2.46 ಲಕ್ಷ ಕೋಟಿ ಮೌಲ್ಯದ ಷೇರುಗಳನ್ನು ವಿದೇಶಿ ಹೂಡಿಕೆದಾರರು ಮಾರಾಟ ಮಾಡಿದ್ದಾರೆ. ಜೂನ್‌ನಲ್ಲಿ ಸಾಲಪತ್ರ ಮಾರುಕಟ್ಟೆಯಿಂದ ₹2,056 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

'ರೂಪಾಯಿ ಮೌಲ್ಯವು ತೀವ್ರ ಕುಸಿತ ಕಾಣುವ ಕೆಟ್ಟ ದಿನಗಳು ಮುಗಿದಂತೆ ಕಾಣುತ್ತಿದೆ. ತೈಲ ದರವು ಒಂದು ಹಂತದಲ್ಲಿ ಸ್ಥಿರತೆ ಕಂಡುಕೊಳ್ಳುವ ಸಾಧ್ಯತೆ ಇದೆ. ಈ ಕಾರಣಗಳಿಂದಾಗಿ ಆಗಸ್ಟ್‌ನಲ್ಲಿಯೂ ವಿದೇಶಿ ಬಂಡವಾಳ ಒಳಹರಿವು ಸಕಾರಾತ್ಮಕವಾಗಿ ಇರುವ ವಿಶ್ವಾಸವಿದೆ' ಎಂದು ಯೆಸ್ ಸೆಕ್ಯುರಿಟೀಸ್‌ನ ಮುಖ್ಯ ವಿಶ್ಲೇಷಕ ಹಿತೇಶ್ ಜೈನ್ ಹೇಳಿದ್ದಾರೆ.

'ವಿದೇಶಿ ಹೂಡಿಕೆದಾರರು ದೇಶದ ಷೇರುಪೇಟೆಗಳತ್ತ ಪೂರ್ತಿಯಾಗಿ ಮರಳಿದ್ದಾರೆ ಎನ್ನಲು ಆಗದು. ಹೀಗಿದ್ದರೂ ಅವರ ಈ ನಡೆ ಸ್ವಾಗತಾರ್ಹ. ಹೂಡಿಕೆದಾರು ಹಿಂದಿರುಗಿರುವ ಬಗ್ಗೆ ಸ್ಪಷ್ಟತೆ ಸಿಗಲು ಇನ್ನೂ ಸ್ವಲ್ಪ ಸಮಯ ಹಿಡಿಯಲಿದೆ' ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ತಿಳಿಸಿದ್ದಾರೆ.

ಒಳಹರಿವಿಗೆ ಕಾರಣಗಳು

- ಅಮೆರಿಕವು ಆರ್ಥಿಕ ಹಿಂಜರಿತದಲ್ಲಿಲ್ಲ ಎಂದು ಫೆಡರಲ್ ರಿಸರ್ವ್ ಅಧ್ಯಕ್ಷ ಜೆರೋಮ್ ಪೋವೆಲ್ ಹೇಳಿಕೆ
- ಕಾರ್ಪೊರೇಟ್ ವಲಯದ ಜೂನ್ ತ್ರೈಮಾಸಿಕದ ಫಲಿತಾಂಶ ಉತ್ತಮವಾಗಿರುವುದು
- ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಚೇತರಿಕೆ
- ದೇಶಿ ಷೇರುಪೇಟೆಗಳಲ್ಲಿ ನಡೆಯುತ್ತಿರುವ ಸಕಾರಾತ್ಮಕ ವಹಿವಾಟು



ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹425
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹425

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹309-575
ದ್ವಿತಳಿ (ಬಿ.ವಿ)	₹335-793

₹ 4.35 ಕೋಟಿ ನೀಡಿದ್ದ 27 ಅಭ್ಯರ್ಥಿಗಳು

ಒಂದನೇ ಪುಟದಿಂದ

'ಶಾಂತಕುಮಾರ್ ಹಾಗೂ ಸಿಬ್ಬಂದಿ, ಮಧ್ಯವರ್ತಿಗಳ ಮೂಲಕ ಅಭ್ಯರ್ಥಿಗಳನ್ನು ಸಂಪರ್ಕಿಸಿದ್ದರು. ಬೆಂಗಳೂರಿನ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಸಜ್ಜಾಗಿದ್ದ 27 ಅಭ್ಯರ್ಥಿಗಳು, ಪಿಎಸ್‌ಐ ಆಗಲೆಂದು ಶಾಂತಕುಮಾರ್ ಹಾಗೂ ಸಿಬ್ಬಂದಿಗೆ ₹ 4.35 ಕೋಟಿ ನೀಡಿದ್ದರು. ಈ ಹಣದಲ್ಲೇ ಮಧ್ಯವರ್ತಿಗಳು ತಮ್ಮ ಪಾಲು ಇಟ್ಟುಕೊಂಡಿದ್ದರು' ಎಂಬ ಸಂಗತಿಯನ್ನೂ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

'₹ 4.35 ಕೋಟಿ ಪೈಕಿ ₹ 2.50 ಕೋಟಿ ಜಪ್ತಿ ಮಾಡಲಾಗಿದೆ. ಉಳಿದ ಹಣ ಎಡಿಜಿಪಿ ಹಾಗೂ ಇತರರ ಬಳಿ ಇದೆ. ಅದರ ಜಪ್ತಿಗೂ ತನಿಖೆ ಮುಂದುವರಿಸಲಾಗಿದೆ' ಎಂದು ಸಿಐಡಿ ಅಧಿಕಾರಿಗಳು ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

18 ಅಭ್ಯರ್ಥಿಗಳ ಬಂಧನ: 'ಹಣ ನೀಡಿದ್ದ 27 ಅಭ್ಯರ್ಥಿಗಳ ಪೈಕಿ 18 ಅಭ್ಯರ್ಥಿಗಳು ಮಾತ್ರ ಸಿಕ್ಕಿಬಿದ್ದಿದ್ದಾರೆ. ಉಳಿದ ಅಭ್ಯರ್ಥಿಗಳು ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗೆ ವಿಶೇಷ ತಂಡ ಕೆಲಸ ಮಾಡುತ್ತಿದೆ' ಎಂದು ಆರೋಪ ಪಟ್ಟಿಯಲ್ಲಿ ಹೇಳಿದ್ದಾರೆ.

₹ 10 ಲಕ್ಷ ಪಡೆದಿದ್ದ ಪೊಲೀಸ್ ಅಧಿಕಾರಿಗಳು: 'ಮಧ್ಯವರ್ತಿಗಳಾಗಿ ಕೆಲಸ ಮಾಡಿದ್ದ ಬ್ಯಾಡರಹಳ್ಳಿ ಠಾಣೆ ಪಿಎಸ್‌ಐ ಕೆ. ಹರೀಶ್ ಹಾಗೂ ರಿಸರ್ವ್ ಪೊಲೀಸ್ ಇನ್‌ಸ್ಪೆಕ್ಟರ್ ಬಸವರಾಜ್ ಗುರವ, ₹ 5 ಲಕ್ಷ–₹ 10 ಲಕ್ಷ ಕಮಿಷನ್ ಪಡೆದಿದ್ದರು. ಇವರಿಬ್ಬರು ಸೂಚಿಸಿದ್ದ ಅಭ್ಯರ್ಥಿಗಳು ಸಹ ಹೆಚ್ಚಿನ ಅಂಕ ಪಡೆದು ಪಿಎಸ್‌ಐ ಹುದ್ದೆಗೆ ಆಯ್ಕೆಯಾಗಿದ್ದರು' ಎಂಬ ಮಾಹಿತಿಯೂ ಪಟ್ಟಿಯಲ್ಲಿದೆ.

'ಕಮಿಷನ್ ರೂಪದಲ್ಲಿ ಬಂದಿದ್ದ ಬಹುಪಾಲು ಹಣವನ್ನು ಆರೋಪಿಗಳು ಖರ್ಚು ಮಾಡಿದ್ದಾರೆ. ಇತರೆ ಮಧ್ಯವರ್ತಿಗಳೂ ಲಕ್ಷಗಟ್ಟಲೇ ಹಣ ಪಡೆದು, ಅಭ್ಯರ್ಥಿಗಳನ್ನು ಶಾಂತಕುಮಾರ್‌ಗೆ ಪರಿಚಯ ಮಾಡಿಕೊಟ್ಟಿದ್ದರು' ಎಂಬ ಅಂಶವೂ ಪಟ್ಟಿಯಲ್ಲಿ ಉಲ್ಲೇಖಗೊಂಡಿದೆ.

ರೆಪೊ: ಶೇ 0.35ರಷ್ಟು ಏರಿಕೆ ಸಾಧ್ಯತೆ

ಮುಂಬೈ (ಪಿಟಿಐ): ಚಿಲ್ಲರೆ ಹಣದುಬ್ಬರವನ್ನು ನಿಯಂತ್ರಿಸಲು ಆರ್‌ಬಿಐನ ಮುಂಬರುವ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯಲ್ಲಿ ರೆಪೊ ದರವನ್ನು ಶೇಕಡ 0.25ರಿಂದ ಶೇ 0.35ರವರೆಗೆ ಹೆಚ್ಚಿಸುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಎಂಪಿಸಿಯು ರೆಪೊ ದರವನ್ನು ಶೇ0.35ರಷ್ಟು ಹೆಚ್ಚಿಸುವ ನಿರೀಕ್ಷೆ ಇದೆ ಎಂದು ಬಿಒಎಫ್‌ಎ ಗ್ಲೋಬಲ್ ರಿಸರ್ಚ್ ವರದಿ ಹೇಳಿದೆ. ಎಂಪಿಸಿ ಸಭೆಯು ಬುಧವಾರದಿಂದ ಶುಕ್ರವಾರದವರೆಗೆ ನಡೆಯಲಿದೆ.

‘ಚಿನ್ನ ಗೆಲ್ಲುವ ವಿಶ್ವಾಸವಿತ್ತು’

ಬೆಂಗಳೂರು: ‘ಕಾಮನ್‌ವೆಲ್ತ್ ಕೂಟದಲ್ಲಿ ಚಿನ್ನ ಗೆಲ್ಲುವ ವಿಶ್ವಾಸವಿತ್ತು. ಕಠಿಣ ಪರಿಶ್ರಮಕ್ಕೆ ಸಿಕ್ಕಿದ ಫಲ ಇದು’ ಎಂದು ಜೆರೆಮಿ ಲಾಲ್‌ರಿನುಂಗಾ ಪ್ರತಿಕ್ರಿಯಿಸಿದ್ದಾರೆ.

ಭಾನುವಾರ ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಕೂಟಕ್ಕೆ ಮುನ್ನ ಒಂದು ತಿಂಗಳು ಕಠಿಣ ತರಬೇತಿ ಪಡೆದಿದ್ದೆ. ಆ ವೇಳೆ ಗಾಯಗೊಳ್ಳದೆ ಅಭ್ಯಾಸ ನಡೆಸಲು ಸಾಧ್ಯವಾದದ್ದು ನೆರವು ನೀಡಿತು’

ಎಂದು ಹೇಳಿದರು. ‘ಯೂತ್ ಒಲಿಂಪಿಕ್ಸ್ ಬಳಿಕ ಸೀನಿಯರ್ ವಿಭಾಗದಲ್ಲಿ ನನಗೆ ಸಿಕ್ಕ ಮೊದಲ ಚಿನ್ನ ಇದು. ಗಾಯದ ಕಾರಣದಿಂದಾಗಿ ಟೋಕಿಯೊ ಒಲಿಂಪಿಕ್ಸ್ ಕೂಟದಲ್ಲಿ ಪಾಲ್ಗೊಳ್ಳಲು ಆಗಿರಲಿಲ್ಲ. ಆಗಿಂದಾಗ್ಗೆ ಗಾಯದ ಸಮಸ್ಯೆ ಎದುರಿಸುತ್ತಿದ್ದರೂ, ಬೇಗನೇ ಚೇತರಿಸಿಕೊಂಡು ಮತ್ತೆ ಕಣಕ್ಕಿಳಿಯುತ್ತಿದ್ದೆ. ಈ ಪದಕ ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ’ ಎಂದರು.

ಚಿನ್ನ ಗೆದ್ದ ಸಂಭ್ರಮದಲ್ಲಿ ಜೆರೆಮಿ ಲಾಲ್‌ರಿನುಂಗಾ –ಪಿಟಿಐ ಚಿತ್ರ

ವೇಟ್‌ಲಿಫ್ಟಿಂಗ್‌ನಲ್ಲಿ ಮುಂದುವರಿದ ಪದಕ ಬೇಟೆ; ಬಿಂದ್ಯಾರಾಣಿಗೆ ಬೆಳ್ಳಿ

ಜೆರೆಮಿ ಸಾಧನೆಗೆ ಚಿನ್ನದ ಮೆರುಗು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಕಾಮನ್‌ವೆಲ್ತ್ ಕೂಟದ ವೇಟ್‌ಲಿಫ್ಟಿಂಗ್‌ನಲ್ಲಿ ಭಾರತದ ಶಕ್ತಿ ಪ್ರದರ್ಶನ ಮುಂದುವರಿದಿದ್ದು, ಯುವ ವೇಟ್‌ಲಿಫ್ಟರ್ ಜೆರೆಮಿ ಲಾಲ್‌ರಿನುಂಗಾ ಅವರು ಭಾನುವಾರ ಚಿನ್ನದ ಪದಕ ಗೆದ್ದು ಬೀಗಿದರು. ಬಿಂದ್ಯಾರಾಣಿ ದೇವಿ ಬೆಳ್ಳಿ ಪಡೆದರು.

ಮಿಜೊರಾಮ್ ರಾಜ್ಯದ ಐಜ್ವಾಲ್‌ನ 19 ವರ್ಷದ ಜೆರೆಮಿ ಪುರುಷರ 67 ಕೆ.ಜಿ ವಿಭಾಗದಲ್ಲಿ ಅಸಾಧಾರಣ ಸಾಮರ್ಥ್ಯ ತೋರಿ, ಒಟ್ಟು 300 ಕೆ.ಜಿ ಭಾರ ಎತ್ತಿದರಲ್ಲದೆ, ಎರಡು ಕೂಟ ದಾಖಲೆಗಳನ್ನೂ ತಮ್ಮ ಹೆಸರಿಗೆ ಬರೆಯಿಸಿಕೊಂಡರು.

ಸ್ನ್ಯಾಚ್‌ನಲ್ಲಿ 140 ಕೆ.ಜಿ ಹಾಗೂ ಕ್ಲೀನ್ ಮತ್ತು ಜರ್ಕ್‌ನಲ್ಲಿ 160 ಕೆ.ಜಿ ಎತ್ತಿದರು. ಸ್ನ್ಯಾಚ್ ಮತ್ತು ಒಟ್ಟಾರೆ ವಿಭಾಗದಲ್ಲಿ ಅವರು ದಾಖಲೆ ಸ್ಥಾಪಿಸಿದರು. 2018ರ ಯೂತ್ ಒಲಿಂಪಿಕ್ಸ್‌ನಲ್ಲಿ ಚಿನ್ನ ಜಯಿಸಿದ್ದ ಜೆರೆಮಿ, ಈ ಸಾಧನೆಯ ಮೂಲಕ ಸೀನಿಯರ್ ವಿಭಾಗಕ್ಕೆ ಭರ್ಜರಿ ಪ್ರವೇಶ ಪಡೆದುಕೊಂಡಿದ್ದಾರೆ.

ಮುಖ್ಯಾಂಶಗಳು

- 67 ಕೆ.ಜಿ ವಿಭಾಗದಲ್ಲಿ ಜೆರೆಮಿ ಮಿಂಚು
- ಒಟ್ಟು 300 ಕೆ.ಜಿ ಭಾರ ಎತ್ತಿದ ವೇಟ್‌ಲಿಫ್ಟರ್
- ಮಹಿಳೆಯರ 55 ಕೆ.ಜಿ. ವಿಭಾಗದಲ್ಲಿ ಬಿಂದ್ಯಾ ಸಾಧನೆ

ಕ್ಲೀನ್ ಮತ್ತು ಜರ್ಕ್‌ನಲ್ಲಿ ಭಾರ ಎತ್ತುವ ವೇಳೆ ಎರಡು ಸಲ ನೋವು ಅನುಭವಿಸಿದರೂ, ಛಲ ಬಿಡಲಿಲ್ಲ. ಸ್ನ್ಯಾಚ್‌ನಲ್ಲಿ ಎರಡನೇ ಪ್ರಯತ್ನದಲ್ಲಿ 140 ಕೆ.ಜಿ ಎತ್ತಿದ ಅವರು ಎದುರಾಳಿಗಳನ್ನು ಹಿಂದಿಕ್ಕಿದರು. ಕೊನೆಯ ಪ್ರಯತ್ನದಲ್ಲಿ 143 ಕೆ.ಜಿ ಎತ್ತಲು ಪ್ರಯತ್ನಿಸಿದರೂ ವಿಫಲರಾದರು.

ಕ್ಲೀನ್ ಮತ್ತು ಜರ್ಕ್‌ನಲ್ಲಿ ಮೊದಲ ಪ್ರಯತ್ನದಲ್ಲಿ 154 ಕೆ.ಜಿ ಹಾಗೂ ಎರಡನೇ ಪ್ರಯತ್ನದಲ್ಲಿ 160 ಕೆ.ಜಿ. ಭಾರ ಎತ್ತಿದರು. ಮೂರನೇ ಅವಕಾಶದಲ್ಲಿ 165 ಕೆ.ಜಿ ಎತ್ತಲು ಪ್ರಯತ್ನಿಸಿದರೂ ಎಡವಿದರು. ಆದರೆ ಎರಡನೇ ಪ್ರಯತ್ನದಲ್ಲೇ ಅವರು ಚಿನ್ನ ಖಚಿತಪಡಿಸಿಕೊಂಡಿದ್ದರು.

ಸಮೋವದ ವೈಪವ ನೆವೊ (127 ಕೆ.ಜಿ+ 166 ಕೆ.ಜಿ) ಅವರು ಬೆಳ್ಳಿ ಹಾಗೂ ನೈಜೀರಿಯಾದ ಜೋಸೆಫ್ ಉಮೊಫಿಯ (130 ಕೆ.ಜಿ+ 160 ಕೆ.ಜಿ) ಕಂಚು ಗೆದ್ದುಕೊಂಡರು.

ಕಾಮನ್‌ವೆಲ್ತ್ ಕೂಟದಲ್ಲಿ ಇದು ನನ್ನ ಮೊದಲ ಪದಕ. ಬೆಳ್ಳಿ ಪದಕದ ಜತೆ ಕೂಟ ದಾಖಲೆ ಸ್ಥಾಪಿಸಲು ಸಾಧ್ಯವಾದದ್ದು ಸಂತಸ ತಂದಿದೆ.
ಬಿಂದ್ಯಾರಾಣಿ ದೇವಿ, ಬೆಳ್ಳಿ ಗೆದ್ದ ವೇಟ್‌ಲಿಫ್ಟರ್

ಮಹಿಳೆಯರ ವೇಟ್‌ಲಿಫ್ಟಿಂಗ್‌ನಲ್ಲಿ ಬೆಳ್ಳಿ ಜಯಿಸಿದ ಬಿಂದ್ಯಾರಾಣಿ ದೇವಿ –ಪಿಟಿಐ ಚಿತ್ರ

ಬಿಂದ್ಯಾರಾಣಿಗೆ ಬೆಳ್ಳಿ: ಜೆರಿಮಿ ಅವರ ಚಿನ್ನದ ಸಾಧನೆಗೂ ಮುನ್ನ ಬಿಂದ್ಯಾರಾಣಿ ದೇವಿ ಅವರು ಮಹಿಳೆಯರ 55 ಕೆ.ಜಿ. ವಿಭಾಗದಲ್ಲಿ ಭಾರತಕ್ಕೆ ಬೆಳ್ಳಿ ತಂದಿತ್ತಿದ್ದರು.

23 ವರ್ಷದ ಬಿಂದ್ಯಾ ಒಟ್ಟು 202 ಕೆ.ಜಿ. ಭಾರ (86 ಕೆ.ಜಿ+ 116 ಕೆ.ಜಿ) ಎತ್ತಿದರು. ಕ್ಲೀನ್ ಮತ್ತು ಜರ್ಕ್‌ನಲ್ಲಿ 116 ಕೆ.ಜಿ ಸಾಧನೆಯು ಹೊಸ ಕೂಟ ದಾಖಲೆಯೂ ಹೌದು.

ನೈಜೀರಿಯಾದ ಅದಿಜತ್ ಅಡೆನಿಕ್ ಒಲರೊನೊಯೆ (203 ಕೆ.ಜಿ) ನಿರೀಕ್ಷೆಯಂತೆಯೇ ಚಿನ್ನದ ಪದಕ ಗೆದ್ದುಕೊಂಡರೆ, ಇಂಗ್ಲೆಂಡ್‌ನ ಫೇಯರ್ ಮಾರೊ (198 ಕೆ.ಜಿ) ಕಂಚು ಪಡೆದರು. ವೇಟ್‌ಲಿಫ್ಟಿಂಗ್‌ನಲ್ಲಿ ಭಾರತ ಒಟ್ಟು ಐದು ಪದಕ ಜಯಿಸಿದೆ. ಮೀರಾಬಾಯಿ ಚಾನು, ಸಂಕೇತ್ ಸರ್ಗರ್ ಮತ್ತು ಗುರುರಾಜ ಪೂಜಾರಿ ಅವರು ಕ್ರಮವಾಗಿ ಚಿನ್ನ, ಬೆಳ್ಳಿ ಹಾಗೂ ಕಂಚು ಗೆದ್ದಿದ್ದರು.

ಸ್ನೇಹಾ ದಾಳಿ; ಮಂದಾನ ಮಿಂಚು

ಮಹಿಳಾ ಟಿ20: ಪಾಕ್ ವಿರುದ್ಧ ಭಾರತ ತಂಡಕ್ಕೆ ಜಯ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡವು ಕಾಮನ್‌ವೆಲ್ತ್ ಕೂಟದ ಮಹಿಳಾ ಟಿ20 ಕ್ರಿಕೆಟ್‌ನಲ್ಲಿ ಭಾನುವಾರ ಪಾಕಿಸ್ತಾನ ತಂಡದ ಎದುರು ಸುಲಭ ಜಯ ಸಾಧಿಸಿತು.

ಎಜ್‌ಬಾಸ್ಟನ್ ಕ್ರೀಡಾಂಗಣದಲ್ಲಿ ನಡೆದ ಎ ಗುಂಪಿನ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಪಾಕ್ ತಂಡದ ಯೋಜನೆ ಈಡೇರಲಿಲ್ಲ. ಮಳೆಯಿಂದಾಗಿ ಸ್ವಲ್ಪ ಹೊತ್ತು ಆಟ ಸ್ಥಗಿತವಾಗಿತ್ತು. ಆದ್ದರಿಂದಾಗಿ ಪಂದ್ಯವನ್ನು 18–18 ಓವರ್‌ಗಳಿಗೆ ನಿಗದಿ ಮಾಡಲಾಯಿತು.

ಭಾರತದ ಸ್ನೇಹಾ ರಾಣಾ ಮತ್ತು ರಾಧಾ ಯಾದವ್ ಅವರ ಉತ್ತಮ ಬೌಲಿಂಗ್ ಮುಂದೆ ಕುಸಿದ ಪಾಕ್ ತಂಡವು 18 ಓವರ್‌ಗಳಲ್ಲಿ 99 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಗುರಿ ಬೆನ್ನಟ್ಟಿದ ಭಾರತ ತಂಡವು ಸ್ಮೃತಿ ಮಂದಾನ (ಅಜೇಯ 63; 42ಎಸೆತ, 4X8, 6X3) ವೇಗದ ಆಟದ ಬಲದಿಂದ 11.4 ಓವರ್ ಗಳಲ್ಲಿ 2 ವಿಕೆಟ್‌ಗಳಿಗೆ 102 ರನ್ ಗಳಿಸಿತು. 8 ವಿಕೆಟ್‌ಗಳಿಂದ ಜಯ ದಾಖಲಿಸಿತು.

ಮೊದಲ ಪಂದ್ಯದಲ್ಲಿ ಭಾರತ ತಂಡವು ಆಸ್ಟ್ರೇಲಿಯಾ ಎದುರು ಸೋತಿತ್ತು. ಈ ಗೆಲುವಿನೊಂದಿಗೆ ತಂಡದ ಸೆಮಿಫೈನಲ್ ಪ್ರವೇಶದ ಕನಸು ಜೀವಂತವಾಗುಳಿಯಿತು. ಉತ್ತಮ ರನ್‌ರೇಟ್ (+1.520) ಆಧಾರದಲ್ಲಿ ತಂಡವು ಗುಂಪಿನ ಅಂಕಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ. ಆ.3ರಂದು ಭಾರತ ತಂಡವು ಬಾರ್ಬಡಿಸ್ ಬಳಗವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 18 ಓವರ್‌ಗಳಲ್ಲಿ 99 (ಮುನೀಬಾ ಅಲಿ 32, ಮರೂಫ್ 17, ಅಲಿಯಾ ರಿಯಾಜ್ 18, ಒಮೇಮಾ ಸೊಹೈಲ್ 10, ಸ್ನೇಹಾ ರಾಣಾ 15ಕ್ಕೆ2, ರಾಧಾ ಯಾದವ್ 18ಕ್ಕೆ2) ಭಾರತ: 11.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 102 (ಶಫಾಲಿ ವರ್ಮಾ 16, ಸ್ಮೃತಿ ಮಂದಾನ ಔಟಾಗದೆ 63, ಶಬಿನೇನಿ ಮೇಘನಾ 14, ತೌಬಾ ಹಸನ್ 18ಕ್ಕೆ1, ಒಮೈಮಾ ಸೊಹೈಲ್ 20ಕ್ಕೆ1) ಫಲಿತಾಂಶ: ಭಾರತ ತಂಡಕ್ಕೆ 8 ವಿಕೆಟ್‌ಗಳ ಜಯ. (ಮಳೆಯಿಂದಾಗಿ ಪಂದ್ಯವನ್ನು 18 ಓವರ್‌ಗಳಿಗೆ ನಿಗದಿ ಮಾಡಲಾಯಿತು).

ವಿಕೆಟ್ ಗಳಿಸಿದ ಸ್ನೇಹಾ ರಾಣಾ ಸಂಭ್ರಮ –ಎಎಫ್‌ಪಿ ಚಿತ್ರ

ಮಹಿಳಾ ಹಾಕಿ: ವೇಲ್ಸ್ ತಂಡದ ಎದುರು 3–1 ಗೋಲುಗಳ ಗೆಲುವು

ವಂದನಾ ಕಟಾರಿಯಾ ಚುರುಕಿನ ಆಟ

ಬರ್ಮಿಂಗ್‌ಹ್ಯಾಮ್ (ಪಿಟಿಐ): ವಂದನಾ ಕಟಾರಿಯಾ ತಂದಿತ್ತ ಎರಡು ಗೋಲುಗಳ ನೆರವಿನಿಂದ ಭಾರತ ತಂಡದವರು ಮಹಿಳಾ ಹಾಕಿ ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿದರು.

ಶನಿವಾರ ನಡೆದ ‘ಎ’ ಗುಂಪಿನ ಪಂದ್ಯದಲ್ಲಿ ಭಾರತ 3–1 ರಲ್ಲಿ ವೇಲ್ಸ್ ತಂಡವನ್ನು ಮಣಿಸಿತು. ಸವಿತಾ ಪೂನಿಯಾ ಬಳಗ ಮೊದಲ ಪಂದ್ಯದಲ್ಲಿ ಘಾನಾ ಎದುರು ಜಯಿಸಿತ್ತು.

ಭಾರತದ ಎಲ್ಲ ಮೂರೂ ಗೋಲುಗಳು ಪೆನಾಲ್ಟಿ ಕಾರ್ನರ್ ಅವಕಾಶಗಳಲ್ಲಿ ಬಂದವು. ತನಗೆ ಲಭಿಸಿದ ಏಳು ಪೆನಾಲ್ಟಿ ಕಾರ್ನರ್ ಅವಕಾಶಗಳಲ್ಲಿ ಮೂರನ್ನು ಸದುಪಯೋಗಪಡಿಸಿಕೊಳ್ಳಲು ಭಾರತ ಯಶಸ್ವಿಯಾಯಿತು. ವೇಲ್ಸ್ ತಂಡದ ಏಕೈಕ ಗೋಲನ್ನು ಕ್ಸೆನಾ ಹ್ಯೂಸ್ ಗಳಿಸಿದರು.

ಭಾರತ ತಂಡದವರು ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿದರು. ಚೆಂಡನ್ನು ಮೇಲಿಂದ ಮೇಲೆ ಎದುರಾಳಿ ಗೋಲುಪೆಟ್ಟಿಗೆ ಬಳಿ ಅಟ್ಟಿದರು. ಆದರೆ ‘ಫಿನಿಶಿಂಗ್’ನಲ್ಲಿ ಚುರುಕುತನ ತೋರದ್ದರಿಂದ ಗೋಲುಗಳು ಬರಲಿಲ್ಲ.

ಮುಖ್ಯಾಂಶಗಳು

- ಎರಡು ಗೋಲು ಗಳಿಸಿದ ವಂದನಾ
- ಏಳು ಪೆನಾಲ್ಟಿ ಕಾರ್ನರ್‌ಗಳಲ್ಲಿ ಮೂರರಲ್ಲಿ ಯಶಸ್ಸು
- ಮುಂದಿನ ಪಂದ್ಯದಲ್ಲಿ ಇಂಗ್ಲೆಂಡ್ ಎದುರಾಳಿ

ವೇಲ್ಸ್ ಗೋಲ್‌ಕೀಪರ್ ರೋಸೆನ್ ಥಾಮಸ್ ಮಿಂಚಿನ ಆಟ ತೋರಿದರು. ಇಲ್ಲದಿದ್ದರೆ, ಭಾರತದ ಗೆಲುವಿನ ಅಂತರ ಇನ್ನಷ್ಟು ಹೆಚ್ಚುತ್ತಿತ್ತು.

ಮೊದಲ ಕ್ವಾರ್ಟರ್‌ನ ಹೆಚ್ಚಿನ ಸಮಯವೂ ಚೆಂಡಿನ ನಿಯಂತ್ರಣ ಭಾರತದ ಆಟಗಾರ್ತಿಯರ ಕೈಯಲ್ಲಿತ್ತು. ಎರಡನೇ ನಿಮಿಷದಲ್ಲಿ ಭಾರತಕ್ಕೆ ಪೆನಾಲ್ಟಿ ಕಾರ್ನರ್ ಸಿಕ್ಕರೂ ಗೋಲು ಬರಲಿಲ್ಲ.

ಆಕ್ರಮಣಕಾರಿ ಆಟದ ಮೂಲಕ ಎದುರಾಳಿಗಳ ಮೇಲೆ ಒತ್ತಡ ಹೇರುತ್ತಲೇ ಇದ್ದ ಭಾರತ, 26ನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್ ಗಿಟ್ಟಿಸಿಕೊಂಡಿತು. ಗುರ್ಜಿತ್ ಅವರ ಫ್ಲಿಕ್‌ನಿಂದ ಚೆಂಡನ್ನು ನಿಯಂತ್ರಣಕ್ಕೆ ಪಡೆದುಕೊಂಡ ವಂದನಾ ಗುರಿ ಸೇರಿಸಿದರು.

ಇದಾದ ಎರಡು ನಿಮಿಷಗಳ ಬಳಿಕ ದೊರೆತ ಪೆನಾಲ್ಟಿ ಕಾರ್ನರ್‌ನಲ್ಲಿ ಗುರ್ಜಿತ್ ಕೌರ್ ಗೋಲು ಗಳಿಸಿ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು. 45ನೇ ನಿಮಿಷದಲ್ಲಿ ವೇಲ್ಸ್, ಹಿನ್ನಡೆಯನ್ನು 1–2ಕ್ಕೆ ತಗ್ಗಿಸಿತು.

ಆದರೆ ಕೊನೆಯ ಅವಧಿಯಲ್ಲಿ ವಂದಾನಾ ತಮ್ಮ ಎರಡನೇ ಗೋಲು ಗಳಿಸಿ ಭಾರತಕ್ಕೆ 3–1 ಮೇಲುಗೈ ತಂದಿತ್ತರು. ಅದೇ ಮುನ್ನಡೆಯನ್ನು ಕೊನೆಯವರೆಗೂ ಕಾಪಾಡಿಕೊಂಡು ಗೆದ್ದಿತು.

ಆಗಸ್ಟ್ 2 ರಂದು ನಡೆಯಲಿರುವ ತನ್ನ ಮುಂದಿನ ಪಂದ್ಯದಲ್ಲಿ ಭಾರತ ತಂಡ, ಇಂಗ್ಲೆಂಡ್ ಜತೆ ಸೆಣಸಾಡಲಿದೆ.

ವೇಲ್ಸ್ ಎದುರು ಗೋಲು ಗಳಿಸಿದ ಭಾರತ ತಂಡದ ಆಟಗಾರ್ತಿಯರು ಸಂಭ್ರಮಿಸಿದರು –ಪಿಟಿಐ ಚಿತ್ರ

ಎಂಟರ ಘಟ್ಟಕ್ಕೆ ನಿಖತ್ ಜರೀನ್

ಬಾಕ್ಸಿಂಗ್: ಪುರುಷರ ವಿಭಾಗದಲ್ಲಿ ಶಿವ ಥಾಪಾಗೆ ನಿರಾಶೆ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಮಹಿಳೆಯರ ವಿಶ್ವ ಬಾಕ್ಸಿಂಗ್ ಚಾಂಪಿಯನ್, ಭಾರತದ ನಿಖತ್ ಜರೀನ್ ಕಾಮನ್‌ವೆಲ್ತ್ ಕೂಟದ ಮಹಿಳೆಯರ ಬಾಕ್ಸಿಂಗ್ ನ ಲೈಟ್‌ವೇಟ್ ವಿಭಾಗದ ಎಂಟರ ಘಟ್ಟಕ್ಕೆ ಲಗ್ಗೆಯಿಟ್ಟರು. ಆದರೆ ಪುರುಷರ ವಿಭಾಗದಲ್ಲಿ ಶಿವ ಥಾಪಾ ನಿರಾಶೆ ಅನುಭವಿಸಿದರು.

ಭಾನುವಾರ ನಡೆದ ಮಹಿಳೆಯರ ಪ್ರಿಕ್ವಾರ್ಟರ್ ಬೌಟ್‌ನಲ್ಲಿ ಜರೀನ್ ಮೊಂಜಾಬಿಕ್‌ನ ಹೆಲೆನಾ ಇಸ್ಮೇಲ್ ಬಗಾವ್ ವಿರುದ್ಧ ಜಯಿಸಿದರು. ನಿಖತ್ ಅವರ ಚುರುಕಿನ ಪಂಚ್‌ಗಳಿಗೆ ಹೆಲೆನಾ ನಿರುತ್ತರರಾಗಿದ್ದರು. ಯಾವುದೇ ಹಂತದಲ್ಲಿಯೂ ಅವರು ಭಾರತದ ಬಾಕ್ಸರ್‌ಗೆ ಸರಿಸಾಟಿಯಾಗಲಿಲ್ಲ. ಸಂಪೂರ್ಣ ಪಾರಮ್ಯ ಮೆರೆದ ನಿಖತ್ 50 ಕೆ.ಜಿ. ವಿಭಾಗದ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

‘ಮೊದಲ ಸುತ್ತಿನಲ್ಲಿ ಜಯಿಸಿರುವುದು ಸಂತಸ ತಂದಿದೆ. ಮುಂದಿನ ಬೌಟ್‌ನಲ್ಲಿ ಇನ್ನೂ ಉತ್ತಮವಾಗಿ ಆಡುತ್ತೇನೆ. ಪದಕ ಜಯಿಸುವ ಗುರಿಯೊಂದಿಗೆ ಮುನ್ನುಗ್ಗುತ್ತಿರುವೆ’ ಎಂದು ಜರೀನ್ ಹೇಳಿದರು.

ಪುರುಷರ 63.5 ಕೆ.ಜಿ ವಿಭಾಗದಲ್ಲಿ ಶಿವ ಥಾಪಾ 1–4ರಿಂದ ಸ್ಕಾಟ್ಲೆಂಡ್‌ನ ರೀಸ್ ಲಿಂಚ್ ಎದುರು ಸೋತರು. ಇದರೊಂದಿಗೆ ಕೂಟದಿಂದ ನಿರ್ಗಮಿಸಿದರು.

ಭಾರತದ ನಿಖತ್ ಜರೀನ್ (ಕೆಂಪು) ಮತ್ತು ಹೆಲೆನಾ ಇಸ್ಮೇಲ್ ಬಗಾವ್ ಸೆಣಸಾಟ

ಹರ್ಮನ್‌ಪ್ರೀತ್ ಆಟಕ್ಕೆ ಒಲಿದ ಜಯ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಉಪನಾಯಕ ಹರ್ಮನ್‌ಪ್ರೀತ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಭಾರತ ಪುರುಷರ ಹಾಕಿ ತಂಡವು ತನ್ನ ಮೊದಲ ಪಂಂದ್ಯದಲ್ಲಿ ಘಾನಾ ವಿರುದ್ಧ ಭರ್ಜರಿ ಜಯ ಸಾಧಿಸಿತು.

ಭಾನುವಾರ ಇಲ್ಲಿ ನಡೆದ ಬಿ ಗುಂಪಿನ ಹಣಾಹಣಿಯಲ್ಲಿ ಭಾರತ ತಂಡವು 11–0 ಗೋಲುಗಳಿಂದ ಗೆದ್ದಿತು. ತಂಡದ ಪರ ಹರ್ಮನ್‌ಪ್ರೀತ್ 11, 35 ಮತ್ತು 53ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು.ಜುಗರಾಜ್ ಸಿಂಗ್ (22ನೇ ಮತ್ತು 43ನೇ ನಿ.), ಅಭಿಷೇಕ್ (2ನೇ ನಿ.), ಶಂಷೇರ್ ಸಿಂಗ್ (14ನೇ ನಿ.), ನೀಲಕಂಠ ಶರ್ಮಾ (38ನೇ ನಿ.), ಆಕಾಶದೀಪ್ ಸಿಂಗ್ (20ನೇ ನಿ.), ವರುಣ್ ಕುಮಾರ್ (39ನೇ ನಿ.) ಮತ್ತು ಮನದೀಪ್ ಸಿಂಗ್ (48ನೇ ನಿ.) ಭಾರತ ತಂಡದ ಪರ ಮಿಂಚಿದರು.

ಪಂದ್ಯದಲ್ಲಿ ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತ, 13 ಪೆನಾಲ್ಟಿ ಅವಕಾಶಗಳಲ್ಲಿ ಆರು ಗೋಲು ಗಳಿಸಿತು.

ಬುಧವಾರ ನಡೆಯುವ ಪಂದ್ಯದಲ್ಲಿ ಭಾರತ ತಂಡವು ಕೆನಡಾ ಸವಾಲು ಎದುರಿಸಲಿದೆ.

ಹರ್ಮನ್‌ಪ್ರೀತ್ ಸಿಂಗ್

ಸೆಮಿಗೆ ಭಾರತ ಟಿಟಿ ತಂಡ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಗೆಲುವಿನ ಓಟ ಮುಂದುವರಿಸಿದ ಭಾರತದ ಪುರುಷರ ಟೇಬಲ್ ಟೆನಿಸ್ ತಂಡವು ಕಾಮನ್‌ವೆಲ್ತ್ ಕ್ರೀಡಾಕೂಟದ ಸೆಮಿಫೈನಲ್ ತಲುಪಿದೆ. ಭಾನುವಾರ ನಡೆದ ಎಂಟರಘಟ್ಟದ ಪಂದ್ಯದಲ್ಲಿ ತಂಡವು 3–0ಯಿಂದ ಬಾಂಗ್ಲಾದೇಶಕ್ಕೆ ಸೋಲುಣಿಸಿತು.

ಶರತ್ ಕಮಲ್

ಡಬಲ್ಸ್‌ನ ಮೊದಲ ಪಂದ್ಯದಲ್ಲಿ ಹರ್ಮೀತ್ ದೇಸಾಯಿ–ಜಿ.ಸತ್ಯನ್ 11-8, 11-6, 11-2ರಿಂದ ರಮಿ ಮಿಲಿಯಾನ್ ಬಾಮ್ ಮತ್ತು ಮೊಹುತಸಿನ್ ಅಹ್ಮದ್ ರಿದೊಯ್ ಎದುರು ಗೆದ್ದರು.

ಸಿಂಗಲ್ಸ್ ಸೆಣಸಾಟದಲ್ಲಿ ಶರತ್ ಕಮಲ್ 11-4, 11-7, 11-2ರಿಂದ ಮೊಹಮ್ಮದ್ ರಿಫಾತ್ ಸಿಬರ್ ಅವರನ್ನು ಮಣಿಸಿದರು. ಮತ್ತೊಂದು ಸಿಂಗಲ್ಸ್ ಪಂದ್ಯದಲ್ಲಿ ಸತ್ಯನ್ 11-2, 11-3, 11-5ರಿಂದ ಮೊಹುತಸಿನ್ ಅವರನ್ನು ಪರಾಭವಗೊಳಿಸಿದರು.

ಮಹಿಳಾ ತಂಡದ ಪದಕ ಕನಸು ಭಗ್ನ: ಕಳೆದ ಆವೃತ್ತಿಯ ಚಾಂಪಿಯನ್ ಭಾರತ ಮಹಿಳಾ ಟೇಬಲ್ ಟೆನಿಸ್ ತಂಡವು ಕಾಮನ್‌ವೆಲ್ತ್ ಕ್ರೀಡಾಕೂಟದಿಂದ ಸೋತು ಹೊರಬಿದ್ದಿದೆ. ಶನಿವಾರ ರಾತ್ರಿ ನಡೆದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಮಣಿಕಾ ಬಾತ್ರಾ ನೇತೃತ್ವದ ಭಾರತ 2–3ರಿಂದ ಮಲೇಷ್ಯಾ ಎದುರು ನಿರಾಸೆ ಅನುಭವಿಸಿತು. ಗುಂಪು ಹಂತಗಳಲ್ಲಿ ಸುಲಭ ಜಯ ಸಂಪಾದಿಸಿದ್ದ ಭಾರತ ಪದಕದ ಭರವಸೆ ಮೂಡಿಸಿತ್ತು. ಆದರೆ ಎಂಟರಘಟ್ಟದಲ್ಲಿ ಮಲೇಷ್ಯಾ ಸವಾಲು ಮೀರಲಾಗಲಿಲ್ಲ.

ಪದಕ ಪಟ್ಟಿ



ಸ್ಥಾನ	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಆಸ್ಟ್ರೇಲಿಯಾ	18	10	15	43
2	ಇಂಗ್ಲೆಂಡ್	10	16	6	32
3	ನ್ಯೂಜಿಲೆಂಡ್	10	5	2	17
4	ಕೆನಡಾ	3	4	8	15
5	ಸ್ಕಾಟ್ಲೆಂಡ್	2	7	8	17
6	ಭಾರತ	2	2	1	5

ಕಾಮನ್‌ವೆಲ್ತ್ ಕೂಟದ ಸೈಕ್ಲಿಂಗ್ ವಿಭಾಗದ ಸ್ಕ್ರಾಚ್ ರೇಸ್‌ನಲ್ಲಿ ಸಂಭವಿಸಿದ ಅಪಘಾತದಲ್ಲಿ ಗಾಯಗೊಂಡ ಸ್ಪರ್ಧಿ ಮ್ಯಾಟ್ ವಾಲ್ಸ್ ಅವರನ್ನು ಸ್ಟ್ರೆಚರ್ ಮೂಲಕ ಆಸ್ಪತ್ರೆಗೆ ಕರೆದೊಯ್ಯಲಾಯಿತು –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸುದ್ದಿ

ಎಂಟರಘಟ್ಟಕ್ಕೆ ಜೋಷ್ನಾ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಚುರುಕಿನ ಆಟವಾಡಿದ ಭಾರತದ ಜೋಷ್ನಾ ಚಿಣ್ಣಪ್ಪ ಅವರು ಸ್ಕ್ವಾಷ್ ಟೂರ್ನಿಯಲ್ಲಿ ಮಹಿಳೆಯರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಭಾನುವಾರ ನಡೆದ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಅವರು 11–8, 9–11, 11–4, 11–6 ರಲ್ಲಿ ನ್ಯೂಜಿಲೆಂಡ್‌ನ ಕ್ಯಾಟಲಿನ್ ವಾಟ್ಸ್ ಎದುರು ಗೆದ್ದರು. ಎಂಟರಘಟ್ಟದ ಪಂದ್ಯದಲ್ಲಿ ಅವರು ಕೆನಡಾದ ಹೋಲಿ ನಾಟನ್ ವಿರುದ್ಧ ಆಡುವರು.

ಕಾಮನ್‌ವೆಲ್ತ್ ಕೂಟದಲ್ಲಿ ತಮಗೆ ಇದುವರೆಗೆ ಲಭಿಸದೇ ಇರುವ ಚಿನ್ನದ ಪದಕದ ಮೇಲೆ ಕಣ್ಣಿಟ್ಟಿರುವ ಜೋಷ್ನಾ ಅವರು ವಾಟ್ಸ್ ಎದುರು ಮೊದಲ ಸೆಟ್ ಗೆದ್ದು ಮುನ್ನಡೆ ಪಡೆದರು. ಎರಡನೇ ಸೆಟ್‌ನಲ್ಲಿ ತಿರುಗೇಟು ನೀಡಿದ ನ್ಯೂಜಿಲೆಂಡ್‌ನ ಆಟಗಾರ್ತಿ 1–1 ಸಮಬಲ ಸಾಧಿಸಿದರು.

ಒತ್ತಡದ ನಡುವೆಯೂ ಆಟದ ಮೇಲೆ ಏಕಾಗ್ರತೆ ಕಳೆದುಕೊಳ್ಳದ ಜೋಷ್ನಾಮೂರನೇ ಸೆಟ್‌ನಲ್ಲಿ ಪ್ರಭಾವಿ ಆಟವಾಡಿ 7–3ರಲ್ಲಿ ಮೇಲುಗೈ ಸಾಧಿಸಿದರು. ಆ ಬಳಿಕ ಎದುರಾಳಿಗೆ ಕೇವಲ ಒಂದು ಪಾಯಿಂಟ್ ಬಿಟ್ಟುಕೊಟ್ಟು ಸೆಟ್ ಗೆದ್ದರು. ನಾಲ್ಕನೇ ಸೆಟ್‌ನಲ್ಲೂ ಶಿಸ್ತಿನ ಆಟವಾಡಿ ಪಂದ್ಯ ತಮ್ಮದಾಗಿಸಿಕೊಂಡರು.

ಸೈಕ್ಲಿಂಗ್ ಟ್ರ್ಯಾಕ್‌ನಲ್ಲಿ ಅವಘಡ

ಲಂಡನ್ (ಎಎಫ್‌ಪಿ): ಲೀ ವ್ಯಾಲಿ ಪಾರ್ಕ್‌ನಲ್ಲಿ ಭಾನುವಾರ ಕಾಮನ್‌ವೆಲ್ತ್ ಕೂಟದ ಸೈಕ್ಲಿಂಗ್ ಸ್ಕ್ರಾಚ್ ರೇಸ್‌ನಲ್ಲಿ ಸಂಭವಿಸಿದ ಅಪಘಾತದಿಂದಾಗಿ ಇಬ್ಬರು ಗಾಯಗೊಂಡರು.

ಒಲಿಂಪಿಕ್ ಒಮ್ನಿಯಮ್ ಚಾಂಪಿಯನ್ ಆಗಿರುವ ಇಂಗ್ಲೆಂಡ್ ಸೈಕ್ಲಿಸ್ ಮ್ಯಾಟ್ ವಾಲ್ಸ್, ಟ್ರ್ಯಾಕ್‌ನಲ್ಲಿ ವೇಗವಾಗಿ ಚಾಲನೆ ಮಾಡುತ್ತಿದ್ದ ಸೈಕಲ್ ನಿಯಂತ್ರಣ ತಪ್ಪಿದ್ದರಿಂದ ಈ ಅವಘಡ ಸಂಭವಿಸಿತು. ಟ್ರ್ಯಾಕ್ ಸುತ್ತ ಅಳವಡಿಸಿದ್ದ ತಡೆಯನ್ನೂ ದಾಟಿ ಪ್ರೇಕ್ಷ ಕರ ನಡುವೆ ಸೈಕಲ್ ನುಗ್ಗಿತು. ಮುಂದಿನ ಸಾಲಿನಲ್ಲಿದ್ದ ಒಬ್ಬ ವ್ಯಕ್ತಿ ಮತ್ತು ಬಾಲಕಿ ಗಾಯಗೊಂಡರು. ಅವರಿಗೆ ಚಿಕಿತ್ಸೆ ನೀಡಲಾಗಿದೆ.

ಸೈಕ್ಲಿಂಗ್: ರೊನಾಲ್ಡೊಗೆ ಸೋಲು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ರೊನಾಲ್ಡೊ ಲೈತೊಂಜಮ್ ಕ್ರೀಡಾಕೂಟದ ಸೈಕ್ಲಿಂಗ್ ಸ್ಪ್ರಿಂಟ್ ವಿಭಾಗದ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಸೋತರು.

ಭಾನುವಾರ ಇಲ್ಲಿ ನಡೆದ ಆಸ್ಟ್ರೇಲಿಯಾದ ಮ್ಯಾಥ್ಯು ಗ್ಲೇಚರ್ ಎದುರಿನ ಸ್ಪರ್ಧೆಯಲ್ಲಿ 0.162 ಅಂತರದಿಂದ ಹಿನ್ನಡೆ ಅನುಭವಿಸಿದರು.

ಇದಕ್ಕೂ ಮೊದಲು ಅರ್ಹತಾ ಸುತ್ತಿನಲ್ಲಿ ರೊನಾಲ್ಡೊ 13ನೇ ಸ್ಥಾನ ಗಳಿಸಿದ್ದರು. ಸಹ ಅಥ್ಲೀಟ್‌ಗಳಾದ ಡೇವಿಡ್ ಬೆಕಮ್ ಮತ್ತು ಈಸೊ ಅಲ್ಬೆನ್ ಕ್ರಮವಾಗಿ 18 ಮತ್ತು 23ನೇ ಸ್ಥಾನ ಗಳಿಸಿದರು. ರೊನಾಲ್ಡೊ ಅವರು ನವದೆಹಲಿಯಲ್ಲಿ ಜೂನ್‌ನಲ್ಲಿ ನಡೆದ ಏಷ್ಯನ್ ಟ್ರ್ಯಾಕ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು.

ಲಾನ್‌ಬಾಲ್: ಕ್ವಾರ್ಟರ್‌ಗೆ ಭಾರತ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ದಿನೇಶ್ ಕುಮಾರ್ ಮತ್ತು ಸುನಿಲ್ ಬಹಾದ್ದೂರ್ ಜೋಡಿ ಲಾನ್ ಬಾಲ್ ಸ್ಪರ್ಧೆಯಲ್ಲಿ ಇಂಗ್ಲೆಂಡ್ ತಂಡವನ್ನು ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಭಾನುವಾರ ನಡೆದ ಹಣಾಹಣಿಯಲ್ಲಿ ಭಾರತದ ಜೋಡಿ 18–15 ರಲ್ಲಿ ಜಯ ಸಾಧಿಸಿತು. ಮೊದಲ ಪಂದ್ಯದಲ್ಲಿ ಮಲೇಷ್ಯಾ ಎದುರು 14–17 ರಲ್ಲಿ ಸೋತಿದ್ದ ದಿನೇಶ್‌–ಸುನಿಲ್, ಆ ಬಳಿಕ ಫಾಕ್‌ಲ್ಯಾಂಡ್ ಐಲ್ಯಾಂಡ್ (36–4) ಹಾಗೂ ಕುಕ್ ಐಲ್ಯಾಂಡ್ಸ್ (15–8) ವಿರುದ್ಧ ಗೆಲುವು ಪಡೆದಿದ್ದರು. ಕ್ವಾರ್ಟರ್ ಫೈನಲ್‌ನಲ್ಲಿ ಅವರು ನಾರ್ತರ್ನ್ ಐರ್ಲೆಂಡ್‌ನ ಸವಾಲು ಎದುರಿಸುವರು. ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ತಾನಿಯಾ ಚೌಧರಿ, ನಾರ್ತರ್ನ್ ಐರ್ಲೆಂಡ್‌ನ ಶಾನ್ ಒ ನೀಲ್ ಎದುರು 21–12 ರಲ್ಲಿ ಸಮಾಧಾನಕರ ಗೆಲುವು ಪಡೆದರು. ತಾನಿಯಾ ಈಗಾಗಲೇ ಹೊರಬಿದ್ದಿದ್ದಾರೆ.

ಬ್ಯಾಡ್ಮಿಂಟನ್: ದಕ್ಷಿಣ ಆಫ್ರಿಕಾ ಎದುರು 3–0 ಗೆಲುವು

ಸೆಮಿಫೈನಲ್ ತಲುಪಿದ ಭಾರತ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತ ಬ್ಯಾಡ್ಮಿಂಟನ್ ತಂಡದವರು ಮಿಶ್ರ ತಂಡ ವಿಭಾಗದಲ್ಲಿ ಸೆಮಿಫೈನಲ್ ತಲುಪಿದರು.

ಶನಿವಾರ ನಡೆದ ಎರಡನೇ ಪಂದ್ಯದಲ್ಲಿ ಭಾರತ 3–0ಯಿಂದ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿತು.

ಡಬಲ್ಸ್ ಪಂದ್ಯದಲ್ಲಿ ಅಶ್ವಿನಿ ಪೊನ್ನಪ್ಪ- ಸುಮೀತ್ ರೆಡ್ಡಿ 21-9 , 21-11ರಿಂದ ಜಾರ್ಡ್ ಈಲಿಯಟ್ ಮತ್ತು ಡಿಯೇಡರ್ ಜೋರ್ಡಾನ್ ಎದುರು ಗೆದ್ದರು.

ಸಿಂಗಲ್ಸ್ ಪಂದ್ಯದಲ್ಲಿ ಲಕ್ಷ್ಯ ಸೇನ್ 21-5 21-6ರಿಂದ ಕೇಡನ್ ಕಾಕೊರಾ ಎದುರು ಗೆದ್ದರು. ಮತ್ತೊಂದು ಪಂದ್ಯದಲ್ಲಿ ಆಕರ್ಷಿ ಕಶ್ಯಪ್ 21–16, 21–16ರಿಂದ ಜೊಹಾನಿತಾ ಸ್ಕಾಲ್ಟಜ್ ಅವರನ್ನು ಸೋಲಿಸಿದರು.

ಇದಕ್ಕೂ ಮುನ್ನ ಭಾರತ ತಂಡವು 4–1 ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಗೆದ್ದಿತು. ಆಸ್ಟ್ರೇಲಿಯಾ ವಿರುದ್ಧ ಪುರು ಷರ ಸಿಂಗಲ್ಸ್‌ನಲ್ಲಿ ಕಣಕ್ಕಿಳಿದ ಕೆ.ಶ್ರೀಕಾಂತ್ 21–14, 21–13 ರಲ್ಲಿ ಲಿನ್ ಕ್ಸಿಯಾನ್ ಯಿಂಗ್ ಅವರನ್ನು ಮಣಿಸಿದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಪಿ.ವಿ. ಸಿಂಧು 21–10, 21–12 ರಲ್ಲಿ ಚೆನ್ ವೆಂಡಿ ಅವರನ್ನು ಸೋಲಿಸಿ 2–0 ಮುನ್ನಡೆ ತಂದಿತ್ತರು.ಪುರುಷರ ಡಬಲ್ಸ್‌ನಲ್ಲಿ ಸುಮೀತ್ ರೆಡ್ಡಿ ಮತ್ತು ಚಿರಾಗ್ ಶೆಟ್ಟಿ 21–16, 21–19 ರಲ್ಲಿ ಟ್ರಾನ್ ಹವೊಂಗ್– ಜಾಕ್ ಯು ವಿರುದ್ಧ ಗೆದ್ದು ಭಾರತಕ್ಕೆ 3–0 ಮೇಲುಗೈ ಗಳಿಸಿಕೊಟ್ಟರು.ಮಹಿಳೆಯರ ಡಬಲ್ಸ್‌ನಲ್ಲಿ ತ್ರಿಶಾ ಜೋಲಿ- ಗಾಯತ್ರಿ ಗೋಪಿ ಚಂದ್ ಜೋಡಿ ಚೆನ್ ವೆಂಡಿ–ಗ್ರೊನ್ಯಾ ಸಮರ್‌ವಿಲ್ ಎದುರು ಪರಾಭವಗೊಂಡಿತು. ಸುಮೀತ್ ರೆಡ್ಡಿ ಮತ್ತು ಅಶ್ವಿನಿ ರೆಡ್ಡಿ ಜಯ ಗಳಿಸಿದರು.

ಲಕ್ಷ್ಯ ಸೇನ್ ಆಟದ ವೈಖರಿ– ಪಿಟಿಐ ಚಿತ್ರ

ಈಜು: ಶ್ರೀಹರಿಗೆ 7ನೇ ಸ್ಥಾನ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಶ್ರೀಹರಿ ನಟರಾಜ್ ಅವರು ಪುರುಷರ ವಿಭಾಗದ 100 ಮೀ. ಬ್ಯಾಕ್‌ಸ್ಟ್ರೋಕ್ ಈಜು ಸ್ಪರ್ಧೆಯಲ್ಲಿ ಏಳನೇ ಸ್ಥಾನ ಪಡೆದುಕೊಂಡರು.

ಶನಿವಾರ ನಡೆದ ಸ್ಪರ್ಧೆಯಲ್ಲಿ ಬೆಂಗ ಳೂರಿನ ಈಜುಪಟು 54.31 ಸೆ.ಗಳಲ್ಲಿ ಗುರಿ ತಲುಪಿದರು. ರಾಷ್ಟ್ರೀಯ ದಾಖಲೆ ಮತ್ತು ತಮ್ಮ ವೈಯಕ್ತಿಕ ಶ್ರೇಷ್ಠ ಸಾಧನೆಗಿಂತ (53.77 ಸೆ.) ಅವರು ತುಂಬಾ ಹಿಂದೆ ಬಿದ್ದರು.

ವೈಯಕ್ತಿಕ ಶ್ರೇಷ್ಠ ಸಮಯವನ್ನು ಪುನರಾವರ್ತಿಸಿದ್ದರೆ ಅವರಿಗೆ ಇಲ್ಲಿ ಚಿನ್ನ ಗೆದ್ದು ಐತಿಹಾಸಿಕ ಸಾಧನೆ ಮಾಡುವ ಅವಕಾಶವಿತ್ತು. ದಕ್ಷಿಣ ಆಫ್ರಿಕಾದ ಪೀಟರ್ ಕೊಯೆಟ್ಜ್ ಅವರು (53.78 ಸೆ.) ಚಿನ್ನ ಗೆದ್ದರು. ಇಂಗ್ಲೆಂಡ್‌ನ ಪೌಲ್ ವಿಲಿಯಮ್ಸ್ (53.91 ಸೆ.) ಬೆಳ್ಳಿ ಹಾಗೂ ಆಸ್ಟ್ರೇಲಿಯಾದ ಬ್ರಾಡ್ಲಿ ವುಡ್‌ವರ್ಡ್ (54.06 ಸೆ.) ಕಂಚು ಪಡೆದರು. ಸ್ಪರ್ಧಿಗಳು 50 ಮೀ. ಕ್ರಮಿಸಿದಾಗ ಶ್ರೀಹರಿ ಐದನೇ ಸ್ಥಾನದಲ್ಲಿದ್ದರು. ಕೊನೆಯ 50 ಮೀ. ನಲ್ಲಿ ಅವರು ಇನ್ನೆರಡು ಸ್ಥಾನ ಕುಸಿತ ಕಂಡರು.

‘ಮೊದಲ 50 ಮೀ. ದೂರವನ್ನು ಇನ್ನಷ್ಟು ವೇಗವಾಗಿ ಕ್ರಮಿಸಿದ್ದರೆ ಪದಕ ಗೆಲ್ಲುವ ಅವಕಾಶವಿತ್ತು. 50 ರಿಂದ 75 ಮೀ. ವರೆಗೆ ನನ್ನ ಪ್ರದರ್ಶನ ಅತ್ಯುತ್ತಮವಾಗಿತ್ತು. ಕೊನೆಯ 25 ಮೀ.ನಲ್ಲಿ ಎಲ್ಲ ರೀತಿಯ ಪ್ರಯತ್ನಪಟ್ಟರೂ ಪದಕ ಕೈತಪ್ಪಿತು’ ಎಂದು ಶ್ರೀಹರಿ ಪ್ರತಿಕ್ರಿಯಿಸಿದರು. ಶ್ರೀಹರಿ 50 ಮೀ. ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದಾರೆ. ಹೀಟ್ಸ್‌ನಲ್ಲಿ 25.52 ಸೆ.ಗಳಲ್ಲಿ ಗುರಿ ತಲುಪಿದ ಅವರು ಒಟ್ಟಾರೆಯಾಗಿ ಎಂಟನೇ ಸ್ಥಾನ ಪಡೆದರು.